ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಡಿಸೆಂಬರ್ 2 ಮಂಗಳವಾರ 2025

ಸಂಪುಟ: 46 | ಸಂಚಿಕೆ: 224 | ಪುಟಗಳು: 12

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

ಕಾಫಿ ತೋಟದಲ್ಲಿ 'ನಾಪತ್ತೆ'ಯಾಗಿದ್ದ ಮಗು 'ಪತ್ತೆ' ಹಚ್ಚಿದ ಓರಿಯೋ!

ಹುಡುಕಿ... ಹುಡುಕಿ... ಕಂಗಾಲಾದ ಪೋಷಕರು, ಅರಣ್ಯ ಸಿಬ್ಬಂದಿ, ಗ್ರಾಮಸ್ಥರು, ಕಾರ್ಮಿಕರ ಮುಖದಲ್ಲಿ ಮಂದಹಾಸ ಮೂಡಿಸಿದ ಸಾಹಸಿ ಶ್ವಾನ

ಮಡಿಕೇರಿ,ಡಿ.1–ನಾಯಿ ಎಂದರೆ ಮೂಗು ಮುರಿಯುವ ಜನರೇ ಹೆಚ್ಚು. ಈ ಮಧ್ಯೆ ಬೀದಿನಾಯಿಗಳ ಹಾವಳಿ ಸುಪ್ರೀಂಕೋರ್ಟ್ ಮೆಟ್ಟಿಲೇರಿದೆ. ಇವುಗಳ ನಿಯಂತ್ರಣಕ್ಕೆ ಎಲ್ಲೆಡೆ ಆಗ್ರಹ ಕೇಳಿ ಬರುತ್ತಿದೆ. ಪರಿಸ್ಥಿತಿ ಹೀಗಿರುವಾಗ ಬಡ ಕುಟುಂಬವೊಂದಕ್ಕೆ ನಾಯಿಯೇ ನಾರಾಯಣನಾಗಿ ಪರಿಣಮಿಸಿದೆ! ಮಾತ್ರವಲ್ಲ, ಪೊಲೀಸ್, ಅರಣ್ಯ ಇಲಾಖೆ ಹಾಗೂ ಬೆಳೆಗಾರರಿಗೆ ಹೀರೋ ಆಗಿದೆ ಇಡೀ ರಾತ್ರಿ ಕವಿದಿದ್ದ ಆತಂಕದ ಕಾರ್ಮೋಡವನ್ನು ಕೆಲವೇ ನಿಮಿಷಗಳಲ್ಲಿ ಕರಗಿಸಿ, ಬಡ ಕುಟುಂಬಕ್ಕೆ ನೆಮ್ಮದಿ ತಂದಿದೆ. ಆ ಆಪತ್ಬಾಂಧವ ಇರುವುದು ಪೊನ್ನಂಪೇಟೆ ತಾಲೂಕು ಬಿ.ಶೆಟ್ಟಿಗೇರಿ ಗ್ರಾಮದ ಬೆಳೆಗಾರ ಅನಿಲ್ ಅವರ ಮನೆಯಲ್ಲಿ. ಆ ಹೀರೋ ಓರಿಯೋ...

ವಿವರ: ಪೊನ್ನಂಪೇಟೆ ತಾಲೂಕು ಬಿ.ಶೆಟ್ಟಿಗೇರಿ ಗ್ರಾಪಂ ವ್ಯಾಪ್ತಿಯ ಕೊಂಗಣ ಗ್ರಾಮದ ಬೆಳೆಗಾರ ಕಡೆಮಾಡ ಶರಿ ಗಣಪತಿ ಎಂಬುವರ ಕಾಫಿ ತೋಟದ ಕೆಲಸಕ್ಕೆ ಜೇನು ಕುರುಬರ ಸುನೀಲ್ ಮತ್ತು ನಾಗಿಣಿ ದಂಪತಿ ತಮ್ಮ ಎರಡು ವರ್ಷದ ಪುತ್ರಿ ಸುನನ್ಯಳೊಂದಿಗೆ ಕೆಲಸ ಮಾಡುತ್ತಿದ್ದರು. ಈ ದಂಪತಿ ನವೆಂಬರ್ 29ರಂದು ಬೆಳಗ್ಗೆ ಮಾಮೂಲಿಯಂತೆ ತಮ್ಮ ಕಂದಮ್ಮನನ್ನು ತೋಟಕ್ಕೆ ಕರೆತಂದು, ಇತರ ಕಾರ್ಮಿಕರ ಮಕ್ಕಳೊಂದಿಗೆ ಮಗುವನ್ನು ಆಟವಾಡಲು ಬಿಟ್ಟು ತಮ್ಮ ಕೆಲಸದಲ್ಲಿ ತೊಡಗಿಕೊಂಡಿದ್ದರು. ಕೆಲಸ ಮುಗಿದ ನಂತರ ಎಲ್ಲರೂ ತಮ್ಮ ಮಕ್ಕಳನ್ನ ತಮ್ಮೊಂದಿಗೆ ಕರೆದೊಯ್ಯುತ್ತಿದ್ದರು. ಇದೊಂದು ಪರಿಪಾಠವಾಗಿದೆ. ಆದರೆ, ಅಂದು ಸಂಜೆ ಈ ದಂಪತಿ ಕೆಲಸ ಮುಗಿಸಿ ಹಿಂದಿರುಗಿದಾಗ ಬೇರೆಲ್ಲಾ ಮಕ್ಕಳಿದ್ದರೂ ಇವರ ಮಗು ಸುನನ್ಯ ನಾಪತ್ತೆ ತಮ್ಮ ಮಗು ಬಗ್ಗೆ ಬೇರೆ ಮಕ್ಕಳ ಕೇಳಿದಾಗ, ಆ ಮುಗ್ಧ ಮಕ್ಕಳಿಗೆ ಸುನನ್ಯ ಯಾವ ಕಡೆ ▶ 6ನೇ ಪುಟಕ್ಕೆ


ತಂದೆ ಸುನೀಲ್ ಜೊತೆ ಸುನನ್ಯ

> ಕಾಫಿ ತೋಟದೊಳಗೆ ಮಗು ನಾಪತ್ತೆಯಾಗಿದೆ. ಅದರ ಸ್ಥಿತಿ–ಗತಿ ಏನು ಎಂಬುದು ಗೊತ್ತಿಲ್ಲ. ರಾತ್ರಿಯಿಡೀ ಹುಡುಕಿದರೂ ಮಗು ಪತ್ತೆಯಾಗುತ್ತಿಲ್ಲ ಎಂಬ ವಿಚಾರ ಎಲ್ಲೆಡೆ ಹರಡಿತ್ತು. ಈ ವಿಷಯ ತಿಳಿದ ಬೆಳೆಗಾರ ಅನಿಲ್ ಅವರು, ತಮ್ಮ ಸಾಕು ನಾಯಿಗಳಾದ ಓರಿಯೋ, ಡ್ಯೂಕ್, ಲಾಲಾ ಮತ್ತು ಚುಕ್ಕಿಯೊಂದಿಗೆ ಸ್ಥಳಕ್ಕೆ ಆಗಮಿಸಿದರು. ಕಾಫಿ ತೋಟದ ನಾಲ್ಕೂ ದಿಕ್ಕುಗಳಿಗೆ ತಮ್ಮ ಶ್ವಾನಗಳನ್ನು ತಮ್ಮದೆ ಸನ್ನೆ–ಸೂಚನೆ ಕೊಟ್ಟು ಅನಿಲ್ ಅಟ್ಟಿದರು. ಕೆಲವೇ ನಿಮಿಷಗಳಲ್ಲಿ ತೋಟದ ಎತ್ತರ ಪ್ರದೇಶದಲ್ಲಿ ಓರಿಯೋ ನಿಂತು, ಸತತವಾಗಿ ಬೊಗಳ ತೊಡಗಿದೆ. ಅದರ ವರ್ತನೆಯನ್ನು ಕಂಡು, ಸಂಶಯದಿಂದಲೇ ಅದರ ಮಾಲೀಕ ಅನಿಲ್, ಗ್ರಾಪಂ ಅಧ್ಯಕ್ಷ ಕೊಲ್ಲಿರ ಬೋಪಣ್ಣ, ಗ್ರಾಮಸ್ಥರು ಹಾಗೂ ಅರಣ್ಯ ಸಿಬ್ಬಂದಿ ಅಲ್ಲಿಗೆ ಹೋಗಿ ನೋಡಿದಾಗ ಮಗು ಸುನನ್ಯ ಕಾಫಿ ಗಿಡದ ಬುಡದಲ್ಲಿ ಸುರಕ್ಷಿತವಾಗಿರುವುದು ಪತ್ತೆಯಾಗಿದೆ.



ಚಾಮರಾಜನಗರ ಆಕ್ಸಿಜನ್ ದುರಂತದ ತನಿಖಾ ವರದಿ ಸರ್ಕಾರಕ್ಕೆ ಸಲ್ಲಿಕೆ

ಈ ಅನಾಹುತದಲ್ಲಿ 36 ಮಂದಿ ಸಾವಿಗೀಡಾಗಿದ್ದರು


ನ್ಯಾ.ಮೈಕಲ್ ಡಿ ಕುನ್ಹಾ ನೇತೃತ್ವದ ಸಮಿತಿ ಸಿಎಂ ಸಿದ್ದರಾಮಯ್ಯರಿಗೆ ಸೋಮವಾರ ವರದಿ ಸಲ್ಲಿಸಿತು.

ಬೆಂಗಳೂರು, ಡಿ.1– ಕೋವಿಡ್ 19 ಸಂದರ್ಭದಲ್ಲಿ ಚಾಮರಾಜನಗರ ಜಿಲ್ಲಾ ಆಸ್ಪತ್ರೆಯಲ್ಲಿ ನಡೆದ ಆಕ್ಸಿಜನ್ ದುರಂತ ಪ್ರಕರಣದ ಅಂತಿಮ ತನಿಖಾ ವರದಿಯನ್ನು ನ್ಯಾ.ಮೈಕಲ್ ಡಿ ಕುನ್ಹಾ ನೇತೃತ್ವದ ಸಮಿತಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ನೀಡಿದೆ.

ವರದಿಯಲ್ಲಿ ಕೆಲವೊಂದು ಮಹತ್ವದ ಸಂಗತಿಗಳನ್ನು ಉಲ್ಲೇಖಿಸಿದೆ ಎಂಬ ಮಾಹಿತಿ ಇದ್ದು, ಸಾಕಷ್ಟು ಕುತೂಹಲಕ್ಕೆ ಕಾರಣವಾಗಿದೆ. ಸಿಎಂ ಸರ್ಕಾರಿ ನಿವಾಸಕ್ಕೆ ಆಗಮಿಸಿದ ನಿವೃತ್ತ ನ್ಯಾಯಮೂರ್ತಿ ಮೈಕೆಲ್ ಡಿ ಕುನ್ಹಾ ಅವರು ತಮ್ಮ ವರದಿ ಸಲ್ಲಿಸಿದರು. ಈ ವೇಳೆ ವಿರಾಜಪೇಟೆ ಶಾಸಕ, ಸಿಎಂ ಕಾನೂನು ಸಲಹೆಗಾರ ಎ.ಎಸ್.ಪೊನ್ನಣ್ಣ, ಸಿಎಂ ರಾಜಕೀಯ ಕಾರ್ಯದರ್ಶಿ ನಸೀರ್ ಅಹಮದ್ ಉಪಸ್ಥಿತರಿದ್ದರು. ▶ 6ನೇ ಪುಟಕ್ಕೆ

ನಾವು ಬ್ರದರ್ಸ್...!

ನಮ್ಮಲ್ಲಿ ಭಿನ್ನಾಭಿಪ್ರಾಯ ಇಲ್ಲ; ಸಿಎಂ ಸಿದ್ದರಾಮಯ್ಯ, ನಾನು ಸಹೋದರರಿದ್ದಂತೆ: ಡಿ.ಕೆ.ಶಿವಕುಮಾರ್ ಒಗ್ಗಟ್ಟಿನ ಮಂತ್ರ



ಬೆಂಗಳೂರು, ಡಿ.1(ಕೆಎಂಶಿ)– ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ನಾನು ಸಹೋದರರಿದ್ದಂತೆ. ನಮ್ಮ ನಡುವೆ ಯಾವುದೇ ಭಿನ್ನಾಭಿಪ್ರಾಯ ಇಲ್ಲ ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮತ್ತೆ ಒಗ್ಗಟ್ಟಿನ ಮಂತ್ರ ಪಠಿಸಿದ್ದಾರೆ.

ವಿಧಾನಸೌಧ ಕಟ್ಟಿದ ಮಾಜಿ ಮುಖ್ಯಮಂತ್ರಿ ಕೆಂಗಲ್ ಹನುಮಂತಯ್ಯ ಅವರ ಪುಣ್ಯತಿಥಿ ದಿನವಾದ ಇಂದು ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸಿದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಶಿವಕುಮಾರ್, ನಾವಿಬ್ಬರೂ ಚೆನ್ನಾಗಿಯೇ ಇದ್ದೇವೆ. ಮಾಧ್ಯಮದವರ ಕಾಟಕ್ಕೆ ಉಪಾಹಾರ ಸಭೆ ನಡೆಸಬೇಕಾಯಿತು ಎಂದರು.

ನ್ಯಾಷನಲ್ ಹೆರಾಲ್ಡ್ ಸೋನಿಯಾ ಆಸ್ತಿಯಲ್ಲ: ನ್ಯಾಷನಲ್ ಹೆರಾಲ್ಡ್ ಸೋನಿಯಾ ಗಾಂಧಿ ಅಥವಾ ರಾಹುಲ್ ಗಾಂಧಿ ▶ 6ನೇ ಪುಟಕ್ಕೆ

> ಹುಟ್ಟುವಾಗ ಒಬ್ಬರೇ, ಸಾಯುವಾಗಲೂ ಒಬ್ಬರೇ. ಆದರೆ, ಕಾಂಗ್ರೆಸ್ ಒಂದು ಸಂಘಟನೆ, ನಾನು 140 ಶಾಸಕರ ಜೊತೆಯೂ ಇದ್ದೇನೆ. ನಮ್ಮಲ್ಲಿ ಯಾವುದೇ ಗುಂಪುಗಾರಿಕೆ ಇಲ್ಲ. ನೀವೆಲ್ಲಾ ಏನೇನೋ ತೋರಿಸುತ್ತೀರಿ, ಬರೀತೀರಿ, ಸಿದ್ದರಾಮಯ್ಯನವರದು ಒಂದು ಗುಂಪು, ಶಿವಕುಮಾರ್ ಅವರದು ಒಂದು ಗುಂಪು ಎನ್ನುತ್ತೀರಿ. ಅದ್ಯಾವುದೂ ಇಲ್ಲ. ನಾವೆಲ್ಲಾ ಒಟ್ಟಾಗಿದ್ದೇವೆ ಎಂಬುದಕ್ಕೇ ನಾವು ಉಪಹಾರ ಸಭೆ ಮಾಡಿದ್ದು. ಕೆಂಪೇಗೌಡ ಬೆಂಗಳೂರನ್ನು, ಹನುಮಂತಯ್ಯ ವಿಧಾನಸೌಧ, ಎಸ್.ಎಂ.ಕೃಷ್ಣ ವಿಕಾಸಸೌಧ ಕಟ್ಟಿದ್ದಾರೆ. ಅಧಿಕಾರ ಸಿಕ್ಕಾಗ ಈ ರೀತಿ ಸಾಕ್ಷಿ ಗುಡ್ಡೆ ಬಿಟ್ಟು ಹೋಗಬೇಕು. ನಾವು ಬ್ರದರ್ಸ್ ಇಂತಹ ಕೆಲಸ ಮಾಡಿ ತೋರಿಸುತ್ತೀವಿ.
>
> –ಡಿ.ಕೆ.ಶಿವಕುಮಾರ್, ಡಿಸಿಎಂ

ಇಂದು ಡಿಸಿಎಂ ಡಿ.ಕೆ.ಶಿವಕುಮಾರ್ ಮನೆಯಲ್ಲಿ ಸಿದ್ದರಾಮಯ್ಯ ಉಪಾಹಾರ

ಬೆಂಗಳೂರು, ಡಿ.1(ಕೆಎಂಶಿ)–ಮುಖ್ಯಮಂತ್ರಿ ಸಿದ್ದರಾಮಯ್ಯ ಮಂಗಳವಾರ ಬೆಳಗ್ಗೆ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮನೆಗೆ ಉಪಾಹಾರಕ್ಕೆ ತೆರಳಲಿದ್ದಾರೆ. ಅಧಿಕಾರ ಹಸ್ತಾಂತರ ಗೊಂದಲ ಅತಿರೇಕಕ್ಕೆ ಹೋಗಿ ಇಡೀ ರಾಷ್ಟ್ರವೇ ಕರ್ನಾಟಕದತ್ತ ನೋಡುತ್ತಿದ್ದಾಗ ಎಐಸಿಸಿ ವರಿಷ್ಠರು ಉಪಹಾರ ಸಭೆ ನಡೆಸುವಂತೆ ಸಿದ್ದರಾಮಯ್ಯರಿಗೆ ಆದೇಶ ಮಾಡಿತ್ತು ಎಐಸಿಸಿ ರಾಜಕೀಯ ಕಾರ್ಯದರ್ಶಿ ಕೆ.ಸಿ.ವೇಣು ಗೋಪಾಲ್ ಮುಖ್ಯಮಂತ್ರಿ ಅವರ ಉಪಹಾರದಲ್ಲಿ ಪಾಲ್ಗೊಳ್ಳುವಂತೆ ಶಿವಕುಮಾರ್‌ರಿಗೂ ಸೂಚಿಸಿದ್ದರು. ವರಿಷ್ಠರ ಆದೇಶದಂತೆ ಕಳೆದ ಶನಿವಾರ ಬೆಳಗ್ಗೆ ಸಿದ್ದರಾಮಯ್ಯ ತಮ್ಮ ಮನೆಗೆ ಶಿವಕುಮಾರ್ ಅವರನ್ನು ಆಹ್ವಾನಿಸಿ, ಉಪಹಾರ ಸಭೆ ನಡೆಸಿ, ಅಧಿಕಾರ ಹಸ್ತಾಂತರ ಗೊಂದಲಕ್ಕೆ ತಾತ್ಕಾಲಿಕ ಬ್ರೇಕ್ ಹಾಕಿದ್ದರು. ಶನಿವಾರ ನಡೆದ ಸಭೆಯಲ್ಲೇ ಶಿವಕುಮಾರ್ ತಮ್ಮ ಮನೆಗೂ ಉಪಹಾರಕ್ಕೆ ಬರುವಂತೆ ನೀಡಿದ್ದ ಆಹ್ವಾನವನ್ನು ಸಿದ್ದರಾಮಯ್ಯ ಸ್ವೀಕರಿಸಿದ್ದರು. ಶಿವಕುಮಾರ್ ಸದಾಶಿವನಗರದ ತಮ್ಮ ಮನೆಯಲ್ಲಿ ಮಂಗಳವಾರ ಬೆಳಗ್ಗೆ ಉಪಹಾರಕೂಟ ಏರ್ಪಡಿಸಿದ್ದು, ಇದರಲ್ಲಿ ಇನ್ನು ಯಾರ್‍ಯಾರು ಭಾಗವಹಿಸುತ್ತಾರೆ ಎಂಬ ಮಾಹಿತಿ ಇಲ್ಲ.

ಅಧಿಕಾರ ಹಸ್ತಾಂತರ ಅಂಕಣಕ್ಕೆ ಸಚಿವ ಡಾ.ಪರಮೇಶ್ವರ್ ಎಂಟ್ರಿ



ಬೆಂಗಳೂರು,ಡಿ.1(ಕೆಎಂಶಿ)–ಸಿಎಂ ಸಿದ್ದರಾಮಯ್ಯ ಹಾಗೂ ಡಿಸಿಎಂ ಡಿ.ಕೆ.ಶಿವಕುಮಾರ್ ನಡುವೆ ಅಧಿಕಾರ ಹಸ್ತಾಂತರ ಗೊಂದಲಕ್ಕೆ ತೆರೆ ಬೀಳುವ ಮೊದಲೇ ಗೃಹ ಸಚಿವ ಡಾ.ಜಿ.ಪರಮೇಶ್ವರ್ ರಾಜ್ಯದಲ್ಲಿ ನಾಯಕತ್ವ ಪಡೆಯಲು ತೆರೆಮರೆಯ ಪ್ರಯತ್ನ ನಡೆಸಿದ್ದಾರೆ. ನಾಯಕತ್ವ ಬದಲಾವಣೆ ಆಗುವಾಗ ದಲಿತರಿಗೆ ಅವಕಾಶ ಮಾಡಿಕೊಡಬೇಕೆಂದು ಡಾ.ಪರಮೇಶ್ವರ್ ಸೇರಿದಂತೆ ಪರಿಶಿಷ್ಟ ಜಾತಿ, ವರ್ಗಕ್ಕೆ ಸೇರಿದ ಹಲವು ಶಾಸಕರು ವರಿಷ್ಠರ ಮೇಲೆ ಒತ್ತಡ ತಂದಿದ್ದರು. ಅಧಿಕಾರ ಹಸ್ತಾಂತರ ವಿಷಯವನ್ನು ಶಿವಕುಮಾರ್ ಬಣ ತಾರಕಕ್ಕೆ ಕೊಂಡೊಯ್ಯುತ್ತಿದ್ದಂತೆ ಪರಮೇಶ್ವರ್ ಸಿಎಂ ಪಟ್ಟ ಪಡೆಯಲು ಜ್ಯೋತಿಷಿಗಳ ಮೊರೆ ಹೋಗಿದ್ದಾರೆ. ಇಂದು ಬೆಳ್ಳಂಬೆಳಗ್ಗೆ ಹಾಸನದ ಅರಸೀಕೆರೆಯ ಕೋಡಿಮಠಕ್ಕೆ ತೆರಳಿ, ಶ್ರೀಗಳ ಆಶೀರ್ವಾದ ಪಡೆದಿದ್ದಾರೆ. ಸುಮಾರು 90 ನಿಮಿಷಗಳ ಕಾಲ ಶ್ರೀಗಳ ಜೊತೆ ಸಮಾಲೋಚಿಸಿರುವುದು ಕಾಂಗ್ರೆಸ್ ವಲಯದಲ್ಲಿ ಭಾರೀ ಕುತೂಹಲಕ್ಕೆ ಕಾರಣವಾಗಿದೆ. ಆದರೆ, ಕೋಡಿಮಠದ ಶ್ರೀಗಳು, ಪರಮೇಶ್ವರ್ ಬಗ್ಗೆ ಏನು ರಾಜಕೀಯ ಭವಿಷ್ಯ ನುಡಿದಿದ್ದಾರೆ ಎಂಬ ಕುರಿತು ಯಾವುದೇ ಮಾಹಿತಿ ಇಲ್ಲ.

ರಾಜ್ಯ ಸರ್ಕಾರದಿಂದ ಡಿಜಿಟಲ್ ಇ–ಸ್ಟಾಂಪ್ ವ್ಯವಸ್ಥೆ ಜಾರಿ



ಬೆಂಗಳೂರು,ಡಿ.1–ಕರ್ನಾಟಕ ಸರ್ಕಾರವು ಸ್ಟಾಂಪ್ ವಂಚನೆ ಮತ್ತು ಭದ್ರತಾ ಕೊರತೆಯನ್ನು ಸಂಪೂರ್ಣವಾಗಿ ತೊಡೆದು ಹಾಕುವ ನಿಟ್ಟಿನಲ್ಲಿ ಡಿಜಿಟಲ್ ಇ ಸ್ಟಾಂಪ್ ವ್ಯವಸ್ಥೆ ಪರಿಚಯಿಸಿದೆ. ನಾಗರಿಕರು ಯಾವುದೇ ಮಧ್ಯವರ್ತಿಗಳ ನೆರವಿಲ್ಲದೆ ಸ್ವತಃ ಡಿಜಿಟಲ್ ಇ–ಸ್ಟಾಂಪ್ ತಯಾರಿಸಿಕೊಳ್ಳಬಹುದು. ಕಂದಾಯ ಇಲಾಖೆಯು ಅಗತ್ಯವಾದ ನಿಯಮಾವಳಿಗಳನ್ನು ಪ್ರಕಟಿಸಿದ್ದು, ಸಾಫ್ಟ್ ಲಾಂಚ್ ಯಶಸ್ವಿಯಾಗಿ ಪೂರ್ಣಗೊಂಡಿದೆ. ಇನ್ನು ಮುಂದೆ ರಾಜ್ಯದಾದ್ಯಂತ ಡಿಜಿಟಲ್ ಇ–ಸ್ಟಾಂಪ್ ಕಡ್ಡಾಯವಾಗಲಿದೆ.

ಈ ಹಿಂದೆ ಸ್ಟಾಂಪ್ ಕಾಗದಗಳನ್ನು ನಾಸಿಕ್ ಸೆಕ್ಯುರಿಟಿ ಪ್ರೆಸ್‌ನಲ್ಲಿ ಮುದ್ರಿಸಲಾಗುತ್ತಿತ್ತು. ಪರವಾನಗಿ ಪಡೆದ ಸ್ಟಾಂಪ್ ಮಾರಾಟಗಾರರು ಈ ಸ್ಟಾಂಪ್ ಕಾಗದಗಳನ್ನು ನಾಗರಿಕರಿಗೆ ಸರಬರಾಜು ಮಾಡುತ್ತಿದ್ದರು. ಆದರೆ, ತೆಲಗಿ ಹಗರಣದ ನಂತರ ನಕಲಿ ಹಾಗೂ ಮರುಬಳಕೆ ಮಾಡಲಾದ ಸ್ಟಾಂಪ್ ಕಾಗದಗಳ ಮೂಲಕ ನಡೆದ ಭಾರೀ ಮಟ್ಟದ ವಂಚನೆ ಬೆಳಕಿಗೆ ಬಂದಿತು. ಇದನ್ನು ತಡೆಗಟ್ಟಲು ಕರ್ನಾಟಕ ಸರ್ಕಾರವು ಭೌತಿಕ ಸ್ಟಾಂಪ್ ಕಾಗದಗಳ ಬಳಕೆಯನ್ನು ನಿಲ್ಲಿಸಿ ಭದ್ರತೆ ಹಾಗೂ ಪಾರದರ್ಶಕತೆ ಹೆಚ್ಚಿಸುವ ಪರ್ಯಾಯ ಕ್ರಮಗಳನ್ನು ಜಾರಿಗೆ ತಂದಿತ್ತು. ಆದರೂ ಫೋಟೋಕಾಪಿ ಯಂತ್ರಗಳ ಮೂಲಕ ಇ–ಸ್ಟ್ಯಾಂಪ್ ಪ್ರಮಾಣಪತ್ರಗಳನ್ನು ನಕಲಿಸಲು ಅಥವಾ ಅವುಗಳಂತೆಯೇ ಕಾಣುವ ಪ್ರತಿಗಳನ್ನು ಸೃಷ್ಟಿಸಲು ಸಾಧ್ಯವಾಗುತ್ತಿತ್ತು. ಇದರಿಂದ ಮೂಲ ಹಾಗೂ ನಕಲಿ ತಾರತಮ್ಯ ಗಮನಿಸಲು ಕಷ್ಟವಾಯಿತು. ಒಂದು ಉದ್ದೇಶಕ್ಕಾಗಿ ಖರೀದಿಸಿದ ಸ್ಟಾಂಪ್ ಕಾಗದವನ್ನು ಬೇರೆ ರೀತಿಯ ದಸ್ತಾವೇಜಿಗೆ ಬಳಸುವ ಪ್ರಸಂಗಗಳು ನಡೆಯುತ್ತಿತ್ತು. ಇದು ಉದ್ದೇಶಪೂರ್ವಕವಾಗಿಯೂ ಅಥವಾ ತಾತ್ಸಾರದಿಂದಲೂ ಆಗುತ್ತಿತ್ತು. ನಕಲಿ, ನಕಲು ಪ್ರತಿ ಹಾಗೂ ತಪ್ಪು ▶ 6ನೇ ಪುಟಕ್ಕೆ

ಇ–ಸ್ವತ್ತು 2.0 ತಂತ್ರಾಂಶಕ್ಕೆ ಚಾಲನೆ

ಇನ್ನು ಗ್ರಾಮ ಪಂಚಾಯಿತಿಯಲ್ಲೇ 11ಬಿ ಖಾತೆ

ಬೆಂಗಳೂರು,ಡಿ.1–ಗ್ರಾಮ ಪಂಚಾಯಿತಿಗಳಲ್ಲಿ ರದ್ದುಗೊಂಡಿದ್ದ 11ಬಿ ಖಾತೆ ವಿತರಣೆ ಹಾಗೂ ನಿವೇಶನ ನೋಂದಣಿ ಇಂದಿನಿಂದ ಪುನರಾರಂಭವಾಗಲಿದ್ದು, ಇನ್ನು ಮುಂದೆ ಪಂಚಾಯಿತಿಗಳಲ್ಲಿ 11ಬಿ ಖಾತೆ ಪಡೆಯಬಹುದಾಗಿದೆ.

ಅಕ್ರಮ ಕಾರಣಕ್ಕಾಗಿ ವರ್ಷದ ಹಿಂದೆ ಪಂಚಾಯಿತಿಗಳು 11ಬಿ ಖಾತೆ ನೀಡಲು ಹಾಗೂ ನಿವೇಶನ ನೋಂದಣಿ ರದ್ದುಗೊಳಿಸಿತ್ತು. ಇದೀಗ ಮತ್ತೆ ನೋಂದಣಿಗೆ ಚಾಲನೆ ದೊರೆತಿದೆ. ಬೆಂಗಳೂರಿನ ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ನಡೆದ ಗಾಂಧಿ ಗ್ರಾಮ ಪುರಸ್ಕಾರ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಇ–ಸ್ವತ್ತು 2.0 ತಂತ್ರಾಂಶಕ್ಕೆ ಚಾಲನೆ ನೀಡಿದರು.

ಗ್ರಾಮ ಪಂಚಾಯಿತಿ ವ್ಯಾಪ್ತಿಗಳಲ್ಲಿ ಸ್ಥಳೀಯ ಯೋಜನಾ ಅಭಿವೃದ್ಧಿ ಪ್ರಾಧಿಕಾರದಿಂದ ಅನುಮತಿ ಪಡೆಯದೇ ನಿರ್ಮಾಣವಾಗಿದ್ದ ▶ 6ನೇ ಪುಟಕ್ಕೆ

ಮಾನದಂಡಗಳೇನು

ಗ್ರಾಮೀಣ ಆಸ್ತಿಗಳಿಗೆ 11 'ಬಿ' ಖಾತೆ ಪಡೆಯಲು ನಿವೇಶನದಾರರಿಗೆ 3 ತಿಂಗಳ ಕಾಲಾವಕಾಶ ನೀಡಲಾಗಿದೆ. 7–4–2025ರ ದಿನಾಂಕಕ್ಕಿಂತ ಹಿಂದೆ ನಿವೇಶನ ನೋಂದಣಿಯಾಗಿದ್ದರೆ ಅಥವಾ ಮನೆ ನಿರ್ಮಿಸಿದ್ದರೆ (ವಿದ್ಯುತ್ ಸಂಪರ್ಕ ಪಡೆದಿರಬೇಕು) ಮಾತ್ರ ಇ–ಸ್ವತ್ತು ತಂತ್ರಾಂಶದ ಮೂಲಕ 11 'ಬಿ' ಖಾತೆ ಪಡೆಯಲು ಅರ್ಜಿ ಸಲ್ಲಿಸಬಹುದಾಗಿದೆ.

ಅಗತ್ಯ ದಾಖಲೆಗಳು

ಸೇಲ್ ಡೀಡ್, ಇತ್ತೀಚಿನ ಆಸ್ತಿ ತೆರಿಗೆ ಪಾವತಿ ರಶೀದಿಗಳು, ಎನ್‌ಕಂಬರೆನ್ಸ್ ಸರ್ಟಿಫಿಕೇಟ್, ಭೂ ಸರ್ವೇ ದಾಖಲೆಗಳು, ಗುರುತು/ವಿಳಾಸ ಪುರಾವೆಗಳು (ಆಧಾರ್, ವೋಟರ್ ಐಡಿ, ಪ್ಯಾನ್), ಭಾವಚಿತ್ರಗಳು.

ಚಾಮುಂಡಿಬೆಟ್ಟದಲ್ಲಿ ಹೃದಯಾಘಾತ; ಆಸ್ಪತ್ರೆಯಲ್ಲಿ ಚಿಕ್ಕಪೇಟೆ ಮಾಜಿ ಶಾಸಕ ಆರ್.ವಿ.ದೇವರಾಜ್ ನಿಧನ



ಮೈಸೂರು,ಡಿ.1–ಚಿಕ್ಕಪೇಟೆ ಕ್ಷೇತ್ರದ ಮಾಜಿ ಶಾಸಕ, ಹಿರಿಯ ಕಾಂಗ್ರೆಸ್ ನಾಯಕ ಆರ್.ವಿ. ದೇವರಾಜ್ ಅವರು ಸೋಮವಾರ ಚಾಮುಂಡಿಬೆಟ್ಟಕ್ಕೆ ಹೋಗುವ ಮಾರ್ಗದಲ್ಲಿ ಹೃದಯಾಘಾತಕ್ಕೊಳಗಾಗಿ, ಆಸ್ಪತ್ರೆಯಲ್ಲಿ ಕೊನೆಯುಸಿರೆಳೆದಿದ್ದಾರೆ. ಅವರಿಗೆ 67 ವರ್ಷ ವಯಸ್ಸಾಗಿತ್ತು. ಆರ್.ವಿ.ದೇವರಾಜ್ ಅವರು ಹುಟ್ಟುಹಬ್ಬದ ಸಂಭ್ರಮದಲ್ಲಿದ್ದರು. ಡಿ.3ರಂದು ಅವರ ಹುಟ್ಟುಹಬ್ಬವಿತ್ತು. ಹೀಗಾಗಿ ಇಂದು ಚಾಮುಂಡೇಶ್ವರಿ ದರ್ಶನಕ್ಕಾಗಿ ಚಾಮುಂಡಿಬೆಟ್ಟಕ್ಕೆ ಹೋಗುವ ವೇಳೆಯಲ್ಲಿ ಅವರಿಗೆ ಹೃದಯಾಘಾತ ಸಂಭವಿಸಿದೆ. ▶ 6ನೇ ಪುಟಕ್ಕೆ

ರಾಜ್ಯದ ಜನತೆಗೆ ಸದ್ಯದಲ್ಲೇ ಸಿಹಿ ಸುದ್ದಿ!

- ಕುಣಿಗಲ್ ಶಾಸಕ ರಂಗನಾಥ್ ಸ್ಫೋಟಕ ಹೇಳಿಕೆ
- ಸಿದ್ದರಾಮಯ್ಯರೇ ಮುಂದುವರೆಯುತ್ತಾರೆ: ಹೆಚ್‌ಸಿಎಂ


ರಂಗನಾಥ್

ಬೆಂಗಳೂರು, ಡಿ. 1(ಕೆಎಂಶಿ)–ರಾಜ್ಯದ ಜನತೆಗೆ ಸದ್ಯದಲ್ಲೇ ಸಿಹಿ ಸುದ್ದಿ ದೊರೆಯಲಿದೆ ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ಸಂಬಂಧಿ ಹಾಗೂ ಕುಣಿಗಲ್ ಕ್ಷೇತ್ರದ ಕಾಂಗ್ರೆಸ್ ಶಾಸಕ ರಂಗನಾಥ್ ಸ್ಫೋಟಕ ಹೇಳಿಕೆ ನೀಡಿದ್ದಾರೆ.

ಇದರ ಬೆನ್ನಲ್ಲೇ ಸಮಾಜ ಕಲ್ಯಾಣ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಮುಖ್ಯಮಂತ್ರಿ ಸ್ಥಾನದಿಂದ ಸಿದ್ದರಾಮಯ್ಯ ಬದಲಾವಣೆ ಇಲ್ಲ. ಅವರೇ ಐದು ವರ್ಷ ಮುಖ್ಯಮಂತ್ರಿ ಆಗಿರುತ್ತಾರೆ ಎಂದಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿದ ರಂಗನಾಥ್, ಅಧಿಕಾರ ಹಂಚಿಕೆಗೆ ಸಂಬಂಧಿಸಿದಂತೆ ಪಕ್ಷದ ವರಿಷ್ಠರು ಸೂಕ್ತ ಸಮಯದಲ್ಲಿ ಸೂಕ್ತ ನಿರ್ಧಾರ ಕೈಗೊಳ್ಳಲಿದ್ದಾರೆ ಎಂದರು. ಈ ನಿರ್ಧಾರ ನನಗೊಬ್ಬನಿಗೇ ಸಿಹಿ ಸುದ್ದಿ ಆಗುವುದಿಲ್ಲ. ರಾಜ್ಯದ ಏಳು ಕೋಟಿ ಜನರಿಗೂ ಸಿಹಿ ಸುದ್ದಿ ಆಗುವಂತಹ ವಿಷಯವನ್ನು ದೆಹಲಿ ನಾಯಕರು ನೀಡಲಿದ್ದಾರೆ ಎಂದಿದ್ದಾರೆ. ಪ್ರತ್ಯೇಕವಾಗಿ ಸುದ್ದಿಗಾರರೊಂದಿಗೆ ಸಚಿವ ಡಾ.ಮಹದೇವಪ್ಪ ಮಾತನಾಡಿ, ಸಿದ್ದರಾಮಯ್ಯ ಗಟ್ಟಿಯಾಗಿದ್ದಾರೆ, ಅವರೇ ಮುಂದುವರೆಯುತ್ತಾರೆ. ಎಲ್ಲ ಅಂತೆ–ಕಂತೆಗಳಿಗೂ ತೆರೆ ಬಿದ್ದಿದೆಯಲ್ಲ. ಗೊಂದಲಗಳಿಗೆ ಅವಕಾಶ ನೀಡಬಾರದೆಂದೇ ಮುಖ್ಯಮಂತ್ರಿ ಹಾಗೂ ಉಪಮುಖ್ಯಮಂತ್ರಿ ಒಂದೆಡೆ ಸೇರಿ ಉಪಹಾರ ಸೇವಿಸಿ ಜಂಟಿ ಹೇಳಿಕೆ ನೀಡಿದ್ದಾರೆ. ಸಿದ್ದರಾಮಯ್ಯ ನಾಯಕತ್ವದಲ್ಲಿ 2028ರ ಚುನಾವಣೆ ಎದುರಿಸಿ ಮತ್ತೆ ಕಾಂಗ್ರೆಸ್ ಅಧಿಕಾರಕ್ಕೆ ಬರುತ್ತದೆ. ಕ್ರಿಕೆಟ್ ಆಡುವವರು 11 ಮಂದಿ ಮಾತ್ರ, ಉಳಿದವರು ಯಾರೇ ಬ್ಯಾಟ್ ಬೀಸಿದರೂ ಪ್ರಯೋಜನವಿಲ್ಲ. ಅಧಿಕಾರ ಹಂಚಿಕೆ ವಿಷಯದಲ್ಲೂ ಸ್ವಾಮೀಜಿಗಳೂ ಸೇರಿದಂತೆ ಯಾರೇ ಬ್ಯಾಟ್ ಬೀಸಿದರೂ ಪ್ರಯೋಜನವಾಗದು ಎಂದಿದ್ದಾರೆ.

ಬೇಡ... ಬೇಡ... ಕ್ರಿಮಿನಲ್‌ಗಳ ಸಂಗ!


ಸೀಮಾ ಲಾಟ್ಕರ್

ಮೈಸೂರು,ಡಿ.1(ಆರ್‌ಕೆ)–ಬೆಂಗಳೂರಲ್ಲಿ ನಡೆದ ಎಟಿಎಂ ಕ್ಯಾಬ್ ದರೋಡೆ ಪ್ರಕರಣದಲ್ಲಿ ಪೊಲೀಸ್ ಕಾನ್‌ಸ್ಟೇಬಲ್ ಭಾಗಿಯಾಗಿದ್ದ ಹಿನ್ನಲೆಯಲ್ಲಿ ರಾಜ್ಯ ಪೊಲೀಸ್ ಮಹಾ ನಿರ್ದೇಶಕ ಡಾ.ಎಂ.ಎ.ಸಲಿಂ ಅವರ ನಿರ್ದೇಶನದ ಮೇರೆಗೆ ಮೈಸೂರು ನಗರ ಪೊಲೀಸ್ ಆಯುಕ್ತರಾದ ಸೀಮಾ ಲಾಟ್ಕರ್ ಅವರು ಪೊಲೀಸ್ ಅಧಿಕಾರಿಗಳು, ಸಿಬ್ಬಂದಿಗೆ ಶಿಸ್ತಿನ ಪಾಠ ಹೇಳುವ ಮೂಲಕ ಎಚ್ಚರಿಕೆಯನ್ನೂ ನೀಡಿದ್ದಾರೆ.

ರಾಜ್ಯದ ಎಲ್ಲಾ ಜಿಲ್ಲೆಗಳ ಎಸ್ಪಿಗಳು ಹಾಗೂ ಪೊಲೀಸ್ ಕಮಿಷ್ನರ್‌ಗಳಿಗೆ ಆಂತರಿಕ ಸುತ್ತೋಲೆ ಹೊರಡಿಸಿರುವ

> ಡಿಜಿಪಿ ಅವರು ರವಾನಿಸಿರುವ ಆಂತರಿಕ ಸುತ್ತೋಲೆಯ ವಿಚಾರವನ್ನು ಓದಿ ಅಧೀನಾಧಿಕಾರಿಗಳಿಗೆ ಅರ್ಥ ಮಾಡಿಸಿದ್ದೇನೆ. ತಮ್ಮ ತಮ್ಮ ಅಧೀನ ಸಿಬ್ಬಂದಿಗೆ ಮನವರಿಕೆ ಮಾಡಿಕೊಡುವಂತೆಯೂ ಸೂಚಿಸಿದ್ದೇನೆ. ಸಮಾಜದ ಸ್ವಾಸ್ಥ್ಯ, ನಾಗರಿಕರ ಪ್ರಾಣ, ಮಾನ, ಆಸ್ತಿ–ಪಾಸ್ತಿ ಸಂರಕ್ಷಣೆ ಹಾಗೂ ಕಾನೂನು–ಸುವ್ಯವಸ್ಥೆ ಕಾಪಾಡುವ ಜವಾಬ್ದಾರಿ ಹೊತ್ತಿರುವ ಪೊಲೀಸರು ಸಾರ್ವಜನಿಕರ ವಿಶ್ವಾಸ ಪಡೆಯುವ ನಿಟ್ಟಿನಲ್ಲಿ ಕರ್ತವ್ಯ ನಿರ್ವಹಿಸಬೇಕು. ಇಲ್ಲದಿದ್ದಲ್ಲಿ ಪೊಲೀಸ್ ಇಲಾಖೆಗೆ ಕೆಟ್ಟ ಹೆಸರು ಬರುತ್ತದೆ. ಅಪರಾಧ ನಿಯಂತ್ರಣ ಮತ್ತು ಪತ್ತೆ ಮಾಡಬೇಕಾದ ಪೊಲೀಸರೇ ಅಪರಾಧಕ್ಕೆ ಒತ್ತಾಸೆಯಾಗುವುದು ಅಕ್ಷಮ್ಯ ಅಪರಾಧವಾಗುತ್ತದೆ ಎಂದು ಎಚ್ಚರಿಸಿದ್ದೇವೆ.
>
> –ಸೀಮಾ ಲಾಟ್ಕರ್, ಮೈಸೂರು ನಗರ ಪೊಲೀಸ್ ಕಮಿಷ್ನರ್

ಪೊಲೀಸ್ ಮಹಾನಿರ್ದೇಶಕ ಡಾ.ಸಲೀಂ ಆದೇಶದಂತೆ ತಮ್ಮ ಸಿಬ್ಬಂದಿಗೆ ಪೊಲೀಸ್ ಕಮಿಷ್ನರ್ ಸೀಮಾ ಲಾಟ್ಕರ್ ಎಚ್ಚರಿಕಾ ಪಾಠ

ಡಿಜಿಪಿ ಡಾ.ಎಂ.ಎ.ಸಲೀಂ, ಕಾನೂನುಬಾಹಿರ ಚಟುವಟಿಕೆಗಳು ಮತ್ತು ಅಪರಾಧ ಕೃತ್ಯಗಳಲ್ಲಿ ಭಾಗಿಯಾಗದಂತೆ ಪೊಲೀಸ್ ಸಿಬ್ಬಂದಿಗೆ ಎಚ್ಚರಿಕೆ ನೀಡುವಂತೆ ನಿರ್ದೇಶಿಸಿದ್ದರು. ಅದರಂತೆ ಮೈಸೂರು ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್ ಎಲ್ಲಾ ಉಪ ವಿಭಾಗಗಳ ಎಸಿಪಿಗಳ ಸಭೆ ನಡೆಸಿ ಡಿಜಿಪಿ ಡಾ.ಎಂ.ಎ.ಸಲೀಂ ಅವರು ಹೊರಡಿಸಿರುವ ಆಂತರಿಕ ಎಚ್ಚರಿಕಾ ಸುತ್ತೋಲೆ ಮನವರಿಕೆ ಮಾಡಿಕೊಟ್ಟು, ತಮ್ಮ ವ್ಯಾಪ್ತಿಯ ಠಾಣೆಗಳ ಇನ್‌ಸ್ಪೆಕ್ಟರ್‌ಗಳ ಮೂಲಕ ಪೊಲೀಸ್ ಸಿಬ್ಬಂದಿಗೆ ತಿಳಿಹೇಳುವಂತೆ ಸೂಚನೆ ನೀಡಿದ್ದರು. ಈ ಹಿನ್ನೆಲೆಯಲ್ಲಿ ಇನ್‌ಸ್ಪೆಕ್ಟರ್‌ಗಳು ತಮ್ಮ ಠಾಣೆಗಳಲ್ಲಿ ಬ್ರೀಫಿಂಗ್ (ರೋಲ್‌ಕಾಲ್) ವೇಳೆ ಪೊಲೀಸ್ ಸಿಬ್ಬಂದಿ, ▶ 6ನೇ ಪುಟಕ್ಕೆ



> ಪೊಲೀಸರು ಸದಾ ಸಹಾನುಭೂತಿಯಿಂದ ಕಾರ್ಯನಿರ್ವಹಿಸಬೇಕು. ನೊಂದವರಿಗೆ ಸಹಾಯ ಮಾಡುವ ಗುಣಗಳನ್ನು ಅಳವಡಿಸಿಕೊಳ್ಳಬೇಕು. ಪೊಲೀಸ್ ಸಿಬ್ಬಂದಿಯೇ ಅಪರಾಧದಲ್ಲಿ ತೊಡಗಿದರೆ ಪೊಲೀಸ್ ಇಲಾಖೆ ಮೇಲೆ ಸಾರ್ವಜನಿಕ ನಂಬಿಕೆ ಗೋಪುರ ಕುಸಿಯುತ್ತದೆ. ಹಾಗಾದಾಗ ಮತ್ತೆ ಸಾರ್ವಜನಿಕರ ಆ ಒಂದು ನಂಬಿಕೆ ಮರಳಿಸುವುದು ಅತ್ಯಂತ ಕಷ್ಟಕರವಾಗುತ್ತದೆ. ದೈನಂದಿನ ಕಾರ್ಯ ನಿರ್ವಹಣೆಯಲ್ಲಿ ಮತ್ತು ಅಪರಾಧಗಳ ತನಿಖೆಯಲ್ಲಿ ಪಾರದರ್ಶಕತೆ ಅತ್ಯಗತ್ಯ. ಈ ಕಾರಣಕ್ಕಾಗಿಯೇ ನಾವು ಪೊಲೀಸ್ ಮತ್ತು ಸಮುದಾಯದ ನಡುವೆ ವಿಶ್ವಾಸವನ್ನು ಬೆಳೆಸುವ ಗುರಿ ಹೊಂದಿರುವ 'ಮನೆ–ಮನೆ ಪೊಲೀಸ್' ಯೋಜನೆಯನ್ನು ಪರಿಚಯಿಸಿದ್ದೇವೆ.
>
> –'ಮೈಸೂರು ಮಿತ್ರ'ನಿಗೆ ಡಿಜಿಪಿ ಡಾ.ಎಂ.ಎ.ಸಲೀಂ ಪ್ರತಿಕ್ರಿಯೆ

ಡಿ.ಕೆ.ಶಿವಕುಮಾರ್ ಸಿಎಂ ಆಗಬೇಕೆಂದು ತೀರ್ಮಾನಿಸುವ ಅಧಿಕಾರ ಸ್ವಾಮೀಜಿಗಳಿಗಿಲ್ಲ

ಮೈಸೂರಲ್ಲಿ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್

ಮೈಸೂರು, ಡಿ.1(ಬಿಎಲ್‌ಯು)– ಡಿ.ಕೆ.ಶಿವಕುಮಾರ್ ಅವರು ಮುಖ್ಯಮಂತ್ರಿ ಆಗಬೇಕೆಂದು ಸ್ವಾಮೀಜಿಗಳು ಹೇಳಿದರೆ ಆಗುವುದಿಲ್ಲ, ನಮ್ಮ ಪಕ್ಷದ ಹೈಕಮಾಂಡ್ ಘೋಷಣೆ ಮಾಡಬೇಕು ಅಷ್ಟೇ ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ದಿನೇಶ್ ಗುಂಡೂರಾವ್ ಹೇಳಿದರು.



▶ ಕೇಂದ್ರದ ಬಿಜೆಪಿ ಸರ್ಕಾರದಿಂದ ರಾಜ್ಯಕ್ಕೆ ನ್ಯಾಯಯುತವಾಗಿ ನೀಡಬೇಕಾದ ಅನುದಾನ ನೀಡಿಲ್ಲ. ಕರ್ನಾಟಕದ ಜನರು ಇಷ್ಟು ಸಂಖ್ಯೆಯ ಬಿಜೆಪಿ ಸಂಸದರನ್ನು ಗೆಲ್ಲಿಸಿ ಕಳುಹಿಸಿದ್ದಾರೆ. ಆದರೆ ಇವರು ಕೇಂದ್ರ ಸರ್ಕಾರದ ಮೇಲೆ ಒತ್ತಡ ತಂದು ರಾಜ್ಯಕ್ಕೆ ಅಗತ್ಯವಿರುವ ಅನುದಾನ ಸೇರಿದಂತೆ ಇತರೆ ಸೌಲಭ್ಯಗಳನ್ನು ತರಲು ಕಿಂಚಿತ್ತೂ ಪ್ರಯತ್ನಿಸುತ್ತಿಲ್ಲ.
–ದಿನೇಶ್ ಗುಂಡೂರಾವ್.

ಮೈಸೂರಿನ ಜೆ.ಕೆ.ಮೈದಾನದಲ್ಲಿ ಇಂದು ವಿಶ್ವ ಏಡ್ಸ್ ದಿನ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವ ಮುನ್ನ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಪ್ರಜಾಪ್ರಭುತ್ವದಲ್ಲಿ ಹೇಳಿಕೆ ನೀಡಲು ಪ್ರತಿಯೊಬ್ಬರೂ ಸ್ವತಂತ್ರರು. ಆದರೆ ಯಾರು ಮುಖ್ಯಮಂತ್ರಿ ಆಗಬೇಕೆಂದು ನಿರ್ಧರಿಸುವ ಅಧಿಕಾರ ಪಕ್ಷದ ಹೈಕಮಾಂಡ್‌ಗೆ ಮಾತ್ರವಿದೆ ಎಂದು ಸ್ಪಷ್ಟನೆ ನೀಡಿದರು.

ಸಿದ್ದರಾಮಯ್ಯ ಹಾಗೂ ಡಿ.ಕೆ.ಶಿವಕುಮಾರ್ ಇಬ್ಬರು ನಾಳೆ ಬ್ರೇಕ್ ಫಾಸ್ಟ್ ಮೀಟಿಂಗ್ ನಡೆಸುತ್ತಿರುವ ಬಗ್ಗೆ ಪ್ರತಿಕ್ರಿಯೆ ನೀಡಿದ ದಿನೇಶ್ ಗುಂಡೂರಾವ್ ಅವರು, ಬ್ರೇಕ್ ಫಾಸ್ಟ್ ಮೀಟಿಂಗ್‌ಗೆ ಬೇರೆ ಅರ್ಥ ಕಲ್ಪಿಸುವುದು ಬೇಡ. ಅಲ್ಲಿ ಸರ್ಕಾರದ ಆಡಳಿತ ವಿಚಾರ ಸೇರಿದಂತೆ ರಾಜಕಾರಣದ ಬಗ್ಗೆ ಚರ್ಚೆ ಆಗುತ್ತದೆ. ಆದರೆ ಏನೇನು ಚರ್ಚೆ ನಡೆಸಬೇಕು ಎಂಬುದು ಅವರಿಬ್ಬರ ವಿವೇಚನೆಗೆ ಬಿಟ್ಟ ವಿಚಾರ ಎಂದರು.

ಡಿ.ಕೆ.ಶಿವಕುಮಾರ್ ಸಿಎಂ ಆಗಬೇಕೆಂದು ಒಕ್ಕಲಿಗ ಸಮುದಾಯದ ಮುಖಂಡರು ಹೇಳಿದ್ದಾರೆ. ಅಲ್ಲದೆ ಸ್ವಾಮೀಜಿ ಕೂಡ ಹೇಳಿದ್ದಾರೆ. ಆದರೆ ಈ ವಿಚಾರದ ಬಗ್ಗೆ ತೀರ್ಮಾನ ಕೈಗೊಳ್ಳುವ ಅಧಿಕಾರ ಇರುವುದು ಹೈಕಮಾಂಡ್‌ಗೆ ಮಾತ್ರ ಎಂದು ಹೇಳಿದರು.

ಬ್ರೇಕ್ ಫಾಸ್ಟ್ ಮೀಟಿಂಗ್ ಮಾಡಿ ಇಬ್ಬರು ನಾಯಕರು ಈಗಾಗಲೇ ಗೊಂದಲಕ್ಕೆ ತೆರೆ ಎಳೆದಿದ್ದಾರೆ. ಆದರೆ ಗೊಂದಲ ಇದೆ ಎಂದು ಹೇಳುತ್ತಿದ್ದು, ಇದು ಮಾಧ್ಯಮಗಳ ಸೃಷ್ಟಿ ಎಂದು ತಿಳಿಸಿದರು.

ಕಳೆದ ಎರಡೂವರೆ ವರ್ಷಗಳಿಂದ ಗೊಂದಲವಿದೆ ಎಂದು ಹೇಳಿಕೊಂಡು ಬರುತ್ತಿದ್ದೀರಾ. ಆದರೆ ನಮ್ಮಲ್ಲಿ ಯಾವುದೇ ಗೊಂದಲಗಳಿಲ್ಲ. ಈ ವಿಚಾರವಾಗಿ ಸಿಎಂ ಮತ್ತು ಡಿಸಿಎಂ ಈಗಾಗಲೇ ಸ್ಪಷ್ಟನೆ ನೀಡಿದ್ದಾರೆ ಎಂದರು.

ಮೈಸೂರು ಅರಮನೆ ಹಾರ್ಡಿಂಜ್ ವೃತ್ತದ ಬಳಿ ರಾಜಪಥದ ಬ್ಯಾರಿಕೇಡ್‌ಗೆ ಬಸ್ ಡಿಕ್ಕಿ

ಮೈಸೂರು,ಡಿ.1(ಬಿಎಲ್‌ಯು)– ಕೆಎಸ್‌ಆರ್‌ಟಿಸಿ ಬಸ್ ಡಿಕ್ಕಿ ಹೊಡೆದ ಪರಿಣಾಮ ಮೈಸೂರು ಅರಮನೆ ಹಾರ್ಡಿಂಜ್ ವೃತ್ತದ ಬಳಿ ರಾಜಪಥದ ಬ್ಯಾರಿಕೇಡ್‌ನ ಅಲಂಕಾರಿಕ ಕಲ್ಲು ಕಂಬಗಳು ತುಂಡು ತುಂಡಾದ ಘಟನೆ ಇಂದು ಸಂಭವಿಸಿದೆ.

ಹಾರ್ಡಿಂಜ್ ವೃತ್ತದ ಜಯಚಾಮರಾಜೇಂದ್ರ ಒಡೆಯರ್ ಸರ್ಕಲ್‌ನಿಂದ ನಗರ ಬಸ್ ನಿಲ್ದಾಣದತ್ತ ಬರುತ್ತಿದ್ದ ಕೆಎಸ್‌ಆರ್‌ಟಿಸಿ ಬಸ್ (ಕೆಎ 09ಎಫ್ 4972) ವೇಗವಾಗಿ ರಾಜಪಥದ ಬ್ಯಾರಿಕೇಡ್‌ಗೆ ಡಿಕ್ಕಿ ಹೊಡೆದಿದೆ. ಇದರಿಂದ 4 ಅಲಂಕಾರಿಕ ಕಂಬಗಳು ತುಂಡಾಗಿ ಫುಟ್‌ಪಾತ್‌ಗೆ ಬಿದ್ದಿವೆ. ಡಿಕ್ಕಿ ಹೊಡೆದ ರಭಸಕ್ಕೆ ಬಸ್ ಮುಂಭಾಗ ಜಖಂಗೊಂಡಿದೆ. ಆದರೆ ಈ ಘಟನೆಯಿಂದ ಯಾರಿಗೂ ಯಾವುದೇ ಹಾನಿ ಆಗಲಿಲ್ಲ.

ಈ ಘಟನೆ ಬಳಿಕ ಆಲ್ಬರ್ಟ್ ವಿಕ್ಟರ್ ರಸ್ತೆಯಲ್ಲಿ ಕೆಲ ಕಾಲ ಟ್ರಾಫಿಕ್ ಜಾಮ್ ಆಗಿತ್ತು. ಮೈಸೂರು ಅರಮನೆ ಸುತ್ತ ಕೋಟ್ಯಾಂತರ ರೂಪಾಯಿ ವೆಚ್ಚದಲ್ಲಿ ರಾಜಪಥ ನಿರ್ಮಾಣ ಮಾಡಲಾಗಿದೆ. ಕಳಪೆ ಕಾಮಗಾರಿಯ ಕಾರಣ ರಾಜಪಥದ ಅಲಂಕಾರಿಕ ಕಂಬಗಳು ಸಾಕಷ್ಟು ಮುರಿದು ಬಿದ್ದಿವೆ. ಅಲ್ಲದೆ ಬಸ್, ಆಟೋ, ಕಾರು ಸೇರಿದಂತೆ ಇತರೆ ವಾಹನಗಳು ಡಿಕ್ಕಿ ಹೊಡೆದ ಪರಿಣಾಮ ಅಲಂಕಾರಿಕ ಕಂಬಗಳು ಅಲ್ಲಲ್ಲಿ ಮುರಿದು ಬಿದ್ದಿವೆ. ಮೈಸೂರು ಅರಮನೆ ಸುತ್ತಲಿನ ಫುಟ್‌ಪಾತ್ ಅನ್ನು ಮತ್ತಷ್ಟು ಅಂದಗೊಳಿಸಲು ರಾಜಪಥ ನಿರ್ಮಾಣ ಮಾಡಲಾಯಿತಾದರೂ ಫುಟ್‌ಪಾತ್ ಅತ್ಯಾಕರ್ಷಕ ರೂಪ ಪಡೆಯುವ ಬದಲು ಈಗ ವಿರೂಪವಾಗಿದೆ.

ತುಂಡು ತುಂಡಾದ ಬ್ಯಾರಿಕೇಡ್‌ನ ಅಲಂಕಾರಿಕ ಕಂಬಗಳು



ಮೈಸೂರಿನ ಹಾರ್ಡಿಂಜ್ ವೃತ್ತದಿಂದ ನಗರ ಬಸ್ ನಿಲ್ದಾಣಕ್ಕೆ ಹೋಗುವ ರಾಜಪಥದ ಬ್ಯಾರಿಕೇಡ್‌ಗೆ ಕೆಎಸ್‌ಆರ್‌ಟಿಸಿ ಬಸ್ ಡಿಕ್ಕಿ ಹೊಡೆದು, ತುಂಡು ತುಂಡಾಗಿರುವ ಬ್ಯಾರಿಕೇಡ್‌ನ ಅಲಂಕಾರಿಕ ಕಂಬಗಳು. ಮತ್ತೊಂದು ಚಿತ್ರದಲ್ಲಿ ಇದೇ ರಸ್ತೆಯ ಮತ್ತೊಂದು ಸ್ಥಳದಲ್ಲಿ ಅಲಂಕಾರಿಕ ಕಂಬಗಳಿಲ್ಲದೆ ಅವಲಕ್ಷಣವಾಗಿರುವುದನ್ನು ಕಾಣಬಹುದು.

ನೈಪುಣ್ಯ ಶಿಕ್ಷಣ ಸಂಸ್ಥೆಯ ವಾರ್ಷಿಕ ಸಂಭ್ರಮ

ನೈಪುಣ್ಯೋತ್ಸವ ನಾಳೆಯಿಂದ ಆರಂಭ

ಮೈಸೂರು,ಡಿ.1(ಬಿಎಲ್‌ಯು)–ಮೈಸೂರಿನ ನೈಪುಣ್ಯ ಸ್ಕೂಲ್ ಆಫ್ ಎಕ್ಸಲೆನ್ಸ್ ಶಿಕ್ಷಣ ಸಂಸ್ಥೆಯ ವಾರ್ಷಿಕ ಸಂಭ್ರಮ ನೈಪುಣ್ಯೋತ್ಸವ ಡಿ.3ರಿಂದ ಆರಂಭವಾಗಲಿದೆ. ಜನಪದ ನೃತ್ಯ ಸಂಗೀತ ಪ್ರಕಾರಗಳನ್ನು ಕೇಂದ್ರೀಕರಿಸಿ ಅಂದು ಜನಪದ ತೇರು ಜರುಗಲಿದೆ.

ಮೈಸೂರಿನ ಕಲಾಮಂದಿರದಲ್ಲಿ ಡಿ.3ರಂದು ಸಂಜೆ 4 ಗಂಟೆಗೆ ನಡೆಯುವ ಕಾರ್ಯಕ್ರಮವನ್ನು ಖ್ಯಾತ ಕಲಾವಿದೆ ಯಮುನಾ ಶ್ರೀನಿಧಿ ಉದ್ಘಾಟಿಸಲಿದ್ದು, ಹಿರಿಯ ಪತ್ರಕರ್ತರಾದ ಸಿದ್ದರಾಜು, ಅಂಶಿ ಪ್ರಸನ್ನಕುಮಾರ್ ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದಾರೆ. ತೆರಿಗೆ ಆಯುಕ್ತ ಶಿವಾನಂದ ಕಲಗೇರಿ ಅಧ್ಯಕ್ಷತೆ ವಹಿಸಲಿದ್ದಾರೆ. ಡಿ.4ರಂದು ಸಂಜೆ 4 ಗಂಟೆಗೆ ನಡೆಯುವ ಎರಡನೇ ದಿನದ ಕಾರ್ಯಕ್ರಮವನ್ನು ಮೈಸೂರು ವಿಶ್ವವಿದ್ಯಾನಿಲಯದ ರಿಜಿಸ್ಟ್ರಾರ್ ಎಂ.ಕೆ. ಸವಿತಾ ಉದ್ಘಾಟಿಸಲಿದ್ದು, ಶಿಕ್ಷಣ ತಜ್ಞೆ ಡಾ.ಎಲ್. ಸವಿತಾ ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದಾರೆ. ಪದ್ಮಶ್ರೀ ಪುರಸ್ಕೃತ ಚಲನಚಿತ್ರ ಸಾಹಸ ನಿರ್ದೇಶಕ ಡಾ.ಹಾಸನ್ ರಘು ನೈಪುಣ್ಯ ಗೌರವ ಸಮರ್ಪಿಸಲಿದ್ದಾರೆ. ನೈಪುಣ್ಯ ಶಿಕ್ಷಣ ಸಂಸ್ಥೆ ಅಧ್ಯಕ್ಷ ಆರ್.ರಘು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದಾರೆ. ಡಿ.3 ರಂದು ಶಾಲೆಯ ಚಿಣ್ಣರು ಜನಪದ ಹೆಜ್ಜೆ ಹಾಗೂ ಜನಪದ ಮೆರಗು ಕಾರ್ಯಕ್ರಮ ಪ್ರದರ್ಶಿಸಲಿದ್ದಾರೆ.

ಸಾಲುಮರದ ತಿಮ್ಮಕ್ಕರಿಗೆ ನುಡಿನಮನ

ಮೈಸೂರು,ಡಿ.1(ಎಂಕೆ)– ಮೈಸೂರಿನ ಕೃಷ್ಣಮೂರ್ತಿಪುರಂನಲ್ಲಿರುವ ನಮನ ಕಲಾಮಂಟಪದಲ್ಲಿ ಕವಿಗೋಷ್ಠಿಯ ಮೂಲಕ ವೃಕ್ಷಮಾತೆ ಸಾಲುಮರದ ತಿಮ್ಮಕ್ಕ ಅವರಿಗೆ ನುಡಿನಮನ ಸಲ್ಲಿಸಲಾಯಿತು.

ನನ್ನವ್ವ ಸಾಂಸ್ಕೃತಿಕ ತಂಡದ ವತಿಯಿಂದ ಆಯೋಜಿಸಿದ್ದ ರಾಜ್ಯಮಟ್ಟದ ಕವಿಗೋಷ್ಠಿ ಕಾರ್ಯಕ್ರಮದಲ್ಲಿ ಸಾಹಿತಿ ಜಯಪ್ಪ ಹೊನ್ನಾಳಿ ನೇತೃತ್ವದಲ್ಲಿ ಪರಿಸರ ಕಾಳಜಿ ಹಾಗೂ ಸಾಲುಮರದ ತಿಮ್ಮಕ್ಕರ ಸಾಧನೆ ಕುರಿತಾದ ಕವನಗಳನ್ನು ವಾಚಿಸುವ ಮೂಲಕ ನುಡಿನಮನ ಸಲ್ಲಿಸಲಾಯಿತು.

ಕಾರ್ಯಕ್ರಮ ಉದ್ಘಾಟಿಸಿದ ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಮಾತನಾಡಿ, ಮಕ್ಕಳಿಲ್ಲದ ತಿಮ್ಮಕ್ಕ ಮರಗಳನ್ನೇ ತಮ್ಮ ಮಕ್ಕಳಂತೆ ಬೆಳೆಸಿ, ಇಡೀ ಜಗತ್ತಿನಲ್ಲಿಯೇ ಹೆಸರಾದರು. ಯಾರನ್ನೂ ದ್ವೇಷಿಸದ, ಪ್ರಕೃತಿಯನ್ನು ಪ್ರೀತಿಸಿದ ತಿಮ್ಮಕ್ಕ ಅವರು 114 ವರ್ಷ ತಿಮ್ಮಕ್ಕ ಅವರಂತೆ ಪ್ರತಿಯೊಬ್ಬರೂ ಬಾಳಿ–ಬದುಕಬೇಕು ಎಂದರು.

ಸುತ್ತೂರು ಗ್ರಾಪಂ ಅಧ್ಯಕ್ಷ ಜೀಮಾರಹಳ್ಳಿ ರಂಗಸ್ವಾಮಿ ಮಾತನಾಡಿ, ಸಾಲುಮರದ ತಿಮ್ಮಕ್ಕ ಅವರು ಮರಗಿಡಗಳನ್ನು ಬೆಳೆಸಿ, ಇತರರಿಗೆ ನೆರಳಾದರು. ಅಲ್ಲದೇ ಆ ಮೂಲಕ ಕೋಟ್ಯಾಂತರ ರೂ. ಮೌಲ್ಯದ ಶುದ್ಧ ಆಮ್ಲಜನಕ ಸಾರ್ವಜನಿಕರಿಗೆ ದೊರೆಯುವಂತೆ ಮಾಡಿದರು. ಅದೇ ರೀತಿ ನಾವೆಲ್ಲರೂ ಗಿಡಗಳನ್ನು ನೆಟ್ಟು, ಪೋಷಿಸಬೇಕು ಎಂದರು.

ಕಾರ್ಯಕ್ರಮದಲ್ಲಿ ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್, ಆಕಾಶವಾಣಿ ನಿವೃತ್ತ ಅಧಿಕಾರಿ ಎನ್.ವಿ. ರಮೇಶ್, ಕವಯತ್ರಿ ಪ್ರಭಾಶಾಸ್ತ್ರಿ ಜೋಶ್ಯುಲ, ನನ್ನವ್ವ ಸಾಂಸ್ಕೃತಿಕ ಕಲಾ ತಂಡದ ಅಧ್ಯಕ್ಷ ಯಾಚೇನಹಳ್ಳಿ ಮಹದೇವ್, ಶಿಕ್ಷಕಿ ಪದ್ಮಾ ನೆಲ್ಲಿತಾಳಪುರ, ರಾಜೇಂದ್ರಪ್ರಸಾದ್ ಮತ್ತಿತರರಿದ್ದರು.



ಮೈಸೂರಿನ ಕೃಷ್ಣಮೂರ್ತಿಪುರಂನಲ್ಲಿರುವ ನಮನ ಕಲಾಮಂಟಪದಲ್ಲಿ ನನ್ನವ್ವ ಸಾಂಸ್ಕೃತಿಕ ತಂಡದ ವತಿಯಿಂದ ರಾಜ್ಯಮಟ್ಟದ ಕವಿಗೋಷ್ಠಿ ನಡೆಯಿತು.

ನಾಳೆ ಪವಮಾನ ಹೋಮ, ನವಗ್ರಹ ಹೋಮ

ಮೈಸೂರು,ಡಿ.1(ಜಿಎ)–ಶ್ರೀ ಹನುಮದ್ ವ್ರತ ಅಂಗವಾಗಿ ಶ್ರೀ ಉತ್ತರಾದಿ ಮಠದ ವತಿಯಿಂದ ಮೈಸೂರು ಕೆಆರ್‌ಎಸ್ ರಸ್ತೆಯಲ್ಲಿರುವ ಆಂಜನೇಯಸ್ವಾಮಿ ದೇವಸ್ಥಾನದಲ್ಲಿ ಡಿ.3ರಂದು ಉತ್ತರಾದಿ ಮಠದ 1008 ಸತ್ಯಾತ್ಮತೀರ್ಥ ಶ್ರೀಪಾದಂಗಳವರ ನೇತೃತ್ವದಲ್ಲಿ ಪವಮಾನ ಹೋಮ ಹಾಗೂ ನವಗ್ರಹ ಹೋಮ ಆಯೋಜಿಸಲಾಗುತ್ತಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ವಿಪ್ರ ಸಮುದಾಯದ ಮುಖಂಡ ಎನ್.ಎಂ.ನವೀನ್ ಕುಮಾರ್ ಈ ವಿಷಯ ತಿಳಿಸಿ, ಅಂದು ಬೆಳಗ್ಗೆ 8.30ಕ್ಕೆ ಧಾರ್ಮಿಕ ಕಾರ್ಯಕ್ರಮ ಪ್ರಾರಂಭವಾಗಲಿದೆ. ನಗರದ ಶ್ರೀಮದಾನಂದ ತೀರ್ಥರಿಂದ ಹರಿವಾಯು ಸ್ತುತಿ ಪಾರಾಯಣ, ಮಧು ಅಭಿಷೇಕ, ಪಂಚಾಮೃತಾಭಿಷೇಕ, ಹರೀಶಾಚಾರ್ಯ ರಾರಾವಿ ಅವರಿಂದ ಮನುಚ್ಚರಿತ್ರೆ ಮಧ್ಯಾಹ್ನ 12.30ಕ್ಕೆ ಪಲ್ಲಕ್ಕಿ ಉತ್ಸವ ನೆರವೇರಲಿದೆ. ಪಂ. ಅನಿರುದ್ಧಾಚಾರ್ಯ ಪಾಂಡುರಂಗಿ ಈ ವೇಳೆಯ ಸಭಾ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದಾರೆ ಎಂದರು.

ನಂತರ 10.30ಕ್ಕೆ ಸಾಧಕರಿಗೆ ಸನ್ಮಾನ ಸಮಾರಂಭ ಏರ್ಪಡಿಸಿದ್ದು, ಶಾಸಕರಾದ ಟಿ.ಎಸ್.ಶ್ರೀವತ್ಸ, ಕೆ.ಹರೀಶ್‌ಗೌಡ, ವಿಧಾನ ಪರಿಷತ್ ಸದಸ್ಯ ಕೆ.ವಿವೇಕಾನಂದ, ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಅಧ್ಯಕ್ಷ ಎಸ್.ರಘುನಾಥ್, ಹಿರಿಯ ಉಪಾಧ್ಯಕ್ಷ ಆರ್.ಲಕ್ಷ್ಮೀಕಾಂತ್, ಡಿ.ಟಿ. ಪ್ರಕಾಶ್, ಕೆ.ಆರ್.ಸತ್ಯನಾರಾಯಣ ಇನ್ನಿತರರು ಉಪಸ್ಥಿತರಿರುವರು. 12.30ಕ್ಕೆ ಭಕ್ತರಿಗೆ ಅನ್ನ ಸಂತರ್ಪಣೆ ಆಯೋಜಿಸಲಾಗಿದೆ ಎಂದು ತಿಳಿಸಿದರು.

ಶರತ್‌ಚಂದ್ರ, ಪ್ರಮೋದಾಚಾರ್, ವಾಸುದೇವ ಮೂರ್ತಿ, ಸೂರ್ಯ ನಾರಾಯಣ, ಸತ್ಯನಾರಾಯಣ ಹಾಜರಿದ್ದರು.

ಡಿ.4ರಂದು ಶ್ರೀ ಸುತ್ತೂರು ಮಠದಲ್ಲಿ ವಿದುಷಿ ಬಿ.ಎನ್.ಗಾಯತ್ರಿದೇವಿ ಗಾಯನ



ದಾಸಪ್ಪ | ಗಾಯತ್ರಿದೇವಿ | ತುಮಕೂರು ಯಶಸ್ವಿ | ವಿಕ್ರಮ್ ಭಾರದ್ವಾಜ್

ಮೈಸೂರು, ಡಿ. 1– ಮೈಸೂರಿನ ಶ್ರೀ ಸುತ್ತೂರು ಮಠದಲ್ಲಿ ಡಿ.4ರಂದು ಗುರುವಾರ ಸಂಜೆ 6 ಗಂಟೆಗೆ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ದಿವ್ಯ ಸಾನ್ನಿಧ್ಯದಲ್ಲಿ ಬೆಳದಿಂಗಳ ಸಂಗೀತ–286ರ ಅಂಗವಾಗಿ ವಿದುಷಿ ಬಿ.ಎನ್.ಗಾಯತ್ರಿ ದೇವಿ ಅವರಿಂದ ಗಾಯನ ಏರ್ಪಡಿಸಲಾಗಿದೆ.

ಬಿ.ಎನ್.ಗಾಯತ್ರಿದೇವಿಯವರು ಸ್ವಾತಂತ್ರ್ಯ ಹೋರಾಟಗಾರರ ಕುಟುಂಬದಿಂದ ಬಂದವರು. ತಂದೆ ದಿವಂಗತ ಎಂ.ಎಲ್.ವಾಸುದೇವಮೂರ್ತಿಯವರು ಸ್ವಾತಂತ್ರ್ಯ ಹೋರಾಟಗಾರರು ಮತ್ತು ವಿಧಾನ ಪರಿಷತ್ತಿನ ಸದಸ್ಯರಾಗಿದ್ದರು. ಗಾಯತ್ರಿ ದೇವಿಯವರ ಸಂಗೀತದ ಮೊದಲಿನ ಗುರುಗಳು ವಿದ್ವಾನ್ ಗೋಪಾಲಸ್ವಾಮಿಯವರು. ನಂತರ ಆಕಾಶವಾಣಿಯ ಕಲಾವಿದರಾದ ಸಂಗೀತ ವಿದುಷಿ ಪಿ. ರಮಾರವರ ಬಳಿ ಉನ್ನತ ಶಿಕ್ಷಣ ಪಡೆದಿರುತ್ತಾರೆ.

ವಯೊಲಿನ್ ಸಹಕಾರ ನೀಡಲಿರುವ ವಿದ್ವಾನ್ ತುಮಕೂರು ಯಶಸ್ವಿ ಅವರು ನಾಡಿನ ಉದಯೋನ್ಮುಖ ವಯೋಲಿನ್ ವಾದಕರಲ್ಲಿ ಭರವಸೆಯ ಕಲಾವಿದರು. ವಿದ್ವಾನ್ ಎಂ.ಮಹಾದೇವಪ್ಪನವರು ಮತ್ತು ಅವರ ಸುಪುತ್ರರಾದ ವಿದ್ವಾನ್ ಮೈಸೂರು ಎಂ.ನಾಗರಾಜ್ ಮತ್ತು ಡಾ.ಮೈಸೂರು ಎಂ.ಮಂಜುನಾಥ್ ಅವರ ಬಳಿ ಒಂದು ದಶಕಕ್ಕೂ ಮಿಕ್ಕು ಶಿಷ್ಯವೃತ್ತಿ. ಸದ್ಯ ಮೈಸೂರಿನ ಹಿರಿಯ ವಯೋಲಿನ್ ಕಲಾವಿದರಾದ ವಿದ್ವಾನ್ ಎಚ್.ಕೆ.ನರಸಿಂಹಮೂರ್ತಿ ಮತ್ತು ಅವರ ಸುಪುತ್ರ ವಿದ್ವಾನ್ ಎಚ್.ಎಸ್. ಭಾಸ್ಕರ್‌ರವರ ಬಳಿ ಉನ್ನತ ಶಿಕ್ಷಣ ಮುಂದುವರಿಕೆ. ಮೈಸೂರು ವಿಶ್ವವಿದ್ಯಾನಿಲಯದ ಬಿ.ಮ್ಯೂಸಿಕ್ ಮತ್ತು ಎಂ.ಮ್ಯೂಸಿಕ್ ಪದವೀಧರರು.

ಮೃದಂಗ ಸಹಕಾರ ನೀಡಲಿರುವ ವಿದ್ವಾನ್ ವೈ.ಪಿ.ವಿಕ್ರಮ್ ಭಾರದ್ವಾಜ್ ಅವರು 4ನೇ ವರ್ಷದಿಂದಲೇ ತಾಯಿ ವಿದುಷಿ ರಮಾ ಪ್ರಸಾದ್‌ರ ಬಳಿ ಸಂಗೀತದ ಪ್ರಾರಂಭಿಕ ಪಾಠ ಕಲಿತರು. ಹಾಡುಗಾರಿಕೆಗಿಂತಲೂ ಮೃದಂಗಕ್ಕೆ ಮನಸೋತ ಇವರು ಹಿರಿಯ ಕಲಾವಿದರಾದ ಕರ್ನಾಟಕ ಕಲಾಶ್ರೀ ವಿದ್ವಾನ್ ಪಿ.ಜಿ.ಲಕ್ಷ್ಮೀನಾರಾಯಣ್‌ರವರಲ್ಲಿ ಮೃದಂಗ ವಾದನವನ್ನು ಅಭ್ಯಾಸ ಮಾಡಿದರು. ಬಳಿಕ ಮೈಸೂರಿನ ಹಿರಿಯ ಕಲಾವಿದ ವಿ.ಎಸ್.ರಮೇಶ್‌ರ ಬಳಿ ಮೃದಂಗ ಮತ್ತು ಮೋರ್ಚಿಂಗ್ ವಾದನದ ಸೂಕ್ಷ್ಮತೆಗಳನ್ನು ಕರಗತ ಮಾಡಿಕೊಂಡರು. ಮೈಸೂರು ವಿವಿಯ ಲಲಿತ ಕಲೆಗಳ ಕಾಲೇಜಿನಲ್ಲಿ ಅಧ್ಯಯನ ಮಾಡಿ ಬಿ.ಮ್ಯೂಸಿಕ್ ಮತ್ತು ಎಂ.ಮ್ಯೂಸಿಕ್ ಸ್ವರ್ಣ ಪದಕದೊಂದಿಗೆ ಪದವಿಗಳನ್ನು ಪಡೆದರು.


ಮೋರ್ಚಿಂಗ್ ಸಹಕಾರ ನೀಡಲಿರುವ ವಿದ್ವಾನ್ ಆರ್.ದಾಸಪ್ಪನವರು ಮೈಸೂರಿನ ಹಿರಿಯ ಕಲಾವಿದ ಮೃದಂಗ ವಿದ್ವಾನ್ ತುಮಕೂರು ಟಿ.ವಿ.ಭದ್ರಾಚಾರ್ ಅವರ ಬಳಿ ಶಿಷ್ಯವೃತ್ತಿ. ಇವರು ಮೃದಂಗ, ತಬಲ, ಖಂಜರ ಮೋರ್ಚಿಂಗ್, ಘಟಂ ಮುಂತಾದ ಹಲವಾರು ಲಯವಾದ್ಯಗಳನ್ನು ನುಡಿಸಿ ಕೇಳುಗರ ಮನಸೂರೆಗೊಂಡಿದ್ದಾರೆ. ಸಂಗೀತ ಕ್ಷೇತ್ರದಲ್ಲಿ 4 ದಶಕಗಳ ದೀರ್ಘ ಅನುಭವವುಳ್ಳ ಇವರು ಮೈಸೂರಿನ ಖ್ಯಾತ ಕರ್ನಾಟಕ್ ಬ್ಯಾಂಡ್‌ನಲ್ಲಿ (ಅರಮನೆ ವಾದ್ಯವೃಂದ) 33 ವರ್ಷಗಳ ಸೇವೆ ಸಲ್ಲಿಸಿ ಬ್ಯಾಂಡ್ ಮಾಸ್ಟರ್ ಆಗಿ ಕಾರ್ಯನಿರ್ವಹಿಸುತ್ತಿದ್ದಾರೆ.



ನಿಖಿಲ್‌ಗೆ ಸ್ವಾಗತ...

ಎಚ್.ಡಿ.ಕೋಟೆ ತಾಲೂಕಿಗೆ ಆಗಮಿಸಿದ ಜೆಡಿಎಸ್ ಮುಖಂಡ ನಿಖಿಲ್ ಕುಮಾರಸ್ವಾಮಿ ಅವರನ್ನು ಹೊಮ್ಮರಗಳ್ಳಿಯಲ್ಲಿ ನಿಖಿಲ್ ಕುಮಾರಸ್ವಾಮಿ ಅಭಿಮಾನಿಗಳ ಜಿಲ್ಲಾಧ್ಯಕ್ಷ ಪ್ರದೀಪ್ ಕೃಷ್ಣೇಗೌಡ ಸ್ವಾಗತಿಸಿದರು. ಮುಖಂಡರಾದ ಮಹೀಗೌಡ, ಕೃಷ್ಣೇಗೌಡ, ಶಿವಣ್ಣ, ಬೋಗೇಗೌಡ, ಪ್ರಸನ್ನ, ಪುನೀತ್‌ಕುಮಾರ್, ಮಹೇಶ್, ನಾಗರಾಜು, ಪವನ್, ಚಂದ್ರಶೇಖರ್ ಇನ್ನಿತರರು ಈ ವೇಳೆ ಉಪಸ್ಥಿತರಿದ್ದರು.

ನಾಳೆಯಿಂದ 25ನೇ ವರ್ಷದ ಹನುಮ ಜಯಂತಿ ಮಹೋತ್ಸವ



ಮೈಸೂರು,ಡಿ.1–ನಗರದ ಇರ್ವಿನ್ ರಸ್ತೆಯಲ್ಲಿರುವ ಶ್ರೀ ಪಂಚಮುಖಿ ಆಂಜನೇಯಸ್ವಾಮಿ ದೇವಸ್ಥಾನದಲ್ಲಿ 25ನೇ ವರ್ಷದ ಹನುಮ ಜಯಂತಿ ಮಹೋತ್ಸವದ ಅಂಗವಾಗಿ ಡಿ.1ರಿಂದ 10ರವರೆಗೆ ದೇವಸ್ಥಾನದಲ್ಲಿ ವಿವಿಧ ಧಾರ್ಮಿಕ ಕಾರ್ಯಕ್ರಮ ಆಯೋಜಿಸಲಾಗಿದೆ. ಡಿ.2ರಂದು ಶ್ರೀ ಹನುಮ ಜಯಂತಿ ಮಹೋತ್ಸವದ ಅಂಗವಾಗಿ ಶ್ರೀ ಸ್ವಾಮಿಗೆ ವಿಶೇಷ ದ್ರವ್ಯಗಳಿಂದ ಮತ್ತು ಪಂಚಾಮೃತ ಅಭಿಷೇಕ, ಅಲಂಕಾರ, ಮಹಾಮಂಗಳಾರತಿ ಭಕ್ತಾದಿಗಳಿಗೆ ತೀರ್ಥ ಪ್ರಸಾದ ವಿನಿಯೋಗ ಸೇರಿದಂತೆ ವಿವಿಧ ಧಾರ್ಮಿಕ ಕಾರ್ಯಕ್ರಮ ಆಯೋಜಿಸಲಾಗಿದೆ. ಹೆಚ್ಚಿನ ಭಕ್ತಾದಿಗಳು ದೇವರ ಕೃಪೆಗೆ ಪಾತ್ರರಾಗಬೇಕೆಂದು ದೇವಸ್ಥಾನದ ಪ್ರಧಾನ ಅರ್ಚಕ ಎಸ್.ಕೃಷ್ಣಮೂರ್ತಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನೇಮಕ



ಮೈಸೂರು : ಮೈಸೂರಿನ ಕ್ರೈಸ್ಟ್ ಕಾಲೇಜಿನ ಕನ್ನಡ ಸಹಾಯಕ ಪ್ರಾಧ್ಯಾಪಕ ವೇದರಾಜ್ ಕೂರಗಲ್ ಅವರನ್ನು ಬೆಳಕು ಸಾಹಿತ್ಯ, ಶೈಕ್ಷಣಿಕ, ಸಾಂಸ್ಕೃತಿಕ ಟ್ರಸ್ಟ್ ಅಡಿಯಲ್ಲಿ ಸ್ಥಾಪನೆಯಾಗಿರುವ ಬೆಳಕು ಸಂಸ್ಥೆಗೆ ಮೈಸೂರು ಜಿಲ್ಲಾ ಪ್ರಧಾನ ಕಾರ್ಯದರ್ಶಿಯಾಗಿ ನೇಮಕ ಮಾಡಲಾಗಿದೆ.

ನಿಧನ

ಶ್ರೀಮತಿ ಜಯಮ್ಮ



ಮೈಸೂರು: ಶ್ರೀರಂಗಪಟ್ಟಣ ತಾಲೂಕು ಸುಗ್ಗನಹಳ್ಳಿಯ ಕಾಂಗ್ರೆಸ್ ಮುಖಂಡ ದಿವಂಗತ ಕೆಂಪೇಗೌಡರ ಧರ್ಮಪತ್ನಿ ಶ್ರೀಮತಿ ಜಯಮ್ಮ (ಮುದ್ದಮ್ಮ) ಅವರು ಇಂದು ನಿಧನರಾದರು. ಅವರಿಗೆ 92 ವರ್ಷ ವಯಸ್ಸಾಗಿತ್ತು. ಮೃತರು ಐವರು ಪುತ್ರರು, ಇಬ್ಬರು ಹೆಣ್ಣು ಮಕ್ಕಳು, ಸೊಸೆಯಂದಿರು, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು–ಬಳಗ ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ನಾಳೆ (ಮಂಗಳವಾರ) ಮಧ್ಯಾಹ್ನ 12 ಗಂಟೆಗೆ ಸುಗ್ಗನಹಳ್ಳಿಯಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಹೆಚ್.ಎಸ್.ಸರ್ವಮಂಗಳ



ಮೈಸೂರಿನ ಕೇರ್ಗಳ್ಳಿಯ ನಿವಾಸಿ, ನಿವೃತ್ತ ಯೋಧ ಹೆಚ್.ಎಸ್. ಶಂಕರ್ ಅವರ ಪತ್ನಿ ಹೆಚ್.ಎಸ್.ಸರ್ವಮಂಗಳ(69) ಅವರು ಸೋಮವಾರ ಹೃದಯಾಘಾತದಿಂದ ನಿಧನರಾದರು. ಮೃತರು ಪತಿ ಹೆಚ್.ಎಸ್.ಶಂಕರ್, ಪುತ್ರ ನಂದೀಶ್, ಪುತ್ರಿ ನಾಗರತ್ನ, ಸೊಸೆ, ಅಳಿಯ, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು–ವರ್ಗ ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಮಂಗಳವಾರ ವೀರಶೈವ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಕೋಲು ಮಾಡಂಡ ಮಾಚಯ್ಯ



ಮೈಸೂರು: ಮೂಲತಃ ಕೊಡಗಿನ ಅರ್ವತ್ತೊಕ್ಲು ಗ್ರಾಮದವರಾಗಿದ್ದು, ಮೈಸೂರಿನ ಕಲ್ಯಾಣಗಿರಿನಗರದಲ್ಲಿ ವಾಸವಿದ್ದ ಕೋಲುಮಾಡಂಡ ಮಾಚಯ್ಯ (ಗಿರೀಶ್) ಅವರು ಸೋಮವಾರ ರಾತ್ರಿ ನಿಧನರಾದರು.

ಅವರಿಗೆ 64 ವರ್ಷ ವಯಸ್ಸಾಗಿತ್ತು. ಶ್ರೀಯುತರು ಪತ್ನಿ ಸರೋಜ (ತಾಮನೆ ನೆರ್ಪಂಡ) ಪುತ್ರರಾದ ಕುಶಾಲಪ್ಪ, ಪಳಂಗಪ್ಪ ಹಾಗೂ ಅಪಾರ ಬಂಧುವರ್ಗವನ್ನು ಅಗಲಿದ್ದು, ಅಂತ್ಯಕ್ರಿಯೆ ನಾಳೆ (ಮಂಗಳವಾರ) ಮಧ್ಯಾಹ್ನ 1 ಗಂಟೆಗೆ ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ ಚಿರಶಾಂತಿಧಾಮದಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

2.12.2025 ಮಂಗಳವಾರ, ಮಳೆ ನಕ್ಷತ್ರ: ಅನೂರಾಧ, 20.11.2025 ರಿಂದ 02.12.2025 ವಿಶ್ವಾವಸು ನಾಮ ಸಂವತ್ಸರ, ದಕ್ಷಿಣಾಯನ, ಹೇಮಂತ ಋತು, ಮಾರ್ಗಶಿರ ಮಾಸ, ಶುಕ್ಲ ಪಕ್ಷ, ತಿಥಿ: ದ್ವಾದಶಿ, ನಕ್ಷತ್ರ: ಅಶ್ವಿನಿ, ರಾಹುಕಾಲ: ಮಧ್ಯಾಹ್ನ 3ರಿಂದ 4.30ರವರೆಗೆ

■ **ಶ್ರೀ ಗೀತಾ ಪ್ರಚಾರಿಣಿ ಸಭಾ ಟ್ರಸ್ಟ್ (ಬ್ರಹ್ಮೀಭೂತ ಶ್ರೀ ಶಂಕರಾನಂದ ಭಾರತೀ ಸ್ವಾಮಿಗಳಿಂದ ಸ್ಥಾಪಿತ ಗೀತಾಮಂದಿರ, ಮೈಸೂರು:** 91ನೇ ವರ್ಷದ ಶ್ರೀ ಗೀತಾ ಜಯಂತಿ ಮಹೋತ್ಸವ, ಬೆಳಗ್ಗೆ 8ಕ್ಕೆ ಸಾಮೂಹಿಕ ಭಗವದ್ಗೀತೆ ಪಾರಾಯಣ, 8.30ಕ್ಕೆ ಮಹಾಮಂಗಳಾರತಿ, ಪ್ರಸಾದ ವಿನಿಯೋಗ. ಸಂಜೆ 5.45ಕ್ಕೆ ಶ್ರೀ ವಿದ್ಯಾವಿಷ್ಣು ಸಭಾ ಟ್ರಸ್ಟ್ ಇವರಿಂದ ವಿಷ್ಣು ಸಹಸ್ರನಾಮ ಪಾರಾಯಣ, ಸಂಜೆ 6.30ರಿಂದ ಬಿ.ಎನ್. ಮಾಧವಾಚಾರ್ ಅವರಿಂದ ಶ್ರೀ ರಾಮಚಾರಿತ್ರ ಮಂಜರಿ. ಸ್ಥಳ: ಗೀತಾ ಮಂದಿರ, ಅಶೋಕ ರಸ್ತೆ.

■ **ರಾಮ್‌ಸನ್ಸ್ ಬೊಂಬೆ ಮನೆ:** ದಸರೆಯ ಬೊಂಬೆ ಪ್ರದರ್ಶನದ 21ನೇ ಅವತರಣಿಕೆ. ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ. ಬೆಳಗ್ಗೆ 10 ರಿಂದ.

■ **ಕಾವೇರಿ ಆಯುರ್ವೇದ ಆಸ್ಪತ್ರೆ:** ತಲೆ ಕೂದಲು, ಗಂಟಲು, ದಂತ ಮತ್ತು ಆಮವಾತಕ್ಕೆ ಚಿಕಿತ್ಸಾ ಶಿಬಿರ. ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ, ದೇವೇಗೌಡ ಸರ್ಕಲ್ ಹತ್ತಿರ, ಕೆಬಿಎಲ್ ಲೇಔಟ್. ಬೆಳಗ್ಗೆ 10 ರಿಂದ.

■ **ಶ್ರೀ ವೀರಾಂಜನೇಯಸ್ವಾಮಿ ದೇವಸ್ಥಾನ ಟ್ರಸ್ಟ್ :** ಶ್ರೀ ಹನುಮ ಜಯಂತಿ, ಶ್ರೀ ಸ್ವಾಮಿಯವರಿಗೆ ಚತುಷ್ಷಾರ್ಚನೆ, ಪಂಚಾಮೃತ ಅಭಿಷೇಕ, ಮಹಾಮಂಗಳಾರತಿ, ಪ್ರಸಾದ ವಿನಿಯೋಗ, ಬೆಳಗ್ಗೆ 9ಕ್ಕೆ ಶ್ರೀ ರಾಮತಾರಕ ಹೋಮ, ಶ್ರೀ ಆಂಜನೇಯ ಸಹಸ್ರನಾಮ, ಮಧ್ಯಾಹ್ನ 11ಕ್ಕೆ ಶ್ರೀ ವೀರಾಂಜನೇಯ ಸ್ವಾಮಿ ಉತ್ಸವ, ಮಹಾಮಂಗಳಾರತಿ, ಮ. 12ಕ್ಕೆ ಅನ್ನ ಸಂತರ್ಪಣೆ, ಸಂಜೆ 6.30ಕ್ಕೆ ಶ್ರೀಮತಿ ಭಾಗ್ಯದತ್ತ ಅವರಿಂದ ಸುಗಮ ಸಂಗೀತ, ಸ್ಥಳ: ಶ್ರೀ ವೀರಾಂಜನೇಯಸ್ವಾಮಿ ದೇವಸ್ಥಾನ, ಹನುಮಂತನಗರ, ಬನ್ನಿಮಂಟಪ ಸಿ ಬಡಾವಣೆ.

■ **ಹನುಮಾನ್ ಗಡಿ ಸೇವಾ ಸಮಿತಿ :** ಹನುಮ ಜಯಂತಿ, ಆಂಜನೇಯಸ್ವಾಮಿಗೆ ವಿಶೇಷ ಪೂಜೆ, ಹನುಮಮಾಲೆ, ಹನುಮ ರಕ್ಷಾಸೂತ್ರ, ಹನುಮ ಮಹಾಮಂತ್ರ, ಅನ್ನಸಂತರ್ಪಣೆ, ಮುಖ್ಯ ಅತಿಥಿಗಳು : ಎ.ಪಿ. ನಾಗೇಶ್, ಗೋ. ಮಧುಸೂದನ್, ಹೆಚ್.ವಿ. ರಾಜೀವ್, ರಘುರಾಂ ವಾಜಪೇಯಿ, ನಟರಾಜ ಜೋಷಿ, ಸ್ಥಳ: ಹನುಮಾನ್ ಗಡಿ ಸೇವಾ ಸಮಿತಿ, ವಾಣಿವಿಲಾಸ ರಸ್ತೆ ವಿ.ವಿ. ಮಾರ್ಕೆಟ್, ಬೆಳಗ್ಗೆ 11.30ಕ್ಕೆ

■ **ಶ್ರೀ ರಾಘವೇಂದ್ರಸ್ವಾಮಿ ಸೇವಾ ಸಮಿತಿ :** ಪಂಡಿತ್ ವ್ಯಾಸತೀರ್ಥಾಚಾರ್ಯ ಅವರಿಂದ ಮಹಾಭಾರತ ತಾತ್ಪರ್ಯನಿರ್ಣಯ ಕುರಿತು ಪ್ರವಚನ, ಸ್ಥಳ: ಶ್ರೀ ರಾಘವೇಂದ್ರಸ್ವಾಮಿ ಮಠ, ಜಯಲಕ್ಷ್ಮಿಪುರಂ, ಸಂಜೆ 5 ರಿಂದ.

■ **ಜೆಎಸ್‌ಎಸ್ ಸಂಗೀತ ಸಭಾ ಟ್ರಸ್ಟ್ :** ಸಂಜೆ 6 ರಿಂದ ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ ಸಂಸ್ಮರಣಾ 30ನೇ ಸಂಗೀತ ಸಮ್ಮೇಳನ, ಉದ್ಘಾಟನೆ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಅಧ್ಯಕ್ಷತೆ : ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ನಾದನಮನ ಸಂಚಿಕೆ ಬಿಡುಗಡೆ : ಶಾಸಕ ಟಿ.ಎಸ್. ಶ್ರೀವತ್ಸ, ಸಮ್ಮೇಳನಾಧ್ಯಕ್ಷೆ : ವಿದುಷಿ ಡಾ. ಟಿ.ಎಸ್. ಸತ್ಯವತಿ, ಉಪಸ್ಥಿತರು : ಜೆಎಸ್‌ಎಸ್ ಸಂಗೀತ ಸಭಾ ಟ್ರಸ್ಟ್ ಅಧ್ಯಕ್ಷ ರಮೇಶ್ ಕೆ. ಕಣ್ಣನ್, ಸಂಗೀತ ಸೇವಾನಿಧಿ ಪ್ರಶಸ್ತಿ ಪ್ರದಾನ : ಕಲಾಪೋಷಕ ಎಸ್. ರಾಮಪ್ರಸಾದ್, ರಾತ್ರಿ 7.15ಕ್ಕೆ ವಿದುಷಿ ಡಾ. ಟಿ.ಎಸ್. ಸತ್ಯವತಿ ಅವರಿಂದ ಗಾಯನ, ವಿದುಷಿ ನಳಿನಾ ಮೋಹನ್–ವಯೋಲಿನ್, ವಿದ್ವಾನ್ ಕೆ.ಯು. ಜಯಚಂದ್ರರಾವ್–ಮೃದಂಗ, ವಿದ್ವಾನ್ ವಿ.ಎಸ್. ರಮೇಶ್–ಮೋರ್ಸಿಂಗ್, ಸ್ಥಳ: ನವಜ್ಯೋತಿ ಸಭಾಂಗಣ, ಜೆಎಸ್‌ಎಸ್ ಮಹಿಳಾ ಕಾಲೇಜು, ಸರಸ್ವತಿಪುರಂ.

■ **ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ :** ದತ್ತಾತ್ರೇಯ ಜಯಂತಿ ಮಹೋತ್ಸವ, ಬೆಳಿಗ್ಗೆ 9 ಗಂಟೆಗೆ ಶ್ರೀ ಕಾಲಾಗ್ನಿ ಶಮನ ದತ್ತಾತ್ರೇಯ ಸ್ವಾಮಿಗೆ ಮಂಟಪೋತ್ಸವ ಹಾಗೂ ಪಂಚಾಮೃತ ಅಭಿಷೇಕ, ಬೆಳಿಗ್ಗೆ 10ಕ್ಕೆ ಶ್ರೀ ಚಕ್ರ ಪೂಜೆ ಹಾಗೂ ದತ್ತಾತ್ರೇಯ ಹೋಮದ ಪೂರ್ಣಾಹುತಿ, ಸಂಜೆ 6 ಗಂಟೆಗೆ ನಾದ ಮಂಟಪದಲ್ಲಿ ದಿವ್ಯ ನಾಮ ಸಂಕೀರ್ತನೆ, ಸ್ಥಳ: ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ.

■ **ಪಾಳ್ಯಂ ಶ್ರೀ ಶಾಸ್ತಾ ಪೀಠಂ, ಅಭಯದಾಯಕ ಶ್ರೀ ಅಯ್ಯಪ್ಪಸ್ವಾಮಿ ದೇವಸ್ಥಾನಂ :** ಹನುಮ ಜಯಂತಿ ವಿಶೇಷ ಪೂಜಾ ಮಹೋತ್ಸವ, ಮೈಸೂರು ರಾಘವೇಂದ್ರನಗರದಲ್ಲಿ ವಿಜಯ ಮಾಡಿಸಿರುವ ಶ್ರೀ ಅಭಯಾಂಜಯ ಸ್ವಾಮಿಗೆ ವಿಶೇಷ ಪೂಜೆ, ಸಾನ್ನಿಧ್ಯ : ವಂಗೀಪುರ ನಂಬೀ ಮಠದ ಶ್ರೀ ಬಿ.ವಿ. ಇಳೈ ಆಳ್ವಾರ್ ಸ್ವಾಮೀಜಿ, ಉಪಸ್ಥಿತರು : ಪಾಳ್ಯಂ ಶ್ರೀ ಶಾಸ್ತಾ ಪೀಠಂ ಧರ್ಮಾಧಿಕಾರಿ ಎಂ.ಎಸ್. ಮುರುಳೀಧರ ಶಾಸ್ತ್ರಾ, ಮಧ್ಯಾಹ್ನ 12ಕ್ಕೆ ಪ್ರಸಾದ ವಿನಿಯೋಗ, ಸ್ಥಳ: ದೇವಸ್ಥಾನಂ, ರಾಘವೇಂದ್ರನಗರ.

■ **ಶ್ರೀ ಚಾಮರಾಜೇಂದ್ರ ಮೃಗಾಲಯ ನೌಕರರ ಸಂಘ :** ಸಂಘದ ಉದ್ಘಾಟನಾ ಸಮಾರಂಭ, ಉದ್ಘಾಟನೆ : ಶಾಸಕ ಟಿ.ಎಸ್. ಶ್ರೀವತ್ಸ, ಅಧ್ಯಕ್ಷತೆ : ಮಾಜಿ ಮೇಯರ್ ಪುರುಷೋತ್ತಮ್, ಮುಖ್ಯ ಅತಿಥಿಗಳು: ಶಾಸಕ ಹರೀಶ್‌ಗೌಡ, ಮೃಗಾಲಯ ಪ್ರಾಧಿಕಾರದ ಅಧ್ಯಕ್ಷ ಕೆ.ರಂಗಸ್ವಾಮಿ, ಕಾರ್ಯನಿರ್ವಾಹಕ ನಿರ್ದೇಶಕರಾದ ಶ್ರೀಮತಿ ಪಿ. ಅನುಷಾ, ಮಹದೇವಸ್ವಾಮಿ, ಚೇತನ್‌ಕುಮಾರ್, ಪೈಲ್ವಾನ್ ಚಂದ್ರಶೇಖರ್, ಸ್ಥಳ: ವಿಶ್ವಮೈತ್ರಿ ಬುದ್ಧವಿಹಾರ, ಬಲ್ಲಾಳ್ ಸರ್ಕಲ್, ಸಂಜೆ 6 ರಿಂದ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಸಾಧಕರ ಸೋಪಾನ– ಲೇಖನ ಮತ್ತು ಪ್ರಸ್ತುತಿ: ಟಿ. ಎಸ್. ಗೋಪಾಲ್, ಪ್ರಾಯೋಜಕರು: ಸಹಬಾಳ್ವೆ, ಬೆಂಗಳೂರು, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ : ಡಾ. ಎಂ.ಎ. ಜ್ಯೋತಿ, ವ್ಯಾಖ್ಯಾನ : ಮೊರಬದ ಮಲ್ಲಿಕಾರ್ಜುನ, 6.50 ರೈತರಿಗೆ ಸಲಹೆ, 7.15 ಮತ್ತು ಸಂಜೆ 5.40 – ಪ್ರಾಯೋಜಿತ ಕಾರ್ಯಕ್ರಮ ಕೆ.ಎಸ್.ಓ.ಯು. ಮುಕ್ತವಾಣಿ, ಪ್ರಾಯೋಜಕರು–ಪ್ರಸಾರಂಗ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮೈಸೂರು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಡೀನ್ ಅಕಾಡೆಮಿಕ್ಸ್ ಪ್ರೊ. ಎಂ. ರಾಮನಾಥನ್ ನಾಯ್ಡು ಅವರೊಂದಿಗೆ ನಡೆಸಿದ ಸಂವಾದದ ಮೊದಲ ಭಾಗ. ಪ್ರಸ್ತುತಿ : ಎನ್.ಕೇಶವಮೂರ್ತಿ, 8.30 ವಿಶೇಷ ಕಾರ್ಯಕ್ರಮ ಸರಣಿ ಮೈಸೂರು ಆಕಾಶವಾಣಿ ತೊಂಬತ್ತು–ನೆನಪುಗಳ ಹೊತ್ತು – ವಿಶೇಷ ಕಾರ್ಯಕ್ರಮ. ಸರಣಿ ಭಾಗವಹಿಸುವ ಅತಿಥಿಗಳು ಮೈಸೂರಿನ ಹಿರಿಯ ಕುಟುಂಬ ವೈದ್ಯದಂಪತಿ ಡಾ. ನಾಗೇಂದ್ರ ಪ್ರಸಾದ್ ಮತ್ತು ಡಾ. ರಮಾ ನಾಗೇಂದ್ರ ಪ್ರಸಾದ್. ನಡೆಸಿಕೊಡುತ್ತಾರೆ – ಟಿ.ವಿ. ವಿದ್ಯಾಶಂಕರ್, 9.00 ಕರೆಗೊಂದು ಗೀತೆ–ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಫೋನ್ ಇನ್ ಕಾರ್ಯಕ್ರಮ, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ : ನಾದಲಹರಿ–ಮೈಸೂರು ನಿಲಯ ಕಲಾವಿದರಿಂದ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ– ಹೊಂಗಿರಣ–ವಿಕಸಿತ ಹಾದಿಗೊಂದು ಸೋಪಾನ, ಪ್ರಸ್ತುತಿ– ಎಸ್. ಲಕ್ಷ್ಮೀನಾರಾಯಣ, ಆರ್. ಲೋಕೇಶ್ವರಿ ಹಾಗೂ ಬಿ.ಜಿ. ಕವಿತಾ

ಮಧ್ಯಾಹ್ನ: 12.05 ವನಿತಾ ವಿಹಾರ, 12.35 ದೇವರನಾಮ–ಪಿ.ಎಸ್. ರಂಜನಿ, 12.45 ಕನ್ನಡದಲ್ಲಿ ಭಾಷಣ, 1.00 ಪ್ರಗತಿಪಥ – ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಕುರಿತು ಸರಣಿ. 1.20 ಭಾವಗೀತೆಗಳು–ಟಿ.ಎಸ್. ಸ್ನೇಹ, 2.40 ಚಿತ್ರಗೀತೆಗಳು, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ, 4.00 ಕಥಾಕಾಲಕ್ಷೇಪ–ಭಕ್ತ ಪುರಂದರ, ಪ್ರಸ್ತುತಿ–ಸಂತ ಶ್ರೀ ಭದ್ರಗಿರಿ ಅಚ್ಯುತದಾಸರು, 5.00 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.50 ಕೃಷಿರಂಗ–ಕಿಸಾನ್‌ವಾಣಿ, ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ ಪ್ರಾಯೋಜಿತ ಕಾರ್ಯಕ್ರಮ. ಮತ್ಸ್ಯ ತರಂಗ ಮೀನು ಸಾಕಾಣಿಕೆ ತಾಂತ್ರಿಕತೆಗಳನ್ನು ಕುರಿತ ಬಾನುಲಿ ಸರಣಿ ಮಹಾಶಿರ್ ಮತ್ಸಧಾಮ ಕುರಿತು ಹಾರಂಗಿಯ ಮೀನುಗಾರಿಕಾ ಇಲಾಖೆಯ ಸಹಾಯಕ ನಿರ್ದೇಶಕರಾದ ಸಚಿನ್.ಎಸ್. ಎಂ., ಪ್ರಸ್ತುತಿ : ಎನ್.ಕೇಶವಮೂರ್ತಿ, 7.45 ಮೈಸೂರು ಜಂಕ್ಷನ್ ಸಾಪ್ತಾಹಿಕ ಸಂಚಿಕೆ, ಪ್ರಸ್ತುತಿ–ಬಿ. ದಿಗ್ವಿಜಯ್, 8.00 ನಾಟಕ–ಕ್ರಿಸ್‌ಮಸ್ ಉಡುಗೊರೆ, ರಚನೆ–ಇ.ಆರ್. ರಾಮಚಂದ್ರನ್, ನಿರ್ದೇಶನ ಮತ್ತು ನಿರ್ಮಾಣ–ಪ್ರಭುಸ್ವಾಮಿ ಮಳಿಮಠ್, 8.30 ಹಿಂದಿ ಚಿತ್ರಗೀತೆಗಳು, 9.30 ಕರ್ನಾಟಕ ಶಾಸ್ತ್ರೀಯ ಸಂಗೀತ, ಸುಮತಿ ಮುರಾರಿ – ಹಾಡುಗಾರಿಕೆ, 10.00 ಚೈತ್ರವನ–ಲಕ್ಷ್ಮೀಶನ ಜೈಮಿನಿ ಭಾರತದ ಸಮಗ್ರ ವಾಚನ ಹಾಗೂ ವ್ಯಾಖ್ಯಾನ, ಪ್ರಸ್ತುತಿ: ಡಾ. ಎ. ಎಸ್. ಶಂಕರನಾರಾಯಣ, 10.30 ಸವಿನೆನಪು

ಮೈಸೂರಿನಲ್ಲಿ ವಿಶ್ವ ಏಡ್ಸ್ ದಿನ



2030ಕ್ಕೆ ಏಡ್ಸ್ ರೋಗ ಮುಕ್ತ ಕರ್ನಾಟಕದ ಗುರಿ

■ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ವಿಶ್ವಾಸ ■ ಕರ್ನಾಟಕದಲ್ಲಿ 2004 ರಿಂದ 2025 ರವರೆಗೆ 1,16,200 ಏಡ್ಸ್ ಸೋಂಕಿತರ ಸಾವು ■ ಸಾವಿನ ಸಂಖ್ಯೆ ಶೂನ್ಯಕ್ಕಿಳಿಸುವ ಗುರಿ; ಸೋಂಕಿತರನ್ನು ಕೀಳಾಗಿ ಕಾಣಬೇಡಿ



ಕಾರ್ಯಕ್ರಮಕ್ಕೂ ಮುನ್ನ ಏಡ್ಸ್ ಬಗ್ಗೆ ಜಾಗೃತಿ ಮೂಡಿಸುವ ಬೈಕ್ ರ್‍ಯಾಲಿ ನಡೆಯಿತು.

ಮೈಸೂರು, ಡಿ.1(ಬಿಎಲ್‌ಯು)– 2030ರ ವೇಳೆಗೆ ಏಡ್ಸ್ ರೋಗವನ್ನು ಶೂನ್ಯಗೊಳಿಸುವ ಗುರಿ ಹೊಂದಲಾಗಿದೆ ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ದಿನೇಶ್ ಗುಂಡೂರಾವ್ ತಿಳಿಸಿದರು.

ಮೈಸೂರಿನ ಜೆ.ಕೆ.ಮೈದಾನದ ಮೈಸೂರು ಮೆಡಿಕಲ್ ಕಾಲೇಜು ಅಮೃತ ಮಹೋತ್ಸವ ಭವನದಲ್ಲಿ ಇಂದು ನಡೆದ ವಿಶ್ವ ಏಡ್ಸ್ ದಿನ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಈ ಮೂಲಕ 2030ಕ್ಕೆ ಏಡ್ಸ್ ಮುಕ್ತ ಕರ್ನಾಟಕವನ್ನಾಗಿ ಮಾಡುವ ಗುರಿ ಹೊಂದಲಾಗಿದ್ದು, ಇದಕ್ಕಾಗಿ ಹಲವು ಪರಿಣಾಮಕಾರಿ ಯೋಜನೆ ರೂಪಿಸಲಾಗಿದೆ ಎಂದು ಹೇಳಿದರು.



ಮೈಸೂರಿನ ಜೆ.ಕೆ.ಮೈದಾನದ ಮೈಸೂರು ಮೆಡಿಕಲ್ ಕಾಲೇಜು ಅಮೃತ ಮಹೋತ್ಸವ ಭವನದಲ್ಲಿ ಸೋಮವಾರ ನಡೆದ ವಿಶ್ವ ಏಡ್ಸ್ ದಿನ ಕಾರ್ಯಕ್ರಮದಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ದಿನೇಶ್ ಗುಂಡೂರಾವ್ ಅವರು ಏಡ್ಸ್ ವಿರುದ್ಧ ಜಾಗೃತಿ ಮೂಡಿಸುವ ವಿವಿಧ ಪೋಸ್ಟರ್‌ಗಳನ್ನು ಬಿಡುಗಡೆ ಮಾಡಿದರು.

2004 ರಿಂದ 2025 ರವರೆಗೆ ಕರ್ನಾಟಕದಲ್ಲಿ 1,16,200 ಏಡ್ಸ್ ಸೋಂಕಿತರು ಮೃತಪಟ್ಟಿದ್ದಾರೆ. ಈ ಮೂಲಕ 2030ಕ್ಕೆ ಸಂಪೂರ್ಣವಾಗಿ ಏಡ್ಸ್ ಹರಡುವಿಕೆ ನಿಯಂತ್ರಣ ಮಾಡಿ, ಸೋಂಕಿತರ ಸಾವನ್ನು ಕೂಡ ಶೂನ್ಯಕ್ಕೆ ಇಳಿಸಬೇಕಿದೆ ಎಂದು ದಿನೇಶ್ ಗುಂಡೂರಾವ್ ಹೇಳಿದರು.

ಆದರೆ ಈಗ ಏಡ್ಸ್ ಸೋಂಕಿತರ ಸಂಖ್ಯೆ ಗಣನೀಯವಾಗಿ ಕಡಿಮೆಯಾಗುತ್ತಿದೆ. ಸೋಂಕಿತರು ಇತರರಿಗೆ ಹರಡದಂತೆ ನಿಯಂತ್ರಣ ಮಾಡುವುದು ನಮ್ಮ ಮುಂದಿರುವ ದೊಡ್ಡ ಸವಾಲು. ನಮ್ಮ ಇಲಾಖೆ ಈ ಸವಾಲನ್ನು ಗಂಭೀರವಾಗಿ ಪರಿಗಣಿಸಿದ್ದು, ನಾವು ಇಟ್ಟುಕೊಂಡಿರುವ ಗುರಿ ತಲುಪುವ ಆಶಾಭಾವನೆ ಹೊಂದಿದ್ದೇವೆ ಎಂದು ತಿಳಿಸಿದರು.

ಏಡ್ಸ್ ರೋಗ ಬಂದವರಿಗೆ ಶೀಘ್ರ ಹಾಗೂ ಪರಿಣಾಮಕಾರಿ ಔಷಧ ನೀಡಬೇಕು. 1981 ರಲ್ಲಿ ವಿಶ್ವದಲ್ಲಿ, ಭಾರತದಲ್ಲಿ 1986 ರಲ್ಲಿ ಈ ರೋಗ ಪತ್ತೆಯಾಯಿತು. ಅಂದು ಈ ರೋಗ ಬಹಳ ಭಯಾನಕವಾಗಿತ್ತು. ಈ ರೋಗದ ಹರಡುವಿಕೆ ನಿಯಂತ್ರಣ ಕಷ್ಟವಾಗಿತ್ತು. ಪರಿಣಾಮಕಾರಿ ಔಷಧವಿರಲಿಲ್ಲ. ಇದರಿಂದ ಲಕ್ಷಾಂತರ ಜನರು ಸಾವನ್ನಪ್ಪಿದ್ದರು.



ವಿಶ್ವ ಏಡ್ಸ್ ದಿನದ ಅಂಗವಾಗಿ ಮೈಸೂರಿನಲ್ಲಿ ಸೋಮವಾರ ವಿದ್ಯಾರ್ಥಿಗಳು ಕಾಲ್ನಡಿಗೆ ಜಾಥಾ ನಡೆಸಿ ಜಾಗೃತಿ ಮೂಡಿಸಿದರು.

ಆದರೆ ಈಗ ಬಹಳಷ್ಟು ಔಷಧಗಳಿವೆ ಎಂದು ಮಾಹಿತಿ ನೀಡಿದರು.

ಗರ್ಭಿಣಿಯಲ್ಲಿ ಏಡ್ಸ್ ಸೋಂಕು ಇದ್ದರೆ, ನಾಲ್ಕು ಹಂತದಲ್ಲಿ ಸೂಕ್ತ ಚಿಕಿತ್ಸೆ ನೀಡಿದರೆ ಆಕೆ ಜನ್ಮ ನೀಡುವ ಮಗುವಿಗೆ ಏಡ್ಸ್ ಸೋಂಕು ಬರದಂತೆ ತಡೆಗಟ್ಟಬಹುದು. ಇದನ್ನು ಶೂನ್ಯಕ್ಕಿಳಿಸುವುದು ನಮ್ಮ ಮುಂದಿರುವ ದೊಡ್ಡ ಸವಾಲು ಎಂದು ದಿನೇಶ್ ಗುಂಡೂರಾವ್ ಹೇಳಿದರು.

ಶಾಸಕರಾದ ಕೆ.ಹರೀಶ್ ಗೌಡ, ಸಿ.ಎನ್.ಮಂಜೇಗೌಡ, ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷ ಡಾ.ಮಾನಸ, ಕರ್ನಾಟಕ ರಾಜ್ಯ ಏಡ್ಸ್ ಪ್ರಿವೆನ್ಷನ್ ಸೊಸೈಟಿ ಯೋಜನಾ ನಿರ್ದೇಶಕಿ ಪದ್ಮ ಬಸವಂತಪ್ಪ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ನಿರ್ದೇಶಕ ಡಾ.ಕೆ.ವಸಂತಕುಮಾರ್, ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ನಿರ್ದೇಶಕಿ ಡಾ.ಕೆ.ಆರ್. ದಾಕ್ಷಾಯಿಣಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ವಿಭಾಗೀಯ ಸಹ ನಿರ್ದೇಶಕಿ ಡಾ. ಬಿ.ಮಲ್ಲಿಕಾ, ಡಿಹೆಚ್‌ಒ ಡಾ.ಪಿ.ಸಿ. ಕುಮಾರಸ್ವಾಮಿ, ಜಿಲ್ಲಾ ಏಡ್ಸ್ ಪ್ರಬಂಧಕ ಮತ್ತು ನಿಯಂತ್ರಣ ಘಟಕದ ಜಿಲ್ಲಾ ಕಾರ್ಯಕ್ರಮಾಧಿಕಾರಿ ಡಾ.ಮೊಹಮ್ಮದ್ ಶಿರಾಜ್ ಅಹಮ್ಮದ್, ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ. ರಾಜೀವ್ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಮೈಸೂರಿನಲ್ಲಿ 23,858 ಏಡ್ಸ್ ಸೋಂಕಿತರ ನೋಂದಣಿ

ಮೈಸೂರಿನಲ್ಲಿ ಒಟ್ಟು 23,858 ಏಡ್ಸ್ ಸೋಂಕಿತರು ಎಆರ್ ಟಿ ಕೇಂದ್ರದಲ್ಲಿ ನೋಂದಣಿ ಮಾಡಿಕೊಂಡಿದ್ದಾರೆ.

ಮೈಸೂರಿನಲ್ಲಿ 2004ರ ಮೇ ತಿಂಗಳಲ್ಲಿ ಕೆ.ಆರ್.ಆಸ್ಪತ್ರೆಯಲ್ಲಿ ಎಆರ್‌ಟಿ ಕೇಂದ್ರ ಆರಂಭವಾಯಿತು. ಇಲ್ಲಿವರೆಗೆ 18,471 ಸೋಂಕಿತರು ನೋಂದಾಯಿಸಿಕೊಂಡಿದ್ದು, ಆಶಾಕಿರಣ ಆಸ್ಪತ್ರೆಯಲ್ಲಿ 3,404 ಸೋಂಕಿತರು ನೋಂದಣಿ ಮಾಡಿಸಿಕೊಂಡಿದ್ದಾರೆ. ಇನ್ನು ಜೆಎಸ್‌ಎಸ್ ಆಸ್ಪತ್ರೆಯಲ್ಲಿ 1,983 ಸೋಂಕಿತರು ನೋಂದಾಯಿಸಿಕೊಂಡಿದ್ದಾರೆ. ಮೈಸೂರಿನಲ್ಲಿ ಒಟ್ಟು 24 ಐಸಿಟಿಸಿ ಕೇಂದ್ರಗಳು, ಒಂದು ಮೊಬೈಲ್ ಐಸಿಟಿಸಿ ಕೇಂದ್ರ ಹಾಗೂ ಹೆಚ್‌ಐವಿ ಆಪ್ತ ಸಮಾಲೋಚನೆ ಮತ್ತು ಪರೀಕ್ಷಾ ಸೇವೆಯನ್ನು ಒದಗಿಸುತ್ತಿದೆ. ಮೈಸೂರಿನಲ್ಲಿ ಒಟ್ಟು 10 ರಕ್ತ ನಿಧಿ ಕೇಂದ್ರಗಳು ಕಾರ್ಯ ನಿರ್ವಹಿಸುತ್ತಿದ್ದು, ಸೋಂಕಿತರಿಗೆ ಉಚಿತವಾಗಿ ರಕ್ತ ನೀಡಲಾಗುತ್ತಿದೆ.

ಪುರುಷರ ನಡುವಿನ ಸಲಿಂಗ ಕಾಮದಿಂದ ಏಡ್ಸ್ ರೋಗ ಹೆಚ್ಚಳ

ಪುರುಷರ ನಡುವಿನ ಸಲಿಂಗ ಕಾಮದಿಂದ ಏಡ್ಸ್ ರೋಗ ಹೆಚ್ಚಾಗುತ್ತಿದ್ದು, ಇಂತಹ ಸಲಿಂಗ ಕಾಮಿಗಳ ಸೋಂಕಿತರೇ ಹೆಚ್ಚಾಗಿದ್ದಾರೆ ಎಂದು ದಿನೇಶ್ ಗುಂಡೂರಾವ್ ಆತಂಕ ವ್ಯಕ್ತಪಡಿಸಿದರು.

ಹಾಸ್ಟೆಲ್‌ಗಳಲ್ಲಿ ಪುರುಷ ಸಲಿಂಗ ಕಾಮಿಗಳು ಸಂಪರ್ಕ ಸಾಧಿಸುತ್ತಾರೆ. ಅಲ್ಲದೆ ಡೇಟಿಂಗ್ ಆಪ್‌ಗಳಿಂದ ಸಂಪರ್ಕ ಸಾಧಿಸುತ್ತಾರೆ. ಇಂತಹ ಪುರುಷ ಸಲಿಂಗ ಕಾಮಿಗಳಿಂದ ಹೆಚ್ಚಾಗಿ ಏಡ್ಸ್ ಹರಡುತ್ತಿದೆ ಎಂದು ಹೇಳಿದರು.

ಪುರುಷ ಸಲಿಂಗ ಕಾಮಿಗಳು ಮಾತ್ರವಲ್ಲದೆ ಮಂಗಳ ಮುಖಿಯರು, ಲೈಂಗಿಕ ಕಾರ್ಯಕರ್ತೆಯರಿಂದ ಕೂಡ ಏಡ್ಸ್ ರೋಗ ಹೆಚ್ಚಾಗಿ ಹರಡುತ್ತಿದೆ ಎಂದು ದಿನೇಶ್ ಗುಂಡೂರಾವ್ ತಿಳಿಸಿದರು. ಇಡೀ ದೇಶದಲ್ಲೇ ಕರ್ನಾಟಕ ಏಡ್ಸ್ ಸೋಂಕಿತರ ಸಂಖ್ಯೆಯಲ್ಲಿ ನಂಬರ್ ಒನ್ ಸ್ಥಾನದಲ್ಲಿದೆ. ಈ ಕಳಂಕವನ್ನು ನಾವು ಹೋಗಲಾಡಿಸಬೇಕಿದೆ ಎಂದರು. ಸೋಂಕಿತರನ್ನು ಕೀಳಾಗಿ ನೋಡಬಾರದು. ಅವರೊಡನೆ ಊಟ, ತಿಂಡಿ ಮಾಡಿದರೆ, ಜೊತೆಯಾಗಿ ಮಾತನಾಡಿದರೆ, ಕೂತರೆ, ಓಡಾಡಿದರೆ ನಮಗೂ ಸೋಂಕು ಬರುತ್ತದೆ ಎಂಬ ತಪ್ಪು ಭಾವನೆ ಇದ್ದು, ಈ ಭಾವನೆಯನ್ನು ಅಳಿಸಿ ಹಾಕಬೇಕು ಎಂದು ಸಲಹೆ ನೀಡಿದರು. ಬಿ.ಪಿ. ಹಾಗೂ ಶುಗರ್‌ನಂತೆ ಇದೂ ಒಂದು ಖಾಯಿಲೆಯಾಗಿದ್ದು, ಜೀವನ ಪರ್ಯಂತ ಸೂಕ್ತ ಔಷಧಿ ಪಡೆಯಬೇಕು ಎಂದು ದಿನೇಶ್ ಗುಂಡೂರಾವ್ ಕಿವಿಮಾತು ಹೇಳಿದರು.

ದಸರಾ ವಸ್ತು ಪ್ರದರ್ಶನ ಮಾದರಿ ಬೆಳಗಾವಿಯಲ್ಲೂ 43 ದಿನಗಳ ವಸ್ತುಪ್ರದರ್ಶನಕ್ಕೆ ಚಾಲನೆ



ಬೆಳಗಾವಿಯಲ್ಲಿ ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ವತಿಯಿಂದ ಹಮ್ಮಿಕೊಳ್ಳಲಾಗಿರುವ 43 ದಿನಗಳ ದಸರಾ ವಸ್ತುಪ್ರದರ್ಶನ ಮಾದರಿಯ ಬೃಹತ್ ವಸ್ತುಪ್ರದರ್ಶನಕ್ಕೆ ಸಚಿವ ಸತೀಶ್ ಜಾರಕಿಹೊಳಿ ಚಾಲನೆ ನೀಡಿದರು. ಈ ವೇಳೆ ಪ್ರಾಧಿಕಾರದ ಅಧ್ಯಕ್ಷ ಅಯೂಬ್ ಖಾನ್ ಇತರರು ಉಪಸ್ಥಿತರಿದ್ದಾರೆ.

ಬೆಳಗಾವಿ, ಡಿ.1– ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರದ ವತಿಯಿಂದ ಮೈಸೂರು ದಸರಾ ವಸ್ತು ಪ್ರದರ್ಶನದ ನಂತರ ಬೆಳಗಾವಿಯ ಸಿಇಪಿಇಡಿ ಮೈದಾನದಲ್ಲಿ ಮೊದಲ ಬಾರಿಗೆ ಹಮ್ಮಿಕೊಂಡಿರುವ 43 ದಿನಗಳ ವಸ್ತು ಪ್ರದರ್ಶನಕ್ಕೆ ಸೋಮವಾರ ಚಾಲನೆ ನೀಡಲಾಯಿತು.

ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೋಳಿ ಮೊದಲ ವಸ್ತು ಪ್ರದರ್ಶನಕ್ಕೆ ಚಾಲನೆ ನೀಡಿದರು. ಬಳಿಕ ಮಾತನಾಡಿದ ಅವರು, ಮೊದಲ ಬಾರಿಗೆ ಬೆಳಗಾವಿಯಲ್ಲಿ ಇಷ್ಟೊಂದು ದೊಡ್ಡ ಮಟ್ಟದಲ್ಲಿ ವಸ್ತು ಪ್ರದರ್ಶನ ಆಯೋಜನೆ ಮಾಡಿರುವುದು ಶ್ಲಾಘನೀಯ ಎಂದು ಮೆಚ್ಚುಗೆ ವ್ಯಕ್ತಪಡಿಸಿದರಲ್ಲದೆ ಮಳಿಗೆಗಳನ್ನು ವೀಕ್ಷಣೆ ಮಾಡಿದರು.

ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಅಯೂಬ್ ಖಾನ್ ಮಾತನಾಡಿ, 43 ದಿನಗಳ ಕಾಲ ನಡೆಯುವ ವಸ್ತು ಪ್ರದರ್ಶನದಲ್ಲಿ 15 ಸರ್ಕಾರಿ ಮಳಿಗೆ, 45ಕ್ಕೂ ಹೆಚ್ಚು ಖಾಸಗಿ ಮಳಿಗೆಗಳು ಇವೆ. ಅಲ್ಲದೆ ವಾರಾಂತ್ಯದ ದಿನಗಳಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸಲಾಗುವುದು. ಮೈಸೂರು ದಸರಾ ವಸ್ತು ಪ್ರದರ್ಶನ ಮಾದರಿಯಲ್ಲಿಯೇ ಬೆಳಗಾವಿಯಲ್ಲಿ ಮೊದಲ ಬಾರಿಗೆ ಆಯೋಜನೆ ಮಾಡಲಾಗಿದೆ ಎಂದರು.

ಮೈಸೂರ್ ಸ್ಯಾಂಡಲ್ ಸೋಪ್ ಮಳಿಗೆ ಸೇರಿದಂತೆ ಮೈಸೂರು ಬ್ರ್ಯಾಂಡ್ ಪದಾರ್ಥಗಳು ಲಭ್ಯವಿದ್ದು, ಗೃಹ ಬಳಕೆ ವಸ್ತುಗಳ ಪ್ರದರ್ಶನ ಮತ್ತು ಮಾರಾಟ ಇರಲಿದೆ. ಮೊದಲ ಬಾರಿಗೆ ಆಯೋಜನೆ ಮಾಡಿರುವ ವಸ್ತು ಪ್ರದರ್ಶನಕ್ಕೆ ಸ್ಥಳೀಯರು ಹಾಗೂ ಪ್ರವಾಸಿಗರು ಹೆಚ್ಚಿನ ಸಂಖ್ಯೆಯಲ್ಲಿ ಭೇಟಿ ನೀಡಿ ಯಶಸ್ವಿಗೊಳಿಸುವಂತೆ ಮನವಿ ಮಾಡಿದರು. ಶಾಸಕ ಆಸಿಫ್ ಸೇಠ್, ಬೆಳಗಾವಿ ನಗರಾಭಿವೃದ್ಧಿ ಪ್ರಾಧಿಕಾರದ ಆಯುಕ್ತ ಗಣೇಶ್ ರಾವ್, ಜಿಪಂ ಸಿಇಓ ರಾಹುಲ್ ಮತ್ತಿತರರಿದ್ದರು.

ಜೀವಾವಧಿ ಶಿಕ್ಷೆ ಅಮಾನತು ಕೋರಿ ಹೈಕೋರ್ಟ್‌ಗೆ ಪ್ರಜ್ವಲ್ ರೇವಣ್ಣ ಅರ್ಜಿ



ಬೆಂಗಳೂರು, ಡಿ.1– ಅತ್ಯಾಚಾರ ಪ್ರಕರಣದಲ್ಲಿ ಮಾಜಿ ಸಂಸದ ಪ್ರಜ್ವಲ್ ರೇವಣ್ಣ ಜೀವಿತಾವಧಿ ಶಿಕ್ಷೆಗೆ ಗುರಿಯಾಗಿದ್ದಾರೆ. ಇದೀಗ ಈ ಶಿಕ್ಷೆಯನ್ನು ಅಮಾನತ್ತಿನಲ್ಲಿಟ್ಟು ಜಾಮೀನು ನೀಡುವಂತೆ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದು, ಇಂದು (ಡಿ. 1) ನ್ಯಾಯಮೂರ್ತಿಗಳಾದ ಕೆ.ಎಸ್. ಮುದಗಲ್ ಮತ್ತು ಟಿ ವೆಂಕಟೇಶ್ ನಾಯಕ್ ವಿಭಾಗೀಯ ಪೀಠ ಅರ್ಜಿ ವಿಚಾರಣೆ ನಡೆಯಿತು.

ಈ ವೇಳೆ ಪ್ರಜ್ವಲ್ ರೇವಣ್ಣ ಪರವಾಗಿ ಹಿರಿಯ ವಕೀಲ ಸಿದ್ಧಾರ್ಥ್ ಲೂಥ್ರಾ ಪ್ರಬಲ ವಾದ ಮಂಡಿಸಿದ್ದು, ಪ್ರಜ್ವಲ್ 2024 ಏ.24ರಂದು ದೇಶ ತೊರೆಯುವಾಗ ಅವರ ವಿರುದ್ಧ ಯಾವುದೇ ಪ್ರಕರಣ ದಾಖಲಾಗಿರಲಿಲ್ಲ. ಆ್ಯಪಲ್ ಮೊಬೈಲ್ ವಶಕ್ಕೆ ನೀಡಿಲ್ಲವೆಂದು ಪ್ರಾಸಿಕ್ಯೂಷನ್ ಆರೋಪಿಸಿದೆ. ಆ್ಯಪಲ್ ಮೊಬೈಲ್ ನೀಡುವಂತೆ ಸೆಕ್ಷನ್ 91ರ ಅಡಿ ನೋಟಿಸ್ ನೀಡಿಲ್ಲ. ಐಎಂಇಐ ನಂಬರ್ ಆಧರಿಸಿ ಮೊಬೈಲ್ ಕಂಪನಿಯಿಂದ ಮಾಹಿತಿ ಪಡೆಯಲು ಯತ್ನಿಸಿಲ್ಲ. ಸಂತ್ರಸ್ತೆ ದೂರು ದಾಖಲಿಸದೇ 3 ವರ್ಷ ಮೌನವಾಗಿ ಇದ್ದಿದ್ದೇಕೆ? ಒಮ್ಮೆಗೇ ನಾಲ್ಕು ಪ್ರತ್ಯೇಕ ಕ್ರಿಮಿನಲ್ ಕೇಸ್‌ಗಳು ಹೇಗೆ ದಾಖಲಾದವು ಎಂದು ಪ್ರಶ್ನಿಸಿದರು.

ರಾಜಕೀಯ ದುರುದ್ದೇಶದಿಂದ ಈ ಪ್ರಕರಣಗಳನ್ನು ದಾಖಲಿಸಲಾಗಿದೆ. 2019, 2021ರಲ್ಲಿ ಅತ್ಯಾಚಾರಕ್ಕೆ ಒಳಗಾದರೂ 2023ರಲ್ಲಿ ಸಂತ್ರಸ್ತೆ ಬಂದಿದ್ದೇಕೆ? ಫಾರ್ಮ್‌ಹೌಸ್‌ಗೆ ಬಂದರೂ ಆಕೆಯ ಬಟ್ಟೆಗಳನ್ನು ಹಿಂಪಡೆಯಲಿಲ್ಲವೇಕೆ? ಪೊಲೀಸರು ಬಟ್ಟೆಯನ್ನು ವಶಕ್ಕೆ ಪಡೆದಿರುವುದೇ ಸಂಶಯಾಸ್ಪದವಾಗಿದೆ. ಡಿಎನ್‌ಎ ಪರೀಕ್ಷೆ ಮಾಡಿದ ವ್ಯಕ್ತಿಯೇ ಮೃತಪಟ್ಟಿದ್ದಾರೆ. ಹೀಗಾಗಿ ಎಫ್‌ಎಸ್‌ಎಲ್ ಸಾಕ್ಷಿ ಒಪ್ಪತಕ್ಕದ್ದಲ್ಲವೆಂದು ಪ್ರಬಲ ವಾದ ಮಂಡಿಸಿದರು. ಪ್ರಜ್ವಲ್ ಪರ ವಕೀಲರ ವಾದ ಆಲಿಸಿದ ಹೈಕೋರ್ಟ್, ಮುಂದಿನ ವಿಚಾರಣೆಯನ್ನು ಬುಧವಾರಕ್ಕೆ ಮುಂದೂಡಿದೆ.

ಪಶ್ಚಿಮ ಬಂಗಾಳದಲ್ಲಿ 21 ಲಕ್ಷಕ್ಕೂ ಹೆಚ್ಚು ಮೃತ ಮತದಾರರು ಪತ್ತೆ!

ಕೋಲ್ಕತ್ತಾ: ಕೇಂದ್ರ ಚುನಾವಣಾ ಆಯೋಗದ ಮೂಲಗಳ ಪ್ರಕಾರ, ಪಶ್ಚಿಮ ಬಂಗಾಳದಲ್ಲಿ ಸೋಮವಾರ ಮಧ್ಯಾಹ್ನದವರೆಗೆ 21 ಲಕ್ಷಕ್ಕೂ ಹೆಚ್ಚು ಮೃತ ಮತದಾರರು ಪತ್ತೆಯಾಗಿದ್ದಾರೆ.

ರಾಜ್ಯದ ಉತ್ತರ 24 ಪರಗಣ ಜಿಲ್ಲೆಯೊಂದರಲ್ಲಿ 2.75 ಲಕ್ಷಕ್ಕೂ ಹೆಚ್ಚು ಸತ್ತ ಮತದಾರರನ್ನು ಇಸಿಐ ಗುರುತಿಸಿದೆ. ರಾಜ್ಯದಲ್ಲಿ ಇದುವರೆಗೆ ನಡೆದ ವಿಶೇಷ ಸಮಗ್ರ ಪರಿಷ್ಕರಣೆಯ ಸಮಯದಲ್ಲಿ ಆಯೋಗವು ಗುರುತಿಸಿದ ಸತ್ತ ಮತದಾರರ ಸಂಖ್ಯೆಯಲ್ಲಿ ಪಶ್ಚಿಮ ಬರ್ಧಮಾನ್ ಮತ್ತು ದಕ್ಷಿಣ 24 ಪರಗಣಗಳು ಕ್ರಮವಾಗಿ ಎರಡನೇ ಮತ್ತು ಮೂರನೇ ಸ್ಥಾನದಲ್ಲಿವೆ.

ಎಣಿಕೆ ನಮೂನೆಗಳ ಶೇ.90 ಕ್ಕಿಂತ ಹೆಚ್ಚು ಡಿಜಿಟಲೀಕರಣವು ಈಗಾಗಲೇ ಪೂರ್ಣಗೊಂಡಿದೆ ಎಂದು ಹೆಸರು ಬಹಿರಂಗಪಡಿಸಲು ಬಯಸದ ಅಧಿಕಾರಿಗಳು ತಿಳಿಸಿದ್ದಾರೆ.

ಬೂತ್ ಮಟ್ಟದ ಅಧಿಕಾರಿಗಳು ರಾಜ್ಯಾದ್ಯಂತ ಸಂಗ್ರಹಿಸದ ಎಣಿಕೆ ನಮೂನೆಗಳ ಸಂಪೂರ್ಣ ಡಿಜಿಟಲೀಕರಣ ಮಾಡಿದ ನಂತರ ರಾಜ್ಯದಲ್ಲಿ ಒಟ್ಟು ಸತ್ತ ಮತದಾರರ ಸಂಖ್ಯೆಯನ್ನು ಕಂಡುಹಿಡಿಯಲಾಗುವುದು. ಸಂಗ್ರಹಿಸದ ಫಾರ್ಮ್‌ಗಳಲ್ಲಿ ಗೈರುಹಾಜರಾದ, ಶಾಶ್ವತವಾಗಿ ಸ್ಥಳಾಂತರಗೊಂಡ, ಸತ್ತ ಮತ್ತು ನಕಲಿ ಮತದಾರರು ಸೇರಿದ್ದಾರೆ.

ಚಿತ್ತಾಪುರದಲ್ಲಿ 'ಭೀಮನಡೆ' ಪಥ ಸಂಚಲನ: 'ನೀಲಿ ಶಕ್ತಿ, ಭಾವೈಕ್ಯ' ಪ್ರದರ್ಶನ



ಚಿತ್ತಾಪುರ (ಕಲಬುರಗಿ ಜಿಲ್ಲೆ): ಸಂವಿಧಾನ ಸಂರಕ್ಷಣಾ ಸಮಿತಿ ನೇತೃತ್ವದಲ್ಲಿ ಪಟ್ಟಣದಲ್ಲಿ ಸೋಮವಾರ ಮಧ್ಯಾಹ್ನ 2.40ಕ್ಕೆ 'ಭೀಮನಡೆ' ಪಥ ಸಂಚಲನ ನಡೆಯಿತು.

ನ.16ರಂದು ಆರ್‌ಎಸ್‌ಎಸ್ ನಡೆಸಿದ ಗಣವೇಷಧಾರಿಗಳ ಪಥಸಂಚಲನಕ್ಕೆ ಪರ್ಯಾಯ ಎಂಬಂತೆ ನಡೆದ ಈ 'ಭೀಮ ನಡೆ' ಪಥಸಂಚಲನವು 'ನೀಲಿ ಶಕ್ತಿ', ಸರ್ವಧರ್ಮ ಭಾವೈಕ್ಯ ಸಂದೇಶ ಸಾರಿತು.

ಬೆಳಗ್ಗೆ 11.30 ಗಂಟೆಗೆ ಶುರುವಾಗಬೇಕಿದ್ದ ಪಥ ಸಂಚಲನವು ಇಲ್ಲಿನ ಚಿತ್ತಾವಲಿ ಚೌಕ್‌ನಲ್ಲಿ ಮಧ್ಯಾಹ್ನ 2.40ಕ್ಕೆ ಆರಂಭವಾಯಿತು. ಸಂವಿಧಾನ, ಅಂಬೇಡ್ಕರ್ ಪರ ಘೋಷಣೆಗಳು ಮೊಳಗಿದವು.

ಬಿಳಿ ಅಂಗಿ, ಖಾಕಿ ಪ್ಯಾಂಟು, ನೀಲಿ ಟೊಪ್ಪಿಗೆ ಧರಿಸಿದ್ದ ನೂರಾರು ಮಂದಿ ಪಥಸಂಚಲನದಲ್ಲಿ ಶಿಸ್ತಿನಿಂದ ಹೆಜ್ಜೆಹಾಕಿದರು. ಅವರ ಮೇಲೆ ಮಹಿಳೆಯರು ಏರಿದಂತೆ ಸಾರ್ವಜನಿಕರು ಪುಷ್ಪವೃಷ್ಟಿಗೈದು ಗೌರವಿಸಿದರು. ಸಾರ್ವಜನಿಕರು ಪಥ ಸಂಚಲನ ಸಾಗುವ ರಸ್ತೆಯ ಮಾರ್ಗದ ಇಕ್ಕೆಲಗಳಲ್ಲಿ ನಿಂತು ಸಡಗರವನ್ನು ಕಣ್ತುಂಬಿಕೊಂಡರು.

ಶೈಕ್ಷಣಿಕ ಪ್ರವಾಸ ವೇಳೆ ಬಸ್ ಉರುಳಿ ಬಿದ್ದು ವಿದ್ಯಾರ್ಥಿ ಸಾವು ಪ್ರಕರಣ

ಸಂತ್ರಸ್ತ ಕುಟುಂಬಕ್ಕೆ ತರಳಬಾಳು ಶಿಕ್ಷಣ ಸಂಸ್ಥೆ ಆಡಳಿತ ಮಂಡಳಿಯಿಂದ 30 ಲಕ್ಷ ಪರಿಹಾರ

- ಶಾಸಕ ಟಿ.ಎಸ್. ಶ್ರೀವತ್ಸ ಮಾಹಿತಿ
- ಗಾಯಾಳು ವಿದ್ಯಾರ್ಥಿಗಳಿಗೆ ಸಂಪೂರ್ಣ ಚಿಕಿತ್ಸಾ ವೆಚ್ಚವನ್ನು ಭರಿಸುವ ಭರವಸೆ

ಮೈಸೂರು, ಡಿ.1(ಜಿಎ)– ಶಾಲಾ ಶೈಕ್ಷಣಿಕ ಪ್ರವಾಸದ ವೇಳೆ ಬಸ್ ಉರುಳಿ ಬಿದ್ದು, ಮೃತಪಟ್ಟ ವಿದ್ಯಾರ್ಥಿಯ ಕುಟುಂಬಕ್ಕೆ 30 ಲಕ್ಷ ಪರಿಹಾರದ ಚೆಕ್ ಅನ್ನು ತರಳಬಾಳು ಶಿಕ್ಷಣ ಸಂಸ್ಥೆ ಆಡಳಿತ ಮಂಡಳಿ ಸಂತ್ರಸ್ತ ಕುಟುಂಬಕ್ಕೆ ನೀಡಿದ್ದು, ಗಾಯಗೊಂಡ ವಿದ್ಯಾರ್ಥಿಗಳ ಸಂಪೂರ್ಣ ಚಿಕಿತ್ಸಾ ವೆಚ್ಚವನ್ನು ಭರಿಸಲಿದೆ ಎಂದು ಕೆಆರ್ ಕ್ಷೇತ್ರದ ಶಾಸಕ ಟಿ.ಎಸ್.ಶ್ರೀವತ್ಸ ಅವರು ತಿಳಿಸಿದರು.

ಶೈಕ್ಷಣಿಕ ಪ್ರವಾಸಕ್ಕೆ ತೆರಳಿದ್ದ ಬಸ್ ಭಾನುವಾರ ಹೊನ್ನಾವರ ಬಳಿ ಅಪಘಾತಕ್ಕೀಡಾಗಿ ಓರ್ವ ವಿದ್ಯಾರ್ಥಿ ಸಾವನ್ನಪ್ಪಿ ಕೆಲ ವಿದ್ಯಾರ್ಥಿಗಳು ಹಾಗೂ ಶಿಕ್ಷಕರು ಗಾಯಗೊಂಡಿದ್ದ ಹಿನ್ನೆಲೆಯಲ್ಲಿ ತರಳಬಾಳು ಶಾಲಾ ಆಡಳಿತ ಮಂಡಳಿ ಹಾಗೂ ಪೋಷಕರೊಂದಿಗೆ ಶಾಸಕರಾದ ಟಿ.ಎಸ್. ಶ್ರೀವತ್ಸ ಮತ್ತು ಕೆ.ಹರೀಶ್‌ಗೌಡ ಅವರು ಸೋಮವಾರ ಬೆಳಗ್ಗೆ ಸಭೆ ನಡೆಸಿದರು.




ಮೃತ ವಿದ್ಯಾರ್ಥಿ ಪವನ್

ಸಭೆಯ ನಂತರ ಶಾಸಕ ಟಿ.ಎಸ್. ಶ್ರೀವತ್ಸ ಸುದ್ದಿಗಾರರೊಂದಿಗೆ ಮಾತನಾಡಿ, ಅಪಘಾತದಲ್ಲಿ ಮೃತಪಟ್ಟ ವಿದ್ಯಾರ್ಥಿ ಪವನ್‌ನದ್ದು ಬಡ ಕುಟುಂಬ. ಆತನ ಪೋಷಕರಿಗೆ ಶಾಲಾ ಆಡಳಿತ ಮಂಡಳಿ 30 ಲಕ್ಷ ಪರಿಹಾರದ ಚೆಕ್ ನೀಡಿದೆ. ಅಲ್ಲದೆ, ತಾವು ಜನವರಿಯಲ್ಲಿ ಆಶ್ರಯ ಯೋಜನೆಯಡಿ ಮನೆ ಅಥವಾ ನಿವೇಶನವನ್ನು ಸರ್ಕಾರದಿಂದ ಆತನ ಪೋಷಕರಿಗೆ ನೀಡಲು ಕ್ರಮಕೈಗೊಳ್ಳಲಾಗುವುದು ಎಂದರು.

ಶಾಲೆಯ ನಿರ್ಲಕ್ಷ್ಯದಿಂದ ಮಗನನ್ನು ಕಳೆದುಕೊಂಡೆ

ಮಾಧ್ಯಮಗಳೊಂದಿಗೆ ಅಳಲು ತೋಡಿಕೊಂಡ ಮೃತ ವಿದ್ಯಾರ್ಥಿ ಪವನ್ ತಾಯಿ ಚೈತ್ರ, ಹುಟ್ಟುಹಬ್ಬದ ದಿನದಂದೇ ಮಗನನ್ನು ಕಳೆದುಕೊಂಡೇ ಎಂದು ಶಾಲೆ ವಿರುದ್ಧ ಆಕ್ರೋಶ ಹೊರ ಹಾಕಿದರು. ಅವರ ನಿರ್ಲಕ್ಷ್ಯದಿಂದಲೇ ಮಗನನ್ನು ಕಳೆದುಕೊಂಡೆ. ಘಟನೆ ಬಗ್ಗೆ ಶಾಲೆಯ ಮುಖ್ಯೋಪಾಧ್ಯಾಯರಿಗೆ ಕೇಳಿದರೆ ವಿಮೆ ಹಣ ಬರುತ್ತೆ ಹೋಗಿ ಎಂದು ಉತ್ತರ ನೀಡುತ್ತಿದ್ದಾರೆ. ಹಣ ಕೊಟ್ಟರೆ ಮಗನನ್ನು ವಾಪಸ್ ಪಡೆಯಲು ಸಾಧ್ಯವೇ ಎಂದು ಪ್ರಶ್ನಿಸಿದರು.

ನಿಯಮ ಪಾಲಿಸಿಲ್ಲ: ಶಾಲೆಗಳು ಮಕ್ಕಳನ್ನು ಕೆಎಸ್‌ಆರ್‌ಟಿಸಿ ಬಸ್‌ನಲ್ಲಿ ಪ್ರವಾಸಕ್ಕೆ ಕರೆದುಕೊಂಡು ಹೋಗಬೇಕು ಎಂಬ ನಿಯಮ ಇದೆ. ಆದರೆ ಈ ಶಾಲೆಯವರು ಸರ್ಕಾರದ ನಿಯಮಗಳನ್ನು ಪಾಲಿಸಿಲ್ಲ ಎಂಬುದು ಗೊತ್ತಾಗಿದೆ. ಸಂಸ್ಥೆಯ ಲೋಪದೋಷಗಳೂ ಇವೆ. ಇದರ ಬಗ್ಗೆ ಶಿಕ್ಷಣ ಇಲಾಖೆ ಅಧಿಕಾರಿಗಳು ಕ್ರಮ ವಹಿಸುತ್ತಾರೆ. ಸರ್ಕಾರಿ ಬಸ್‌ನಲ್ಲಿ ಪ್ರವಾಸ ಹೋಗಿದ್ದರೆ, ಕೆಎಸ್ ಆರ್‌ಟಿಸಿಯಿಂದ 10 ಲಕ್ಷ ಮತ್ತು ನ್ಯಾಯಾಲಯದ ತೀರ್ಮಾನದಂತೆ ಮತ್ತಷ್ಟು ಪರಿಹಾರ ಸಿಗುತ್ತಿತ್ತು. ಆದರೆ, ಖಾಸಗಿ ಬಸ್‌ನಲ್ಲಿ ಪ್ರವಾಸ ಹೋದ ಕಾರಣ ಸಮಸ್ಯೆಯಾಗಿದೆ. ಈ ದುರ್ಘಟನೆ ನಡೆಯ ಬಾರದಿತ್ತು, ನಡೆದು ಹೋಗಿದೆ. ಮಣಿಪಾಲ್ ಆಸ್ಪತ್ರೆಯಲ್ಲಿರುವ ಗಾಯಾಳುಗಳು ಅಪಾಯದಿಂದ ಪಾರಾಗಿದ್ದಾರೆ ಎಂದರು.



ಶೈಕ್ಷಣಿಕ ಪ್ರವಾಸಕ್ಕೆ ತೆರಳಿದ್ದ ಬಸ್ ಉರುಳಿ ಬಿದ್ದಿರುವುದು.

ಶಾಲೆ ವಿರುದ್ಧ ಕ್ರಮ

ಪ್ರವಾಸ ಸಂದರ್ಭದಲ್ಲಿ ಶಾಲೆಗಳು ಬಿಇಓ ಕಚೇರಿಯಿಂದ ಅನುಮತಿ ಪಡೆಯಬೇಕು. ಆದರೆ ಈ ಶಾಲೆಯವರು ಅನುಮತಿ ಪಡೆದಿಲ್ಲ. ಪ್ರವಾಸಕ್ಕೆ ತೆರಳುವ ಮಾರ್ಗಸೂಚಿ ಪಾಲನೆ ಮಾಡಿಲ್ಲ. ಸರ್ಕಾರದ ಸುತ್ತೋಲೆ ಪ್ರಕಾರ 11 ಮಾರ್ಗಸೂಚಿಗಳನ್ನು ಕಡ್ಡಾಯವಾಗಿ ಪಾಲನೆ ಮಾಡಬೇಕು. ಅದರಲ್ಲಿ ಕೆಎಸ್‌ಆರ್‌ಟಿಸಿ ಅಥವಾ ಕೆಎಸ್‌ಟಿಡಿಸಿ ಬಸ್‌ನಲ್ಲಿ ತೆರಳಬೇಕು ಎಂಬ ನಿಯಮವೂ ಇದೆ. ಇವರು ಖಾಸಗಿ ಬಸ್‌ನಲ್ಲಿ ಪ್ರವಾಸ ಕೈಗೊಂಡಿದ್ದಾರೆ. ಮಕ್ಕಳು ಸುರಕ್ಷತೆ ದೃಷ್ಟಿಯಿಂದ ಮಾರ್ಗಸೂಚನೆ ಪಾಲಿಸಬೇಕು ಎಂದು ಈ ಹಿಂದೆಯೇ ಎಲ್ಲಾ ಶಾಲೆಗಳಿಗೂ ಸೂಚನೆ ನೀಡಲಾಗಿದೆ. ಮಾರ್ಗಸೂಚಿ ಪಾಲನೆ ಮಾಡದ ತರಳಬಾಳು ಶಾಲೆ ವಿರುದ್ಧ ಕ್ರಮ ಕೈಗೊಳ್ಳಲಾಗುವುದು. - ಉದಯ್ ಕುಮಾರ್, ಡಿಡಿಪಿಐ

ಉಡುಪಿ ಜಿಲ್ಲಾಡಳಿತ ಸಹಕಾರ

ಬಸ್ ಅಪಘಾತವಾಗುತ್ತಿದ್ದಂತೆ ಉಡುಪಿಯ ಸ್ಥಳೀಯ ಶಾಸಕರು, ಅವರ ಪುತ್ರಿ, ತಹಶೀಲ್ದಾರ್ ಹಾಗೂ ಶಿಕ್ಷಕರ ಸಂಘ ಸಹಕಾರ ನೀಡಿದ್ದಾರೆ. ಖುಷಿ ಎಂಬ ವಿದ್ಯಾರ್ಥಿನಿಗೆ ತಲೆ ಭಾಗದಲ್ಲಿ ಪೆಟ್ಟು ಬಿದ್ದು, ರಕ್ತ ಹೆಪ್ಪುಗಟ್ಟಿದೆ. ಈ ಹಿನ್ನೆಲೆಯಲ್ಲಿ ಆ ವಿದ್ಯಾರ್ಥಿನಿಯನ್ನು ಉಡುಪಿಯ ಮಣಿಪಾಲ್ ಆಸ್ಪತ್ರೆಗೆ ಸೇರಿಸಲಾಯಿತು. ನಂತರ ಉಡುಪಿ ಜಿಲ್ಲಾ ಆರೋಗ್ಯಾಧಿಕಾರಿ ಆಸ್ಪತ್ರೆಗೆ ಭೇಟಿ ನೀಡಿ ವಿದ್ಯಾರ್ಥಿನಿಗೆ ಸೂಕ್ತ ಚಿಕಿತ್ಸೆ ನೀಡುವಂತೆ ಸೂಚಿಸಿದ್ದಾರೆ. ಎಲ್ಲಾ ಮಕ್ಕಳಿಗೂ ಉತ್ತಮ ಚಿಕಿತ್ಸೆ ನೀಡಲಾಗಿದ್ದು, ಅವರನ್ನು ಮೈಸೂರಿಗೆ ಕಳುಹಿಸಲು ಬಸ್ ವ್ಯವಸ್ಥೆ ಮಾಡಿದರು.

ಶಾಸಕ ಕೆ.ಹರೀಶ್‌ಗೌಡ ಮಾತನಾಡಿ, ಈ ಘಟನೆಗೆ ಚಾಲಕನ ಅಜಾಗರೂಕತೆ ಕಾರಣವಾಗಿದೆ. ಶಾಲಾ ಆಡಳಿತ ಮಂಡಳಿ ಜೊತೆ ಸಭೆ ಮಾಡಿದ್ದೇವೆ. ಆಡಳಿತ ಮಂಡಳಿಯವರು ಉತ್ತಮ ಸ್ಪಂದನೆ ನೀಡಿದ್ದಾರೆ. ವಿದ್ಯಾರ್ಥಿಯ ಪೋಷಕರಿಗೆ ಪರಿಹಾರವನ್ನೂ ನೀಡಿದ್ದಾರೆ. ಶಾಸಕ ಶ್ರೀವತ್ಸ ಮಾನವೀಯತೆಯಿಂದ ಆಶ್ರಯ ಯೋಜನೆಯಡಿ ಮನೆ ನೀಡುವ ಭರವಸೆ ನೀಡಿದ್ದಾರೆ. ಹೊನ್ನಾವರದ ಬಳಿ ಅಪಘಾತವಾಗಿದ್ದು, ಅಲ್ಲಿನ ಶಾಸಕ ಹಾಗೂ ಸಚಿವರಾದ ಮಂಕಾಳ್ ವೈದ್ಯ ಅವರ ಜೊತೆ ದೂರವಾಣಿ ಮೂಲಕ ಕೂಡ ಮಾತನಾಡಿದ್ದೇನೆ. ಅವರ ಪುತ್ರಿ ಬೀನ ವೈದ್ಯ ವಿದ್ಯಾರ್ಥಿಗಳಿಗೆ ಸಹಾಯ ಮಾಡಿದ್ದಾರೆ. ಪ್ರವಾಸಕ್ಕೆ ತೆರಳಿದ್ದ ಮಕ್ಕಳನ್ನು ವಾಪಸ್ ಕರೆಸುವ ವಿಚಾರವನ್ನು ನಾನು ಮುಖ್ಯಮಂತ್ರಿಗಳ ಗಮನಕ್ಕೂ ತಂದಿದ್ದೆ. ಅಲ್ಲಿ ಏನೆಲ್ಲಾ ವ್ಯವಸ್ಥೆ ಮಾಡಬೇಕೋ ಎಲ್ಲವನ್ನು ಮಾಡಿದ್ದಾರೆ ಎಂದರು.

ಸಭೆಯಲ್ಲಿ ಶಾಲಾ ಆಡಳಿತ ಮಂಡಳಿ ಸದಸ್ಯರು ನಗರ ಪಾಲಿಕೆ ಮಾಜಿ ಸದಸ್ಯ ಗೋಪಿ, ಶ್ರೀಕಂಠಸ್ವಾಮಿ ಸೇರಿದಂತೆ ಪೋಷಕರು ಹಾಗೂ ಮುಖಂಡರು ಹಾಜರಿದ್ದರು.

ನಕ್ಕರೆ ಅದೇ ಸ್ವರ್ಗ

ಕುಡುಕ : ಎಷ್ಟು ಹೊತ್ತಿಗೆ ಬಾರ್ ಓಪನ್ ಆಗುತ್ತೆ?
ಮಾಲೀಕ : ಬೆಳಗ್ಗೆ ಆರು ಗಂಟೆಗೆ.
(ಮತ್ತೊಂದು ಗಂಟೆ ಬಳಿಕ ಅದೇ ಕರೆ ಬಂತು)
ಮಾಲೀಕ : ಬೆಳಗ್ಗೆ ಆರು ಗಂಟೆಗೆ ಸ್ವಾಮಿ. ಯಾಕೆ ಅರ್ಜೆಂಟಾ?
ಕುಡುಕ : ಹೌದು, ನಾನು ನಿಮ್ಮ ಬಾರ್ ಒಳಗೇ ಇದ್ದೀನಿ!!!

ಮೈಸೂರು ಮಿತ್ರ
ಮಂಗಳವಾರ, 2 ಡಿಸೆಂಬರ್ 2025
ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ.........
ಈ ಜಗತ್ತಿನಲ್ಲಿ ಖುಷಿಯಿಂದ ನಕ್ಕವರಿಗಿಂತ ವಿಧಿಯಿಲ್ಲದೆ ನಕ್ಕವರೇ ಹೆಚ್ಚು

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಅಂಧನ ಕೈಯಲ್ಲಿ ದರ್ಪಣವಿದ್ದು ಫಲವೇನು

ನಿಮ್ಮ ಪತ್ರಗಳು

ಅಭಿಜಾತ ಹಾಸ್ಯ ಕಲಾವಿದ ಎಂ.ಎಸ್.ಉಮೇಶ್

ಮಾನ್ಯರೆ,



ಕನ್ನಡ ಚಿತ್ರರಂಗ ಹಾಗೂ ಕಿರು ತೆರೆಯ ಜನಪ್ರಿಯ ಹಾಸ್ಯ ನಟರಾಗಿದ್ದ ಎಂ.ಎಸ್.ಉಮೇಶ್ ಕರುಳಿನ ಕ್ಯಾನ್ಸರ್‌ನಿಂದ ನಿಧನ ಹೊಂದಿರುವುದು ನೋವಿನ ಸಂಗತಿ. 22.04.1945 ರಂದು ಎ.ಎಲ್ ಶ್ರೀಕಂಠಯ್ಯ ಹಾಗೂ ನಂಜಮ್ಮ ಇವರ ಪುತ್ರನಾಗಿ ಜನಿಸಿದ ಉಮೇಶ್ ಅವರನ್ನು ಹುಟ್ಟು ಕಲಾವಿದ ಎಂದು ಹೇಳಬಹುದು. ಕೇವಲ 4 ವರ್ಷ ವಯಸ್ಸಿನಲ್ಲೇ ಇವರು ನಾಟಕ ವೊಂದರಲ್ಲಿ ಬಾಲನಟನ ಪಾತ್ರ ನಿರ್ವಹಿಸಿದ್ದರು.

1959ರಲ್ಲಿ ಅಂದಿನ ಪ್ರಖ್ಯಾತ ನಿರ್ಮಾಪಕ ಮತ್ತು ನಿರ್ದೇಶಕ ಬಿ.ಆರ್. ಪಂತುಲು ನಿರ್ದೇಶಿಸಿದ್ದ ಮಕ್ಕಳ ಪ್ರಧಾನ ಚಿತ್ರವಾದ 'ಮಕ್ಕಳ ರಾಜ್ಯ' ಚಿತ್ರದಲ್ಲಿ ಪ್ರಮುಖ ಬಾಲನಟನ ಪಾತ್ರ ವಹಿಸಿದ್ದ ಉಮೇಶ್ ಅವರು ಹಿಂತಿರುಗಿ ನೋಡಿದ್ದೇ ಇಲ್ಲ. ಗುಬ್ಬಿ ಕಂಪನಿ, ಜಗಜ್ಯೋತಿ ಬಸವೇಶ್ವರ ಕಂಪನಿ, ಕೆ.ಹಿರಣ್ಣಯ್ಯ ಮಿತ್ರ ಮಂಡಳಿ ಸೇರಿದಂತೆ ಹಲವಾರು ವೃತ್ತಿ ನಾಟಕ ಕಂಪನಿಗಳಲ್ಲಿ ಪಾತ್ರ ವಹಿಸುತ್ತಿದ್ದ ಉಮೇಶ್ ಅವರು ಹಂತ ಹಂತವಾಗಿ ಕನ್ನಡ ಚಿತ್ರರಂಗದಲ್ಲಿ ಕೂಡ ತಮ್ಮದೇ ಆದ ವಿಶಿಷ್ಟ ಛಾಪನ್ನು ಮೂಡಿಸಲು ಪ್ರಾರಂಭಿಸಿದರು. 1974 ರಲ್ಲಿ ಚಿತ್ರಬ್ರಹ್ಮ ಎಸ್.ಆರ್.ಪುಟ್ಟಣ್ಣ ಕಣಗಾಲ್ ನಿರ್ದೇಶನದ ಮೂರು ಕಥಾ ಹಂದರಗಳನ್ನು ಹೊಂದಿದ್ದ, ಕಥಾ ಸಂಗಮ ಚಿತ್ರದಲ್ಲಿ ಬರುವ ಮುನಿತಾಯಿ ಎಂಬ ಕಿರುಚಿತ್ರದ ಪಾತ್ರಕ್ಕೆ ಅವರಿಗೆ ಕರ್ನಾಟಕ ರಾಜ್ಯ ಸರ್ಕಾರದಿಂದ ಉತ್ತಮ ಪೋಷಕ ಪ್ರಶಸ್ತಿ ದೊರೆತಾಗ ಎಂ.ಎಸ್.ಉಮೇಶ್ ಅವರತ್ತ ಇಡೀ ಕನ್ನಡ ಚಿತ್ರರಂಗ ತಿರುಗಿ ನೋಡುವಂತಾಯಿತು. ಅಲ್ಲಿಂದ ಉಮೇಶ್ ರವರು ಮುನ್ನೂರೈವತ್ತಕ್ಕೂ ಅಧಿಕ ಚಿತ್ರಗಳಲ್ಲಿ ವೈವಿಧ್ಯಮಯ ಪಾತ್ರಗಳನ್ನು ನಿರ್ವಹಿಸಿದರು. ಗುರುಶಿಷ್ಯರು, ಅನುಪಮ, ಗೋಲ್‌ಮಾಲ್ ರಾಧಾಕೃಷ್ಣ, ಕಾಮನ ಬಿಲ್ಲು, ಮಲಯ ಮಾರುತ, ನಾಗರಹೊಳೆ, ಗಜಪತಿ ಗರ್ವಭಂಗ, ವೆಂಕಟ ಇನ್ ಸಂಕಟ ಸೇರಿದಂತೆ ನೂರಾರು ಚಿತ್ರಗಳಲ್ಲಿ ಅವರ ಅಭಿನಯ ಚಿರಸ್ಮರಣೀಯವಾಗಿದೆ. ಉಮಾಶ್ರೀ ಹಾಗೂ ಉಮೇಶ್ ಅವರ ಹಾಸ್ಯ ಕಾಂಬಿನೇಶನ್ ಒಂದು ಕಾಲದಲ್ಲಿ ಅತ್ಯಂತ ಜನಪ್ರಿಯತೆ ಪಡೆದಿತ್ತು. ತಮ್ಮ ವಿಶೇಷ ರೀತಿಯ ಹಾವ ಭಾವ, ಡೈಲಾಗ್ ಡೆಲಿವರಿ ಹಾಗೂ ಮ್ಯಾನರಿಸಂಗಳ ಮೂಲಕ ಉಮೇಶ್ ಅವರು ಕನ್ನಡ ಚಿತ್ರರಂಗದಲ್ಲಿ ತಮ್ಮದೇ ಆದ ವಿಶಿಷ್ಟ ಸ್ಥಾನ ಗಳಿಸಿದ್ದರು. ಇತ್ತೀಚಿನ ವರ್ಷಗಳಲ್ಲಿ ತೀವ್ರ ರೀತಿಯ ಆರ್ಥಿಕ ಸಂಕಷ್ಟಕ್ಕೆ ಸಿಲುಕಿದ್ದ ಉಮೇಶ್ ಅವರು ಕೆಲವು ತಿಂಗಳ ಹಿಂದೆ ತಮ್ಮ ಮನೆಯಲ್ಲಿ ಬಿದ್ದು, ಕಾಲಿಗೆ ತೀವ್ರ ರೀತಿಯ ಪೆಟ್ಟಾಗಿ ಚಿಕಿತ್ಸೆಗಾಗಿ ಆಸ್ಪತ್ರೆಗೆ ದಾಖಲಾಗಿದ್ದರು. ಆ ಸಂದರ್ಭದಲ್ಲೇ ಅವರಿಗೆ ಲಿವರ್ ಕ್ಯಾನ್ಸರ್ ಇರುವುದು ಪತ್ತೆಯಾಗಿ, ಅದಕ್ಕಾಗಿ ವೈದ್ಯಕೀಯ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದರು. ಬಹುತೇಕ ಹಾಸ್ಯನಟರ ಬದುಕಿನ ರೀತಿಯಲ್ಲೇ ಉಮೇಶ್ ಅವರ ಬದುಕು ಕೂಡ ಕಂಬನಿಯ ಕಡಲಾಗಿತ್ತು. ವಯಸ್ಸಿಗೆ ಬಂದ ಮಗನನ್ನು ಕಳೆದುಕೊಂಡ ಉಮೇಶ್ ಪುತ್ರ ಶೋಕದಿಂದ ಸಾಕಷ್ಟು ನೊಂದಿದ್ದರು. ಆದರೂ, ತುತ್ತಿನ ಚೀಲ ತುಂಬಿಸಿಕೊಳ್ಳಲು ಆ ಪಾತ್ರ, ಈ ಪಾತ್ರ ಎಂದು ನೋಡದೆ ಎಲ್ಲಾ ಪಾತ್ರಗಳನ್ನು ಮಾಡಿದರು. ಒಳಗೊಳಗೆ ನೋವಿನ ವಿಷ ಜ್ವಾಲೆಯಲ್ಲಿ ಬೇಯುತ್ತಿದ್ದರೂ ಸಹ, ನಗಿಸುವುದೇ ನನ್ನ ಧರ್ಮ ಎಂಬ ಕವಿ ವಾಣಿಯನ್ನು ಪಾಲಿಸಿ, ನಗಿಸಿ, ನಗಿಸಿ ಕಡೆಗೆ ಹಿಂದಿರುಗಿ ಬಾರದ ಲೋಕಕ್ಕೆ ಪಯಣಿಸಿರುವ ಉಮೇಶ್ ಅವರ ಆತ್ಮಕ್ಕೆ ಶಾಂತಿ ಕೋರೋಣ.

–ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ಮೈಸೂರು.

ಕುಸಿಯುವ ಸ್ಥಿತಿಯಲ್ಲಿ ಅಠಾರ ಕಚೇರಿ ಕಟ್ಟಡ

ಮಾನ್ಯರೆ,



1895ರಲ್ಲಿ ಇಂಡೋ–ಸಾರ್ಸೆನಿಕ್ ಮಾದರಿಯಲ್ಲಿ ನಗರದ ಅತ್ಯಂತ ಎತ್ತರದ ಸ್ಥಳದಲ್ಲಿ ಕಟ್ಟಿರುವ ಮೈಸೂರು ಜಿಲ್ಲಾಧಿಕಾರಿಯವರ ಹಳೇ ಕಚೇರಿ ಕಟ್ಟಡಕ್ಕೆ (ಹಠಾರ ಕಚೇರಿ) 130 ವರ್ಷಗಳಾಗಿವೆ. ಅಂದಿನ ಇದರ ವೆಚ್ಚ ರೂ. 1.75 ಲಕ್ಷಗಳು. 29,588 ಚದರ ಅಡಿ ವಿಸ್ತೀರ್ಣವಿರುವ ಕಟ್ಟಡದಲ್ಲಿ 27 ವಿಶಾಲವಾದ ಕೊಠಡಿಗಳಿವೆ. ಇದು 1923ರವರೆಗೆ ಮೈಸೂರು ರಾಜ್ಯದ ಆಡಳಿತ ಕೇಂದ್ರವಾಗಿತ್ತು. ಪ್ರಸ್ತುತ ಜಿಲ್ಲಾಧಿಕಾರಿಯವರ ಕಚೇರಿ ಸ್ಥಳಾಂತರಗೊಂಡು ಐದು ವರ್ಷಗಳಾಗಿವೆ. ಸುಂದರ ಪಾರಂಪರಿಕ ಕಟ್ಟಡವು ಖಾಲಿ ಇರುವುದರಿಂದ ಬಹಳಷ್ಟು ಕಾಲದವರೆಗೆ ಜನಜಂಗುಳಿಯಿಂದ ಕಂಗೊಳಿಸುತ್ತಿದ್ದ ಮಹಲು ಈಗ ಭಣಗುಡುತ್ತಿದೆ. ಆ ಕಟ್ಟಡದಲ್ಲಿ ಕರ್ತವ್ಯ ನಿರ್ವಹಿಸಿದ ನೌಕರರಿಗೆ ಹಾಗೂ ಅದರೊಟ್ಟಿಗೆ ಬಾಂಧವ್ಯ ಇದ್ದ ನಾಗರಿಕರಿಗೆ ಅನಾಥ ಸ್ಥಿತಿಯಲ್ಲಿರುವ ಬೃಹತ್ ಕಟ್ಟಡದ ಸ್ಥಿತಿಯನ್ನು ನೋಡಿದವರಿಗೆ ಕರುಳು ಕಿತ್ತು ಬರದೆ ಇರದು.

ನಿರ್ವಹಣೆ ಇಲ್ಲದ ಕಟ್ಟಡದ ಸುತ್ತಾ ಗೋಡೆಗಳಲ್ಲಿ ಗಿಡಗಳು ಬೆಳೆದಿವೆ. ಓವಲ್ ಗ್ರೌಂಡ್ ಕಡೆಯ ಗೋಡೆಯಲ್ಲಿ ಕೆಳಗಿನಿಂದ ಮೊದಲನೇ ಮಹಡಿ ಛಾವಣಿವರೆಗೆ ಸೊಂಪಾಗಿ, ಗಿಡಗಳು ಮರವಾಗಿ ಬೆಳೆದಿರುವುದು ಸಂಬಂಧಿಸಿದ ಇಲಾಖೆಯವರಿಗೆ ಕಾಣದಿರುವುದು ನೋವಿನ ಸಂಗತಿ. ನಿರ್ಲಕ್ಷ್ಯತನ ಹೀಗೆಯೇ ಮುಂದುವರಿದರೆ ಲಾನ್ಸ್‌ಡೌನ್ ಬಿಲ್ಡಿಂಗ್, ದೇವರಾಜ ಮಾರುಕಟ್ಟೆ ಮತ್ತು ಫೈರ್ ಸ್ಟೇಷನ್ ಕಟ್ಟಡದ ಸಾಲಿನಲ್ಲಿ ಇದು ನಾಲ್ಕನೇ ಕಟ್ಟಡವಾಗಿ ಕುಸಿಯಬಹುದು. ಇರುವುದನ್ನು ಉಳಿಸಿಕೊಳ್ಳಲಾಗದ ನಾವುಗಳು ಗ್ರೇಟರ್ ಮೈಸೂರು ಮಾಡಲು ಹೊರಟಿದ್ದೇವೆ. ಒಡೆಯರ್‌ರವರ ದಕ್ಷ ಆಳ್ವಿಕೆಯಿಂದ ಈಗಾಗಲೇ ಮೈಸೂರು ಗ್ರೇಟರ್ ಆಗಿರುವ ನಮ್ಮ ಮೈಸೂರನ್ನು ಉಳಿಸಿಕೊಳ್ಳುವುದು ಎಲ್ಲರ ಹೊಣೆಯಾಗಿರುತ್ತದೆ.

–ಮಿರ್ಲೆ ಚಂದ್ರಶೇಖರ, ಲೇಖಕರು, ಮೈಸೂರು.

ಮಧ್ಯವರ್ತಿಗಳಿಗೆ ಅವಕಾಶ ನೀಡಬಾರದು

ಮಾನ್ಯರೆ,

ಪ್ರಾದೇಶಿಕ ಸಾರಿಗೆ ಇಲಾಖೆಯಲ್ಲಿ ಸಾರ್ವಜನಿಕ ಕೆಲಸಗಳಿಗೆ ಮಧ್ಯವರ್ತಿಗಳು ಹಾಗೂ ಚಾಲನಾ ತರಬೇತಿ ಶಾಲೆಯವರು ಬರುವ ಚಾಳಿಯಿದ್ದು ಇದಕ್ಕೆ ಅವಕಾಶ ನೀಡಬಾರದು ಎಂದು ಅಧಿಕಾರಿಗಳು ಹಾಗೂ ಸಿಬ್ಬಂದಿ ಎಚ್ಚರಿಕೆ ವಹಿಸಬೇಕೆಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಅವರು ಮೈಸೂರು ಆರ್‌ಟಿಓ ಕಚೇರಿಯಲ್ಲಿ ಹೇಳಿರುವುದು ಸ್ವಾಗತಾರ್ಹ. ಆದರೆ ಆರ್‌ಟಿಓ ಕಚೇರಿಗಳಲ್ಲಿ ಭ್ರಷ್ಟಾಚಾರ ತುಂಬಿ ತುಳುಕುತ್ತಿದೆ ಎಂದು ಸಾರ್ವಜನಿಕರು ಪ್ರತಿನಿತ್ಯ ಬೇಸರ ವ್ಯಕ್ತಪಡಿಸುವುದು ವಿಷಾದಕರ ಸಂಗತಿ. ಸಾರ್ವಜನಿಕರು ತಮ್ಮ ಕೆಲಸಗಳನ್ನು ಮಾಡಿಸಿಕೊಳ್ಳಲು ನೇರವಾಗಿ ಕಚೇರಿಗಳಿಗೆ ಹೋದರೆ ಸರಿಯಾದ ಮಾರ್ಗದರ್ಶನ ದೊರಕದೆ ಪರಿತಪಿಸುವುದು ಸರ್ವೇ ಸಾಮಾನ್ಯವಾಗಿದೆ. ಇನ್ನೂ ಮುಂದಾದರೂ ಆರ್‌ಟಿಓ ಕಚೇರಿಗಳಲ್ಲಿ ಸಿಬ್ಬಂದಿ ಮತ್ತು ಅಧಿಕಾರಿಗಳು ಭ್ರಷ್ಟಾಚಾರಕ್ಕೆ ಅನುವುಮಾಡಿಕೊಡದೆ ಸಾರ್ವಜನಿಕರಿಗೆ ಸಹಕಾರ ನೀಡುವುದು ಅತ್ಯಗತ್ಯ. –ಬೆಸಗರಹಳ್ಳಿ ರವಿ ಪ್ರಸಾದ್, ಮೈಸೂರು.




ರಾಘವೇಂದ್ರ ಸಿ.ಎಸ್.
ಕನ್ನಡ ಉಪನ್ಯಾಸಕರು
ರಾಮಕೃಷ್ಣ ವಿದ್ಯಾಶಾಲಾ, ಮೈಸೂರು
ಮೊ: 9036389640

ಈ ಜೀವನ

ನಿರೀಕ್ಷೆಗಳ ಮೂಟೆ ದೊಡ್ಡದಿದ್ದಂತೆ....! ನಿರಾಸೆಗಳ ಗಂಟೂ ದೊಡ್ಡದಾಗಿರುತ್ತೆ...!!

● ನಾನಂದುಕೊಂಡದ್ದೆ ಒಂದು, ಆದದ್ದೇ ಮತ್ತೊಂದು, ತುಂಬಾ ನಿರೀಕ್ಷೆ ಇಟ್ಟುಕೊಂಡಿದ್ದೆ ಅಣ್ಣಾ ! ಎಲ್ಲಾ ಉಲ್ಟಾ–ಪಲ್ಟಾ ಆಯ್ತು...
● ಕಾರ್ಯಕ್ರಮಕ್ಕೆ ಕರೆಯುವುದು ನಿಮ್ಮ ಜವಾಬ್ದಾರಿ... ಆದರೆ ಬರಲೇಬೇಕೆಂದು ನೀವು ನಿರೀಕ್ಷೆ ಇಟ್ಟುಕೊಳ್ಳುವುದು ತಪ್ಪು, ಆಗೆಲ್ಲ ನಿರೀಕ್ಷೆ ಮಾಡಬಾರದು



> ಮನುಷ್ಯನ ಜೀವನವು ನಿರೀಕ್ಷೆಗಳ ಜಾಲದಲ್ಲಿ ಸಿಲುಕಿಕೊಂಡಿದೆ. ಇದೂ ಆಗಬೇಕು, ಅದೂ ಆಗಬೇಕು, ಇವರು ಹೀಗೆ ವರ್ತಿಸಬೇಕು, ನನಗೆ ಹೀಗಾಗಬೇಕು ಎಂಬ ನಗರದ ಬೆಳಕುಗಳಂತೆ ಕಂಗೊಳಿಸುವ ನಿರೀಕ್ಷೆಗಳು ನಮ್ಮ ಮನಸ್ಸಿನ ಮೇಲೆ ಮಬ್ಬಿನಂತೆ ಆವರಿಸುತ್ತವೆ. ಆದರೆ ಅವು ನೆರವೇರದ ಕ್ಷಣದಲ್ಲಿ ಹುಟ್ಟುವ ನೋವು, ಅಸಮಾಧಾನ, ಒತ್ತಡಗಳು ಬದುಕಿನ ಸೊಗಸನ್ನೇ ಕಳೆದುಹೋಗುವಂತೆ ಮಾಡುತ್ತವೆ. ಈ ಕಾರಣಕ್ಕೆ ನಿರೀಕ್ಷೆಗಳಿಲ್ಲದ ಬದುಕು ಎಂಬುದು ಕೇವಲ ತತ್ವಶಾಸ್ತ್ರವಲ್ಲ, ಅದು ಮನಸ್ಸಿಗೆ ದೊರಕುವ ನಿಜವಾದ ಮುಕ್ತಿ.

ಆತ್ಮೀಯರಿಬ್ಬರೂ ಹೇಳಿದ ಮಾತುಗಳು ಒಂದೇ ಸಂದರ್ಭವನ್ನು ಕುರಿತದ್ದಾದರೂ ತಕ್ಷಣಕ್ಕೆ ಗೋಚರವಾದದ್ದು ಅವರ ಮಾತುಗಳಲ್ಲಿ ವ್ಯಕ್ತವಾಗಿದ್ದ ನಿರೀಕ್ಷೆ ಎಂಬ ವಿಷಯ. ಹೌದು, ಅಕ್ಷರಶಃ ಸತ್ಯವಾದ ಮಾತು. ನಿರೀಕ್ಷೆ ನಿರಾಸೆಯನ್ನು ತಂದೊಡ್ಡುತ್ತದೆಯೇ ವಿನಃ ಸಂತಸವನ್ನು ನೀಡಲಾರದು. ಬದುಕಿನ ಜಂಜಾಟದಲ್ಲಿ ಸಿಲುಕಿಕೊಂಡಾಗ ನಿರೀಕ್ಷೆಯ ಭಾರ ತುಸು ಹೆಚ್ಚಾಗಿಯೇ ಕಂಡುಬರುತ್ತದೆ. ನಿರೀಕ್ಷೆಗಳಿಲ್ಲದೇ ಬದುಕಲು ಸಾಧ್ಯವೇ? ಎಂಬ ಪ್ರಶ್ನೆ ಮೂಡಿಬಂದರೆ ಬಹುತೇಕ ಕಷ್ಟವಿದೆ, ಆದರೆ ಮನಸ್ಸು ಮಾಡಿದರೆ ಸಾಧ್ಯವಿದೆ.

ಅನಿರೀಕ್ಷಿತ ಈ ಜೀವನದಲ್ಲಿ ನಿರೀಕ್ಷೆಗಳಿಲ್ಲದ ಬದುಕು ಎಂದರೆ ಆಕಾಂಕ್ಷೆಗಳಿಲ್ಲದೆ ಬದುಕು ಎಂಬುದಲ್ಲ. ಅದು ಬಯಕೆಗಳನ್ನು ಬಿಟ್ಟುಬಿಡುವುದು ಎಂದೂ ಅಲ್ಲ. ಅದು ಕೇವಲ ಫಲದ ಮೇಲೆ ಮನಸ್ಸನ್ನು ಕಟ್ಟದೇ, ಪ್ರಯತ್ನದ ಸೌಂದರ್ಯವನ್ನು ಸವಿಯುವುದು. ಕೃಷಿಕನು ಭೂಮಿಗೆ ಬೀಜ ಬಿತ್ತುವನು; ಆದರೆ ಮಳೆ ಬರುತ್ತದೆಯೋ ಇಲ್ಲವೋ ಅಂದುಕೊಂಡು ಕೂತುಕೊಂಡರೆ ಕೆಲಸವೇ ನಿಲ್ಲುತ್ತದೆ. ಆದರೂ ತಾನು ಮಾಡಬೇಕಾದ ಕರ್ತವ್ಯವನ್ನು ಮಾಡಿ, ಉಳಿದುದನ್ನು ಪ್ರಕೃತಿಗೆ ಬಿಡುವ ಜ್ಞಾನವೇ ಅವನನ್ನು ಸಂತೃಪ್ತಿಯ ಕಡೆ ಕರೆದೊಯ್ಯುತ್ತದೆ.

ನಿರೀಕ್ಷೆಗಳಿಲ್ಲದ ಬದುಕಿನ ಮತ್ತೊಂದು ಸೌಂದರ್ಯವೆಂದರೆ ಸಂಬಂಧಗಳ ಶುದ್ಧತೆ. ಇತರರಿಂದ ಹೆಚ್ಚು ನಿರೀಕ್ಷಿಸಿದಂತೆ ಅಸಮಾಧಾನ ಮತ್ತು ದೂರವು ದಟ್ಟಗೊಳ್ಳುತ್ತದೆ. ಇವರು ಹೀಗೆ ಮಾಡಬೇಕು ಎನ್ನುವ ಮನೋಭಾವ ಬಿಟ್ಟು, ಇವರು ಹೇಗಿರುವರೋ ಹಾಗೆ ಸ್ವೀಕರಿಸೋಣ ಎನ್ನುವ ಮನೋವೃದ್ಧಿ ಬಂದರೆ ಸಂಬಂಧಗಳು ಮೃದುವಾಗುತ್ತವೆ. ಇತರರ ವರ್ತನೆ ನಮ್ಮ ನಿಯಂತ್ರಣದಲ್ಲಿಲ್ಲ; ನಮ್ಮ ಸ್ವೀಕಾರ ಮನಸ್ಸು ಮಾತ್ರ ನಮ್ಮ ಕೈಯ್ಯಲ್ಲಿದೆ. ಈ ಸಾದಾ ತತ್ವ ತಿಳಿದಾಗಲೇ ಬದುಕು ಭಾರವಿಲ್ಲದ ಹಗುರವಾದ ಗಾಳಿಯಂತೆ ತೋರುತ್ತದೆ.

ನಿರೀಕ್ಷೆಗಳಿಂದ ಪರಿತಪಿಸುತ್ತದೆ ಮನಸ್ಸು

ಬದುಕಿನಲ್ಲಿ ಅಂದುಕೊಂಡಿದ್ದಕ್ಕಿಂತ ಹೊಂದಿಕೊಂಡು ಬಾಳುವುದೇ ಜಾಸ್ತಿ. ಜೀವನ ತಂದೊಡ್ಡುವ ಸವಾಲುಗಳನ್ನು ಎದುರಿಸಿ ನಿಂತು ಬಾಳಲೇಬೇಕಾದ ಅನಿವಾರ್ಯತೆ ಮನುಜರಿಗಿದೆ. ಕೆಲವೊಮ್ಮೆ ಈ ಜೀವನ ಬೇಸರವನ್ನು ತಂದೊಡ್ಡುತ್ತದೆ. ಇದಕ್ಕೆ ಮುಖ್ಯ ಕಾರಣ ಎಂದರೆ ನಿರೀಕ್ಷೆ. ನಿರೀಕ್ಷೆಗಳು ಮನುಷ್ಯರನ್ನು ಇನ್ನಿಲ್ಲದಂತೆ ಕುಗ್ಗಿಸುವ ಕೆಲಸವನ್ನು ಮಾಡುತ್ತದೆ.ನಮ್ಮ ಮನಸ್ಥಿತಿಗೆ ತಕ್ಕಂತೆ ನಿರೀಕ್ಷೆಗಳ ಪಟ್ಟಿ ದೊಡ್ಡದಾಗಿ ನೆಲೆ ನಿಂತಿರುತ್ತದೆ. ಆದರೆ ಅದಕ್ಕೆ ವ್ಯತಿರಿಕ್ತವಾದ ಘಟನೆಗಳು ಸಂಭವಿಸಿದಾಗ ಸಹಜವಾಗಿಯೇ ಮನಸ್ಸು ಪರಿತಪಿಸುತ್ತದೆ. ಉಳಿದವರಿಗೆ ಕ್ಷುಲಕವಾಗಿ ಕಾಣುವ ವಿಚಾರಗಳೇ ಬೃಹತ್ ಆಕಾರವನ್ನು ಮೈತಳೆದು ನಿಂತು ಮನಸ್ಸಿಗೆ ಘಾಸಿಯನ್ನುಂಟು ಮಾಡುತ್ತದೆ. ನಿರೀಕ್ಷೆಗಳ ಮೂಟೆ ದೊಡ್ಡದಾದಂತೆ ನಿರಾಸೆಗಳ ಪಟ್ಟಿಯೂ ದೊಡ್ಡದಾಗಿಯೇ ತನ್ನ ಪ್ರಾಬಲ್ಯವನ್ನು ಮೆರೆಯುವ ಮೂಲಕ ಮನಸ್ಸಿಗೆ ನೋವುಂಟು ಮಾಡುತ್ತದೆ. ಆದ್ದರಿಂದ ಸಾಧ್ಯವಾದಷ್ಟು ನಿರೀಕ್ಷೆಗಳ ಭಾರವನ್ನು ಕಡಿಮೆ ಮಾಡಿಕೊಂಡಷ್ಟು ಒಳ್ಳೆಯದು. ನಿರೀಕ್ಷೆಗಳಿಲ್ಲದ ಬದುಕುವ ದಾರಿಯನ್ನು ಕಂಡುಕೊಂಡರೆ ಸುಂದರವಾದ ಜೀವನ ನಮ್ಮದಾಗಬಲ್ಲದು

ನಾವಂದು ಕೊಂಡಂತೆ ಬದುಕು ನಡೆಯುತ್ತದೆ ಎಂಬ ಭ್ರಮೆ

ನಿರೀಕ್ಷೆ ದುಪ್ಪಟಾಗಲು ಪ್ರಮುಖ ಕಾರಣ ಜೀವನದಲ್ಲಿ ನಾವು ಅಂದುಕೊಂಡಿದ್ದೆಲ್ಲ ನಡೆಯುತ್ತದೆ ಎಂಬ ಕಾಣದ ಮರೀಚಿಕೆಯ ಬೆನ್ನತ್ತಿ ಓಡುವುದೇ ಆಗಿದೆ. ಪ್ರತಿಯೊಬ್ಬರ ಮನಸ್ಥಿತಿಯು ಭಿನ್ನವಾಗಿರುತ್ತದೆ. ಅಂದುಕೊಂಡಿದ್ದೆಲ್ಲ ನಡೆಯಬೇಕೆಂಬ ಆಸೆಗಳು ಇರುತ್ತದೆ.ಆದರೆ ಜೀವನ ಕೇವಲ ಎರಡೂವರೆ ಗಂಟೆಯಲ್ಲಿ ನಡೆಯುವ ಸಿನಿಮಾವಲ್ಲ, ಒಂದೇ ಹಾಡಿನಲ್ಲಿ ತೋರಿಸುವಂತೆ ಎಲ್ಲವೂ ಕ್ಷಣಿಕವಾಗಿ ಜರುಗುವಂತದ್ದು ಅಲ್ಲ ಅಥವಾ ಯಾರೋ ಬಂದು ನಮ್ಮ ಬದುಕನ್ನು ಇನ್ನಿಲ್ಲದಂತೆ ಬದಲಿಸಲು ಸಾಧ್ಯವಿಲ್ಲ. ಜೀವನ ನಿಂತ ನೀರಲ್ಲ, ಹರಿಯುವ ನೀರು. ಹರಿಯುವ ನೀರಿನಲ್ಲಿ ಬೇಕಾದದ್ದು, ಬೇಡವಾದದ್ದೆಲ್ಲ ಸೇರಿಕೊಂಡು ಮುನ್ನುಗ್ಗುವಂತೆ ಬದುಕೆಂಬ ಈ ಪಯಣದಲ್ಲಿ ಕಷ್ಟ–ಸುಖ, ಸೋಲು–ಗೆಲುವು ಎಲ್ಲವೂ ಮಾಮೂಲು.ಈ ವಾಸ್ತವವನ್ನು ಅರ್ಥ ಮಾಡಿಕೊಳ್ಳದೇ ಎಲ್ಲವೂ ನಾವು ಅಂದುಕೊಂಡಂತೆ ನಡೆಯುತ್ತದೆಂಬ ಭ್ರಮೆಯ ಹಿಂದೆ ಜೋತು ಬಿದ್ದರೆ ಬೇಸರವಾಗುವುದಂತೂ ಸತ್ಯ.

ಮೆಚ್ಚಿಸಿ ಬದುಕಬಹುದೆಂಬ ನಿರೀಕ್ಷೆ

ನಮ್ಮಲ್ಲಿ ಅನೇಕರಿಗೆ ಈ ತರಹದ ನಿರೀಕ್ಷೆ ಇರುತ್ತದೆ. ಎಲ್ಲರಿಗೂ ನಾನು ಇಷ್ಟವಾಗಬೇಕು, ನನ್ನ ಮಾತನ್ನು ಎಲ್ಲರೂ ಮೆಚ್ಚಿಕೊಳ್ಳಬೇಕು, ನನ್ನನ್ನು ಯಾರು ಪ್ರಶ್ನೆ ಮಾಡಬಾರದು ಹೀಗೆ ಈ ನಿರೀಕ್ಷೆಯ ಪಟ್ಟಿ ಬೆಳೆಯುತ್ತಲೇ ಹೋಗುತ್ತದೆ. ಆದರೆ ವಾಸ್ತವ ಇದಕ್ಕಿಂತ ಭಿನ್ನವಾಗಿರುತ್ತದೆಂಬ ಸತ್ಯ ನಮಗರ್ಥವಾಗುವುದೇ ಇಲ್ಲ. ಈ ಬದುಕಿನಲ್ಲಿ ಬುದ್ಧ ಹೇಳಿದಂತೆ ಬೇಕಾದರೆ ಒಂದು ಪಕ್ಷ ಸಾವಿಲ್ಲದ ಮನೆಯ ಸಾಸಿವೆಯನ್ನು ಬೇಕಾದರೆ ಹುಡುಕಿ ತರಬಹುದೇನೋ? ಆದರೆ ಎಲ್ಲರನ್ನು ಮೆಚ್ಚಿಸಿ ಬದುಕು ನಡೆಸಬಹುದೆಂಬ ಸಾಹಸ ಮಾತ್ರ ನಡೆಯಲಾರದೆನಿಸುತ್ತದೆ.

ಮನೆಯಲ್ಲಿ ಕನಿಷ್ಠ ನಾಲ್ಕು ಮಂದಿ ಇರುವವರು ಎಂದು ಭಾವಿಸೋಣ, ಅವರನ್ನೇ ಮೆಚ್ಚಿಸಿ ಬಾಳಲಾಗದು ಎಂದ ಮೇಲೆ ಸಮಾಜದಲ್ಲಿ, ಅಕ್ಕಪಕ್ಕದವರಲ್ಲಿ, ಕೆಲಸ ಮಾಡುವ ಸ್ಥಳದಲ್ಲಿ ಇರುವವರನ್ನು ಮೆಚ್ಚಿಸಿ ಬದುಕಬಹುದೆಂದು ಕೊಂಡರೆ ಅದಕ್ಕಿಂತ ದೊಡ್ಡ ಹಾಸ್ಯ ಮತ್ತೊಂದು ಇರಲಾರದು. ಕೆಲವೊಮ್ಮೆ ನಾವೇನು ಮಾಡದಿದ್ದರೂ ಇಲ್ಲಸಲ್ಲದ ಹಗೆಗಳನ್ನು ಸಾಧಿಸುವ ಜನರೇ ಇರುವಾಗ, ಇಂದು ಜೀವನದ ಪ್ರಮುಖ ಸಾಧನ ಎನಿಸಿಕೊಂಡಿರುವ ಮೊಬೈಲ್‌ನಲ್ಲಿ ಹಾಕುವ ಸ್ಟೇಟಸ್‌ಗೆ ಒಂದು ಲೈಕ್ ಕೊಡುವುದಕ್ಕೆ ಮೀನಾಮೇಷ ಎಣಿಸುವ ಜನರಿರುವಾಗ ಎಲ್ಲರನ್ನೂ ಮೆಚ್ಚಿಸಿ ಬಾಳುವೆನೆಂದು ಹೊರಟರೆ ನಿಜಕ್ಕೂ ಅದು ಮೂರ್ಖತನವಾಗಿಯೇ ಕಾಣುತ್ತದೆ.

ತೀರಾ ಇತ್ತೀಚೆಗೆ ಸಾಮಾಜಿಕ ಜಾಲತಾಣದಲ್ಲಿ ಕಂಡ ಒಂದು ಚಿತ್ರದಲ್ಲಿನ ಮಾತು ಇಲ್ಲಿ ಉಲ್ಲೇಖ ಮಾಡಲು ಸೂಕ್ತವಾಗಿದೆ.

**"ಯಾರಿಗೂ ನೀ ಇಷ್ಟವಾಗುತ್ತಿಲ್ಲವೆಂದು
ಅಳಬೇಡವೋ ನೀ ದಡ್ಡ,
ಎಲ್ಲರಿಗೂ ಇಷ್ಟವಾಗಲು ನೀನೇನು ದುಡ್ಡ"**

ನಿಜ ಅಲ್ಲವೇ? ಹಣವೆಂದರೆ ಹೆಣವು ಬಾಯಿ ಬಿಡುವಂತಹ ಕಾಲಘಟ್ಟದಲ್ಲಿರುವ ನಮಗೆ ಎಲ್ಲರಿಗೂ ಇಷ್ಟವಾಗುವಂತೆ ಜೀವನ ನಡೆಸುತ್ತೇವೆ ಎಂದು ಹೊರಟರೆ ಅದು ನಿಜಕ್ಕೂ ಮನುಷ್ಯರಾಗಿದ್ದರೆ ಸಾಧ್ಯವಾಗಲಾರದು, ಹಣವಾಗಿದ್ದರೆ ಇಷ್ಟ ಆಗಬಹುದೇನೋ? ಉತ್ತರ ನಮ್ಮ ವಿವೇಚನೆಗೆ ಬಿಟ್ಟದ್ದು !

ಪ್ರಾಯೋಗಿಕ ದೃಷ್ಟಿಕೋನ ಅಗತ್ಯವಾದುದು

ಮತ್ತೊಬ್ಬರು ನನ್ನ ಭಾವನೆಗಳಿಗೆ ಸ್ಪಂದಿಸಿ ನಡೆದುಕೊಳ್ಳಬೇಕೆಂದು ಚಿಂತಿಸುವ ಮುನ್ನ ಬದಲಾಗುತ್ತಿರುವ ಮನಸ್ಥಿತಿಗೆ ತಕ್ಕಂತೆ ಪ್ರಾಯೋಗಿಕ ದೃಷ್ಟಿಕೋನವನ್ನು ಬೆಳೆಸಿಕೊಂಡರೆ ನಿರೀಕ್ಷೆಯಿಂದ ಉಂಟಾಗುವ ಬೇಸರ ಕಡಿಮೆಯಾಗಬಹುದು. ಉದಾಹರಣೆಗೆ ಮೊದಲೇ ಹೇಳಿದಂತೆ ಒಂದು ಕಾರ್ಯಕ್ರಮಕ್ಕೆ ಪ್ರೀತಿಯಿಂದ ಆಹ್ವಾನ ಮಾಡುವುದು ನಮ್ಮ ಕರ್ತವ್ಯವಾದರೂ ಬರುವವರ ಸ್ಥಿತಿ, ಮನಸ್ಥಿತಿ, ಆರ್ಥಿಕ ಪರಿಸ್ಥಿತಿ ಈ ಮೊದಲಾದ ಆಲೋಚನೆಗಳ ಬಗ್ಗೆ ಪ್ರಾಯೋಗಿಕವಾಗಿ ಆಲೋಚಿಸುವ ದೃಷ್ಟಿಕೋನವನ್ನು ಬೆಳೆಸಿಕೊಂಡಾಗ ಮಾತ್ರ ನಿರೀಕ್ಷೆಯಿಂದ ಉಲ್ಬಣಿಸುವ ದುಃಖ, ಬೇಸರ ಕಡಿಮೆಯಾಗುತ್ತದೆ.

ನಾನು ಎಲ್ಲವನ್ನೂ ಮಾಡಿದ್ದೇನೆ, ಎಲ್ಲರ ಮದುವೆ, ಸಮಾರಂಭಗಳಿಗೂ ಹೋಗಿದ್ದೇನೆ, ನಾನು ಕರೆದಾಗ ಅವರುಗಳು ಬರಲೇಬೇಕೆಂಬ ಆಸೆ, ನಿರೀಕ್ಷೆ ಮನುಷ್ಯದತ್ತವಾಗಿ ಚಿಂತಿಸುವುದು ಸಹಜ. ಆದರೆ ಪ್ರಾಯೋಗಿಕ ಚಿಂತನೆ ಮಾಡದೆ ಹೋದಲ್ಲಿ ಅದರಿಂದ ಉಂಟಾಗುವ ಚಿಂತೆ ಪರಿಣಾಮ ಬೀರುತ್ತದೆ. ಆದ್ದರಿಂದ ಸಾಧ್ಯವಾದಷ್ಟು ಬದಲಾಗುತ್ತಿರುವ ಕಾಲಘಟ್ಟಕ್ಕೆ ತಕ್ಕಂತೆ, ಆಲೋಚಿಸುವ ಜನರ ಮನಸ್ಥಿತಿಗೆ ತಕ್ಕಂತೆ ನಮ್ಮನ್ನು ನಾವು ಪ್ರಾಯೋಗಿಕ ದೃಷ್ಟಿಕೋನದಿಂದ ಬದಲಿಸಿಕೊಂಡು ಬದುಕುವುದನ್ನು ಕಲಿಯಬೇಕು.

ಬದುಕು ಸುಂದರವಾದುದು, ಇರುವಷ್ಟು ದಿನ ಅದನ್ನು ಸಾರ್ಥಕವಾಗಿ ಸದುಪಯೋಗಪಡಿಸಿ ಕೊಳ್ಳಬೇಕು. ಅದನ್ನು ಬಿಟ್ಟು ಇನ್ನಿಲ್ಲದ ನಿರೀಕ್ಷೆಗಳ ಬೆನ್ನತ್ತಿ ಹೋದರೆ ಅದರಿಂದ ನೋವು, ದುಃಖ, ದುಮ್ಮಾನಗಳು ಉಂಟಾಗುವುದು ಸಹಜವಾದುದು. ನಿರೀಕ್ಷೆಗಳಿಲ್ಲದ ಬದುಕು ಸಾಧ್ಯವಿಲ್ಲ ಎಂಬುದು ಸತ್ಯವಾದರೂ ನಿರೀಕ್ಷೆಗಳಿಲ್ಲದೇ ಜೀವನ ನಡೆಸಿದರೆ ಆ ಬದುಕು ಸುಂದರವಾಗಿರುವುದು ಯಾವುದೇ ಎರಡೂ ಮಾತಿಲ್ಲ ಎಂಬುದು ಕೂಡ ನಿಜವಾದುದಾಗಿದೆ.

ಮನುಷ್ಯನ ಜೀವನವು ನಿರೀಕ್ಷೆಗಳ ಜಾಲದಲ್ಲಿ ಸಿಲುಕಿಕೊಂಡಿದೆ. ಇದೂ ಆಗಬೇಕು, ಅದೂ ಆಗಬೇಕು, ಇವರು ಹೀಗೆ ವರ್ತಿಸಬೇಕು, ನನಗೆ ಹೀಗಾಗಬೇಕು ಎಂಬ ನಗರದ ಬೆಳಕುಗಳಂತೆ ಕಂಗೊಳಿಸುವ ನಿರೀಕ್ಷೆಗಳು ನಮ್ಮ ಮನಸ್ಸಿನ ಮೇಲೆ ಮಬ್ಬಿನಂತೆ ಆವರಿಸುತ್ತವೆ. ಆದರೆ ಅವು ನೆರವೇರದ ಕ್ಷಣದಲ್ಲಿ ಹುಟ್ಟುವ ನೋವು, ಅಸಮಾಧಾನ, ಒತ್ತಡಗಳು ಬದುಕಿನ ಸೊಗಸನ್ನೇ ಕಳೆದುಹೋಗುವಂತೆ ಮಾಡುತ್ತವೆ. ಈ ಕಾರಣಕ್ಕೆ ನಿರೀಕ್ಷೆಗಳಿಲ್ಲದ ಬದುಕು ಎಂಬುದು ಕೇವಲ ತತ್ವಶಾಸ್ತ್ರವಲ್ಲ, ಅದು ಮನಸ್ಸಿಗೆ ದೊರಕುವ ನಿಜವಾದ ಮುಕ್ತಿ. ನಿರೀಕ್ಷೆ ಎನ್ನುವುದು ಮಾನವ ಮನಸ್ಸಿನ ರಚನೆ. ಮನುಷ್ಯನು ಕನಸು ಕಾಣುವುದು ಸಹಜ. ಆದರೆ ಕನಸು ಮತ್ತು ನಿರೀಕ್ಷೆ ಒಂದೇ ಅಲ್ಲ. ಕನಸು ಪ್ರೇರಣೆ, ನಿರೀಕ್ಷೆ ಒತ್ತಡ. ಯಾಕೆಂದರೆ ಕನಸನ್ನು ನಾವು ನಮ್ಮ ಆತ್ಮಶಕ್ತಿಯಿಂದ ಸಾಧಿಸಬಹುದು; ಆದರೆ ನಿರೀಕ್ಷೆ ಎಂದರೆ ಯಾರಾದರೂ, ಯಾವುದಾದರೂ ಘಟನೆ ನಮ್ಮ ಆಸೆಗೆ ತಕ್ಕಂತೆ ನಡೆದುಕೊಳ್ಳಬೇಕು ಎಂಬ ನಿರ್ಬಂಧ. ನಾವು ನಿಯಂತ್ರಿಸಲಾಗದ ವಿಷಯಗಳಿಗೆ ಮನಸ್ಸನ್ನು ಕಟ್ಟಿ ಹಾಕಿದಾಗಲೇ ನೋವಿನ ಆರಂಭವಾಗುತ್ತದೆ.

ನಿರೀಕ್ಷೆಗಳಿಲ್ಲದ ಬದುಕು ಅಂದರೆ ಕ್ಷಣವನ್ನು ಸವಿಯುವ ಕಲೆ. ನೆನ್ನೆಗಿನ ಪಶ್ಚಾತ್ತಾಪವಿಲ್ಲ, ನಾಳೆಯ ಆತಂಕವಿಲ್ಲ. "ಏನು ಬರಲಿದೆ?" ಎಂಬ ಪ್ರಶ್ನೆ ಬಿಟ್ಟರೆ, "ಈ ಕ್ಷಣ ಏನು ಕೊಟ್ಟಿದೆ?" ಎನ್ನುವ ಪ್ರಶ್ನೆಯೇ ಮುಖ್ಯ. ಹೂವು ಅರಳುವುದಕ್ಕೆ ಕಾರಣಗಳನ್ನು ಹುಡುಕುವುದಿಲ್ಲ; ಅದು ಕೇವಲ ಅರಳುತ್ತದೆ, ತನ್ಮೂಲಕ ತನ್ನ ಬದುಕನ್ನು ಬೆಳಗುತ್ತದೆ. ಮನುಷ್ಯನ ಬದುಕೂ ಹೀಗೆಯೇ ಅರಳಬೇಕು, ಬೆಳಗಬೇಕು. ನಿರೀಕ್ಷೆಗಳ ಬಂಧವನ್ನು ಬಿಟ್ಟು ಪ್ರತೀ ಕ್ಷಣದ ತಾಜಾತನವನ್ನು ಅನುಭವಿಸಿದಾಗ ಜೀವನದ ನಿಜವಾದ ಸೌಂದರ್ಯ ಗೋಚರಿಸುತ್ತದೆ.

ನಿರೀಕ್ಷೆಗಳಿಲ್ಲದ ಬದುಕು ಮನುಷ್ಯನ ಮನಸ್ಸಿಗೆ ಸ್ವಾತಂತ್ರ್ಯ ನೀಡುತ್ತದೆ. ಕೋಪವು ಕಡಿಮೆ, ಆತಂಕವು ಕಡಿಮೆ, ಹಠವು ಕಡಿಮೆ. ಬದಲಾಗಿ ಶಾಂತಿ ಹೆಚ್ಚುತ್ತದೆ, ಸಹನ ಶಕ್ತಿ ಹೆಚ್ಚುತ್ತದೆ, ನಗು ಹೆಚ್ಚುತ್ತದೆ. ಯಾವುದಕ್ಕೂ ಅಂತಿಮವಾಗಿ ಜೀವರಹಿತ ಬಲವಂತವಿಲ್ಲ ಎಂಬ ಅರಿವು ಬಂದಾಗ, ಮನಸ್ಸು ನಡುಗುವುದನ್ನೇ ಬಿಡುತ್ತದೆ. ನಿರೀಕ್ಷೆಗಳಿಲ್ಲದ ಬದುಕು ಅಂದರೆ ಗಮ್ಯವಿಲ್ಲದ ಜೀವನವಲ್ಲ; ಅದು ಗಮ್ಯಕ್ಕಿಂತಲೂ ಮಹತ್ತರವಾದ ಪ್ರಯಾಣದ ಆನಂದ. ನಿರೀಕ್ಷೆಗಳಿಲ್ಲದೆ ಬದುಕಿದಾಗ ಪ್ರತೀ ಫಲವೂ ಆಶ್ಚರ್ಯ, ಪ್ರತೀ ಅನುಭವವೂ ಕಾಣಿಕೆ. ಮನುಷ್ಯನು ತನ್ನೊಳಗಿನ ಶಾಂತಿಯನ್ನು ಹುಡುಕುವ ದಾರಿಯೇ ಇದು.

ನಿರೀಕ್ಷೆಗಳಿಲ್ಲದ ಬದುಕು ಮನಸ್ಸಿಗೆ ಹಗುರ, ಹೃದಯಕ್ಕೆ ಶಾಂತಿ. ಇತರರ ಮೇಲೆ ಅಥವಾ ಫಲದ ಮೇಲೆ ನಿರೀಕ್ಷೆ ಇಡದೆ, ನಮ್ಮ ಪ್ರಯತ್ನದ ಮೇಲೆ ಭರವಸೆ ಇಟ್ಟಾಗ ಜೀವನ ಹೆಚ್ಚು ಸುಂದರವಾಗುತ್ತದೆ. ಸ್ವೀಕಾರ, ಶಾಂತಿ ಮತ್ತು ತೃಪ್ತಿಯತ್ತ ಕರೆದೊಯ್ಯುವ ದಾರಿಯೇ ನಿರೀಕ್ಷೆಗಳಿಲ್ಲದ ಬದುಕು.

ಸಿನಿಮಾದಲ್ಲಿ ತೋರುವ ಸೆಲೆಬ್ರೆಟಿ ಪೊಲೀಸ್ ಅಧಿಕಾರಿಯಂತಾಗಲು ಸರ್ಕಾರಿ ಸೇವೆಗೆ ಬರಬೇಡಿ

ಐಎಎಸ್, ಐಪಿಎಸ್, ಕೆಎಎಸ್ ಸೇರಿ ವಿವಿಧ ಪರೀಕ್ಷೆಗಳ ಸ್ಪರ್ಧಾಕಾಂಕ್ಷಿಗಳಿಗೆ ಕೆಪಿಎ ನಿರ್ದೇಶಕ ಡಾ.ಎಸ್.ಎಲ್.ಚನ್ನಬಸವಣ್ಣ ಕಟ್ಟು ನಿಟ್ಟಿನ ಸಲಹೆ

ಮೈಸೂರು, ಡಿ.1(ಎಸ್‌ಪಿಎನ್)– 'ಅಧಿಕಾರ' ಎಂದರೆ ಅದು ಅಂತಃಕರಣದಿಂದ ಕೂಡಿರಬೇಕು. ಸಿನಿಮಾದಲ್ಲಿ ತೋರುವ ಪೊಲೀಸ್ ಹೀರೊ ರೀತಿ ಕೆಲಸ ಮಾಡಲು ಸರ್ಕಾರಿ ಹುದ್ದೆಗಳಿಗೆ ಬರಲೇಬೇಡಿ ಎಂದು ಕರ್ನಾಟಕ ಪೊಲೀಸ್ ಅಕಾಡೆಮಿ ನಿರ್ದೇಶಕ ಡಾ.ಎಸ್.ಎಲ್.ಚನ್ನಬಸವಣ್ಣ ಕಟ್ಟುನಿಟ್ಟಿನ ಸಲಹೆ ನೀಡಿದರು.



2025–26ನೇ ಸಾಲಿನ ಐಎಎಸ್, ಕೆಎಎಸ್ ಮತ್ತು ಇತರೆ ಎಲ್ಲಾ ಸ್ಪರ್ಧಾತ್ಮಕ ಪರೀಕ್ಷೆಗಳ ಉಚಿತ ತರಬೇತಿ ಶಿಬಿರದ ಸಮಾರೋಪದಲ್ಲಿ ಸ್ಪರ್ಧಾತ್ಮಕ ಅಧ್ಯಯನ ಪುಸ್ತಕವನ್ನು ಕರ್ನಾಟಕ ಪೊಲೀಸ್ ಅಕಾಡೆಮಿ ಡಾ.ಎಸ್.ಎಲ್.ಚನ್ನಬಸವಣ್ಣ ಬಿಡುಗಡೆಗೊಳಿಸಿದರು.

ಮೈಸೂರು ಜೆಎಲ್‌ಬಿ ರಸ್ತೆಯ ಲಕ್ಷ್ಮೀಪುರಂ ಪ್ರೌಢಶಾಲೆ ಮತ್ತು ಪಿಯುಸಿ ಕಾಲೇಜಿನ ಆವರಣದಲ್ಲಿರುವ ಜ್ಞಾನಬುತ್ತಿ ಸಂಸ್ಥೆಯು ಕಳೆದ 145 ದಿನಗಳಿಂದ ನಡೆಸುತ್ತಿರುವ2025–26ನೇ ಸಾಲಿನ ಐಎಎಸ್, ಕೆಎಎಸ್ ಮತ್ತು ಇತರೆ ಎಲ್ಲಾ ಸ್ಪರ್ಧಾತ್ಮಕ ಪರೀಕ್ಷೆಗಳ ಉಚಿತ ತರಬೇತಿ ಶಿಬಿರದ ಸಮಾರೋಪ ಸಮಾರಂಭದಲ್ಲಿ ಅಧ್ಯಯನ ಪುಸ್ತಕ ಬಿಡುಗಡೆಗೊಳಿಸಿ ಮಾತನಾಡಿದರು.

ಸರ್ಕಾರಿ ಅಧಿಕಾರಿಯಾಗಿ ಸೇವೆ ಸಲ್ಲಿಸ ಬಯಸುವವರಿಗೆ ಸಾಮಾಜಿಕ ಬದ್ಧತೆ ಮತ್ತು ಜವಾಬ್ದಾರಿ ನಿರ್ವಹಿಸುವ ಮನಸ್ಥಿತಿ ಇರಬೇಕು. ಅದನ್ನು ಬಿಟ್ಟು ಸಿನಿಮಾಗಳಲ್ಲಿ ತೋರಿಸುವ ಸೆಲೆಬ್ರೆಟಿ ಪೊಲೀಸ್ ರೀತಿ ಸರ್ಕಾರಿ ಅಧಿಕಾರಿಯಾಗಿ ಸೇವೆಗೆ ಬರಬೇಡಿ. ಬದಲಾಗಿ ಹಣ ಮಾಡಬೇಕೆಂದ್ದರೆ ವ್ಯಾಪಾರ ಮತ್ತು ಉದ್ದಿಮೆಯನ್ನು ಸ್ಥಾಪಿಸಿ, ಹಣಗಳಿಸಿ ಎಂದು ಸಲಹೆ ನೀಡಿದ್ದಾರೆ.

ಅಧಿಕಾರಿಗಳಾಗಲು ಬಯಸುವವರಿಗೆ ನನ್ನ ಸಮಾಜ, ನನ್ನ ರಾಜ್ಯ ಮತ್ತು ನನ್ನ ದೇಶ ಎಂಬ ಉತ್ಕಟ ಅಭಿಮಾನದ ಜೊತೆಗೆ ಕಾಳಜಿ ಮತ್ತು ಕನಸು ಇರಬೇಕು. ಸೆಲೆಬ್ರೆಟಿಯಾಗಬೇಕೆಂದರೆ, ನಾಟಕ, ಟಿವಿ ಮತ್ತು ಸಿನಿಮಾರಂಗಕ್ಕೆ ಹೋಗಿ ಹೆಸರು ಮಾಡಬಹುದು. ಸರ್ಕಾರಿ ಸೇವೆಗೆ ಬರುವವರು ವೃತ್ತಿ ಬದ್ಧತೆಯನ್ನು ರೂಢಿಸಿಕೊಳ್ಳಬೇಕು ಎಂದು ಕಿವಿಮಾತು ಹೇಳಿದರು.

ಗಂಗಾನದಿ ಮಲಿನವಾಗಿದೆ ಎಂದು ಕೊರಗುವ ಬದಲು ಎಲ್ಲರೂ ಸೇರಿ ಸ್ವಚ್ಛ ಮಾಡುವ ಸಂಕಲ್ಪ ಮಾಡಿ, ಕಾರ್ಯರೂಪಕ್ಕೆ ತರಬೇಕು. ಯುವ ಸಮೂಹ ಮನಸ್ಸು ಮಾಡಿದರೆ ಗಂಗಾನದಿಯನ್ನು ಜಗತ್ತಿನ ಅತ್ಯಂತ ಸ್ವಚ್ಛ ಮತ್ತು ನಿರ್ಮಲ ನದಿಯನ್ನಾಗಿ ಮಾಡಬಹುದು. ಹಾಗೆಯೇ ಸಮಾಜ, ಸರ್ಕಾರಿ ವ್ಯವಸ್ಥೆ ಕೆಟ್ಟು ಹೋಗಿದೆ ಎಂದು ಕೊರಗುವ ಬದಲು ಕ್ಲಾರಿಟಿ ಇಟ್ಟುಕೊಂಡು ನಾಗರಿಕ ಸೇವಾ ಪರೀಕ್ಷೆ ತೆಗೆದುಕೊಳ್ಳಿ ಎಂದು ಸಲಹೆ ನೀಡಿದರು.

ಇತ್ತೀಚೆಗೆ ಕರ್ನಾಟಕ ಕೇಡರ್ ಐಪಿಎಸ್ ಅಧಿಕಾರಿಯಾಗಿ ಆಯ್ಕೆಯಾದ ಪ್ರೊಬೆಷನರಿ ಐಪಿಎಸ್ ಅಧಿಕಾರಿಗಳು ಮೈಸೂರಿನ ಕೆಪಿಎನಲ್ಲಿ ತರಬೇತಿ ಪಡೆಯುತ್ತಾರೆ. ಜೊತೆಗೆ 350ಕ್ಕೂ ಹೆಚ್ಚು ಪಿಎಸ್‌ಐ ಅಧಿಕಾರಿಗಳು ತರಬೇತಿ ಪಡೆಯುತ್ತಿದ್ದಾರೆ. ಅವರೊಂದಿಗೆ ನಿತ್ಯ ಸಂವಾದ ಮಾಡುತ್ತೇನೆ. ದಿನಪತ್ರಿಕೆಗಳ ಸಂಪಾದಕೀಯವನ್ನು ತಪ್ಪದೇ ಓದಿದರೆ, ನಿಮ್ಮ ಉತ್ತರಗಳು ನಿಖರ ಮತ್ತು ಅರ್ಥಪೂರ್ಣವಾಗಿರುತ್ತವೆ ಎಂದರು.

ಮೈಸೂರಿನ ಹೆಚ್ಚುವರಿ ಪ್ರಾದೇಶಿಕ ಆಯುಕ್ತೆ ಕವಿತಾ ರಾಜಾರಂ ಮಾತನಾಡಿ, ಪ್ರಯತ್ನವಿಲ್ಲದೆ, ಸಾಧನೆ ಸಾಧ್ಯವಿಲ್ಲ. ನಾನು ಆದಾಗಬೇಕಿತ್ತು, ಇದಾಗಬೇಕಿತ್ತು ಎಂದು ಕೊರಗದಿರಿ. ಜೊತೆಗೆ ಸೋಲುಗಳಿಗೆ ಅಂಜದಿರಿ ಬದಲಾಗಿ ನಮಗೆ ಸಿಕ್ಕಿರುವ ಹುದ್ದೆ ಮತ್ತು ಅವಕಾಶವನ್ನು ಬಳಸಿಕೊಳ್ಳಬೇಕು. ನಾನು ಕಾಲೇಜಿನಲ್ಲಿ ವ್ಯಾಸಂಗ ಮಾಡುವಾಗಲೇ ಮದುವೆಯಾದೆ. ಈಗ ಎರಡು ಮಕ್ಕಳಿವೆ. ಸಂಸಾರದ ಜವಾಬ್ದಾರಿಯ ನಿರ್ವಹಣೆ ಜೊತೆಗೆ ಬಂತು. ಕಾಲೇಜಿನಲ್ಲಿ ಆಂಗ್ಲ ಭಾಷಾ ಉಪನ್ಯಾಸಕಿಯಾಗಿ ಕೆಲಸ ಮಾಡಿದ್ದೇನೆ ಎಂದರು.

ಬಳಿಕ ನನ್ನ ತಾಯಿ, ಪತಿ ಮತ್ತು ಮಾವನವರ ಪ್ರೋತ್ಸಾಹದಿಂದ ಕೆಎಎಸ್ ಅಧಿಕಾರಿಯಾದೆ. ಸಮಾಜದಲ್ಲಿ ಯಾರು ಎಷ್ಟೇ ಶ್ರೀಮಂತರು, ಬುದ್ಧಿವಂತರು, ಮತ್ತು ಪ್ರಭಾವ ಶಾಲಿಗಳಿದ್ದರೂ ಒಬ್ಬ ಸರ್ಕಾರಿ ಅಧಿಕಾರಿಗೆ ಸಿಗುವ ಗೌರವ ಮತ್ತು ಮನ್ನಣೆ ಯಾರಿಗೂ ಸಿಗುವುದಿಲ್ಲ. ಸರ್ಕಾರಿ ಅಧಿಕಾರಿಯಾಗಬೇಕೆನ್ನುವ ಕಿಚ್ಚು ಮತ್ತು ಹುಚ್ಚು ಇಟ್ಟುಕೊಳ್ಳಿ. ಈ ಕನಸು ನನಸಾಗಲು ನಿಯಂತರ ಪ್ರಯತ್ನ ಮಾಡಿ ಎಂದು ಸಲಹೆ ನೀಡಿದರು.

ವೇದಿಕೆಯಲ್ಲಿ ಹಿರಿಯ ಸಾಹಿತಿ ಪ್ರೊ.ಎಂ.ಕೃಷ್ಣೇಗೌಡ, ಪಿಯು ಕಾಲೇಜಿನ ಪ್ರಾಂಶುಪಾಲ ಎನ್.ಎಸ್.ಪಶುಪತಿ ಜೈನಹಳ್ಳಿ, ಸತ್ಯನಾರಾಯಣಗೌಡ, ಪ್ರೊ.ಕೃ.ಪ.ಗಣೇಶ, ಪ್ರೊ.ಜಯಪ್ರಕಾಶ್, ಡಾ.ಹೊನ್ನಯ್ಯ, ಕೆ.ವೈ.ನಾಗೇಂದ್ರ, ಕಿರಣ್ ಕೌಶಿಕ್, ಕಾರ್ಯದರ್ಶಿ ಎಚ್. ಬಾಲಕೃಷ್ಣ ಇದ್ದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಮೈಸೂರು ದಸರಾ ಮಹೋತ್ಸವ-2025

ವಿಜೇತ ಸ್ತಬ್ಧಚಿತ್ರಗಳ ಕಲಾವಿದರಿಗೆ ಸ್ಮರಣಿಕೆ; ಪ್ರಶಸ್ತಿ ಪತ್ರ ವಿತರಣೆ

● ಎರಡು ತಿಂಗಳ ಬಳಿಕ ಒಲಿಯಿತು ಪ್ರಶಸ್ತಿ ಭಾಗ್ಯ! ● ಅರಮನೆ ಆವರಣದಲ್ಲಿ ಜಂಬೂ ಸವಾರಿ ನೋಡುವ ಭಾಗ್ಯ ನಮಗೂ ಕೊಡಿ; ಕಲಾವಿದರ ಅಳಲು



ನಾಡಹಬ್ಬ ಮೈಸೂರು ದಸರಾ ಮಹೋತ್ಸವ-2025ರ ಜಂಬೂಸವಾರಿ ಮೆರವಣಿಗೆಯಲ್ಲಿ ವಿಜೇತ ಸ್ತಬ್ಧ ಚಿತ್ರಗಳ ಕಲಾವಿದರು ಹಾಗೂ ನೋಡಲ್ ಅಧಿಕಾರಿಗಳಿಗೆ ಸ್ಮರಣಿಕೆ ಹಾಗೂ ಪ್ರಶಸ್ತಿ ಪತ್ರ ನೀಡಿ ಅಭಿನಂದಿಸಲಾಯಿತು.

ಮೈಸೂರು, ಡಿ.1(ಎಂಕೆ)- ನಾಡಹಬ್ಬ ಮೈಸೂರು ದಸರಾ ಮಹೋತ್ಸವ-2025ರ ಜಂಬೂಸವಾರಿ ಮೆರವಣಿಗೆಯಲ್ಲಿ ಭಾಗವಹಿಸಿ, ನೋಡುಗರ ಕಣ್ಮನ ಸೆಳೆದ ಸ್ತಬ್ಧ ಚಿತ್ರಗಳ ಪೈಕಿ ವಿಭಾಗ ಮಟ್ಟ, ರಾಜ್ಯ, ಕೇಂದ್ರ ಹಾಗೂ ನಿಗಮವಾರು ವಿಜೇತ ಸ್ತಬ್ಧ ಚಿತ್ರಗಳ ಕಲಾವಿದರಿಗೆ ಸ್ಮರಣಿಕೆ ಹಾಗೂ ಪ್ರಶಸ್ತಿ ಪತ್ರ ನೀಡಿ ಅಭಿನಂದಿಸಲಾಯಿತು.

ಮೈಸೂರಿನ ಶಾರದಾದೇವಿನಗರದಲ್ಲಿರುವ ನಗರಪಾಲಿಕೆ ವಲಯ ಕಚೇರಿ-3ರ ಸಭಾಂಗಣದಲ್ಲಿ ದಸರಾ ಸ್ತಬ್ಧ ಚಿತ್ರ ಉಪಸಮಿತಿ ವತಿಯಿಂದ ಸೋಮವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಉಪ ಸಮಿತಿ ಉಪ ವಿಶೇಷಾಧಿಕಾರಿ ಕೆ.ಬಿ.ಪ್ರಭುಸ್ವಾಮಿ, ಕಾರ್ಯಾಧ್ಯಕ್ಷ ದೀಪಕ್ ಹಾಗೂ ಕಾರ್ಯದರ್ಶಿ ಸತ್ಯಮೂರ್ತಿ ಕಲಾವಿದರಿಗೆ, ಸಂಬಂಧಪಟ್ಟ ನೋಡಲ್ ಅಧಿಕಾರಿಗಳಿಗೆ ಸ್ಮರಣಿಕೆ ಮತ್ತು ಪ್ರಶಸ್ತಿ ಪತ್ರ ನೀಡಿದರು.

ಇದಕ್ಕೂ ಮುನ್ನ ಸ್ತಬ್ಧ ಚಿತ್ರಗಳ ತಯಾರಿ, ನಿರ್ವಹಣೆ ಹಾಗೂ ಮುಂದಿನ ವರ್ಷ ನಿರ್ವಹಿಸಬೇಕಾದ ಜವಾಬ್ದಾರಿಗಳ ಕುರಿತು ಚರ್ಚಿಸಲಾಯಿತು. ಈ ವೇಳೆ ಕಲಾವಿದ ರಾಜೇಶ್ ಮಾತನಾಡಿ, ಜಂಬೂ ಸವಾರಿ ದಿನದಂತೆ ಮುಂಜಾನೆ 4 ಗಂಟೆಗೆ ಸ್ತಬ್ಧಚಿತ್ರದೊಂದಿಗೆ ಅರಮನೆ ಆವರಣಕ್ಕೆ ಬಂದಿರುತ್ತೇವೆ. ಅಪ್ಪಿ-ತಪ್ಪಿ ಅರಮನೆಯಿಂದ ಹೊರಗಡೆ ಬಂದರೆ, ಅಗಲಾಚಿದರೂ ಮತ್ತೆ ಒಳಗಡೆ ಪೊಲೀಸರು ಬಿಡುವುದಿಲ್ಲ. ಪ್ರತೀ ವರ್ಷ ಈ ಸಮಸ್ಯೆ ಉಂಟಾಗುತ್ತಿದ್ದು, ಸ್ತಬ್ಧಚಿತ್ರ ಕಲಾವಿದರನ್ನು ಕಡೆಗಣಿಸಲಾಗುತ್ತಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಮತ್ತೋರ್ವ ಕಲಾವಿದರೊಬ್ಬರು ಮಾತನಾಡಿ, ಸ್ತಬ್ಧಚಿತ್ರ ಕಲಾವಿದರಿಗೆ ಜಂಬೂ ಸವಾರಿ ವೀಕ್ಷಣೆಗೆ ಇಂತಿಷ್ಟು ಎಂದು ಪಾಸ್‌ಗಳನ್ನು ನೀಡಬೇಕು. ಸ್ತಬ್ಧಚಿತ್ರ ನಿರ್ಮಿತ ಲಾರಿ ಡ್ರೈವರ್, ಒಬ್ಬರು ಕಲಾವಿದರು, ನೋಡಲ್ ಅಧಿಕಾರಿಯೊಬ್ಬರಿಗೆ ಸೇರಿ 5 ಪಾಸ್‌ಗಳನ್ನು ನೀಡಲಾಗುತ್ತದೆ. ಇದರಿಂದ ಕಲಾವಿದರಾದ ನಾವು ಮೆರವಣಿಗೆ ಭಾಗವಹಿಸುತ್ತೇವೆ. ಆದರೆ, ನಮ್ಮ ಕುಟುಂಬಸ್ಥರನ್ನು ಕರೆದುಕೊಂಡು ಬರಬೇಕು ಎಂದು ಅನ್ನಿಸುವುದಿಲ್ಲವೆ. ಭದ್ರತೆ ನೀಡುವ ಪೊಲೀಸರೇ ತಮ್ಮ ಕುಟುಂಬಸ್ಥರನ್ನು ಕರೆದುಕೊಂಡು ಬಂದು ಕೂರಿಸುವುದನ್ನು ನೋಡಿದ್ದೇವೆ. ಆದರೆ, ಕಲಾವಿದರಿಗೆ ಮಾತ್ರ ಅವಕಾಶ ಯಾಕಿಲ್ಲ ಎಂದು ಪ್ರಶ್ನಿಸಿದರಲ್ಲದೆ ಮುಂದಿನ ವರ್ಷದಿಂದ ಪಾಸ್‌ಗಳನ್ನು ನೀಡುವಂತೆ ಒತ್ತಾಯಿಸಿದರು.

ಇಷ್ಟೊಂದು ತಡವೇಕೆ: ಸ್ತಬ್ಧಚಿತ್ರ ವಿಜೇತ ಕಲಾವಿದರು ಹಾಗೂ ಸಂಬಂಧ ಇಲಾಖೆಯ ನೋಡಲ್ ಅಧಿಕಾರಿಗಳನ್ನು ಕರೆಸಿ ಸ್ಮರಣಿಗೆ ಪ್ರಶಸ್ತಿ ಪತ್ರಗಳನ್ನು ಇಷ್ಟೊಂದು ತಡವೇಕೆ ಎಂದು ಪ್ರಶ್ನಿಸಿದ ನೋಡಲ್ ಅಧಿಕಾರಿಯೊಬ್ಬರು, ಮೆರವಣಿಗೆ ಮುಗಿದ ದಿನವೇ ಪಂಜಿನ ಕವಾಯತು ನಡೆಯುವ ವೇಳೆ ಸಚಿವರಿಂದಲೇ ಕೊಡಿಸುವ ಕೆಲಸವಾಗಬೇಕು. ಇದರಿಂದ ನಮ್ಮ ಶ್ರಮಕ್ಕೂ ಪ್ರತಿಫಲ ದೊರೆತಂತಾಗುತ್ತದೆ ಎಂದರು.

ಮುಂದಿನ ವರ್ಷದಿಂದ ಬದಲಾವಣೆಗೆ ಚಿಂತನೆ: ದಸರಾ ಸ್ತಬ್ಧಚಿತ್ರ ಉಪ ಸಮಿತಿ ಉಪ ವಿಶೇಷಾಧಿಕಾರಿ ಕೆ.ಬಿ.ಪ್ರಭುಸ್ವಾಮಿ ಮಾತನಾಡಿ, ಈ ವರ್ಷದ ದಸರಾ ಜಂಬೂ ಸವಾರಿ ಮೆರವಣಿಗೆಯಲ್ಲಿ ಸಣ್ಣ-ಪುಟ್ಟ ಸಮಸ್ಯೆಗಳೊಂದಿಗೆ ಸ್ತಬ್ಧಚಿತ್ರಗಳ ಮೆರವಣಿಗೆ ಅಚ್ಚುಕಟ್ಟಾಗಿ ನಡೆದಿದೆ. ಮುಂದಿನ ವರ್ಷ ಈ ವರ್ಷದಲ್ಲಾದ ಸಮಸ್ಯೆ, ಗೊಂದಲಗಳು ಉಂಟಾಗದಂತೆ ಮುನ್ನೆಚ್ಚರಿಕೆ ವಹಿಸಲಾಗುವುದು. ಎಲ್ಲಾ ಸ್ತಬ್ಧಚಿತ್ರಗಳು ಉತ್ತಮವಾಗಿದ್ದು, ಒಂದಕ್ಕಿಂತ ಒಂದು ಆಕರ್ಷಣೀಯವಾಗಿದ್ದವು. ಇದಕ್ಕೆಲ್ಲಾ ಕಲಾವಿದರ ಪರಿಶ್ರಮ ಕಾರಣವಾಗಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು. ಸಭೆಯಲ್ಲಿ ದಸರಾ ಸ್ತಬ್ಧಚಿತ್ರ ಉಪಸಮಿತಿ ಸದಸ್ಯರು, ಪಾಲಿಕೆ ಅಧಿಕಾರಿಗಳು, ವಿವಿಧ ಇಲಾಖೆಗಳ ನೋಡಲ್ ಅಧಿಕಾರಿಗಳು ಉಪಸ್ಥಿತರಿದ್ದರು.

ದಸರಾ ಸ್ತಬ್ಧಚಿತ್ರ ಮೆರವಣಿಗೆಯಲ್ಲಿ ವಿಜೇತ ಜಿಲ್ಲೆ, ಸ್ತಬ್ಧಚಿತ್ರ ಪರಿಕಲ್ಪನೆ...

ವಿಭಾಗ ಮಟ್ಟದಲ್ಲಿ ಬೆಂಗಳೂರು ವಿಭಾಗದ ಚಿತ್ರದುರ್ಗ (ರಾಜ ವೀರಮದಕರಿನಾಯಕ ಸ್ತಬ್ಧಚಿತ್ರ) ಪ್ರಥಮ, ಬೆಂಗಳೂರು ನಗರ(ಬ್ರಾಂಡ್ ಬೆಂಗಳೂರಿನತ್ತ ದಿಟ್ಟ ಹೆಜ್ಜೆ) ದ್ವಿತೀಯ, ತುಮಕೂರು(ನವ್ಯ ಮತ್ತು ಪ್ರಾಚೀನ ಶಿಲ್ಪಕಲಾ) ತೃತೀಯ ಹಾಗೂ ಕಲಬುರಗಿ ವಿಭಾಗದಲ್ಲಿ ಬೀದರ್(ಬೀದರ್ ಕೋಟೆ) ಪ್ರಥಮ, ಕೊಪ್ಪಳ(ಕಿನ್ನಾಳ ಕಲೆ) ದ್ವಿತೀಯ, ವಿಜಯನಗರ(ವಿಶಿಷ್ಟ ವಿಜಯನಗರ ಜಿಲ್ಲೆಯ ವೈಶಿಷ್ಟ್ಯತೆ) ತೃತೀಯ ಸ್ಥಾನ ಪಡೆದಿದೆ.

ಬೆಳಗಾವಿ ವಿಭಾಗದಲ್ಲಿ ಗದಗ(ಜೋಡು ಕಳಸದ ಗುಡಿ) ಪ್ರಥಮ, ಧಾರವಾಡ(ರಾಷ್ಟ್ರಧ್ವಜ ತಯಾರಿಕಾ ಕೇಂದ್ರ) ದ್ವಿತೀಯ, ಬೆಳಗಾವಿ(ಶ್ರೀ ಮಹಾಕಾಳಿ ಮಾಯಕ್ಕಾ ದೇವಿ) ತೃತೀಯ ಹಾಗೂ ಮೈಸೂರು ವಿಭಾಗದಲ್ಲಿ ಚಾಮರಾಜನಗರ (ಪ್ರಕೃತಿ ಸೌಹಾರ್ದತೆಯೊಂದಿಗೆ ಪ್ರಗತಿಯತ್ತ ಸಾಗೋಣ) ಪ್ರಥಮ, ದಕ್ಷಿಣ ಕನ್ನಡ(ಪ್ರತಿಬಿಂಬಿಸುವ ಕಲೆ) ದ್ವಿತೀಯ, ಚಿಕ್ಕಮಗಳೂರು (ಭದ್ರಬಾಲ್ಯ ಯೋಜನೆ) ತೃತೀಯ ಸ್ಥಾನ ಪಡೆದಿವೆ. ಹಾಗೆಯೇ ಕೇಂದ್ರ, ರಾಜ್ಯ ಮತ್ತು ವಿವಿಧ ನಿಗಮಗಳ ವಿಭಾಗದಲ್ಲಿ ಹಿಂದುಸ್ಥಾನ್ ಏರೋನಾಟಿಕ್ಸ್-ಹೆಚ್‌ಎಎಲ್ (ವಿಜಯ ರನ್ ವೇ-ಭಾರತ ಆಕಾಶಕ್ಕೆ ಹೆಚ್‌ಎಎಲ್‌ನ ಶಕ್ತಿ) ಪ್ರಥಮ, ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ (ಡ್ರಗ್ಸ್ ಮುಕ್ತ ಕ್ಯಾಂಪಸ್ ಅಭಿಯಾನ) ದ್ವಿತೀಯ, ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿ (ಸುಂದರ, ಸ್ವಚ್ಛ ಪರಿಸರ) ತೃತೀಯ ಸ್ಥಾನ ಪಡೆದರೆ, ಪ್ರವಾಸೋದ್ಯಮ ಇಲಾಖೆ(ಕೊಪ್ಪಳ ಜಿಲ್ಲೆಯ ಅಂಜನಾದ್ರಿ ಬೆಟ್ಟ) ಹಾಗೂ ಕರ್ನಾಟಕ ತಾಂಡ ಅಭಿವೃದ್ಧಿ ನಿಗಮ(ಕರ್ನಾಟಕ ತಾಂಡ ಅಭಿವೃದ್ಧಿ ನಿಗಮ ಸ್ಥಾಪನೆ)ಕ್ಕೆ ಸಮಾಧಾನಕರ ಬಹುಮಾನ ನೀಡಲಾಯಿತು.

ಉದ್ಯೋಗಾಕಾಂಕ್ಷಿಗಳ ಮೇಲೆ ಲಾಠಿ ಚಾರ್ಜ್‌ಗೆ ಎಐಡಿವೈಒ ಖಂಡನೆ

ಮೈಸೂರು, ಡಿ.1(ಎಂಕೆ)- ಕೇಂದ್ರ ಮತ್ತು ರಾಜ್ಯ ಸರ್ಕಾರದ ವಿವಿಧ ಇಲಾಖೆಗಳಲ್ಲಿ ಖಾಲಿ ಇರುವ ಲಕ್ಷಾಂತರ ಹುದ್ದೆಗಳ ಭರ್ತಿ ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಧಾರವಾಡದಲ್ಲಿ ಶಾಂತಿಯುತವಾಗಿ ಪ್ರತಿಭಟನೆ ನಡೆಸುತ್ತಿದ್ದ ಉದ್ಯೋಗ ಆಕಾಂಕ್ಷಿಗಳು ಹಾಗೂ ಯುವ ಜನರ ಮೇಲೆ ಲಾಠಿ ಚಾರ್ಜ್ ನಡೆಸಿ, ಬಂಧಿಸಿರುವ ಕ್ರಮವನ್ನು ಆಲ್ ಇಂಡಿಯಾ ಡೆಮಾಕ್ರೆಟಿಕ್ ಯೂತ್ ಆರ್ಗನೈಸೇಷನ್ (ಎಐಡಿವೈಒ) ಮೈಸೂರು ಜಿಲ್ಲಾ ಘಟಕ ತೀವ್ರವಾಗಿ ಖಂಡಿಸಿದೆ.

ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಕಳೆದ ಹತ್ತು ವರ್ಷಗಳಿಂದ ಯಾವುದೇ ನೇಮಕಾತಿಗಳನ್ನು ನಡೆಸದೆ ಸಮಯ ತಳ್ಳುವ ಕೆಲಸ ಮಾಡುತ್ತಿವೆ. ರಾಜ್ಯದಲ್ಲಿ ಒಂದು ಲಕ್ಷ ಉದ್ಯೋಗ ಭರ್ತಿ ಮಾಡುವ ವಾಗ್ದಾನ ನೀಡಿದ್ದ ಸರ್ಕಾರ, ಅಧಿಕಾರಕ್ಕೆ ಬಂದು ಎರಡೂವರೆ ವರ್ಷ ಕಳೆದರೂ ಯಾವುದೇ ನೇಮಕಾತಿಗೆ ಅಧಿಸೂಚನೆ ಹೊರಡಿಸಿಲ್ಲ. ಕೇಂದ್ರ ಸರ್ಕಾರವು ಸಹ ಕಾಲ ಕಾಲಕ್ಕೆ ನೇಮಕಾತಿ ಮಾಡುತ್ತಿಲ್ಲ ಇದನ್ನೆಲ್ಲಾ ಪ್ರಶ್ನಿಸಿ ಪ್ರತಿಭಟನೆ ನಡೆಸುತ್ತಿದ್ದ ಉದ್ಯೋಗ ಆಕಾಂಕ್ಷಿ ಯುವಜನರ ಮೇಲೆ ಲಾಠಿಚಾರ್ಜ್ ನಡೆಸಿ, ಅವರನ್ನು ಬಂಧಿಸಿರುವುದು ಹೋರಾಟವನ್ನು ದಮನ ಮಾಡುವ ಕ್ರಮವಾಗಿದೆ ಎಂದು ಎಐಡಿವೈಒ ಜಿಲ್ಲಾ ಕಾರ್ಯದರ್ಶಿ ಸುಮಾ ಖಂಡಿಸಿದ್ದಾರೆ.

ಈ ಕೂಡಲೇ ಬಂಧಿಸಿರುವ ಉದ್ಯೋಗಾಕಾಂಕ್ಷಿಗಳ ಹೋರಾಟ ಸಮಿತಿ ಮತ್ತು ಜನಸಾಮಾನ್ಯರ ವೇದಿಕೆಯ ಮುಖಂಡರನ್ನು ಹಾಗೂ ಉದ್ಯೋಗ ಆಕಾಂಕ್ಷಿಗಳನ್ನು ಬಿಡುಗಡೆ ಮಾಡಬೇಕು. ಅಲ್ಲದೆ ಖಾಲಿ ಹುದ್ದೆಗಳ ಭರ್ತಿಗೆ ಕೇಂದ್ರ ಮತ್ತು ರಾಜ್ಯ ಸರ್ಕಾರ ಕ್ರಮ ಕೈಗೊಳ್ಳಬೇಕು ಎಂದು ಪತ್ರಿಕಾ ಪ್ರಕಟಣೆ ಮೂಲಕ ಆಗ್ರಹಿಸಿದ್ದಾರೆ.

ಮೈಸೂರು ರೈಲ್ವೆ ನಿಲ್ದಾಣದಲ್ಲಿ 'ಸ್ಟೇಷನ್ ಮಹೋತ್ಸವ' ಆಚರಣೆ





ಮೈಸೂರು ರೈಲ್ವೆ ನಿಲ್ದಾಣದಲ್ಲಿ 'ಸ್ಟೇಷನ್ ಮಹೋತ್ಸವ' ಆಚರಿಸಲಾಯಿತು.

ಮೈಸೂರು, ಡಿ.1(ಎಂಕೆ)- ನೈರುತ್ಯ ರೈಲ್ವೆ ಮೈಸೂರು ವಿಭಾಗದ ಮೈಸೂರು ರೈಲ್ವೆ ನಿಲ್ದಾಣದಲ್ಲಿ 'ಸ್ಟೇಷನ್ ಮಹೋತ್ಸವ' ಆಚರಿಸಲಾಯಿತು.

ರೈಲ್ವೆ ನಿಲ್ದಾಣ ಆವರಣದಲ್ಲಿ ಆಯೋಜಿಸಿದ್ದ ವೇದಿಕೆ ಕಾರ್ಯಕ್ರಮದಲ್ಲಿ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮ ಹಾಗೂ ಸ್ವಾತಂತ್ರ್ಯ ಹೋರಾಟಗಾರ ವೈ.ಸಿ.ರೇವಣ್ಣ ಹಾಗೂ ನಿವೃತ್ತ ರೈಲ್ವೇ ನೌಕರರಾದ ಹೆಚ್.ಎಸ್.ರಾಮಣ್ಣ ಅವರನ್ನು ಸನ್ಮಾನಿಸುವ ಮೂಲಕ ಮಹೋತ್ಸವ ಆಚರಿಸಲಾಯಿತು. ಬಳಿಕ ಕಾರ್ಯಕ್ರಮ ಉದ್ಘಾಟಿಸಿದ ನೈರುತ್ಯ ರೈಲ್ವೆ ಮೈಸೂರು ವಿಭಾಗದ ವಿಭಾಗೀಯ ರೈಲ್ವೆ ವ್ಯವಸ್ಥಾಪಕ ಮುದಿತ್ ಮಿತ್ತಲ್ ರೈಲ್ವೆ ಮ್ಯೂಸಿಯಂ ವೀಕ್ಷಣೆ ಮಾಡಿ, ಆಕರ್ಷಕ ಸಂಗ್ರಹಣೆಗಳನ್ನು ಕಂಡು ಹರ್ಷ ವ್ಯಕ್ತಪಡಿಸಿದರು.

ಹೆಚ್ಚುವರಿ ವಿಭಾಗೀಯ ರೈಲ್ವೇ ವ್ಯವಸ್ಥಾಪಕ ಶಮ್ಮಾಸ್ ಹಮೀದ್, ಜಡ್‌ಆರ್ ಯುಸಿಸಿ ಮತ್ತು ಡಿಆರ್ ಯುಸಿಸಿ ಸದಸ್ಯರು, ಶಾಖಾ ಅಧಿಕಾರಿಗಳು, ಲಲಿತಾ ಶಾಲೆಯ ಶಿಕ್ಷಕರು ಹಾಗೂ ವಿದ್ಯಾರ್ಥಿಗಳು, ರೈಲ್ವೇ ಸಿಬ್ಬಂದಿ ಮತ್ತಿತರರಿದ್ದರು.

ಇಂದು ಶ್ರೀ ಹನುಮ ಜಯಂತಿ: ಪೂಜಾ ಮಹೋತ್ಸವ; ವಿವಿಧ ಕಾರ್ಯಕ್ರಮ



ಮೈಸೂರು, ಡಿ.1(ಎಸ್‌ಪಿಎನ್)- 58ನೇ ವರ್ಷದ ಶ್ರೀ ಹನುಮ ಜಯಂತಿ ಮತ್ತು ಪೂಜಾ ಮಹೋತ್ಸವ ಕಾರ್ಯಕ್ರಮವನ್ನು ಶ್ರೀ ವಿದ್ಯಾಗಣಪತಿ ಮತ್ತು ಮಾರುತಿ ಯುವಕರ ಸಂಘದ ವತಿಯಿಂದ ಡಿ.2ರಿಂದ 6ರವರೆಗೆ ನಡೆಯಲಿದೆ.

ಡಿ.2ರಂದು ಸಂಜೆ 7ಗಂಟೆಗೆ ಮಂಡ್ಯ ಹರಿಕಥಾ ವಿದ್ವಾನ್ ಶಿವಾರ ಉಮೇಶ್ ಅವರಿಂದ 'ಶ್ರೀ ವೀರಾಂಜನೇಯ' ಹರಿಕಥೆ, ಡಿ.3ರಂದು ಮೈಸೂರಿನ ಶಿವಕುಮಾರ್ ಶಾಸ್ತ್ರಿ ಅವರಿಂದ 'ಶ್ರೀ ಮಹದೇಶ್ವರ ಸ್ವಾಮಿ' ಹರಿಕಥೆ, ಡಿ.4ರಂದು ಸಂಜೆ 7 ಗಂಟೆಗೆ ಮೈಸೂರಿನ ಕಲಾವಿದ ಡಾ.ಗುರುರಾಜ್ ಅವರಿಂದ 'ಶ್ರೀ ಧರೆಗೆ ದೊಡ್ಡವರಾದ ಸಿದ್ದಪ್ಪಾಜಿ' ಕಾರ್ಯಕ್ರಮ ಹಾಗೂ ನ.5ರಂದು ಸವಿತಕ್ಕ ಮತ್ತು ತಂಡದವರಿಂದ ಭಕ್ತಿಗೀತೆ ಮತ್ತು ಜಾನಪದ ಕಾರ್ಯಕ್ರಮ ನಡೆಯಲಿದೆ. ಡಿ.6ರಂದು ಸಂಜೆ 6 ಗಂಟೆಗೆ ಶ್ರೀ ಆಂಜನೇಯ ಮೂರ್ತಿಯನ್ನು ಭಾರತ್ ಬ್ರಾಸ್ ಬ್ಯಾಂಡ್ ನೊಂದಿಗೆ ಪಡುವಾರಹಳ್ಳಿ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಯಲಿದೆ.

ಈ ಪೂಜಾ ಮಹೋತ್ಸವವನ್ನು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಉದ್ಘಾಟಿಸಲಿದ್ದು, ಮಾಜಿ ಸಂಸದ ಪ್ರತಾಪ ಸಿಂಹ, ಮಾಜಿ ಶಾಸಕ ಎಲ್.ನಾಗೇಂದ್ರ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್.ಮಲ್ಲಿಕಾರ್ಜುನ ಸ್ವಾಮಿ, ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ವಿದ್ಯಾವಿಕಾಸ ಟ್ರಸ್ಟ್ ಕವೀಶ್‌ಗೌಡ, ಕರ್ನಾಟಕ ಸುಗಮ ಸಂಗೀತ ಪರಿಷತ್ ಅಧ್ಯಕ್ಷ ಡಾ.ನಾಗರಾಜ್ ವಿ.ಬೈರಿ, ಸಮಾಜ ಸೇವಕ ಕೃಷ್ಣ ಉಪಸ್ಥಿತರಿರುತ್ತಾರೆ.

ಅರಣ್ಯ ಸಂಪತ್ತು ರಕ್ಷಣೆ; ವನ್ಯ ಜೀವಿಗಳ ಮೇಲೆ ನಿಗಾ ಇಡಲು ಶ್ವಾನಪಡೆ ಸಜ್ಜು



ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದಲ್ಲಿರುವ ಶ್ವಾನದಳ ತರಬೇತಿ ಕೇಂದ್ರದಿಂದ ಐದು ಶ್ವಾನದಳಗಳನ್ನು ಬೀಳ್ಕೊಡಲಾಯಿತು.

ಮೈಸೂರು, ಡಿ.1- ವನ್ಯ ಸಂಪತ್ತು ರಕ್ಷಣೆ ಹಾಗೂ ವನ್ಯ ಜೀವಿಗಳ ಸಂಚಾರದ ಬಗ್ಗೆ ನಿಗಾ ವಹಿಸುವ ಅರಣ್ಯ ಇಲಾಖೆಗೆ ನೆರವಾಗಲು ಶ್ವಾನಪಡೆ ಸಜ್ಜಾಗಿದೆ.

ದೇಶದಲ್ಲೇ ಮೊದಲಿಗೆ ಕರ್ನಾಟಕ ಸರ್ಕಾರದ ವತಿಯಿಂದ ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದಲ್ಲಿ ವರ್ಷದ ಹಿಂದೆ ಆರಂಭಿಸಿದ ಶ್ವಾನದಳ ತರಬೇತಿ ಕೇಂದ್ರದಲ್ಲಿ ತರಬೇತಿ ಪಡೆದಿರುವ ಸಿಬ್ಬಂದಿ ಹಾಗೂ ಶ್ವಾನಗಳಿಗೆ ಇಂದು ಬೀಳ್ಕೊಡಲಾಗಿದೆ.

ರಾಜ್ಯದ ಐದು ಹುಲಿ ಸಂರಕ್ಷಿತ ಪ್ರದೇಶಗಳಿಗೆ ತಲಾ ಎರಡರಂತೆ ಹಂಚಿಕೆ ಮಾಡಲಾಗಿರುವ ಒಟ್ಟು 10 ಶ್ವಾನಗಳಿಗೆ ತರಬೇತಿ ನೀಡಲಾಗಿದೆ. ಹುಲಿ ಚರ್ಮ, ಉಗುರು, ಆನೆ ದಂತ, ಜಿಂಕೆ ಮಾಂಸ, ಶ್ರೀಗಂಧ ಕಳ್ಳತನ ಮಾಡುವವರನ್ನು ಪತ್ತೆ ಹಚ್ಚುವುದು, ನಾಡಿನತ್ತ ಧಾವಿಸುವ ವನ್ಯಜೀವಿಗಳ ಸಂಚಾರ ಮಾರ್ಗ ಗುರುತಿಸುವುದರ ಬಗ್ಗೆ ತರಬೇತಿ ನೀಡಿದ್ದು, ಈ ಶ್ವಾನಗಳ ನಿಬಾಯಿಸುವುದಕ್ಕೆ ಸಿಬ್ಬಂದಿಯನ್ನು ಸಿದ್ಧಗೊಳಿಸಲಾಗಿದೆ.

ಅರಣ್ಯ ಇಲಾಖೆ ಅಧಿಕಾರಿಗಳ ಸಹಕಾರದೊಂದಿಗೆ ಶ್ವಾನ ಮನೋವೈದ್ಯ ತಜ್ಞ ಡಾ.ಅಮೃತ್ ಎಸ್.ಹಿರಣ್ಯ ನೇತೃತ್ವದಲ್ಲಿ ಒಂದು ವರ್ಷದ ತರಬೇತಿ ಪೂರ್ಣಗೊಳಿಸಿದ ಐದು ಶ್ವಾನದಳ ತಂಡಗಳು, ನಿಯೋಜಿತ ಹುಲಿ ಸಂರಕ್ಷಿತ ಪ್ರದೇಶಕ್ಕೆ ಹಿಮ್ಮರಳಿದವು.

ಬಂಡೀಪುರ ಅರಣ್ಯ ಸಂರಕ್ಷಣಾಧಿಕಾರಿ ಹಾಗೂ ಕ್ಷೇತ್ರ ನಿರ್ದೇಶಕ ಎಸ್.ಪ್ರಭಾಕರನ್ ಅಧ್ಯಕ್ಷತೆಯಲ್ಲಿ ನಡೆದ ಸಮಾರಂಭದಲ್ಲಿ ತರಬೇತುದಾರರು ಹಾಗೂ ಶ್ವಾನ ಸಿಬ್ಬಂದಿಗೆ ಪ್ರಮಾಣ ಪತ್ರ ನೀಡಲಾಯಿತು. ಈ ವೇಳೆ ಬಂಡೀಪುರದ ಉಪ ಅರಣ್ಯ ಸಂರಕ್ಷಣಾಧಿಕಾರಿ ನವೀನ್ ಕುಮಾರ, ವಲಯ ಅರಣ್ಯ ಅಧಿಕಾರಿಗಳಾದ ಎಂ.ಮಲ್ಲೇಶ್, ಶ್ರೀರಾಮಲು ಮತ್ತಿತರರು ಉಪಸ್ಥಿತರಿದ್ದರು.

ಮಣಿಪಾಲ್ ಆಸ್ಪತ್ರೆಯ ಮೈಸೂರು ತಂಡದಿಂದ

ತುಂಡರಿಸಿದ್ದ ಕೈ ಜೋಡಣೆಯ ಯಶಸ್ವಿ ಶಸ್ತ್ರಚಿಕಿತ್ಸೆ



ಮೈಸೂರು, ಡಿ.1 (ಪಿಎಂ)- ಮೈಸೂರಿನ ಮಣಿಪಾಲ್ ಆಸ್ಪತ್ರೆಯ ವೈದ್ಯರ ತಂಡವು ತುಂಡಾಗಿದ್ದ ಕೈಯನ್ನು ಜೋಡಿಸುವ ಮೂಲಕ ಅತ್ಯಂತ ಕ್ಲಿಷ್ಟಕರವಾದ ಶಸ್ತ್ರಚಿಕಿತ್ಸೆಯನ್ನು ಯಶಸ್ವಿಯಾಗಿ ನಡೆಸಿದೆ.

ಕೈಗಾರಿಕಾ ಸ್ಥಳದಲ್ಲಿ ಸಂಭವಿಸಿದ ಅಪಘಾತದಲ್ಲಿ ಯುವ ಕಾರ್ಮಿಕರೊಬ್ಬರ ಕೈಯಿಂದ ಹಸ್ತವು ತುಂಡರಿಸಿತ್ತು. ಕುಟುಂಬದ ಏಕೈಕ ಜೀವನಾಧಾರವಾಗಿದ್ದ ಈತನ ಎಡಗೈ ಮಣಿಕಟ್ಟಿನ ಬಳಿ ಕತ್ತರಿಸಿದ ಎರಡು ಗಂಟೆಗಳಲ್ಲಿ ಈತನನ್ನು ಆಸ್ಪತ್ರೆಗೆ ಕರೆತರಲಾಯಿತು.

ಹಿರಿಯ ಆರ್ಥೋಪೆಡಿಕ್ ಜಾಯಿಂಟ್ ರಿಪ್ಲೇಸ್‌ಮೆಂಟ್ ಸರ್ಜನ್ ಡಾ.ಅಜಯ್ ಹೆಗ್ಡೆ ನೇತೃತ್ವದ ತಂಡವು ಪ್ರಥಮವಾಗಿ ಮುರಿದ ಮೂಳೆಯನ್ನು ಸ್ಥಿರಗೊಳಿಸಿತು. ಬಳಿಕ ವಿವಿಧ ಚಿಕಿತ್ಸಾ ಕ್ರಮಗಳ ನಂತರ ಶಸ್ತ್ರಚಿಕಿತ್ಸಕ ಡಾ.ಎನ್.ವಿಜಯ್‌ಕುಮಾರ್ ನೇತೃತ್ವದ ಪ್ಲಾಸ್ಟಿಕ್ ಮತ್ತು ಪುನರ್ ನಿರ್ಮಾಣ ಶಸ್ತ್ರಚಿಕಿತ್ಸ ತಂಡವು ಮುಂದಿನ ಶಸ್ತ್ರಚಿಕಿತ್ಸಾ ಪ್ರಕ್ರಿಯೆ ನಡೆಸಿತು. ಈ ಕಾರ್ಯವಿಧಾನವು ಐದು ಗಂಟೆಗಳಿಗಿಂತ ಹೆಚ್ಚು ಕಾಲ ನಡೆಯಿತು.

ಈ ಶಸ್ತ್ರಚಿಕಿತ್ಸೆಗೆ ಅರಿವಳಿಕೆಶಾಸ್ತ್ರಜ್ಞರ ತಂಡದ ಡಾ.ಮಂಜುನಾಥ, ಡಾ.ಸ್ವಾತಿ ಮತ್ತು ಡಾ.ಬಾಲಸುಬ್ರಮಣಿಯನ್ ಸಹಕಾರ ನೀಡಿದರು. ಅಲ್ಲದೆ, ಡಾ.ಮಹದೇವ್ ನೇತೃತ್ವದ ಐಸಿಯು ಹಾಗೂ ಆಪರೇಷನ್ ಥಿಯೇಟರ್ ತಂಡದ ಸಮನ್ವಯತೆಯ ಸಹಕಾರವೂ ಈ ಶಸ್ತ್ರಚಿಕಿತ್ಸೆ ಯಶಸ್ವಿಯಾಗಲು ಕಾರಣವಾಯಿತು.

ಈ ಎಲ್ಲಾ ಸಾಮಾಜಿಕ-ಆರ್ಥಿಕ ಹಿನ್ನೆಲೆಯ ವ್ಯಕ್ತಿಗಳಿಗೆ ವಿಶೇಷ ನಿಖರತೆಯ ಆರೋಗ್ಯ ಸೇವೆ ಕೈಗೆಟಕುವಂತೆ ಮಾಡುವಲ್ಲಿ ಮಣಿಪಾಲ್ ಗ್ರೂಪ್‌ನ ನಿರಂತರ ಬದ್ಧತೆಯ ಭಾಗವಾಗಿ ಮಣಿಪಾಲ್ ಫೌಂಡೇಷನ್ ಈ ಪ್ರಕರಣದಲ್ಲಿ ಹಣಕಾಸಿನ ನೆರವು ನೀಡಿದೆ ಎಂದು ಆಸ್ಪತ್ರೆಯ ಪ್ರಕಟಣೆ ತಿಳಿಸಿದೆ.

ಬೆಂಬಲ ಬೆಲೆಯಡಿ ಮೆಕ್ಕೆಜೋಳ ಖರೀದಿಗೆ ಮೈಸೂರಲ್ಲೂ ಕೇಂದ್ರ ತೆರೆದ ಕೆಎಂಎಫ್



ಮೈಸೂರು, ಡಿ.1- ಕರ್ನಾಟಕ ಹಾಲು ಮಹಾಮಂಡಳಿಯು ರೈತರಿಂದ ನೇರವಾಗಿ ಸರ್ಕಾರ ನಿಗದಿಪಡಿಸಿರುವ ಬೆಂಬಲ ಬೆಲೆ ಮೂಲಕ ಖರೀದಿಸುತ್ತಿದ್ದು, ಈ ಹಿನ್ನೆಲೆಯಲ್ಲಿ ಮೈಸೂರು ಜಿಲ್ಲಾ ಹಾಲು ಉತ್ಪಾದಕ ಸಹಕಾರ ಸಂಘಗಳ ನಿಯಮಿತದ ಸಹಕಾರ ಸಂಘಗಳ ಮೂಲಕವೂ ಖರೀದಿ ಕೇಂದ್ರ ತೆರೆದಿದೆ.

ಈ ಕುರಿತು ಪ್ರಕಟಣೆ ಹೊರಡಿಸಿರುವ ಮೈಸೂರು ಜಿಲ್ಲಾ ಹಾಲು ಒಕ್ಕೂಟಗಳ ಸಹಕಾರ ಸಂಘಗಳ ನಿಯಮಿತವು ಕರ್ನಾಟಕ ಹಾಲು ಮಹಾಮಂಡಳಿಯ ಒಡೆತನದ ಪಶು ಆಹಾರ ಘಟಕಗಳಿಗೆ ಪಶು ಆಹಾರ ಉತ್ಪಾದನೆಗೆ ಅವಶ್ಯವಿರುವ ಮೆಕ್ಕೆ ಜೋಳವನ್ನು ಕರ್ನಾಟಕ ಸರ್ಕಾರ ನಿಗದಿಪಡಿಸಿದ ಬೆಂಬಲ ಬೆಲೆ ಪ್ರತಿ ಕ್ವಿಂಟಲ್‌ಗೆ 2400ರೂ. (ಮೂಲ ಬೆಲೆ, ಎರಡು ಗೋಣಿಚೀಲದ ಮೊತ್ತ ಮತ್ತು ಸಾಗಾಣಿಕೆ ಮೊತ್ತ ಸೇರಿದಂತೆ) ರಂತೆ ಗುಣಮಟ್ಟ ನಿಬಂಧನೆಗೊಳಪಟ್ಟು ರೈತರಿಂದ ನೇರವಾಗಿ ಖರೀದಿಸಲು ತೀರ್ಮಾನವಾಗಿರುತ್ತದೆ.

ಅದರಂತೆ ಮೈಸೂರು ಜಿಲ್ಲೆಯ ರೈತರಿಂದ ಕರ್ನಾಟಕ ಹಾಲು ಮಹಾಮಂಡಳದ ಹಾಸನ ಪಶು ಆಹಾರ ಘಟಕಕ್ಕೆ ನಿಗದಿಪಡಿಸಿದ ದರದಲ್ಲಿ ಮೆಕ್ಕೆಜೋಳ ಖರೀದಿಸಲು ಪ್ರಕ್ರಿಯೆ ಆರಂಭವಾಗಿರುತ್ತದೆ. ಜಿಲ್ಲೆಯ ಹಾಲು ಉತ್ಪಾದಕರ ಸಹಕಾರ ಸಂಘಗಳ ಸಿಬ್ಬಂದಿ ಹಾಗು ಒಕ್ಕೂಟದ ನಿಯೋಜಿತ ಅಧಿಕಾರಿಗಳ ಸಮನ್ವಯದೊಂದಿಗೆ ಎನ್ ಇಎಂಎಲ್ ಸಂಸ್ಥೆ ಅಭಿವೃದ್ಧಿಪಡಿಸಿದ ಸಂವೃದ್ಧಿ ಹಾಗೂ ಸರ್ಕಾರದ ಫ್ರೂಟ್ಸ್ ತಂತ್ರಾಂಶದ ಮೂಲಕ ಖರೀದಿ ಮಾಡಲಾಗುವುದು.

ಮೆಕ್ಕೆಜೋಳ ಮಾರಾಟ ಮಾಡಲು ಆಸಕ್ತಿ ಇರುವ ರೈತರು ಮೈಸೂರು ಜಿಲ್ಲಾ ಹಾಲು ಒಕ್ಕೂಟದ ವ್ಯಾಪ್ತಿಯ ಹಾಲು ಉತ್ಪಾದಕರ ಸಹಕಾರ ಸಂಘಗಳ ಮುಖ್ಯ ಕಾರ್ಯನಿರ್ವಾಹಕರ ಮೂಲಕ ಇ ಸಮೃದ್ಧಿ ಹಾಗೂ ಫ್ರೂಟ್ಸ್ ತಂತ್ರಾಂಶದ ಮೂಲಕ ಸರಬರಾಜು ಮಾಡಬಹುದಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಮೈಸೂರು ಜಿಲ್ಲಾ ಹಾಲು ಒಕ್ಕೂಟದ ವ್ಯಾಪ್ತಿಯ ಎಲ್ಲಾ ತಾಲೂಕುಗಳ ಉಪಕಚೇರಿಗಳನ್ನು ಸಂಪರ್ಕಿಸಬಹುದಾಗಿದೆ. ಮೆಕ್ಕೆಜೋಳ ಮಾರಾಟಕ್ಕೆ ಪಿರಿಯಾಪಟ್ಟಣ 9036208200, ಹುಣಸೂರು 6366430855, ಹೆಚ್.ಡಿ. ಕೋಟೆ 6366430844 ಅನ್ನು ಸಂಪರ್ಕಿಸುವಂತೆ ಕೋರಿದ್ದಾರೆ.

ಉಳಿತಾಯ ಹಣವನ್ನು ರಾಷ್ಟ್ರೀಕೃತ ಬ್ಯಾಂಕ್, ಎಲ್‌ಐಸಿ, ಇನ್ನಿತರೆ ಸರ್ಕಾರಿ ಸಂಸ್ಥೆಗಳಲ್ಲಿ ಮಾತ್ರ ಠೇವಣಿ ಇರಿಸಿ

ಹಿರಿಯ ನಾಗರಿಕರಿಗೆ ಸುರಕ್ಷಾ ಹೂಡಿಕೆ ಕುರಿತು ಆರ್ಥಿಕ ಸಲಹೆಗಾರ ಅರವಿಂದ್‌ಕುಮಾರ್ ಸಲಹೆ



'ಹಿರಿಯ ನಾಗರಿಕರ ಆದಾಯ ತೆರಿಗೆಯಲ್ಲಿ ವಿನಾಯಿತಿಗಳು' ವಿಷಯ ಕುರಿತು ಆರ್ಥಿಕ ಸಲಹೆಗಾರ ಅರವಿಂದ ಕುಮಾರ್ ಮಾತನಾಡಿದರು.

ಮೈಸೂರು,ಡಿ.1(ಎಸ್‌ಪಿಎನ್)- ಹಿರಿಯರು ತಮ್ಮ ಜೀವಮಾನದ ಉಳಿತಾಯ ಹಣವನ್ನು ಸುಭದ್ರವಾಗಿಡಲು ರಾಷ್ಟ್ರೀಕೃತ ಬ್ಯಾಂಕ್, ಎಲ್‌ಐಸಿ ಹಾಗೂ ಇತರೆ ಸರ್ಕಾರಿ ಸಂಸ್ಥೆಗಳಲ್ಲಿ ಠೇವಣಿ ಇಡುವಂತೆ ಆರ್ಥಿಕ ಸಲಹೆಗಾರ ಅರವಿಂದ ಕುಮಾರ್ ಸಲಹೆ ನೀಡಿರು.

ಮೈಸೂರು ಜಯಲಕ್ಷ್ಮೀಪುರಂನಲ್ಲಿರುವ ಹಿರಿಯ ನಾಗರಿಕರ ಮಂಡಳಿ ವತಿಯಿಂದ ಏರ್ಪಡಿಸಿದ್ದ 'ಹಿರಿಯ ನಾಗರಿಕರ ಆದಾಯ ತೆರಿಗೆಯಲ್ಲಿ ವಿನಾಯಿತಿಗಳು' ವಿಷಯ ಕುರಿತು ಮಾತನಾಡಿದರು.

ಕೇಂದ್ರ ಸರ್ಕಾರ 60-80ನೇ ವರ್ಷದ ಹಿರಿಯ ನಾಗರಿಕರಿಗೆ ಆದಾಯ ತೆರಿಗೆಯಲ್ಲಿ 3 ಲಕ್ಷದವರೆಗೆ ವಿನಾಯ್ತಿ ಇದೆ. 80 ವರ್ಷ ಮೇಲ್ಪಟ್ಟ ಹಿರಿಯ ನಾಗರಿಕರಿಗೆ 5 ಲಕ್ಷದವರೆಗೆ ವಿನಾಯ್ತಿ ಇದೆ. ಇದರ ಜೊತೆಗೆ ವೈದ್ಯಕೀಯ ವಿಮೆಯಲ್ಲಿ 50 ಸಾವಿರ(80ಡಿ)ವರೆಗೆ ವಿನಾಯ್ತಿ ಇದೆ. ಅಂತೆಯೇ ಸೆಕ್ಷನ್ 80ಟಿಟಿಬಿ ಅಡಿಯಲ್ಲಿ ಬಡ್ಡಿ ಆದಾಯದ ಮೇಲೆ 50 ಸಾವಿರದವರೆಗೆ ವಿನಾಯ್ತಿ ಇದೆ ಎಂದರು.

ಕಾನೂನಿನ ಪ್ರಕಾರ 60 ವರ್ಷ ಮೇಲ್ಪಟ್ಟವರನ್ನು ಹಿರಿಯ ನಾಗರಿಕರೆಂದು ಕೇಂದ್ರ ಸರ್ಕಾರ ಪರಿಗಣಿಸಿದ್ದು, ಉಳಿತಾಯ ಮಾಡಬಹುದಾದ ಬ್ಯಾಂಕ್, ಇತರೆ ಸರ್ಕಾರಿ ಸಂಸ್ಥೆಗಳನ್ನು ಆಯ್ಕೆ ಮಾಡಿಕೊಂಡು ಹೂಡಿಕೆ ಮಾಡಬಹುದು. ಕೆಲವೊಂದು ಹಣಕಾಸು ವ್ಯವಹಾರ ನಡೆಸುವ ಸಂಸ್ಥೆಗಳು, ಸಣ್ಣಪುಟ್ಟ ವಿಷಯಕ್ಕೆ ಆರ್ಥಿಕವಾಗಿ ದಿವಾಳಿಯಾಗಿರುತ್ತದೆ. ಇಂತಹ ಕಂಪನಿಗಳ ಷೇರುಗಳ ಮೇಲೆ ಹೂಡಿಕೆ ಮಾಡುವಂತೆ ಸಲಹೆ ನೀಡಿದರು.

ಹಿರಿಯರ ನಾಗರಿಕರು ಕೃಷಿ ಜಮೀನಿನ ಮೇಲೆ ಇಲ್ಲವೇ ನಿವೇಶನದ ಮೇಲೆ ಹೂಡಿಕೆ ಮಾಡಿದರೂ ನಿಮ್ಮ ಹಣಕ್ಕೆ ಲಾಭ ಬರುತ್ತದೆ. ಆದರೆ, ಎಲ್ಲವೂ ಕಾನೂನು ಬದ್ಧವಾಗಿ ಹೂಡಿಕೆ ಮಾಡಬೇಕು. ಕಾನೂನು ಬದ್ಧವಲ್ಲದ ಹೂಡಿಕೆ ಮಾಡುವುದರ ಬಗ್ಗೆ ಎಚ್ಚರವಹಿಸಬೇಕು ಎಂದು ಸಲಹೆ ನೀಡಿದರು.

ವೇದಿಕೆಯಲ್ಲಿ ಹಿರಿಯ ನಾಗರಿಕರ ಮಂಡಳಿ ಅಧ್ಯಕ್ಷ ಡಾ.ಎಚ್.ಎಂ.ನಾಗರಾಜು, ಕಾರ್ಯದರ್ಶಿ ಕೆ.ಎನ್.ಕೃಷ್ಣ, ಉಪಾಧ್ಯಕ್ಷ ರಾಮನಾಥ್, ಎಸ್.ವಿ.ವೆಂಕಟೇಶ್, ಪಿ.ಎನ್. ಶ್ರೀಧರ್, ಡಿ.ಶ್ರೀನಿವಾಸ, ಸ್ವಾಮಿ, ಜಯಪಾಲ್ ಆರಾಧ್ಯ, ಎಂ.ಕೆ.ನಂಜಯ್ಯ ವಂದನಾರ್ಪಣೆ ಬಿ.ಎನ್.ಶ್ರೀಧರ್ ನಡೆಸಿಕೊಟ್ಟರು.

ಸಹಾಯ ಧನಕ್ಕೆ ಅರ್ಜಿ ಆಹ್ವಾನ

ಮೈಸೂರು, ಡಿ.1- ಪಿರಿಯಾಪಟ್ಟಣ ತಾಲೂಕಿನ ಮೀನುಗಾರಿಕೆ ಇಲಾಖೆ ವತಿಯಿಂದ 2025-26ನೇ ಸಾಲಿನಲ್ಲಿ ಮೀನುಗಾರಿಕೆ ಇಲಾಖೆಯ ಪ್ರಧಾನಮಂತ್ರಿ ಮತ್ಸ್ಯ ಸಂಪದ ಯೋಜನೆಯ ಧರ್ತಿ ಆಭಾ ಜನಜಾತೀಯ ಗ್ರಾಮ ಉತ್ಕರ್ಷ ಅಭಿಯಾನದಡಿ ದ್ವಿಚಕ್ರ, ತ್ರಿಚಕ್ರ ವಾಹನ ಖರೀದಿಗೆ ಮತ್ತು ಜೀವಂತ ಮೀನು ಮಾರಾಟ ಕೇಂದ್ರ ಸ್ಥಾಪನೆಗೆ ಭೌತಿಕ ಗುರಿಗಳನ್ನು ಮೈಸೂರು ಜಿಲ್ಲೆಗೆ ನಿಗದಿಪಡಿಸಿದೆ. ಈ ಯೋಜನೆಗೆ ಸರ್ಕಾರದ ವತಿಯಿಂದ ಶೇ.90 ಆರ್ಥಿಕ ನೆರವು ನೀಡಲಾಗುತ್ತಿದ್ದು, ಸಹಾಯಧನಕ್ಕಾಗಿ ಅರ್ಜಿ ಆಹ್ವಾನಿಸಲಾಗಿದೆ.

ಈ ಯೋಜನೆಗೆ ಪಿರಿಯಾಪಟ್ಟಣ ತಾಲೂಕಿನ ಕಲ್ಕೆರೆ, ಮಂಚದೇವನಹಳ್ಳಿ, ಅಬ್ಬಳತಿ ಸದರಿ ಗ್ರಾಮಗಳ ವ್ಯಾಪ್ತಿಯಲ್ಲಿ ವಾಸಿಸುವ ಬುಡಕಟ್ಟು ಸಮುದಾಯ, ಪರಿಶಿಷ್ಟ ಪಂಗಡಕ್ಕೆ ಸೇರಿದ ಮೀನುಗಾರರು ಹಾಗೂ ಮೀನು ಮಾರಾಟಗಾರರು ಈ ಯೋಜನೆಗಾಗಿ ಅರ್ಜಿ ಸಲ್ಲಿಸಲು ಅರ್ಹರಾಗಿದ್ದಾರೆ. ಅರ್ಜಿ ಹಾಗೂ ಅಗತ್ಯ ದಾಖಲೆಗಳನ್ನು ಡಿ.15ರ ಸಂಜೆ 5 ಗಂಟೆಯೊಳಗೆ ಪಿರಿಯಾಪಟ್ಟಣ ತಾಲೂಕಿನ ಮೀನುಗಾರಿಕೆ ಸಹಾಯಕ ನಿರ್ದೇಶಕರ ಕಚೇರಿಗೆ ಸಲ್ಲಿಸಬೇಕು. ಮಾಹಿತಿಗಾಗಿ ಪಿರಿಯಾಪಟ್ಟಣ ತಾಲೂಕಿನ ಮೀನುಗಾರಿಕೆ ಸಹಾಯಕ ನಿರ್ದೇಶಕರ ಕಛೇರಿಯನ್ನು ಸಂಪರ್ಕಿಸಬಹುದು.

ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಭೂಮಿ ಪೂಜೆ

ನಾಗಮಂಗಲ, ಡಿ.1– ತಾಲೂಕಿನ ಎ. ನಾಗತಿಹಳ್ಳಿ ಗ್ರಾಮದ ಮುಖ್ಯರಸ್ತೆಯಿಂದ ಅಳಿಸಂದ್ರ ಗ್ರಾಮದವರೆಗೆ ಮಾದರಿ ಗ್ರಾಮಕ್ಕೆ ಆಯ್ಕೆಯಾಗಿರುವ ಹಿನ್ನೆಲೆಯಲ್ಲಿ ಗ್ರಾಮ ಪರಿಮಿತಿಯೊಳಗೆ 5 ಕೋಟಿ ವೆಚ್ಚದಲ್ಲಿ ಕಾಂಕ್ರೀಟ್ ರಸ್ತೆ, 50 ಲಕ್ಷ ರೂ. ವೆಚ್ಚದ ವಿದ್ಯುತ್ ಕಾಮಗಾರಿಗೆ ಸಚಿವ ಎನ್.ಚಲುವರಾಯಸ್ವಾಮಿ ಭೂಮಿ ಪೂಜೆ ನೆರವೇರಿಸಿದರು.

ಬಳಿಕ ರಾಷ್ಟ್ರೀಯ ಹೆದ್ದಾರಿ ಬೆಳ್ಳೂರು ಕ್ರಾಸ್‌ನಿಂದ ಹೊಸಮನೆ ಗೇಟ್‌ವರೆಗೆ 2 ಕೋಟಿ ರೂ. ವೆಚ್ಚದ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಿ ಮಾತನಾಡಿದ ಸಚಿವರು, ತಾಲೂಕಿನ ಒಟ್ಟು 10 ಹಳ್ಳಿಗಳು ಮಾದರಿ ಗ್ರಾಮಕ್ಕೆ ಆಯ್ಕೆಯಾಗಿದ್ದು, ವಿದ್ಯುತ್ ಕಂಬ ಹಾಗೂ ದೀಪಗಳನ್ನು ಅಳವಡಿಸಿ ಕಾಂಕ್ರೀಟ್ ರಸ್ತೆ ಹಾಗೂ ಚರಂಡಿ ನಿರ್ಮಿಸಲಾಗುವುದು ಎಂದರು.

ಮುಂದಿನ 50 ವರ್ಷಗಳ ದೂರದೃಷ್ಟಿಯಿಂದ ಬೆಳ್ಳೂರು ಕ್ರಾಸ್ ರಸ್ತೆ ಬದಿ ಅಕ್ರಮವಾಗಿ ನಿರ್ಮಿಸಿಕೊಂಡಿರುವ ಅಂಗಡಿ ಮುಂಗಟ್ಟುಗಳನ್ನು ತೆರವುಗೊಳಿಸಿ, ಯಾವುದೇ ಒತ್ತಡಕ್ಕೆ ಮಣಿಯದೆ ರಸ್ತೆ ಅಗಲೀಕರಣಗೊಳಿಸಲಾಗುವುದು. ಇದಕ್ಕೆ ಸ್ಥಳೀಯರು ಸಹಕಾರ ನೀಡಬೇಕು ಎಂದು ಮನವಿ ಮಾಡಿದರು.

ಬೆಳ್ಳೂರ್ ಕ್ರಾಸ್‌ನಿಂದ ಜೋಡಿ ರಸ್ತೆ ಹಾಗೂ ಚರಂಡಿ ಸೇರಿದಂತೆ ನಾಗಮಂಗಲ ರಸ್ತೆಯ 500 ಮೀಟರ್ ದೂರದವರೆಗೆ ರಸ್ತೆ, ಚರಂಡಿ, ಬೀದಿ ದೀಪ ಸೇರಿದಂತೆ ಹೊಸ ಮನೆ ಗೇಟ್‌ವರೆಗೂ ಮರು ಡಾಂಬರೀಕರಣ ಮಾಡಲಾಗುವುದು ಹಾಗೂ ಬೆಳ್ಳೂರ್ ಕ್ರಾಸ್‌ನಿಂದ ಮಾರುತಿ ದೇವಸ್ಥಾನದವರೆಗೂ ಚರಂಡಿ ಹಾಗೂ ರಸ್ತೆ ವಿಭಜಕಕ್ಕೆ ವಿದ್ಯುತ್ ದೀಪ ಅಳವಡಿಸಲು ಕ್ರಮ ವಹಿಸಲಾಗುತ್ತದೆ ಎಂದರು.

ಈ ನಡುವೆ ತಹಸೀಲ್ದಾರ್ ಆದರ್ಶ್ ಹಾಗೂ ಲೋಕೋಪಯೋಗಿ ಇಲಾಖೆ ಅಧಿಕಾರಿಗಳು ಸಚಿವರ ಜೊತೆ ಪರಿಶೀಲನೆ ನಡೆಸಿದರು. ಈ ಕೆಲಸಕ್ಕೆ ಯಾರೇ ವಿರೋಧ ವ್ಯಕ್ತಪಡಿಸಿದರು ಹಾಗೂ ನನ್ನನ್ನು ಬೈದುಕೊಂಡರು ಸರಿ ಲೆಕ್ಕಿಸುವುದಿಲ್ಲ. ರಸ್ತೆಗೆ ಸೇರಿದ ಜಾಗ ಅಳತೆ ಮಾಡಿ ಅನಧಿಕೃತವಾಗಿ ನಿರ್ಮಿಸಿಕೊಂಡಿರುವ ಅಂಗಡಿ ಮುಂಗಟ್ಟುಗಳನ್ನು ಶೀಘ್ರ ತೆರವುಗೊಳಿಸಲು ಮತ್ತೆ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ನಂತರ ಬೆಳ್ಳೂರು ಪಟ್ಟಣ ವ್ಯಾಪ್ತಿಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲಾ ಕಟ್ಟಡ ನಿರ್ಮಾಣ ಕಾಮಗಾರಿಗೆ ಸಚಿವರು ಭೂಮಿ ಪೂಜೆ ನೆರವೇರಿಸಿದರು. ತಾಲೂಕಿನ ಕಂಚೀರಹಳ್ಳಿ ಗ್ರಾಮದಲ್ಲಿ ನೂತನವಾಗಿ ನಿರ್ಮಿಸಿರುವ ಅಂಗನವಾಡಿ ಕಟ್ಟಡ ಉದ್ಘಾಟಿಸಿದರು.

ಈ ವೇಳೆ ಡಿಸಿಸಿ ಬ್ಯಾಂಕ್ ಅಧ್ಯಕ್ಷ ಸಚಿನ್, ತಾಪಂ ಇಒ ಸತೀಶ್, ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ಅಧ್ಯಕ್ಷ ಮುದ್ದೇಗೌಡ, ಲೋಕೋಪಯೋಗಿ ಇಲಾಖೆ ವಿಭಾಗದ ಅಧೀಕ್ಷಕ ಇಂಜಿನಿಯರ್ ಕೇಶವ ಪ್ರಸಾದ್, ಎಇ ಇಮ್ರಾನ್, ಲಕ್ಷ್ಮಮ್ಮ, ಯಾಸೀನ್, ತಾಪಂ ಮಾಜಿ ಉಪಾಧ್ಯಕ್ಷ ವೆಂಕಟೇಶ್, ಸುರೇಂದ್ರ ಸೇರಿದಂತೆ ಹಲವರಿದ್ದರು.


ಅಭಿವೃದ್ಧಿ ಕಾಮಗಾರಿಗೆ ಸಚಿವ ಚಲುವರಾಯಸ್ವಾಮಿ ಭೂಮಿ ಪೂಜೆ ನೆರವೇರಿಸಿದರು.

ಫಲಾನುಭವಿಗಳಿಗೆ ಸಾಧನ ಸಲಕರಣೆ ವಿತರಣೆ

ಕೆ.ಆರ್.ಪೇಟೆ, ಡಿ.1– ಡಾ.ಬಿ.ಆರ್. ಅಂಬೇಡ್ಕರ್ ನಿಗಮದ ವತಿಯಿಂದ ಗಂಗಾ ಕಲ್ಯಾಣ ಯೋಜನೆಯಡಿ ತಾಲೂಕಿನ 16 ದಲಿತ ಸಮುದಾಯದ ಅರ್ಹ ಫಲಾನುಭವಿಗಳಿಗೆ ಸಬ್ ಮರ್ಸಿಬಲ್ ಪಂಪ್ ಸೇರಿದಂತೆ ಸಾಧನ ಸಲಕರಣೆಗಳನ್ನು ಶಾಸಕ ಹೆಚ್.ಟಿ.ಮಂಜು ವಿತರಿಸಿದರು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ಫಲಾನುಭವಿಗಳಿಗೆ ಸಲಕರಣೆಗಳನ್ನು ವಿತರಿಸಿ ಮಾತನಾಡಿದ ಶಾಸಕರು, ಸರ್ಕಾರ ನೀಡುತ್ತಿರುವ ಸೌಲಭ್ಯಗಳನ್ನು ನೇರವಾಗಿ ಅರ್ಹರಿಗೆ ತಲುಪಿಸುವ ಕೆಲಸ ಮಾಡುತ್ತಿದ್ದೇನೆ. ರಾಜ್ಯ ಸರ್ಕಾರ ಎಸ್‌ಸಿ, ಎಸ್‌ಟಿ ಸಮುದಾಯಗಳ ಅಭಿವೃದ್ಧಿಗೆ ಬಳಸಬೇಕಾದ ಸಾವಿರಾರು ಕೋಟಿಗಳನ್ನು ಗ್ಯಾರಂಟಿ ಯೋಜನೆಗಳಿಗೆ ಬಳಸಿಕೊಂಡಿದೆ. ಇದರಿಂದ ದಲಿತ ಬಂಧುಗಳಿಗೆ ಹೆಚ್ಚಿನ ಸೌಲಭ್ಯ ಒದಗಿಸಿಕೊಡಲು ಸಾಧ್ಯವಾಗುತ್ತಿಲ್ಲ. ಆದರೂ ಕೊಡುವಂತಹ ಅನುದಾನವನ್ನು ಅರ್ಹರಿಗೆ ಹಾಗೂ ಅಗತ್ಯ ಇರುವ ಗ್ರಾಮಗಳ ದಲಿತ ಬಂಧುಗಳು ವಾಸಿಸುವ ಬಡಾವಣೆಗಳಿಗೆ ಯಾವುದೇ ತಾರತಮ್ಯ ಮಾಡದೇ ಹಂಚಿಕೆ ಮಾಡುತ್ತಿದ್ದೇನೆ. 2028ಕ್ಕೆ ನಮ್ಮ ಜೆಡಿಎಸ್–ಬಿಜೆಪಿ ಮೈತ್ರಿ ಪಕ್ಷ ಅಧಿಕಾರಕ್ಕೆ ಬರುವುದು ಖಚಿತ. ಆಗ ನಾವು ನನಗೆ ಮತ್ತೊಮ್ಮೆ ಶಾಸಕನಾಗಿ ತಮ್ಮ ಸೇವೆ ಮಾಡುವ ಅವಕಾಶ ನೀಡಿದರೆ ದಲಿತ ಬಂಧುಗಳು ಸೇರಿದಂತೆ ತಾಲೂಕಿನ ಎಲ್ಲಾ ಸಮುದಾಯಗಳ ಸಮಗ್ರ ಅಭಿವೃದ್ಧಿಗೆ ಶ್ರಮಿಸುತ್ತೇನೆ ಎಂದು ಭರವಸೆ ನೀಡಿದರು.

ದಲಿತ ಬಂಧುಗಳು ತಮಗೆ ಮೀಸಲಿಟ್ಟ ಸುಮಾರು 11 ಸಾವಿರ ಕೋಟಿಗೂ ಹೆಚ್ಚು ಅನುದಾನವನ್ನು ಗ್ಯಾರಂಟಿ ಯೋಜನೆಗಳಿಗೆ ಬಳಸಿಕೊಂಡಿದ್ದರೂ ಪ್ರತಿಭಟನೆ ನಡೆಸದಿರುವುದು ಸರಿಯಲ್ಲ. ಮುಂದಿನ ದಿನಗಳಲ್ಲಿ ಯಾವುದೇ ಸರ್ಕಾರವು ಸಂವಿಧಾನ ಬದ್ಧವಾಗಿ ಮೀಸಲಿಟ್ಟ ಅನುದಾನವನ್ನು ಬೇರೆ ಉದ್ದೇಶಕ್ಕೆ ಬಳಕೆ ಮಾಡಿಕೊಂಡರೆ ಹೋರಾಟ ಮಾಡುವ ಮನೋಭಾವನೆ ಬೆಳೆಸಿಕೊಳ್ಳಬೇಕು ಎಂದರು.

ಈ ವೇಳೆ ಟಿಎಪಿಸಿಎಂಎಸ್ ನಿರ್ದೇಶಕರಾದ ಎಂ.ಮೋಹನ್, ದಿಲೀಪ್ ಕುಮಾರ್, ಎಪಿಎಂಸಿ ಮಾಜಿ ಅಧ್ಯಕ್ಷ ಮಲ್ಲೇಶ್, ಗ್ರಾಮ ಸದಸ್ಯ ಯೋಗಣ್ಣ, ಮಲ್ಲೇಶ್, ಶಾಸಕರ ಆಪ್ತಸಹಾಯಕ ಪ್ರಶಾಂತ್ ಹಾಗೂ ಡಾ.ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮದ ಅಧಿಕಾರಿಗಳು ಹಾಗೂ ದಲಿತ ಮುಖಂಡರು, ಫಲಾನುಭವಿಗಳು ಉಪಸ್ಥಿತರಿದ್ದರು.


ಫಲಾನುಭವಿಗಳಿಗೆ ಸಾಧನ ಸಲಕರಣೆಗಳನ್ನು ಶಾಸಕ ಹೆಚ್.ಟಿ.ಮಂಜು ವಿತರಿಸಿದರು.

ಚಿರತೆ ಹಾವಳಿ: ಹಗಲು ವೇಳೆ ವಿದ್ಯುತ್ ಪೂರೈಕೆಗೆ ಸೂಚನೆ


ದರ್ಶನ್

ಪಾಂಡವಪುರ, ಡಿ.1– ಚಿರತೆ ಹಾವಳಿ ಹೆಚ್ಚುತ್ತಿರುವುದರಿಂದ ರೈತರ ಜಮೀನುಗಳಿಗೆ ಹಗಲು ವೇಳೆ ವಿದ್ಯುತ್ ಪೂರೈಕೆ ಮಾಡುವಂತೆ ಸೆಸ್ಕ್ ಅಧಿಕಾರಿಗಳಿಗೆ ಶಾಸಕ ದರ್ಶನ್ ಪುಟ್ಟಣ್ಣಯ್ಯ ಸೂಚನೆ ನೀಡಿದರು.

ತಾಲೂಕಿನ ದೊಡ್ಡಬ್ಯಾಡರಹಳ್ಳಿ ಗ್ರಾಪಂನಲ್ಲಿ ನಡೆದ ಸರ್ಕಾರಿ ಸೇವೆ ಮನೆ ಬಾಗಿಲಿಗೆ ಕಾರ್ಯಕ್ರಮದಲ್ಲಿ ರೈತರು ಶಾಸಕರ ಬಳಿ ಮನವಿ ಮಾಡಿದ ಹಿನ್ನೆಲೆಯಲ್ಲಿ ಶಾಸಕ ದರ್ಶನ್ ಪುಟ್ಟಣ್ಣಯ್ಯ ಅಧಿಕಾರಿಗಳಿಗೆ ಸೂಚಿಸಿದರು.

ದೊಡ್ಡಬ್ಯಾಡರಹಳ್ಳಿ ಹಾಲು ಉತ್ಪಾದಕರ ಸಂಘದ ಅಧ್ಯಕ್ಷ ಚಂದ್ರು ಮಾತನಾಡಿ, ಕಳೆದ ಹಲವು ವರ್ಷಗಳಿಂದ ನಾವು ಚಿರತೆ ಹಾವಳಿ ಸಮಸ್ಯೆ ಎದುರಿಸುತ್ತಿದ್ದೇವೆ. ಅರಣ್ಯ ಇಲಾಖೆ ಸಿಬ್ಬಂದಿ ಅತ್ಯಂತ ಬೇಜವಾಬ್ದಾರಿಯಿಂದ ನಡೆದುಕೊಳ್ಳುತ್ತಿದೆ. 800 ಎಕರೆಗೂ ಹೆಚ್ಚಿನ ವ್ಯಾಪ್ತಿಯ ಕಾಡಿರುವ ಪ್ರದೇಶವಿದು. ಈ ಕಾಡಿಗೆ ಅಂಟಿಕೊಂಡಂತೆ ಗ್ರಾಮಗಳಿದ್ದು, ಚಿರತೆಗಳು ಪದೇ ಪದೇ ಕಾಣಿಸಿಕೊಳ್ಳುತ್ತಿವೆ. ಅರಣ್ಯ ಇಲಾಖೆ ಸಿಬ್ಬಂದಿ ಚಿರತೆಗಳನ್ನು ಸೆರೆ ಹಿಡಿದು ಕಾಡಿಗೆ ಬಿಡುತ್ತೇವೆ ಎಂಬುದಾಗಿ ಹೇಳುತ್ತಾರೆ. ಆದರೆ ಆ ಚಿರತೆಗಳು ಮತ್ತೆ ಊರುಗಳಿಗೆ ಬಂದು ಪ್ರಾಣಿಗಳ ಮೇಲೆ ದಾಳಿ ನಡೆಸುತ್ತಿವೆ ಎಂದು ಸಮಸ್ಯೆ ವಿವರಿಸಿದರು.

ಸರ್ಕಾರ ರಾತ್ರಿ ವೇಳೆ ವಿದ್ಯುತ್ ನೀಡುವುದರಿಂದ ರೈತರು ತಮ್ಮ ಜೀವ ಕೈಯಲ್ಲಿ ಹಿಡಿದು ಜಮೀನಿಗೆ ನೀರು ಹರಿಸಲು ಹೋಗಬೇಕಾಗಿದೆ. ಬದಲಿಗೆ ಹಗಲು ವೇಳೆ ವಿದ್ಯುತ್ ಲಭ್ಯವಾದರೆ, ಚಿರತೆ ಭೀತಿಯಿಂದ ಸ್ವಲ್ಪ ನಿರಾಳವಾಗಬಹುದು. ಆದರೆ ಬೆಸ್ಕಾಂ ಸ್ಪಂದಿಸುತ್ತಿಲ್ಲ ಎಂದು ಗ್ರಾಮಸ್ಥರು ದೂರಿದರು.

ಹೆಚ್.ಡಿ.ಕೋಟೆಯಲ್ಲಿ ಹುಲಿ ದಾಳಿ ಹಿನ್ನೆಲೆಯಲ್ಲಿ ಸರ್ಕಾರ ಹಗಲು ವೇಳೆ ವಿದ್ಯುತ್ ಪೂರೈಸುವುದಕ್ಕೆ ಕ್ರಮ ಕೈಗೊಂಡಿತು. ಅದೇ ರೀತಿ ನಮ್ಮ ಭಾಗದಲ್ಲೂ ಕ್ರಮ ಕೈಗೊಂಡರೆ ರೈತರಿಗೆ ಅನುಕೂಲವಾಗುವುದು ಎಂದು ಗ್ರಾಮಸ್ಥರು ಆಗ್ರಹಿಸಿದರು.

ಸ್ಥಳದಲ್ಲಿದ್ದ ವಿದ್ಯುತ್ ಇಲಾಖೆ ಪಾಂಡವಪುರ ಇಇ ವಿನುತಾ, ಎಇಇ ರವೀಂದ್ರ ಕುಮಾರ್ ಹಾಗೂ ಎಇ ಸುಷ್ಮಾ ಅವರು ರೈತರಿಂದ ಮಾಹಿತಿ ಪಡೆದು ಅಗತ್ಯ ಕ್ರಮ ಕೈಗೊಳ್ಳುವುದಾಗಿ, ಶಾಸಕರಿಗೆ ಹಾಗೂ ಗ್ರಾಮಸ್ಥರಿಗೆ ಭರವಸೆ ನೀಡಿದರು.

ಗುಮ್ಮನಹಳ್ಳಿ ಡೇರಿ ಮೇಲಂತಸ್ತಿನ ಕಾಮಗಾರಿಗೆ ಚಾಲನೆ

ಪಾಂಡವಪುರ, ಡಿ.1– ತಾಲೂಕಿನ ಗುಮ್ಮನಹಳ್ಳಿ ಹಾಲು ಉತ್ಪಾದಕರ ಸಹಕಾರ ಸಂಘದ ಮೇಲಂತಸ್ತಿನ ಕಾಮಗಾರಿಗೆ ಮನ್‌ಮುಲ್ ನಿರ್ದೇಶಕ ಸಿ.ಶಿವಕುಮಾರ್ ಸೋಮವಾರ ಚಾಲನೆ ನೀಡಿದರು.

ಬಳಿಕ ಮಾತನಾಡಿದ ಅವರು, ಗುಮ್ಮನಹಳ್ಳಿ ಡೇರಿ ಆರ್ಥಿಕವಾಗಿ ಸದೃಢವಾಗಿದ್ದು, ಆಡಳಿತ ಮಂಡಳಿಯವರು ಸೇರಿ ಸಂಘದ ಮೇಲಂತಸ್ಥಿನ ಕಟ್ಟಡ ನಿರ್ಮಿಸಲು ಮುಂದಾಗಿದ್ದಾರೆ. ಒಕ್ಕೂಟದಿಂದ ದೊರೆಯುವ ಅನುದಾನವನ್ನು ಕೊಡಿಸುವ ಕೆಲಸ ಮಾಡುತ್ತೇನೆ ಎಂದು ಭರವಸೆ ನೀಡಿದರು.

ಸಂಘದ ಅಧ್ಯಕ್ಷ ಜಿ.ಎಸ್.ಪುರುಷೋತ್ತಮ್ ಮಾತನಾಡಿ, ಸಂಘದ ಮೇಲಂತಸ್ಥಿನ ಕಟ್ಟಡ ನಿರ್ಮಾಣಕ್ಕೆ ಮನ್‌ಮಲ್ ನಿರ್ದೇಶಕರು, ಅಧಿಕಾರಿಗಳು ಹೆಚ್ಚಿನ ಅನುದಾನ ನೀಡಬೇಕು. ಜೊತೆಗೆ ಸಂಘಕ್ಕೆ ಬಿಎಂಸಿ ಕೇಂದ್ರ ಮಂಜೂರು ಮಾಡಿಸಿಕೊಡಬೇಕು ಎಂದು ಮನವಿ ಮಾಡಿದರು.

ಮನ್‌ಮುಲ್ ಉಪವ್ಯವಸ್ಥಾಪಕ ಆರ್.ಪ್ರಸಾದ್, ಮಾರ್ಗ ವಿಸ್ತರಣಾಧಿಕಾರಿ ನಾಗೇಂದ್ರಕುಮಾರ್, ಡೇರಿ ಅಧ್ಯಕ್ಷ ಜಿ.ಎಸ್.ಪುರುಷೋತ್ತಮ್, ಉಪಾಧ್ಯಕ್ಷ ಜಿ.ಎಸ್.ಮಂಜುನಾಥ್, ನಿರ್ದೇಶಕರಾದ ಎನ್.ಜಗದೀಶ್, ಶ್ರೀನಿವಾಸೇಗೌಡ, ಮೀನಾಕ್ಷಿ, ಜಯಮ್ಮ, ನಾಗೇಂದ್ರ ಜಿ.ಎಸ್, ಚಂದ್ರ, ಮಧುಸೂದನ್, ಶೀಲಾ, ಅನುಸೂಯ, ಸುವರ್ಣ, ಕಾರ್ಯದರ್ಶಿ ಅಪ್ಪಾಜಿ ಹೆಗ್ಗಡೆ.ಜಿ.ಡಿ., ಪರೀಕ್ಷ ರವೀಂದ್ರ, ಸಿಬ್ಬಂದಿಗಳಾದ ಕೆಂಡಪ್ಪ, ಚೆನ್ನಮ್ಮ, ಗ್ರಾಪಂ ಸದಸ್ಯ ಶ್ರೀನಿವಾಸ್, ಅಶ್ವಿನಿ ಜಿ., ಎಸ್‌ಡಿಎಂಸಿ ಅಧ್ಯಕ್ಷ ಕುಮಾರ್, ಮುಖಂಡರಾದ ಶ್ಯಾಮ್ ಶೆಟ್ಟಿ, ಶ್ರೀಕಂಠೇಗೌಡ, ನೀಲಕಂಠೇಗೌಡ, ಜಿ.ಕೆ.ಕುಮಾರ್, ರವಿಣ್ಣ, ಮಂಜುನಾಥ್, ಪ್ರಕಾಶ್, ಕುಮಾರ್, ಬಲರಾಮ್, ಎನ್.ಪ್ರಕಾಶ್ ಸೇರಿದಂತೆ ಹಲವು ಮುಖಂಡರು, ಗ್ರಾಮಸ್ಥರಿದ್ದರು.


ಡೇರಿ ಮೇಲಂತಸ್ತಿನ ಕಾಮಗಾರಿಗೆ ಮನ್‌ಮುಲ್ ನಿರ್ದೇಶಕ ಸಿ.ಶಿವಕುಮಾರ್ ಚಾಲನೆ ನೀಡಿದರು.


ತರಬೇತಿಗೆ ಅರ್ಜಿ ಆಹ್ವಾನ

ಮಂಡ್ಯ, ಡಿ.1– ಕರ್ನಾಟಕ ರಾಜ್ಯ ಬ್ರಾಹ್ಮಣ ಅಭಿವೃದ್ಧಿ ಮಂಡಳಿ ಬ್ರಾಹ್ಮಣ ಸಮುದಾಯದ ಪದವೀಧರರು ನಾಗರಿಕ ಸೇವೆಗಳಾದ ಐಎಎಸ್ ಅಥವಾ ಕೆಎಎಸ್ ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿ ಪಡೆಯಲು ಪ್ರಸಕ್ತ ಸಾಲಿನಲ್ಲಿ ಪ್ರವೇಶಾತಿ ಪಡೆದು ಪಾವತಿಸಲಾದ ತರಬೇತಿ ಶುಲ್ಕದ ಮೊತ್ತದಲ್ಲಿ ಗರಿಷ್ಠ ಒಂದು ಲಕ್ಷ ರೂ. ಗಳಿಗೆ ಮಿತಿಗೊಳಿಸಿ ಡಿಬಿಟಿ ಮೂಲಕ ನೇರವಾಗಿ ವಿದ್ಯಾರ್ಥಿಗಳಿಗೆ ಶುಲ್ಕ ಮರು ಪಾವತಿಗಾಗಿ ಆಸಕ್ತ ಅಭ್ಯರ್ಥಿಗಳಿಂದ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.

ಅರ್ಜಿಯನ್ನು ಡಿ.15 ರೊಳಗಾಗಿ ಆನ್‌ಲೈನ್ http://ksbdb.karnataka.gov.in ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗೆ ಜಿಲ್ಲಾ ಕೌಶಲ್ಯಾಭಿವೃದ್ಧಿ ಅಧಿಕಾರಿಗಳ ಕಚೇರಿ ಅಥವಾ ದೂರವಾಣಿ ಸಂಖ್ಯೆ 08232–295010, 9964181442 ಸಂಪರ್ಕಿಸಬಹುದಾಗಿದೆ.

ಧರಣಿ ನಿರತರೊಂದಿಗೆ ಕೇಂದ್ರ ಸಚಿವ ಕುಮಾರಸ್ವಾಮಿ ಮಾತುಕತೆ

ನವದೆಹಲಿಗೆ ಬರುವಂತೆ ಆಹ್ವಾನ: ಸಂಬಂಧಿಸಿದವರೊಂದಿಗೆ ಸಭೆ ನಡೆಸುವ ಭರವಸೆ



ನವದೆಹಲಿ, ಡಿ.1– ವಿವಿಧ ಬೇಡಿಕೆ ಈಡೇರಿಸುವಂತೆ ಒತ್ತಾಯಿಸಿ ಮಂಡ್ಯದಲ್ಲಿ ಧರಣಿ ನಡೆಸುತ್ತಿರುವ ಅಂಗನವಾಡಿ ಕಾರ್ಯಕರ್ತೆಯರ ಜೊತೆ ನವದೆಹಲಿಯಿಂದ ದೂರವಾಣಿಯಲ್ಲಿ ಮಾತನಾಡಿದ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರು, ಮಾತುಕತೆಗೆ ಬರುವಂತೆ ನವದೆಹಲಿಗೆ ಆಹ್ವಾನಿಸಿದ್ದಾರೆ.

ಜಿಲ್ಲಾಧಿಕಾರಿ ಡಾ.ಕುಮಾರ್ ಅವರ ಮೂಲಕ ರಾಜ್ಯ ಅಂಗನವಾಡಿ ನೌಕರರ ಸಂಘದ ಪದಾಧಿಕಾರಿ ಕುಮಾರಿ ಅವರೊಂದಿಗೆ ದೂರವಾಣಿಯಲ್ಲಿ ಮಾತನಾಡಿದ ಕೇಂದ್ರ ಸಚಿವರು ನೀವು ಚಳಿಯಲ್ಲಿ ರಸ್ತೆಯಲ್ಲಿ ಧರಣಿ ಕೂರುವುದು ಬೇಡ. ನಿಮ್ಮ ಸಂಘದ ಪ್ರತಿನಿಧಿಗಳಲ್ಲಿ 10 ಮಂದಿ ಪ್ರಮುಖರು ನವದೆಹಲಿಗೆ ಬನ್ನಿ. ನಾನೇ ಸಂಬಂಧಪಟ್ಟ ಸಚಿವರು, ಅಧಿಕಾರಿಗಳ ಜೊತೆ ಸಭೆ ಏರ್ಪಾಡು ಮಾಡಿಸುತ್ತೇನೆ. ನಾನೂ ನಿಮ್ಮ ಜೊತೆ ಸಭೆಯಲ್ಲಿ ಪಾಲ್ಗೊಳ್ಳುತ್ತೇನೆ. ಧರಣಿ ಕೊನೆಗೊಳಿಸಿ ದೆಹಲಿಗೆ ಬನ್ನಿ ಎಂದು ಕೋರಿದರು.

ನೀವು ಬಂದು ಹೋಗುವ ವಿಮಾನಯಾನ ವೆಚ್ಚ ಹಾಗೂ ದೆಹಲಿಯಲ್ಲಿ ವಸತಿ ವ್ಯವಸ್ಥೆಯನ್ನು ನಾನೇ ಕಲ್ಪಿಸುವೆ. ತಾಯಂದಿರು ಚಳಿಯಲ್ಲಿ ಬೀದಿಯಲ್ಲಿ ಇರುವುದು ಬೇಡ. ದಯಮಾಡಿ ಚರ್ಚೆಗೆ ಬನ್ನಿ ಎಂದು ಸಚಿವರು ವಿನಂತಿಸಿದರು. ಸಚಿವರ ಮಾತಿಗೆ ಸ್ಪಂದಿಸಿದ ಕುಮಾರಿ ಅವರು, ಈ ಬಗ್ಗೆ ಸಂಘದ ಪದಾಧಿಕಾರಿಗಳ ಜೊತೆ ಚರ್ಚೆ ನಡೆಸಿ ತಮಗೆ ತಿಳಿಸುವುದಾಗಿ ಹೇಳಿದರು. ದೂರವಾಣಿ ಮಾತುಕತೆ ನಡೆಸುವಾಗ ಅಂಗನವಾಡಿ ಕಾರ್ಯಕರ್ತೆಯರ ಜೊತೆ ಜಿಲ್ಲಾಧಿಕಾರಿ ಕುಮಾರ್ ಹಾಜರಿದ್ದರು.

ಇಂದು ವಿದ್ಯುತ್ ವ್ಯತ್ಯಯ

ಮಂಡ್ಯ, ಡಿ.1– ಹೊಸಹಳ್ಳಿ ಹಾಗೂ ಹೆಬ್ಬಕವಾಡಿ ಎನ್‌ಜೆವೈ ವಿದ್ಯುತ್ ಮಾರ್ಗದಲ್ಲಿ ತುರ್ತು ಕಾಮಗಾರಿ ಹಮ್ಮಿಕೊಂಡಿರುವುದರಿಂದ ಡಿ.2ರಂದು ಬೆಳಗ್ಗೆ 9 ರಿಂದ ಸಂಜೆ 6ರವರೆಗೆ ಹೊಸಹಳ್ಳಿ ಸರ್ಕಲ್, 100 ಅಡಿ ರಸ್ತೆ, ಹೊಸಹಳ್ಳಿ ಮೇನ್ ರಸ್ತೆ, ಹಾಲಹಳ್ಳಿ, ಹಾಲಹಳ್ಳಿ ಎಕ್ಸ್‌ಟೆನ್ಷನ್, ಹೊಸಹಳ್ಳಿ, ಹೊಸಹಳ್ಳಿ ಎಕ್ಸ್‌ಟೆನ್ಷನ್, ಶಂಕರಪ್ಪ ಲೇಔಟ್, ದ್ವಾರಕಾನಗರ ಚೀರನಹಳ್ಳಿ, ಹೆಬ್ಬಕವಾಡಿ, ಸಂತೆಕಸಲಗೆರೆ, ಮಂಗಳ, ಹನಿಯಾಂಬಾಡಿಯಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.

ಒಂದನೇ ಪುಟದಿಂದ

ಮಗು 'ಪತ್ತೆ' ಹಚ್ಚಿದ ಓರಿಯೋ!

ಹೋಗಿದ್ದಾಳೆ ಎಂದು ಹೇಳಲು ತೋಚಲಿಲ್ಲ.

ಈ ದಂಪತಿ ಮಾತ್ರವಲ್ಲದೇ ಇತರ ಕಾರ್ಮಿಕರು ಸೇರಿ ಕಾಫಿ ತೋಟದ ನಾಲ್ಕಾರು ಕಡೆ ಮುಖಮಾಡಿ ಮಗುವಿನ ಹೆಸರಿಡಿದು ಜೋರಾಗಿ ಕೂಗಿದರೂ ಯಾವುದೇ ಪ್ರತಿಕ್ರಿಯೆ ಬಂದಿಲ್ಲ. ಕತ್ತಲೆಯಾಗುತ್ತಲೇ ಮಂಜು ಕವಿದ ವಾತಾವರಣದೊಂದಿಗೆ ಮೈ ಕೊರೆಯುವ ಚಳಿ ಇದ್ದಿದ್ದರಿಂದ ಎಲ್ಲಾ ಕಾರ್ಮಿಕರೂ ಆತಂಕಗೊಂಡು ತೋಟದ ಮಾಲೀಕ ಶರಿ ಗಣಪತಿಯವರಿಗೆ ವಿಷಯ ಮುಟ್ಟಿಸಿದ್ದಾರೆ. ಕತ್ತಲಲ್ಲಿ ಅರಣ್ಯದಂತಿರುವ ಕಾಫಿ ತೋಟದಲ್ಲಿ ಮಗುವನ್ನು ಹುಡುಕುವುದು ಭಾರೀ ಕಷ್ಟದ ಕೆಲಸ. ಹಾಗಾಗಿ ಬಿ.ಶೆಟ್ಟಿಗೇರಿ ಗ್ರಾಪಂ ಅಧ್ಯಕ್ಷ ಕೊಲ್ಲಿರ ಬೋಪಣ್ಣ ಅರಣ್ಯ ಇಲಾಖೆ ಅಧಿಕಾರಿಗಳಿಗೆ ವಿಷಯ ಮುಟ್ಟಿಸಿದ್ದಾರೆ. ಡಿಸಿಎಫ್ ನೆಹರು, ಎಸಿಎಫ್ ಗೋಪಾಲ್, ಆರ್‌ಎಫ್‌ಓ ಶಂಕರ್ ನೇತೃತ್ವದಲ್ಲಿ 30ಕ್ಕೂ ಹೆಚ್ಚು ಸಿಬ್ಬಂದಿ ಕಾಫಿ ತೋಟಕ್ಕೆ ದೌಡಾಯಿಸಿದ್ದಾರೆ.

ಕಾರ್ಯಾಚರಣೆ: ಸರ್ಚ್‌ಲೈಟ್‌ಗಳೊಂದಿಗೆ ಮಗುವನ್ನು ಹುಡುಕುವ ಕಾರ್ಯಾಚರಣೆಯನ್ನು ರಾತ್ರಿಯೇ ಆರಂಭಿಸಿದ ಅರಣ್ಯ ಸಿಬ್ಬಂದಿಗೆ ಒಂದೆಡೆ ಹುಲಿ ಬೇಟೆಯಾಡಿ ತಿಂದು, ಬಿಟ್ಟಿದ್ದ ಕಾಡುಹಂದಿಯ ಕಳೇಬರ ಕಂಡುಬಂದಿದೆ. ಅದು ಮಾತ್ರವಲ್ಲದೇ ಹುಲಿಯ ಹೆಜ್ಜೆ ಗುರುತುಗಳು ಗೋಚರಿಸಿವೆ. ಎರಡು ವರ್ಷದ ಮಗು ಕಾಫಿ ತೋಟದಲ್ಲಿ, ದಟ್ಟ ಗಿಡಗಳ ನಡುವೆ ಹೆಚ್ಚು ದೂರ ಹೋಗಿರಲು ಸಾಧ್ಯವಿಲ್ಲ ಎಂದು ಎಲ್ಲರೂ ಭಾವಿಸಿದ್ದರು. ಆದರೆ, ಈ ಮಗು ಎತ್ತ ಹೋಗಿದೆ ಎಂಬುದರ ಸುಳಿವೇ ಇಲ್ಲ. ಅರಣ್ಯ ಸಿಬ್ಬಂದಿ, ಕಾರ್ಮಿಕರು, ಗ್ರಾಮಸ್ಥರು ಸೇರಿ ನಾನಾ ಕಡೆ ಮಗುವಿನ ಹೆಸರಿಡಿದು ಜೋರಾಗಿ ಕೂಗುತ್ತಾ ಹುಡುಕಿದರೂ ಯಾವುದೇ ಪ್ರತಿಕ್ರಿಯೆ ಬಾರದ ಕಾರಣ ಹಾಗೂ ಇದೇ ಭಾಗದಲ್ಲಿ ಹುಲಿಯ ಸಂಚಾರವಿರುವುದು ಖಚಿತವಾಗಿದ್ದರಿಂದ ಆತಂಕ ಮನೆ ಮಾಡಿತ್ತು. ಮಗುವಿನ ಪೋಷಕರಲ್ಲಂತೂ ದುಃಖ ಮಡುಗಟ್ಟಿತ್ತು. ಬೆಳಗ್ಗೆ 6 ಗಂಟೆಯಾದರೂ ಮಗುವಿನ ಸುಳಿವೇ ಇಲ್ಲ.


ಮಾಲೀಕ ಅನಿಲ್‌ನೊಂದಿಗೆ ಓರಿಯೋ

ಓರಿಯೋ ಎಂಟ್ರಿ!: ಅನಿಲ್ ಅವರ ಶ್ವಾನ ಓರಿಯೋ ನಡೆಸಿದ ಯಶಸ್ವಿ ಶೋಧಾ ಕಾರ್ಯದಿಂದಾಗಿ ರಾತ್ರಿಯಿಡೀ ಮಗುವನ್ನು ಹುಡುಕಾಡಿ ಆತಂಕದಿಂದ ಬಸವಳಿದಿದ್ದ ಅರಣ್ಯ ಸಿಬ್ಬಂದಿ, ಗ್ರಾಮಸ್ಥರು, ಮಗುವಿನ ಪೋಷಕರು, ಬೆಳೆಗಾರರ ಮುಖದಲ್ಲಿ ಮಂದಹಾಸ ಮೂಡಿತು. ಮಗುವನ್ನು ಸುರಕ್ಷಿತವಾಗಿ ಪೋಷಕರ ವಶಕ್ಕೆ ಒಪ್ಪಿಸಲಾಯಿತು. ಮಗು ಕಳೆದುಕೊಂಡ ಪೋಷಕರ ಆತಂಕವನ್ನು ದೂರ ಮಾಡಿದ ಓರಿಯೋನ ಕೊಂಡಾಡಿದ್ದೇ ಕೊಂಡಾಡಿದ್ದು. ಈ ಕಾರ್ಯಾಚರಣೆಯಲ್ಲಿ ಡಿಆರ್‌ಎಫ್‌ಓಗಳಾದ ಜೆ.ಕೆ. ಶ್ರೀಧರ್, ನಾಗೇಶ್, ದಿವಾಕರ್, ಮಂಜುನಾಥ್, ಕಿರಣ ಆಚಾರ್ಯ, ಗಸ್ತು ಅರಣ್ಯ ಪಾಲಕರಾದ ಪೊನ್ನಪ್ಪ, ಸೋಮಣ್ಣಗೌಡ, ಅಂತೋಣಿ ಪ್ರಕಾಶ್, ಗ್ರಾಪಂ ಅಧ್ಯಕ್ಷ ಕೊಲ್ಲಿರ ಬೋಪಣ್ಣ, ಕಡೆಮಾಡ ಅನಿಲ್ ಕಾಳಪ್ಪ, ಸಂತೋಷ್, ಸುಬ್ರಮಣಿ, ಶರತ್, ಆರ್‌ಆರ್‌ಟಿ ಸಿಬ್ಬಂದಿ, ಪೊಲೀಸ್ ಇನ್‌ಸ್ಪೆಕ್ಟರ್ ಪ್ರದೀಪ್‌ಕುಮಾರ್ ಸೇರಿದಂತೆ ನೂರಾರು ಮಂದಿ ಭಾಗವಹಿಸಿದ್ದರು.

ತನಿಖಾ ವರದಿ ಸರ್ಕಾರಕ್ಕೆ ಸಲ್ಲಿಕೆ

ಡಾ..ಕೆ.ಸುಧಾಕರ್‌ಗೆ ಸಂಕಷ್ಟ?: ನ್ಯಾ.ಮೈಕೆಲ್ ಡಿ ಕುನ್ಹಾ ಅವರ ವರದಿಯಲ್ಲಿ ಅಂದಿನ ಆರೋಗ್ಯ ಸಚಿವ ಡಾ.ಕೆ.ಸುಧಾಕರ್ ಪಾತ್ರದ ಬಗ್ಗೆ ಏನು ಉಲ್ಲೇಖ ಮಾಡಲಾಗಿದೆ ಎಂಬುವುದು ಸಾಕಷ್ಟು ಕುತೂಹಲಕ್ಕೆ ಕಾರಣವಾಗಿದೆ. ಇದೀಗ ವರದಿಯನ್ನು ಕೂಲಂಕುಷ ವಾಗಿ ಅಧ್ಯಯನ ಮಾಡಿ ಕಾನೂನು ಸಾಧ್ಯಾಸಾಧ್ಯತೆಗಳ ಬಗ್ಗೆ ಪರಿಶೀಲನೆ ಮಾಡಿ ಮುಂದಿನ ಹೆಜ್ಜೆ ಇಡುವ ಸಾಧ್ಯತೆ ಇದೆ.

ಏನಿದು ದುರಂತ? ಮೇ 2, 2021ರ ಮಧ್ಯರಾತ್ರಿ ಹಾಗೂ ಮೇ 3, 2021ರ ಬೆಳಗಿನ ಜಾವದ ನಡುವೆ ಚಾಮರಾಜನಗರ ಜಿಲ್ಲಾಸ್ಪತ್ರೆಯಲ್ಲಿ ಆಕ್ಸಿಜನ್ ಕೊರತೆ ಉಂಟಾಗಿ 36 ಮಂದಿ ಮೃತಪಟ್ಟಿದ್ದರು. ಬಿಜೆಪಿ ಸರ್ಕಾರದ ಅವಧಿಯಲ್ಲಿ ನಡೆದ ಈ ಘಟನೆ ಸರ್ಕಾರದ ವಿರುದ್ಧ ಜನರ ಆಕ್ರೋಶಕ್ಕೆ ಕಾರಣವಾಗಿತ್ತು. ಅಂದು ಆರೋಗ್ಯ ಸಚಿವರಾಗಿದ್ದ ಡಾ.ಕೆ.ಸುಧಾಕರ್ ವಿರುದ್ಧ ಕಾಂಗ್ರೆಸ್ ಮುಗಿಬಿದ್ದಿತ್ತು. ಅಲ್ಲದೆ, ಈ ವಿಚಾರವನ್ನು 2023ರ ವಿಧಾನಸಭೆ ಚುನಾವಣೆಯ ಅಸ್ತ್ರವಾಗಿ ಪ್ರಯೋಗ ಮಾಡಲಾಗಿತ್ತು. ರಾಹುಲ್ ಗಾಂಧಿ ಅವರ ಭಾರತ್ ಜೋಡೋ ಪಾದಯಾತ್ರೆಯ ಸಂದರ್ಭದಲ್ಲಿ ಆಕ್ಸಿಜನ್ ದುರಂತದಲ್ಲಿ ಮೃತಪಟ್ಟ ಕುಟುಂಬಸ್ಥರ ಜೊತೆಗೆ ಸಂವಾದ ಹಮ್ಮಿಕೊಳ್ಳಲಾಗಿತ್ತು.

ಡಿಜಿಟಲ್ ಇ–ಸ್ಟಾಂಪ್ ವ್ಯವಸ್ಥೆ ಜಾರಿ

ವರ್ಗೀಕರಣದಿಂದ ಸರ್ಕಾರಕ್ಕೆ ಸೇರುವ ಸ್ಟಾಂಪ್ ಶುಲ್ಕವನ್ನು ತಪ್ಪಿಸುವ ಘಟನೆಗಳು ನಡೆಯುತ್ತಿದ್ದು, ಇದು ಸರ್ಕಾರಕ್ಕೆ ಆದಾಯ ನಷ್ಟವನ್ನು ಉಂಟು ಮಾಡುತ್ತಿತ್ತು. ಇದನ್ನ ತಡೆಗಟ್ಟುವ ನಿಟ್ಟಿನಲ್ಲಿ ಡಿಜಿಟಲ್ ಇ–ಸ್ಟಾಂಪ್ ಕಡ್ಡಾಯ ಮಾಡಲಾಗಿದೆ.

ಸ್ವಯಂ ಸೇವಾ ಸೌಲಭ್ಯ: ನಾಗರಿಕರು ಯಾವುದೇ ಮಧ್ಯವರ್ತಿಗಳ ನೆರವಿಲ್ಲದೆ ಸ್ವತಃ ಡಿಜಿಟಲ್ ಇ–ಸ್ಟಾಂಪ್ ತಯಾರಿಸಿಕೊಳ್ಳಬಹುದು. ಈ ಸೇವೆ 24X7, ಮತ್ತು ಜಗತ್ತಿನೆಲ್ಲೆಡೆಯಿಂದ, ಇಂಟರ್ನೆಟ್ ಇದ್ದರೆ, ಲಭ್ಯ.

ಪೂರ್ಣ ಆನ್ಲೈನ್ ಮತ್ತು ಸುರಕ್ಷಿತ: ಎಲ್ಲಾ ಸೇವೆಗಳು ಸಂಪೂರ್ಣ ಡಿಜಿಟಲ್ ಆಗಿದ್ದು, ಸುರಕ್ಷಿತವಾಗಿ ಮತ್ತು ವೇಗವಾಗಿ ಆನ್ಲೈನ್ ಪಾವತಿ ಮಾಡಲು ಅವಕಾಶವಿದೆ. ಪಾವತಿ ವ್ಯವಸ್ಥೆ ಕೂಡ 24X7 ಕಾರ್ಯನಿರ್ವಹಿಸುತ್ತದೆ.

ದಸ್ತಾವೇಜಿನ ಭಾಗವೇ ಆಗುವ ಸ್ಟಾಂಪ್ ವಿಷಯ: ಸ್ಟಾಂಪ್ ವಿಷಯವು ದಸ್ತಾವೇಜಿನ ಅವಿಭಾಜ್ಯ ಭಾಗವಾಗುತ್ತದೆ. ಇದರಿಂದ ದುರುಪಯೋಗ, ಬದಲಾವಣೆ ಸಾಧ್ಯವಾಗುವುದಿಲ್ಲ.

ಡಿಜಿಟಲ್ ಸಹಿ: ನಾಗರಿಕರು Aadhaar ಆಧಾರಿತ e-Sign ಅಥವಾ DSC ಬಳಸಿ ದಸ್ತಾವೇಜುಗಳಿಗೆ ಡಿಜಿಟಲ್ ಸಹಿ ಮಾಡಬಹುದು.

ಡಿಜಿಟಲ್ ಇ–ಸ್ಟಾಂಪ್ ಪ್ರಮುಖ ವೈಶಿಷ್ಟ್ಯಗಳು: ನಾಗರಿಕರು ಮನೆಯಿಂದಲೇ ಇ–ಸ್ಟಾಂಪ್ ಸೃಷ್ಟಿಸಬಹುದು. ಸೇವೆಯು ದೇಶದಾದ್ಯಂತ 24X7 ಲಭ್ಯ ಸ್ಟಾಂಪ್ ವಿಷಯವು ದಸ್ತಾವೇಜಿನ ಭಾಗವಾಗಿರುವುದರಿಂದ ಯಾವುದೇ ಬದಲಾವಣೆ ಅಥವಾ ವಂಚನೆಯು ಸಹಿ ಮಾಡುವವರ ಜ್ಞಾನವಿಲ್ಲದೆ ಸಾಧ್ಯವಿಲ್ಲ. ಖಜಾನೆ ಪಾವತಿ ಗೇಟ್ವೇ ಮೂಲಕ ಪಾವತಿ ನೇರವಾಗಿ ಸರ್ಕಾರದ ಖಜಾನೆಗೆ ಸೇರುತ್ತದೆ–ಪೂರ್ಣ ಪಾರದರ್ಶಕ. ಗುರುತಿನ ವಂಚನೆ, ನಕಲಿ ಸಹಿ, ಹಾಗೂ ತಪ್ಪು ವ್ಯಕ್ತಿಗಳಿಂದ ಸಹಿಯನ್ನು ಸಂಪೂರ್ಣ ತಡೆಯುತ್ತದೆ. ಸಂಪೂರ್ಣ ಡಿಜಿಟಲ್ ಪ್ರಕ್ರಿಯೆ ಕಾಗದದ ಬಳಕೆಯನ್ನು ಕಡಿಮೆ ಮಾಡುತ್ತದೆ. ಡಿಜಿಟಲ್ ರೂಪದಲ್ಲಿ ಸಂಗ್ರಹಿಸಲಾದ ದಸ್ತಾವೇಜುಗಳು ಕಾನೂನುಬದ್ಧವಾಗಿವೆ, ಭೌತಿಕ ಪ್ರತಿಯ ಅವಶ್ಯಕತೆ ಇಲ್ಲ.

ಡಿಜಿಟಲ್ ಇ–ಸ್ಟಾಂಪ್ ಪಡೆಯುವುದು ಹೇಗೆ?

ಪೋರ್ಟಲ್‌ನಲ್ಲಿ ನೋಂದಣಿ: https://kaveri kamataka.gov.in/landing-page 1 ನೀಡಿ. ಒಂದೇ ಬಾರಿ ನೋಂದಣಿ ಮಾಡಿ ಖಾತೆ ಸೃಷ್ಟಿಸಿ, ಲಾಗಿನ್ ಆದ ನಂತರ ಬೇಕಾದ ದಸ್ತಾವೇಜಿನ ಪ್ರಕಾರ (ಉದಾ: ಬಾಡಿಗೆ ಒಪ್ಪಂದ, ಅಫಿಡವಿಟ್. ಮಾರಾಟ ಒಪ್ಪಂದ) ಆಯ್ಕೆ ಮಾಡಿ ವಿವರ ಭರ್ತಿ ಮಾಡಿ. ಅರ್ಜಿದಾರರು ಹಾಗೂ ಸಹಿ ಮಾಡುವ ಎಲ್ಲರೂ ಆಧಾರ್ ಆಧಾರಿತ ಪರಿಶೀಲನೆ ಮೂಲಕ ಗುರುತು ದೃಢೀಕರಿಸಬೇಕು ಆಸ್ತಿ ಸಂಬಂಧಿತ ದಸ್ತಾವೇಜುಗಳಿದ್ದರೆ, ಸಿಸ್ಟಂ ಸರಕಾರಿ ಡೇಟಾ ಬೇಸ್‌ಗಳಿಂದ ಆಸ್ತಿ ಮಾಹಿತಿಯನ್ನು ಸ್ವಯಂಚಾಲಿತವಾಗಿ ಪರಿಶೀಲಿಸುತ್ತದೆ. ನಿಮ್ಮ ಸ್ವಂತ ವಿಷಯವನ್ನು ಸೇರಿಸಿ ದಸ್ತಾವೇಜನ್ನು ಸಂಪೂರ್ಣವಾಗಿ ಡಿಜಿಟಲ್ ರೂಪದಲ್ಲಿ ತಯಾರಿಸಿ. ಸ್ಟಾಂಪ್ ಶುಲ್ಕ, ಲೆಕ್ಕ ಹಾಕಿದ ನಂತರ, ಖಜಾನೆ ಪಾವತಿ ಗೇಟ್ವೇ ಮೂಲಕ ಪಾವತಿ ಮಾಡಿ. ಪಾವತಿ ದೃಢಪಟ್ಟ ನಂತರ, ಸಿಸ್ಟಂ Des ಅನ್ನು ರಚಿಸುತ್ತದೆ. ಇದರಲ್ಲಿ ಯೂನಿಕ್ ಸೀರಿಯಲ್ ನಂಬರ್, QR ಕೋಡ್, ಡಿಜಿಟಲ್ ವಾಟರ್ ಮಾರ್ಕ್ ಇವೆಲ್ಲವೂ ಸೇರಿದ್ದು ದಸ್ತಾವೇಜನ್ನು ಅತ್ಯಂತ ಭದ್ರವಾಗಿ ಸುತ್ತವೆ. ಎಲ್ಲಾ ಸಹಿ ಮಾಡುವವರಿಗೆ ಅವರ ಮೊಬೈಲ್‌ಗೆ ಲಿಂಕ್ ಬರುತ್ತದೆ. ಅದರಲ್ಲಿ Aadhaar e-Sign ಅಥವಾ DSC ಮೂಲಕ ಸಹಿ ಮಾಡಬಹುದು. ಎಲ್ಲರೂ ಸಹಿ ಮಾಡಿದ ನಂತರ ನಿಮ್ಮ ಅಂತಿಮ ಸ್ಟಾಂಪ್ ಮಾಡಲ್ಪಟ್ಟ ಹಾಗೂ ಸಹಿ ಮಾಡಲ್ಪಟ್ಟ ದಸ್ತಾವೇಜು ಮಾನ್ಯವಾಗುತ್ತದೆ. ಇದನ್ನು ಡೌನ್ಲೋಡ್ ಮಾಡಬಹುದು ಹಾಗೂ ನೋಂದಣಿಗೆ ಬಳಸಬಹುದು.

ಇ–ಸ್ವತ್ತು 2.0 ತಂತ್ರಾಂಶಕ್ಕೆ ಚಾಲನೆ

ಬಡಾವಣೆಗಳಲ್ಲಿನ ನಿವೇಶನಗಳಿಗೆ 11'ಬಿ' ಖಾತೆ ಪಡೆಯಲು ಜಾತಕ ಪಕ್ಷಿಗಳಂತೆ ಕಾದು ಕುಳಿತಿದ್ದ ನಿವೇಶನದಾರರಿಗೆ ಕೊನೆಗೂ ಮುಕ್ತಿ ದೊರೆತಿದೆ.

ಗ್ರಾಮ ಪಂಚಾಯಿತಿ ವ್ಯಾಪ್ತಿಗಳಲ್ಲಿ ಸ್ಥಳೀಯ ಯೋಜನಾ ಅಭಿವೃದ್ಧಿ ಪ್ರಾಧಿಕಾರದಿಂದ ಅನುಮತಿ ಪಡೆಯದೆ ಕಂದಾಯ ಜಮೀನುಗಳಲ್ಲಿ ನಿರ್ಮಾಣವಾಗಿದ್ದ ಲೇಔಟ್‌ಗಳಲ್ಲಿನ ನಿವೇಶನಗಳ ನೋಂದಣಿ, ಮಾರಾಟ ಮಾಡುವುದನ್ನು ರಾಜ್ಯ ಸರ್ಕಾರ ಒಂದು ವರ್ಷದಿಂದ ರದ್ದುಮಾಡಿತ್ತು. ಇದರಿಂದ ಗ್ರಾಮೀಣ ಭಾಗದಲ್ಲಿ ನಿವೇಶನಗಳ ಮಾರಾಟ, ನೋಂದಣಿಯಾಗದೆ ಮಧ್ಯಮ ವರ್ಗದವರು ತೀವ್ರ ಆರ್ಥಿಕ ಸಂಕಷ್ಟಕ್ಕೆ ಸಿಲುಕುವಂತಾಗಿತ್ತು. ಅಲ್ಲದೆ ಮಧ್ಯಮವರ್ಗದವರು ಒಂದು ಸ್ವಂತ ನಿವೇಶನ ಹೊಂದುವ ಬಹುದಿನಗಳ ಕನಸು ಕನಸಾಗಿಯೇ ಉಳಿದಿತ್ತು.

ಈಗ ಚಾಲನೆಗೆ ಬಂದಿರುವ ಇ–ಸ್ವತ್ತು 2.0 ತಂತ್ರಾಂಶದಲ್ಲಿ 11 'ಬಿ'ಖಾತೆ ಪಡೆಯಲು 7–4–2025ರ ದಿನಾಂಕದಿಂದ ಹಿಂದೆ ನಿವೇಶನ ನೋಂದಣಿಯಾಗಿದ್ದರೆ ಅಥವಾ ಮನೆ ನಿರ್ಮಿಸಿದ್ದರೆ (ವಿದ್ಯುತ್ ಸಂಪರ್ಕ ಪಡೆದಿರಬೇಕು) ಮಾತ್ರ ಇ–ಸ್ವತ್ತು ತಂತ್ರಾಂಶದ ಮೂಲಕ 11 'ಬಿ' ಖಾತೆ ಪಡೆಯಲು ಅರ್ಜಿ ಸಲ್ಲಿಕೆ ಮೂರು ತಿಂಗಳ ಕಾಲಾವಕಾಶ ಕಲ್ಪಿಸಲಾಗಿದೆ.

ಆಸ್ತಿ ಗಳಿಗೆ 11'ಬಿ' ಖಾತೆ ನೀಡಲು ಅಗತ್ಯ ಇರುವ ನಿಯಮಗಳು, ಹೊಸ ತಂತ್ರಾಂಶ ನಿರ್ವಹಣೆ ಕುರಿತು ಪಿಡಿಓಗಳಿಗೆ ತರಬೇತಿ ನೀಡಲಾಗಿದೆ. ನಗರಸಭೆ ವ್ಯಾಪ್ತಿಯಲ್ಲಿನ ನಿವೇಶನಗಳಿಗೆ 'ಬಿ' ಖಾತಾ ನೀಡುವ ಪ್ರಕ್ರಿಯೆ ಈಗಾಗಲೇ 2025ರ ಮಾರ್ಚ್‌ನಿಂದ ಪ್ರಾರಂಭವಾಗಿದ್ದು, 'ಬಿ' ಖಾತೆ ಪಡೆಯಲು ಅರ್ಜಿ ಸಲ್ಲಿಕೆಯ ಅವಧಿಯನ್ನು ವಿಸ್ತರಿಸುತ್ತ ಬರಲಾಗುತ್ತಿದೆ.

ಅರ್ಜಿ ಸಲ್ಲಿಕೆ ಹೇಗೆ?: ನಿಮ್ಮ ಸ್ಥಳೀಯ ಗ್ರಾಮ ಪಂಚಾಯತ್ ಕಚೇರಿಗೆ ಭೇಟಿ ನೀಡಿ. ಜಿಲ್ಲಾ ಪಂಚಾಯತ್ ಸಿಬ್ಬಂದಿ ನಿಮ್ಮ ಪರವಾಗಿ ಇ–ಸ್ವತ್ತು ಪೋರ್ಟಲ್‌ನಲ್ಲಿ ಆಸ್ತಿ ಮತ್ತು ಮಾಲೀಕರ ವಿವರಗಳನ್ನು ಭರ್ತಿ ಮಾಡುತ್ತಾರೆ. ಅಗತ್ಯ ದಾಖಲೆಗಳನ್ನು ಅದೇ ಸಿಬ್ಬಂದಿ ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡುತ್ತಾರೆ. ಸಲ್ಲಿಸಿದ ಅರ್ಜಿಯನ್ನು ಆರಂಭದಲ್ಲಿ ಜಿಪಂ ಕಾರ್ಯದರ್ಶಿ ಮತ್ತು ನಂತರ ಪಂಚಾಯತ್ ಅಭಿವೃದ್ಧಿ ಅಧಿಕಾರಿ ಪರಿಶೀಲಿಸುತ್ತಾರೆ. ಈ ಸಮಗ್ರ ಪರಿಶೀಲನೆ ಪ್ರಕ್ರಿಯೆಯು 45 ದಿನಗಳವರೆಗೂ ನಡೆಯುವ ಸಾಧ್ಯತೆಯಿದೆ. ಒಮ್ಮೆ ನಿಮ್ಮ ಅರ್ಜಿಯು ಅನುಮೋದನೆಗೊಂಡರೆ, ಪಿಡಿಒ ಅದನ್ನು ಡಿಜಿಟಲ್ ಸಹಿ ಮಾಡುತ್ತಾರೆ. ನಂತರ ನೀವು ಇ–ಸ್ವತ್ತು ಪೋರ್ಟಲ್‌ನಲ್ಲಿ ನಿಮ್ಮ ಆಸ್ತಿ ವಿವರಗಳನ್ನು ಹುಡುಕಿ, ಅನುಮೋದಿತ ಫಾರ್ಮ್ 9 ಅಥವಾ ಫಾರ್ಮ್ 11B ಅನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದು. ನಾಗರಿಕರು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ ನಿರ್ವಹಿಸುವ eswathu.kamataka.gov.in/ ಮೂಲಕ ಆಸ್ತಿ ದಾಖಲೆಗಳಿಗೆ ಸಂಬಂಧಿಸಿದ ವಿವಿಧ ಸೇವೆಗಳನ್ನು ಪ್ರವೇಶಿಸಬಹುದು. ಹೋಮ್‌ಪೇಜ್‌ನಲ್ಲಿ ಲಭ್ಯವಿರುವ ಸೌಲಭ್ಯವನ್ನು ಬಳಸಿ ಪ್ರಮಾಣ ಪತ್ರ ಸಂಖ್ಯೆಯನ್ನು ನಮೂದಿಸುವ ಮೂಲಕ ಫಾರ್ಮ್ 9 ಮತ್ತು ಫಾರ್ಮ್ 11 ದಾಖಲೆಗಳ ನೈಜತೆಯನ್ನು ಪರಿಶೀಲಿಸ ಬಹುದು. ಮೆನುವಿನಲ್ಲಿರುವ 'ನಿಮ್ಮ ಆಸ್ತಿಯನ್ನು ಹುಡುಕಿ' ಆಯ್ಕೆಯನ್ನು ಕ್ಲಿಕ್ ಮಾಡಿ ಜಿಲ್ಲೆ, ಗ್ರಾಮ, ಗ್ರಾಮ ಪಂಚಾಯತಿ ಮತ್ತು ಆಸ್ತಿ ಐಡಿ ವಿವರಗಳನ್ನು ಒದಗಿಸುವ ಮೂಲಕ ಆಸ್ತಿ ವಿವರಗಳನ್ನು ಹುಡುಕಬಹುದು. ಆಸ್ತಿ ಮಾಲೀಕರು ಪೋರ್ಟಲ್ ಮೂಲಕ ಇ–ಖಾತಾಕ್ಕಾಗಿ (ಡಿಜಿಟಲ್ ಮಾಲೀಕತ್ವ ಮತ್ತು ಮೌಲ್ಯಮಾಪನ ದಾಖಲೆ) ಅರ್ಜಿ ಸಲ್ಲಿಸಬಹುದು.

ಚಿಕ್ಕಪೇಟೆ ಮಾಜಿ ಶಾಸಕ ಆರ್.ವಿ.ದೇವರಾಜ್ ನಿಧನ

ಹೃದಯಾಘಾತವಾಗುತ್ತಿದ್ದಂತೆ ಮೊದಲಿಗೆ ಅವರನ್ನು ಅಪೋಲೋ ಆಸ್ಪತ್ರೆಗೆ ದಾಖಲಿಸಲಾಗಿದೆ. ಬಳಿಕ ಹೆಚ್ಚಿನ ಚಿಕಿತ್ಸೆಗಾಗಿ ಜಯದೇವ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆದರೆ ಚಿಕಿತ್ಸೆ ಫಲಿಸದೇ ಕೊನೆಯುಸಿರೆಳೆದಿದ್ದಾರೆ. ಸದ್ಯ ಅವರ ಪಾರ್ಥಿವ ಶರೀರ ಜಯದೇವ ಆಸ್ಪತ್ರೆಯಲ್ಲೇ ಇದ್ದು, ಇಂದು ರಾತ್ರಿಯೇ ಬೆಂಗಳೂರಿಗೆ ಕೊಂಡೊಯ್ಯುವ ಸಾಧ್ಯತೆ ಇದೆ ಎಂದು ಮೂಲಗಳು ತಿಳಿಸಿವೆ.

ಕಾಂಗ್ರೆಸ್‌ನಿಂದ ರಾಜಕಾರಣ: ಆರ್.ವಿ.ದೇವರಾಜ್ ಅವರು 3 ಡಿಸೆಂಬರ್ 1957ರಂದು ಜನಿಸಿದರು. ಕಾಂಗ್ರೆಸ್ ಸದಸ್ಯರಾಗಿದ್ದ ಇವರು 2000ರಿಂದ ಅಕ್ಟೋಬರ್ 2007 ರವರೆಗೆ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ (ಕೆಎಸ್‌ಆರ್‌ಟಿಸಿ) ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದರು. ಕೆಪಿಸಿಸಿಯ ಪ್ರಧಾನ ಕಾರ್ಯದರ್ಶಿ ಮತ್ತು ಎಐಸಿಸಿ ಸದಸ್ಯರಾಗಿದ್ದರು. ಅವರು ಚಾಮರಾಜಪೇಟೆ ಕ್ಷೇತ್ರದ ಶಾಸಕರಾಗಿ ಸೇವೆ ಸಲ್ಲಿಸಿದರು. ಚಾಮರಾಜಪೇಟೆ ಕ್ಷೇತ್ರದ ಕ್ಷೇತ್ರ ಪುನರ್ವಿಂಗಡಣೆ ನಂತರ, ಅವರು ಚಿಕ್ಕಪೇಟೆಯ ಕಾಂಗ್ರೆಸ್ ಅಭ್ಯರ್ಥಿಯಾದರು. ಅಲ್ಲಿಯೂ ಗೆದ್ದು ಶಾಸಕರಾಗಿದ್ದರು. ಆದರೆ ಕಳೆದ ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿ ವಿರುದ್ಧ ಸೋತಿದ್ದರು.

ನಾವು ಬ್ರದರ್ಸ್...!

ಆಸ್ತಿಯಲ್ಲ. ಪಕ್ಷದ ಅಧ್ಯಕ್ಷ ಸ್ಥಾನದಲ್ಲಿದ್ದ ಕಾರಣಕ್ಕೆ ಈ ಸಂಸ್ಥೆಯ ಷೇರುಗಳ ಪಾಲಕರಾಗಿದ್ದರು. ಈ ಪ್ರಕರಣದಲ್ಲಿ ಎಫ್‌ಐಆರ್ ದಾಖಲಿಸಲಾಗಿದೆ. ರಾಜಕೀಯ ದ್ವೇಷಕ್ಕಾಗಿ ಕೇಂದ್ರ ಸರ್ಕಾರ ತನಿಖಾ ಸಂಸ್ಥೆಗಳನ್ನು ದುರ್ಬಳಕೆ ಮಾಡಿಕೊಂಡು ರಾಹುಲ್ ಗಾಂಧಿ ಅವರಿಗೆ ಕಿರುಕುಳ ನೀಡುತ್ತಿದೆ. ಇದು ಅನ್ಯಾಯ, ಯಾರಿಗೇ ಆಗಲಿ ಕಿರುಕುಳ ನೀಡುವುದಕ್ಕೂ ಒಂದು ಮಿತಿ ಇದೆ. ನಾನು ಹಾಗೂ ಮುಖ್ಯಮಂತ್ರಿ ವಿವಿಧ ನಿಗಮ, ಮಂಡಳಿಗಳ ಅಧ್ಯಕ್ಷರಾಗಿದ್ದೇವೆ. ಅಧ್ಯಕ್ಷರಾದವರ ಹೆಸರಿನಲ್ಲಿ ಕನಿಷ್ಠ 1–2 ಷೇರುಗಳು ಇರುತ್ತವೆ. ನಮ್ಮ ಅಧಿಕಾರ ಮುಗಿದ ನಂತರ ಈ ಷೇರುಗಳು ವರ್ಗಾವಣೆಯಾಗುತ್ತವೆ. ಅದೇ ರೀತಿ ನಮ್ಮ ನಾಯಕರು ಕಾಂಗ್ರೆಸ್ ಅಧ್ಯಕ್ಷರಾಗಿದ್ದ ಕಾರಣ, ಜವಹಾರಲಾಲ್ ನೆಹರೂ ಕಾಲದಿಂದ ನಡೆದುಕೊಂಡು ಬಂದಿರುವ ಪ್ರತೀತಿಯಂತೆ ನ್ಯಾಷನಲ್ ಹೆರಾಲ್ಡ್ ಸಂಸ್ಥೆ ಜವಾಬ್ದಾರಿ ಹೊತ್ತಿರುತ್ತಾರೆ ಎಂದರು.

ಯಂಗ್ ಇಂಡಿಯಾ ಆಗಲಿ, ನ್ಯಾಷನಲ್ ಹೆರಾಲ್ಡ್ ಆಗಲಿ, ನಮ್ಮ ವೈಯಕ್ತಿಕ ಆಸ್ತಿಯಲ್ಲ ಎಂಬುದಾಗಿ ಈಗಾಗಲೇ ಘೋಷಿಸಿದ್ದಾರೆ. ಇದು ಕಾಂಗ್ರೆಸ್ ಪಕ್ಷದ ಆಸ್ತಿ, ಅದರ ಪಾಲಕರು ಸೋನಿಯಾ ಹಾಗೂ ರಾಹುಲ್ ಗಾಂಧಿ ಆಗಿದ್ದಾರೆ. ಇದರಲ್ಲಿ ಅನೇಕ ಸದಸ್ಯರೂ ಇದ್ದಾರೆ ಮೊರಾರ್ಜಿ, ಅಹ್ಮದ್ ಪಟೇಲ್ ಕಾಲದಲ್ಲಿ ಕಾಂಗ್ರೆಸ್ ಹಿತಕ್ಕಾಗಿ ಕೆಲವು ನಿರ್ಧಾರ ಕೈಗೊಳ್ಳಲಾಗಿತ್ತು. ಸೀತಾರಾಂ ಕೇಸರಿ ಕಾಲದಲ್ಲಿ ಪಕ್ಷ ಸಂಕಷ್ಟದ ಸಮಯದಲ್ಲಿದ್ದಾಗ, ನಾವುಗಳು ಸೋನಿಯಾ ಅವರೇ ಜವಾಬ್ದಾರಿ ವಹಿಸಿಕೊಳ್ಳುವಂತೆ ಬೇಡಿಕೊಂಡೆವು. ಈಗ ರಾಜಕೀಯವಾಗಿ ಕಿರುಕುಳ ನೀಡಲಾಗುತ್ತಿದೆ. ಇತಿಹಾಸ ಮರುಕಳಿಸಲಿದೆ.

ದೆಹಲಿ ಟ್ರಾಫಿಕ್ ಸಮಸ್ಯೆ: ಎಕ್ಸ್ ಖಾತೆಯಲ್ಲಿ ಬೆಂಗಳೂರಿನಲ್ಲಿ ಅತ್ಯಂತ ಕೆಟ್ಟ ಟ್ರಾಫಿಕ್ ಜಾಮ್ ಎಂದು ಬರೆದಿರುವ ಉತ್ತರ ಪ್ರದೇಶ ಸಂಸದ ರಾಜೀವ್ ರಾಯ್ ನನ್ನನ್ನು ದೆಹಲಿಯಲ್ಲಿ ಭೇಟಿ ಮಾಡಲಿ. ಅಲ್ಲಿನ ಟ್ರಾಫಿಕ್ ಸಮಸ್ಯೆ ಏನು ಎಂಬುದನ್ನು ಅವರಿಗೆ ತೋರಿಸುತ್ತೇನೆ ಎಂದು ಡಿ.ಕೆ.ಶಿವಕುಮಾರ್ ಹೇಳಿದರು.

ಬೇಡ...ಬೇಡ... ಕ್ರಿಮಿನಲ್‌ಗಳ ಸಂಗ!

ಕಾನೂನುಬಾಹಿರ ಚಟುವಟಿಕೆಗಳಲ್ಲಿ ಭಾಗಿಯಾಗುವುದು, ದುಷ್ಕರ್ಮಿಗಳು, ಸಮಾಜಘಾತುಕ ವ್ಯಕ್ತಿಗಳೊಂದಿಗೆ ಕೈಜೋಡಿಸುವುದು, ಕಾನೂನು–ಸುವ್ಯವಸ್ಥೆಗೆ ಭಂಗ ಉಂಟು ಮಾಡುವವರಿಗೆ ಸಹಕರಿಸುವುದು ಅಕ್ಷಮ್ಯ ಅಪರಾಧವಾಗುತ್ತದೆ. ಪೊಲೀಸರ ಅಂತಹ ನಡವಳಿಕೆಗಳಿಂದಾಗಿ ಇಲಾಖೆ ಸಾರ್ವಜನಿಕರ ವಿಶ್ವಾಸ ಕಳೆದುಕೊಳ್ಳಬೇಕಾಗು ತ್ತದೆ. ಅದರ ಪರಿಣಾಮವಾಗಿ ಕಾನೂನು ಸುವ್ಯವಸ್ಥೆ ಕಾಪಾಡುವ ನಿಟ್ಟಿನಲ್ಲಿ ಸಾರ್ವಜನಿಕರ ಸಹಕಾರ ದೊರೆಯುವುದೂ ಕಷ್ಟಕರವಾಗುತ್ತದೆ ಎಂದು ಸಿಬ್ಬಂದಿಗೆ ತಿಳಿ ಹೇಳಿದ್ದಾರೆ. ಕ್ರಿಮಿನಲ್‌ಗಳೊಂದಿಗೆ ಕೈಜೋಡಿಸುವ ಸಿಬ್ಬಂದಿ ವಿರುದ್ಧ ನಿರ್ದಾಕ್ಷಿಣ್ಯ ಕ್ರಮ ವಹಿಸಲಾಗುವುದು. ಅಲ್ಲದೆ ಈ ರೀತಿಯ ದೂರುಗಳು ಬಂದಲ್ಲಿ ಇಲಾಖಾ ವಿಚಾರಣೆಗೆ ಒಳಪಡಿಸಬೇಕಾಗುತ್ತದೆ. ಕ್ರಿಮಿನಲ್ ಕೃತ್ಯದಲ್ಲಿ ಭಾಗಿಯಾದರೆ, ಪೊಲೀಸರು ಎಂಬ ಕಾರಣಕ್ಕಾಗಿ ಯಾವುದೇ ರಕ್ಷಣೆ ದೊರೆಯುವುದಿಲ್ಲ. ಬದಲಾಗಿ ಅಂತಹವರನ್ನು ಕ್ರಿಮಿನಲ್‌ಗಳೆಂದೇ ಪರಿಗಣಿಸಿ ಕಟ್ಟುನಿಟ್ಟಿನ ಕಾನೂನು ಕ್ರಮ ಕೈಗೊಳ್ಳಲಾಗುತ್ತದೆ. ಉದ್ಯೋಗವನ್ನು ಕಳೆದುಕೊಳ್ಳುವುದರ ಜೊತೆಗೆ ಜೈಲಿಗೆ ಹೋಗ ಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಲಾಗಿದೆ. ಕಳೆದ ನ.19 ರಂದು ಬೆಂಗಳೂರಿನಲ್ಲಿ ಹಾಡಹಗಲೇ ಎಟಿಎಂ ಕ್ಯಾಶ್ ತಡೆದು ದುಷ್ಕರ್ಮಿಗಳ ಗುಂಪು 7.11 ಕೋಟಿ ರೂ. ಲೂಟಿ ಮಾಡಿದ ಪ್ರಕರಣದಲ್ಲಿ ಪೊಲೀಸ್ ಪೇದೆಯೋರ್ವ ಭಾಗಿಯಾಗಿರು ವುದು ಹಾಗೂ ಮತ್ತೊಂದು ಪ್ರಕರಣದಲ್ಲಿ ಬೆಳ್ಳಂದೂರು ಠಾಣೆಯ ಇಬ್ಬರು ಪೊಲೀಸರು ಮರಣೋತ್ತರ ಪರೀಕ್ಷೆ ನಡೆಸಿದ ವರದಿ ನೀಡಲು ವ್ಯಕ್ತಿಯಿಂದ ಲಂಚ ಪಡೆದಿದ್ದ ಘಟನೆಗಳು ಪೊಲೀಸ್ ಇಲಾಖೆಗೆ ಭಾರೀ ಮುಜುಗರ ಉಂಟು ಮಾಡಿತ್ತು. ಈ ಹಿನ್ನೆಲೆಯಲ್ಲಿ ರಾಜ್ಯ ಪೊಲೀಸ್ ಮಹಾ ನಿರ್ದೇಶಕ ಡಾ. ಸಲೀಂ, ರಾಜ್ಯಾದ್ಯಂತ ಎಲ್ಲಾ ಪೊಲೀಸ್ ಅಧಿಕಾರಿಗಳು ಹಾಗೂ ಸಿಬ್ಬಂದಿಗೆ ಅಪರಾಧ ಪ್ರಕರಣಗಳಲ್ಲಿ ಭಾಗಿಯಾಗದಂತೆ ಎಚ್ಚರ ವಹಿಸುವ ಸಂದೇಶವನ್ನು ರವಾನಿಸಿದ್ದಾರೆ.

ಎಲ್ಲರ ನಿತ್ಯ ಜೀವನದಲ್ಲಿ ಭಗವದ್ಗೀತೆ ಪಾರಾಯಣ ಅನ್ವಯವಾಗಲಿ

ಗೀತಾ ಜಯಂತಿಯ ಭಗವದ್ಗೀತೆ ಪಾರಾಯಣ ಸಮಾರಂಭದಲ್ಲಿ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ ಕರೆ

ಮೈಸೂರು, ಡಿ.1(ಎಂಕೆ)– ಭಗವದ್ಗೀತೆಯ ಪಾರಾಯಣ ನಮ್ಮ ಜೀವನದಲ್ಲಿ ನಿತ್ಯ ಅಳವಡಿಕೆಯಾಗಿರಲಿ ಎಂದು ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ ಕರೆ ನೀಡಿದರು.

ಮೈಸೂರಿನ ಅವಧೂತ ದತ್ತ ಪೀಠದಲ್ಲಿ ಗೀತಾ ಜಯಂತಿ ಅಂಗವಾಗಿ ಆಯೋಜಿಸಿದ್ದ ಸಂಪೂರ್ಣ ಭಗವದ್ಗೀತೆ ಪಾರಾಯಣ ಮತ್ತು ಚಿನ್ನದ ಪದಕ ಪ್ರದಾನ ಸಮಾರಂಭದಲ್ಲಿ ಮಾತನಾಡಿದ ಶ್ರೀಗಳು, ಶ್ರೀ ಕೃಷ್ಣ ಪರಮಾತ್ಮನು ಭಗವದ್ಗೀತೆಯಲ್ಲಿ ಹೇಳಿರುವ ಪ್ರತಿಯೊಂದು ಮಾತನ್ನು ಅರ್ಥಮಾಡಿಕೊಂಡು ನಮ್ಮ ಜೀವನ ಮುನ್ನಡೆಸಬೇಕು ಎಂದರು.

ನಮ್ಮ ಪೂರ್ವಜರು ಭಗವದ್ಗೀತೆಯನ್ನು ತಮ್ಮ ಜೀವನದ ಭಾಗವಾಗಿಸಿಕೊಂಡಿದ್ದರು. ಹಿಂದೆಲ್ಲಾ ಮಹಾತ್ಮರು ಹಾಗೂ ಶ್ರೀಮಂತರು ಲಕ್ಷಾಂತರ ಚಿಕ್ಕ ಚಿಕ್ಕ ಭಗವದ್ಗೀತೆ ಪುಸ್ತಕಗಳನ್ನು ಮುದ್ರಿಸಿ ಜನರಿಗೆ ಉಚಿತವಾಗಿ ಹಂಚುತ್ತಿದ್ದರು. ಆ ಸಂಪ್ರದಾಯ ಮತ್ತೆ ಮರುಕಳಿಸಬೇಕು. ಪುಸ್ತಕ ದಾನವೂ ಶ್ರೇಷ್ಠದಾನವಾಗಿದ್ದು, ದತ್ತ ಪೀಠದಲ್ಲಿ ಮುದ್ರಿತವಾದ ಪುಸ್ತಕಗಳನ್ನು ಖರೀದಿಸುವ ಶಕ್ತಿ ಇಲ್ಲದವರಿಗೆ ಉಚಿತವಾಗಿ ಹಂಚುವ ಸಂಕಲ್ಪ ಮಾಡಬೇಕು ಎಂದು ಹೇಳಿದರು.

ಪುಸ್ತಕಗಳು ಯಾವಾಗಲೂ ನಮ್ಮ ಕೈಯ್ಯಲ್ಲಿ ಇರುವುದಿಲ್ಲ. ಆದರೆ, ಭಗವದ್ಗೀತೆಯಲ್ಲಿ ಶ್ಲೋಕಗಳನ್ನು ಕಂಠಪಾಠ ಮಾಡಿದರೆ, ಆ ಶ್ಲೋಕಗಳು ದಿನದ 24 ಗಂಟೆಯೂ ನಮ್ಮ ಜೊತೆಗೆ ಇರುತ್ತವೆ.



ಮೈಸೂರಿನ ಅವಧೂತ ದತ್ತ ಪೀಠದಲ್ಲಿ ಗೀತಾ ಜಯಂತಿ ಅಂಗವಾಗಿ ಸೋಮವಾರ ಆಯೋಜಿಸಿದ್ದ ಸಂಪೂರ್ಣ ಭಗವದ್ಗೀತೆ ಪಾರಾಯಣ ಮತ್ತು ಚಿನ್ನದ ಪದಕ ಪ್ರದಾನ ಸಮಾರಂಭದಲ್ಲಿ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ ಪ್ರವಚನ ನೀಡಿದರು.

ಪ್ರಯಾಣ ಅಥವಾ ಊಟದ ಸಮಯದಲ್ಲಿ ಮನಸ್ಸಿನಲ್ಲಿಯೇ ಭಗವದ್ಗೀತೆ ಪಾರಾಯಣ ಮಾಡಬಹುದು. ಆಗಾಗಿ ಪ್ರತಿಯೊಬ್ಬರೂ ಪ್ರತಿನಿತ್ಯ ಭಗವದ್ಗೀತೆಯ ಕನಿಷ್ಠ ಒಂದು ಅಧ್ಯಾಯವನ್ನಾದರೂ ಪಾರಾಯಣ ಮಾಡಬೇಕು ಎಂದು ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ ತಿಳಿಸಿದರು.

ಚಿನ್ನದ ಪದಕ ವಿತರಣೆ: ಇದೇ ವೇಳೆ ಭಗವದ್ಗೀತೆ ಪಾರಾಯಣದಲ್ಲಿ ಭಾಗವಹಿಸಿದ್ದ 948ಕ್ಕೂ ಹೆಚ್ಚು ಮಂದಿಯ ಪೈಕಿ ಭಗವದ್ಗೀತೆಯನ್ನು ಸಂಪೂರ್ಣವಾಗಿ ಕಂಠಪಾಠ ಮಾಡಿ ಒಪ್ಪಿಸಿದ ವಿದ್ಯಾರ್ಥಿಗಳು ಹಾಗೂ ಮಹಿಳೆಯರಿಗೆ ಚಿನ್ನದ ಪದಕಗಳನ್ನು ನೀಡಿ ಆಶೀರ್ವದಿಸಲಾಯಿತು.

ಮಾ.22ಕ್ಕೆ ಹೈದರಾಬಾದ್‌ನಲ್ಲಿ ಬೃಹತ್ ಪಾರಾಯಣ: 2026ರ ಮಾ.22ರಂದು ಹೈದರಾಬಾದ್‌ನ ಗಚ್ಚಿಬೌಲಿ ಒಳಾಂಗಣ ಕ್ರೀಡಾಂಗಣದಲ್ಲಿ ಸಂಪೂರ್ಣ ಭಗವದ್ಗೀತೆ ಪಾರಾಯಣ ಬೃಹತ್ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಅಲ್ಲದೆ ದೆಹಲಿಯ ಭಾರತ ಮಂಟಪದಲ್ಲಿಯೂ ಕಾರ್ಯಕ್ರಮ ನಡೆಯಲಿದ್ದು, ಭಕ್ತಾದಿಗಳು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳುವಂತೆ ತಿಳಿಸಲಾಯಿತು.

ಭೀಮ ಬಲ ಬಳಗದಿಂದ ಸಂವಿಧಾನ ದಿನದ ಅಂಗವಾಗಿ 'ವಾಕಥಾನ್'



'ಭೀಮ ಬಲ ಬಳಗ' ತಂಡದಿಂದ ವಾಕಾಥಾನ್ ಆಯೋಜಿಸಲಾಗಿತ್ತು.

ಮೈಸೂರು, ಡಿ.1–ಸಂವಿಧಾನ ಜಾರಿಗೆ ಬಂದು 75 ವರ್ಷಗಳಾದ ವಿಶೇಷವಾಗಿ 'ಭೀಮ ಬಲ ಬಳಗ' ತಂಡದಿಂದ ಆಯೋಜಿಸಿದ್ದ ವಾಕಾಥಾನ್ ಕಾರ್ಯಕ್ರಮದಲ್ಲಿ ಸುಮಾರು 200 ಮಂದಿ ಭಾಗವಹಿಸುವ ಮೂಲಕ ಯಶಸ್ವಿಯಾಗಿ ನಡೆಯಿತು.

ಕಾರ್ಯಕ್ರಮವು ಬೆಳಿಗ್ಗೆ 8 ಗಂಟೆಗೆ ಕ್ರಾಫರ್ಡ್ ಭವನದ ಬಳಿಯಲ್ಲಿರುವ ನಾಲ್ವಡಿ ಕೃಷ್ಣರಾಜ ಒಡೆಯರ್ ಪ್ರತಿಮೆಗೆ ಪುಷ್ಪಾರ್ಚನೆ ಮಾಡುವ ಮೂಲಕ ಆರಂಭಗೊಂಡು ನಗರದ ಪ್ರಮುಖ ರಸ್ತೆಗಳಲ್ಲಿ ಸಾಗಿ ಅಂಬೇಡ್ಕರ್ ಪ್ರತಿಮೆಯ ಬಳಿ ವಿರಾಮಗೊಂಡಿತು.

ನಂತರ ಅಂಬೇಡ್ಕರ್ ಪ್ರತಿಮೆ ಬಳಿ ಸಂವಿಧಾನ ಪೀಠಿಕೆಯನ್ನು ಸಾಮೂಹಿಕವಾಗಿ ಓದುವ ಮೂಲಕ ಸಂವಿಧಾನ 75 ಕಾರ್ಯಕ್ರಮವನ್ನು ಅರ್ಥಪೂರ್ಣವಾಗಿ ಆಚರಿಸಲಾಯಿತು.

ಮೈಸೂರು ವಿವಿಯ ವಿದ್ಯಾರ್ಥಿ ಕ್ಷೇಮಪಾಲನಾ ನಿರ್ದೇಶನಾಲಯ ನಿರ್ದೇಶಕ ಗುರುಸಿದ್ದಯ್ಯ, ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಕೆ.ದೀಪಕ್, ಮಾಜಿ ಸಿಂಡಿಕೇಟ್ ಸದಸ್ಯ ಶರತ್ ಸತೀಶ್, ಭೀಮ ಬಲ ಬಳಗದ ಸಂಚಾಲಕರಾದ ಪರಮಾನಂದ, ನಟರಾಜ್, ಶಿವಣ್ಣ, ವೇದಾವತಿ, ಮಹೇಶ್, ಕಾರ್ತಿಕ್, ಮರಿಯಪ್ಪ, ಸುರೇಶ್ ನಾಡನಹಳ್ಳಿ, ನವೀನ್ ಮೌರ್ಯ, ಅಶ್ವಿನಿ ಶರತ್, ಪ್ರಫುಲ್ಲ ಮಲ್ಲಾಡಿ, ಡಾ.ಕಿರಣ್ ಸಂದೇಶ್, ಪುಟ್ಟಮಣಿ, ಪುಷ್ಪ ಇತರರು ಭಾಗವಹಿಸಿದ್ದರು.



ಮೈಸೂರಿನಲ್ಲಿ ನಡೆದ 'ಲಾ ಗೈಡ್' ಕಾನೂನು ಪತ್ರಿಕೆಯ 25 ವರ್ಷದ ಬೆಳ್ಳಿ ಮಹೋತ್ಸವದಲ್ಲಿ ಮೈಸೂರಿನ ವಿದ್ಯುನ್ಮಾನ ಮಾಧ್ಯಮದ ವರದಿಗಾರರು, ಕ್ಯಾಮಾರಮೆನ್‌ಗಳಿಗೆ ಪವರ್ ಬ್ಯಾಂಕ್‌ಗಳನ್ನು ವಿತರಿಸಲಾಯಿತು. ಈ ಸಂದರ್ಭದಲ್ಲಿ ಭಾಷ್ಯಂ ಸ್ವಾಮೀಜಿ, 'ಲಾ ಗೈಡ್' ಸಂಪಾದಕರಾದ ಎಚ್.ಎನ್.ವೆಂಕಟೇಶ್, ಹಿರಿಯ ವಕೀಲರಾದ ಹರೀಶ್ ಹೆಗ್ಡೆ, ವಕೀಲರ ಸಂಘದ ಅಧ್ಯಕ್ಷ ಎಸ್.ಲೋಕೇಶ್ ಇನ್ನಿತರರು ಉಪಸ್ಥಿತರಿದ್ದರು.

'ಮನೆಗೊಂದು ಗ್ರಂಥಾಲಯ' ಯೋಜನೆಗೆ ಚಾಲನೆ

ಮೈಸೂರು,ಡಿ.1(ಎಂಟಿವೈ)– ಜ್ಞಾನ ಸಂಪಾದನೆಗಾಗಿ ಜನರಲ್ಲಿ ಸಾಹಿತ್ಯ ಅಭಿರುಚಿ ಬೆಳೆಸುವ ಅಗತ್ಯವಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ವಿಜಯನಗರದ ತಮ್ಮ ನಿವಾಸದಲ್ಲಿ ಕನ್ನಡ ಪುಸ್ತಕ ಪ್ರಾಧಿಕಾರವು ಆಯೋಜಿಸಿದ್ದ 'ಮನೆಗೊಂದು ಗ್ರಂಥಾಲಯ' ಯೋಜನೆ ಉದ್ಘಾಟನಾ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಸಾಹಿತ್ಯ ಅಭಿರುಚಿ ಬೆಳೆಸಿಕೊಳ್ಳುವುದರಿಂದ ಹೆಚ್ಚಿನ ಜ್ಞಾನ ಸಂಪಾದಿಸಬಹುದು. ಜ್ಞಾನ ಹೆಚ್ಚಾದರೆ ಸಂಘರ್ಷ, ದ್ವೇಷ ಮರೆಯಾಗಿ ಪರಸ್ಪರ ಪ್ರೀತಿ, ಸಾಮರಸ್ಯ, ಸೌಹಾರ್ದತೆ ಬೆಳೆಸಿಕೊಳ್ಳಲು ಸಹಕಾರಿಯಾಗುತ್ತದೆ. ನಾನು ವಿದ್ಯಾರ್ಥಿ ದೆಸೆಯಿಂದಲೇ ಸಾಹಿತ್ಯ ಕೃತಿಗಳನ್ನು ಓದುತ್ತಿದ್ದೇನೆ. ಯುವರಾಜ ಕಾಲೇಜು, ಎಂಡಿಟಿಬಿಸಿ ಕಾಲೇಜಿನಲ್ಲಿ ಓದುವಾಗ ಪಠ್ಯ ಪುಸ್ತಕಕ್ಕಿಂತ ಸಾಹಿತ್ಯ ಕೃತಿಗಳನ್ನು ಹೆಚ್ಚಾಗಿ ಓದುತ್ತಿದ್ದೆ ಎಂದರು.

ಡಾ.ಅಂಬೇಡ್ಕರ್ ಅವರು ಐವತ್ತು ಸಾವಿರಕ್ಕಿಂತಲೂ ಹೆಚ್ಚಿನ ಪುಸ್ತಕಗಳನ್ನು ಓದಿ, ಜ್ಞಾನಿಯಾದರು. ಹೀಗಾಗಿ ಅವರ ಹೆಸರಿನಲ್ಲಿ ಇಡೀ ಪ್ರಪಂಚದಾದ್ಯಂತ ವಿಶ್ವಜ್ಞಾನಿ ದಿನ ಆಚರಿಸಲಾಗುತ್ತದೆ ಎಂದು ಅವರು ಹೇಳಿದರು.

ಇದಕ್ಕೂ ಮುನ್ನ ಕಾರ್ಯಕ್ರಮಕ್ಕೆ ಚಾಲನೆ ನೀಡಿದ ಹಿರಿಯ ಸಾಹಿತಿ ಡಾ.ಸಿ.ಪಿ.ಕೃಷ್ಣಕುಮಾರ್(ಸಿಪಿಕೆ) ಮಾತನಾಡಿ, ಗ್ರಂಥಾಲಯ ಸಂಸ್ಕೃತಿ ಉಳಿಸಿ, ಬೆಳೆಯಬೇಕು. ಗ್ರಂಥಾಲಯಗಳು ಜ್ಞಾನಾರ್ಜನೆಗೆ ಅಗತ್ಯ ಪುಸ್ತಕಗಳನ್ನು ಒದಗಿಸುತ್ತದೆ. ಆ ಮೂಲಕ ಗ್ರಂಥಾಲಯಗಳನ್ನು ಸದುಪಯೋಗ ಮಾಡಿಕೊಂಡು ಜ್ಞಾನ ಸಂಪಾದಿಸಿಕೊಂಡು ಸಾಧನೆ ಮಾಡವತ್ತ ಗಮನ ಹರಿಸಬೇಕು ಎಂದು ಸಲಹೆ ನೀಡಿದರು.



ಮೈಸೂರು ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪರ ನಿವಾಸದಲ್ಲಿ 'ಮನೆಗೊಂದು ಗ್ರಂಥಾಲಯ' ಯೋಜನೆಗೆ ಚಾಲನೆ ನೀಡಲಾಯಿತು. ಈ ವೇಳೆ ಹಿರಿಯ ಸಾಹಿತಿ ಡಾ.ಸಿ.ಪಿ.ಕೃಷ್ಣಕುಮಾರ್ 'ಸಂವಿಧಾನದ ಗ್ರಂಥ' ನೀಡಿದರು.

ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷ ಮಾನಸ ಮಾತನಾಡಿ, ಜನರಲ್ಲಿ ಓದುವ ಅಭಿರುಚಿ ಬೆಳೆಸಬೇಕು ಎಂಬ ಉದ್ದೇಶದಿಂದಲೇ ಮನೆಗೊಂದು ಗ್ರಂಥಾಲಯ ಯೋಜನೆ ರೂಪಿಸಲಾಗಿದೆ. ಇದಕ್ಕಾಗಿ ಪ್ರತಿ ಜಿಲ್ಲಾ ಮಟ್ಟದಲ್ಲಿ ಜಾಗೃತ ಸಮಿತಿಗಳನ್ನು ರಚಿಸಲಾಗಿದೆ. ಮೈಸೂರು ಜಿಲ್ಲೆಯಲ್ಲಿ ಈಗಾಗಲೇ 25 ಗ್ರಂಥಾಲಯಗಳ ಆರಂಭಕ್ಕೆ ಸಿದ್ಧತೆ ನಡೆದಿದ್ದು, ಇದಕ್ಕೆ ಜಿಲ್ಲಾ ಉಸ್ತುವಾರಿ ಸಚಿವರ ಮನೆಯಿಂದ ಚಾಲನೆ ನೀಡಲಾಗಿದೆ ಎಂದರು.

ಇದಕ್ಕಾಗಿ ವಿಭಾಗವಾರು ನಂಜನಗೂಡು ತಿರುಮಲಾಂಬ, ಡಾ.ಹಾ.ಮಾ. ನಾಯಕ, ಪಿ.ಆರ್. ತಿಪ್ಪೇಸ್ವಾಮಿ ಹಾಗೂ ಗಳಗನಾಥ ಅವರ ಹೆಸರಿನಲ್ಲಿ ಪ್ರಶಸ್ತಿಗಳನ್ನು ಪ್ರತಿವರ್ಷ ಪ್ರಾಧಿಕಾರದಿಂದ ನೀಡಲಾಗುವುದು. ಮನೆಗೊಂದು ಗ್ರಂಥಾಲಯ ಯೋಜನೆಯಿಂದ ಅಂಗಡಿಯಿಂದ ಹಿಡಿದು ಪುಸ್ತಕಗಳ ಮುದ್ರಣಕಾರರವರೆಗೆ ಎಲ್ಲರಿಗೂ ಅನುಕೂಲವಾಗುತ್ತದೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಕನ್ನಡ ಜಾಗೃತ ಸಮಿತಿಯ ಸದಸ್ಯರಾದ ಎಂ. ಚಂದ್ರಶೇಖರ್, ಡಾ.ಎಂ.ಮಹೇಶ್ ಚಿಕ್ಕಲ್ಲೂರು, ದೇವರಾಜ್ ಪಿ.ಚಿಕ್ಕಹಳ್ಳಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕರಾದ ಬಲವಂತರಾವ್ ಪಾಟೀಲ್, ವಿ.ಎನ್.ಮಲ್ಲಿಕಾರ್ಜುನಸ್ವಾಮಿ, ಸುಗಮ ಸಂಗೀತಗಾರ ಪ್ರೊ.ಎಸ್. ಮಲ್ಲಣ್ಣ, ಪ್ರೊ.ಕೆ.ಆರ್. ಪ್ರೇಮಲೀಲಾ, ಕನ್ನಡ ಹೋರಾಟಗಾರ ಬಿ.ಎ. ಶಿವಶಂಕರ್, ಕೋಟಹುಂಡಿ ಮಹದೇವ್ ಇನ್ನಿತರರು ಉಪಸ್ಥಿತರಿದ್ದರು. ಕಾರ್ಯಕ್ರಮವನ್ನು ಸುಚಿತ್ರಾ ಹೆಗಡೆ ನಿರೂಪಿಸಿದರು.



ಮೈಸೂರಿನ ಜಯನಗರ ಚಿನ್ನಗಿರಿ ಕೊಪ್ಪಲ್ ಮುಖಂಡರಿಂದ ಕನ್ನಡ ರಾಜ್ಯೋತ್ಸವ ಆಚರಿಸಿ, ಸಿಹಿ ಹಂಚಲಾಯಿತು. ಡಾ.ರಾಜಕುಮಾರ್ ಸಂಘದ ಸಂಸ್ಥಾಪಕ ಅಧ್ಯಕ್ಷ ಎಂ.ರಾಮೇಗೌಡ, ಬಿಜೆಪಿ ಯುವ ಮೋರ್ಚಾ ಅಧ್ಯಕ್ಷ ಆರ್.ರಾಕೇಶ್‌ಗೌಡ, ಮಹದೇವ್, ಪಂಪ, ಕಿರಣ್, ಮೋಹನ್, ವಿನಯ್, ಮಾದೇವ್, ವಿನೋದ್, ಸುರೇಶ್, ಪ್ರವೀಣ್ ಇನ್ನಿತರರು ಉಪಸ್ಥಿತರಿದ್ದರು.

ಅಭಿನಂದನೆ...



ವೀರ ಸಾವರ್ಕರ್ ಯುವ ಬಳಗದಿಂದ ಖ್ಯಾತ ವಾಗ್ಮಿ, ಪತ್ರಕರ್ತರಾದ ಪುಷ್ಪೇಂದ್ರ ಕುಲಶ್ರೇಷ್ಠ ಅವರನ್ನು ಸಾವರ್ಕರ್ ಫೋಟೋ ನೀಡಿ, ಅಭಿನಂದಿಸಲಾಯಿತು. ಈ ವೇಳೆ ಮೈಸೂರು ಜಿಲ್ಲಾ ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಟಿ.ಪ್ರಕಾಶ್, ಸಾವರ್ಕರ್ ಬಳಗದ ರಾಕೇಶ್‌ಭಟ್, ಸಂದೇಶ್ ಪವಾರ್, ಜಯಸಿಂಹ ಶ್ರೀಧರ್, ಟಿ.ಎಸ್.ಅರುಣ್, ಸುಚೀಂದ್ರ, ಅಭಿಷೇಕ್‌ಗೌಡ, ಮಹೇಶ್ ಸುನಿಲ್ ದಾರಿಪುರ ಇನ್ನಿತರರಿದ್ದರು.

ಅಪರಿಚಿತ ವ್ಯಕ್ತಿ ಶವ ಪತ್ತೆ

ಮೈಸೂರು: ನ.24ರಂದು ಸುಮಾರು 35ರಿಂದ 40 ವರ್ಷದ ಅಪರಿಚಿತ ವ್ಯಕ್ತಿ ಶವ ವರುಣ ಕೆರೆಯಲ್ಲಿ ಪತ್ತೆಯಾಗಿದ್ದು, ವರುಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ದುಂಡು ಮುಖ, ದೃಢಕಾಯ ಶರೀರ, ಕಪ್ಪು ಕೂದಲು, ಕುರುಚಲು ಗಡ್ಡ, ಮೈಮೇಲೆ ಕ್ರೀಂ ಬಣ್ಣದ ಅರೆ ತೋಳಿನ ಟೀ ಶರ್ಟ್, ನೀಲಿ ಬಣ್ಣದ ಅಂಡರ್ ವೇರ್ ಧರಿಸಿರುತ್ತಾರೆ. ಮೃತನ ಮೈ ನೀರಿನಲ್ಲಿ ನೆನೆದು ಚರ್ಮ ಸುಲಿದಂತೆ ಊದಿಕೊಂಡಿದೆ. ಮೃತನ ವಾರಸುದಾರರ ಬಗ್ಗೆ ಮಾಹಿತಿ ಕಂಡು ಬಂದಲ್ಲಿ ಮೈಸೂರು ಜಿಲ್ಲೆಯ ಪೊಲೀಸ್ ಠಾಣೆಯ ದೂ.ಸಂ:0821–2520040, ಮೈಸೂರು ಜಿಲ್ಲಾ ಕಂಟ್ರೋಲ್ ರೂಂ: 0821–2444800, ವರುಣ ಪೊಲೀಸ್ ಠಾಣೆಯ ದೂ.ಸಂ:0821–2594411, ಪಿಎಸ್‌ಐ–9480805052 ಸಂಪರ್ಕಿಸಬಹುದು.

ನಾಳೆ ವಿವಿಧೆಡೆ ವಿದ್ಯುತ್ ವ್ಯತ್ಯಯ

ಮೈಸೂರು,ಡಿ.1–ತುರ್ತು ನಿರ್ವಹಣಾ ಕಾಮಗಾರಿ ನಿಮಿತ್ತ ಡಿ.3ರಂದು ಬೆಳಿಗ್ಗೆ 10ರಿಂದ ಸಂಜೆ 6ರವರೆಗೆ ಎಸ್‌ಎಸ್ ನಗರ, ಕಾವೇರಿನಗರ, ಸಿದ್ದಿಖ್‌ನಗರ, ಬಿ ಮತ್ತು ಸಿ ಬಡಾವಣೆ, ಬನ್ನಿಮಂಟಪ, ಹೈವೆ ವೃತ್ತ, ಮೇದರ್ ಬ್ಲಾಕ್, ಹನುಮಂತ ನಗರ, ಹಲೀಮ್‌ನಗರ, ಬಾಲಭವನ, ಜೆಎಸ್‌ಎಸ್ ನಗರ ಡೆಂಟಲ್ ಕಾಲೇಜ್, ಸೇಂಟ್ ಜೋಸೆಫ್ ಆಸ್ಪತ್ರೆ, ಲಕ್ಷ್ಮಿಪುರಂ, ವರುಣ, ಸಿದ್ದಲಿಂಗಪುರ, ಕಳಸ್ತವಾಡಿ, ಶಾದನಹಳ್ಳಿ, ನಾಗನಹಳ್ಳಿ ಹಾಗೂ ಸುತ್ತ–ಮುತ್ತ ವಿದ್ಯುತ್ ವ್ಯತ್ಯಯವಾಗಲಿದೆ.



ಮೈಸೂರಿನ ಹಳೆನಾಡು ಸೋಸಲೆ ಕರ್ನಾಟಕ ಬ್ರಾಹ್ಮಣ ಸಂಘದ ವಾರ್ಷಿಕ ಸರ್ವ ಸದಸ್ಯರ ಮಹಾಸಭೆಯಲ್ಲಿ ಸಂಘದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಶಾಸಕ ಶ್ರೀವತ್ಸ ಪ್ರತಿಭಾ ಪುರಸ್ಕಾರ ನೀಡಿದರು. ಈ ವೇಳೆ ಸಂಘದ ಅಧ್ಯಕ್ಷ ಪಿ.ಸತೀಶ್, ಕಾರ್ಯದರ್ಶಿ ಆರ್.ಮಹೇಶ್‌ಕುಮಾರ್, ಖಜಾಂಚಿ ಎಸ್.ಎಲ್.ನಾಗರಾಜ್, ಸಹಕಾರ್ಯದರ್ಶಿ ಶಂಕರ್‌ನಾರಾಯಣ್, ನಿರ್ದೇಶಕರಾದ ಪ್ರವೀಣ್‌ಕುಮಾರ್, ಸುಮತಿ ಮುರಳಿ ಕೃಷ್ಣ, ಜಯಶ್ರೀ ಶಿವರಾಂ, ಅಶ್ವಿನಿ ಪ್ರಕಾಶ್, ಸುದರ್ಶನ್, ಗೋವಿಂದ್‌ರಾವ್ ಇನ್ನಿತರರಿದ್ದರು.

ದೇಶ – ವಿದೇಶ

ಕೆಲಸ ಸಿಕ್ಕಿಲ್ಲವೆಂದು ಕಳ್ಳತನಕ್ಕಿಳಿದ ಪದವೀಧರ



ಬೆಂಗಳೂರು: ಕೆಲಸ ಸಿಕ್ಕಿಲ್ಲವೆಂದು ಕಳ್ಳತನಕ್ಕಿಳಿದಿದ್ದ ಪದವೀಧರನನ್ನು ಮೈಕೊ ಲೇಔಟ್ ಠಾಣೆಯ ಪೊಲೀಸರು ಬಂಧಿಸಿದ್ದಾರೆ. ಆಂಧ್ರಪ್ರದೇಶದ ಚಿತ್ತೂರಿನ ಗೋವರ್ಧನ್ ಬಂಧಿತ. ಆರೋಪಿಯಿಂದ 21 ಲ್ಯಾಪ್‌ಟಾಪ್ ವಶಕ್ಕೆ ಪಡೆದುಕೊಳ್ಳಲಾಗಿದೆ ಎಂದು ಪೊಲೀಸರು ಹೇಳಿದರು.

ಕೆಲಸ ಹುಡುಕಿಕೊಂಡು ನಾಲ್ಕು ತಿಂಗಳ ಹಿಂದೆ ನಗರಕ್ಕೆ ಬಂದಿದ್ದ ಆರೋಪಿ, ಸ್ನೇಹಿತನ ಜತೆಗೆ ಪೇಯಿಂಗ್ ಗೆಸ್ಟ್‌ನಲ್ಲಿ ನೆಲಸಿದ್ದ. ಬಿ.ಎ ಪದವಿ ಪಡೆದಿದ್ದ ಆರೋಪಿ, ನಗರದ ವಿವಿಧೆಡೆ ಕೆಲಸಕ್ಕಾಗಿ ಹುಡುಕಾಟ ನಡೆಸಿದ್ದ. ಉತ್ತಮ ಕೆಲಸ ದೊರೆಯದೇ ನಿರಾಶೆಗೊಂಡಿದ್ದ ಆತ, ಸ್ನೇಹಿತನ ಲ್ಯಾಪ್‌ಟಾಪ್ ಕಳ್ಳತನ ಮಾಡಿ ಕಡಿಮೆ ಬೆಲೆಗೆ ಮಾರಾಟ ಮಾಡಿದ್ದ. ನಂತರ, ಇದನ್ನೇ ರೂಢಿಸಿಕೊಂಡಿದ್ದ ಆರೋಪಿ ವಿವಿಧ ಪಿ.ಜಿಗಳನ್ನು ಗುರಿಯಾಗಿಸಿಕೊಂಡು ಲ್ಯಾಪ್‌ಟಾಪ್ ಹಾಗೂ ಮೊಬೈಲ್ ಕಳ್ಳತನ ಮಾಡುತ್ತಿದ್ದ ಎಂದು ಪೊಲೀಸರು ಹೇಳಿದರು. 'ಮೈಕೊ ಲೇಔಟ್ ಪೊಲೀಸ್ ಠಾಣೆಯಲ್ಲಿ ದಾಖಲಾಗಿದ್ದ ಪ್ರಕರಣದ ತನಿಖೆ ವೇಳೆ ಆರೋಪಿ ಬಂಧನವಾಗಿದ್ದು, 21 ಲ್ಯಾಪ್‌ಟಾಪ್‌ಗಳನ್ನು ವಶಕ್ಕೆ ಪಡೆಯಲಾಗಿದೆ ಎಂದು ಪೊಲೀಸರು ಹೇಳಿದರು.

ಆಸ್ಟ್ರಿಯಾ ಬ್ಯೂಟಿ ಇನ್ ಫ್ಲುಯೆನ್ಸರ್ ಹತ್ಯೆ

ವಿಯೆನ್ನಾ): ಆಸ್ಟ್ರಿಯಾದ ಬ್ಯೂಟಿ ಇನ್ ಫ್ಲುಯೆನ್ಸರ್ ಸ್ಟೆಫಾನಿ ಪೀಪರ್(31) ಅವರನ್ನು ಆಕೆಯ ಮಾಜಿ ಪ್ರಿಯಕರ ಹತ್ಯೆಗೈದು, ಆಕೆಯ ದೇಹವನ್ನು ಸೂಟ್‌ಕೇಸ್‌ನಲ್ಲಿ



ಬಚ್ಚಿಟ್ಟು ಕಾಡಿನಲ್ಲಿ ಹೂತು ಹಾಕಿರುವ ಘಟನೆ ತಡವಾಗಿ ಬೆಳಕಿಗೆ ಬಂದಿದೆ. ಕಳೆದ ಒಂದು ವಾರದ ಹಿಂದೆ ಸ್ಟೆಫಾನಿ ನಾಪತ್ತೆಯಾಗಿದ್ದರು. ಆದರೆ ಮಾಜಿ ಪ್ರಿಯಕರ ಆಕೆಯನ್ನು ಕೊಂದು ಹಾಕಿರುವ ವಿಚಾರದ ಬಗ್ಗೆ ತಪ್ಪೊಪ್ಪಿಕೊಂಡ ನಂತರ ಸ್ಟೆಫಾನಿ ಶವ ಹೂತು ಹಾಕಿರುವ ಸ್ಥಳವನ್ನು ಪೊಲೀಸರು ಪತ್ತೆ ಹಚ್ಚಿರುವುದಾಗಿ ವರದಿ ವಿವರಿಸಿದೆ.

ಆಸ್ಟ್ರೇಲಿಯಾ ಮಾಧ್ಯಮ ವರದಿ ಪ್ರಕಾರ, ನವೆಂಬರ್ 23ರಂದು ಪಾರ್ಟಿ ಮುಗಿಸಿಕೊಂಡು ಮನೆಗೆ ವಾಪಸ್ ಆಗುತ್ತಿದ್ದ ವೇಳೆ ಸ್ಟೆಫಾನಿ ನಾಪತ್ತೆಯಾಗಿದ್ದಳು. ತಾನು ಮನೆಗೆ ಸುರಕ್ಷಿತವಾಗಿ ತಲುಪಿರುವುದಾಗಿ ಸ್ಟೆಫಾನಿ ಗೆಳೆಯನಿಗೆ ಸಂದೇಶ ಕಳುಹಿಸಿದ್ದಳು. ಆದರೆ ಬಳಿಕ, ತನ್ನ ಮನೆಯ ಮೆಟ್ಟಿಲ ಗೋಡೆ ಬಳಿ ಯಾರೋ ಇದ್ದಿರುವಂತಿದೆ ಎಂದು ಮತ್ತೊಂದು ಸಂದೇಶ ಕಳುಹಿಸಿದ್ದಳು. ನೆರೆಹೊರೆಯವರು ಮಾಧ್ಯಮಕ್ಕೆ ನೀಡಿದ್ದ ಪ್ರತಿಕ್ರಿಯೆಯಲ್ಲಿ, ಕಟ್ಟಡದಲ್ಲಿ ಸ್ಟೆಫಾನಿ ಮತ್ತು ಆಕೆಯ ಮಾಜಿ ಪ್ರಿಯಕರನ ನಡುವೆ ವಾಗ್ವಾದ ನಡೆಯುತ್ತಿರುವುದು ಕೇಳಿಸಿಕೊಂಡಿದ್ದೆವು. ಆ ಬಳಿಕ ಏನಾಯಿತು ಎಂದು ತಮಗೆ ತಿಳಿದಿಲ್ಲ ಎಂದು ತಿಳಿಸಿದ್ದಾರೆ.

ಮದುವೆಗೆ ಬಂದವರಿಗೆಗೆ ಹೆಲ್ಮೆಟ್ ಗಿಫ್ಟ್ ನೀಡಿದ ಕುಟುಂಬ!

ಜೈಪುರ: ಮದುವೆಗೆ ಬರುವ ಅತಿಥಿಗಳಿಗೆ ಉಡುಗೊರೆ ನೀಡುವುದು ವಾಡಿಕೆ. ಅದರಂತೆ ತರಹೇವಾರಿ ಗಿಫ್ಟ್‌ಗಳನ್ನು



ಮದುವೆ ಮನೆಯವರು ನೀಡುತ್ತಾರೆ. ಆದರೆ, ಇಲ್ಲೊಂದು ಮದುವೆಯಲ್ಲಿ ಅತಿಥಿಗಳಿಗೆ ಸಿಕ್ಕ ಉಡುಗೊರೆ ವಿಶೇಷ ಮತ್ತು ಅರ್ಥಪೂರ್ಣವಾಗಿದೆ. ರಾಜಸ್ಥಾನದ ಕುಚಮನ್ ನಗರದ ಪಟ್ವಾರಿ ಕಿ ಕೋಠಿಯ ನಿವಾಸಿ ಮನೋಜ್ ಬರ್ವಾಲ್ ಅವರ ಪುತ್ರಿ ಸೋನು ಎಂಬಾಕೆ ಯಶ್ ಬೇಡ್ವಾಲ್ ಎಂಬವರ ಜೊತೆ ಸಪ್ತಪದಿ ತುಳಿದಿದ್ದಾರೆ. ಈ ವೇಳೆ ಮದುವೆಗೆ ಆಗಮಿಸಿದ ಅತಿಥಿಗಳಿಗೆ ಅವರ ಕುಟುಂಬವು ಹೆಲ್ಮೆಟ್‌ನ್ನು ಉಡುಗೊರೆಯಾಗಿ ನೀಡಿದೆ. ವೇದಿಕೆ ಮೇಲೆ ಹೆಲ್ಮೆಟ್ ಜೊತೆಗೆ ಅತಿಥಿಗಳು ಫೋಟೋ ತೆಗೆಸಿಕೊಂಡಿದ್ದಾರೆ. ಮದುವೆಯಲ್ಲಿ ಸುಮಾರು 286 ಮಂದಿಗೆ ತಲಾ ಒಂದು ಹೆಲ್ಮೆಟ್ ನೀಡಲಾಗಿದೆ. ಈ ಯೋಜನೆ ವಧುವಿನ ಅಜ್ಜನದ್ದು ಎಂದು ಗೊತ್ತಾಗಿದೆ. ರಸ್ತೆ ಸಂಚಾರ ಜಾಗೃತಿ ಮೂಡಿಸಲು ಈ ವಿನೂತನ ಮಾದರಿ ಅನುಸರಿಸಿದ್ದಾರೆ. ಮೊಮ್ಮಗಳ ಮದುವೆಗೆ ಬಂದ ಅತಿಥಿಗಳಿಗೆ ಶಿರಸ್ತ್ರಾಣ ನೀಡಿ, ಇದನ್ನು ಬೈಕ್‌ನಲ್ಲಿ ಪಯಣಿಸುವಾಗ ಬಳಸಿ ಎಂದು ಸಲಹೆ ನೀಡಿದ್ದಾರೆ.

ಭೂ ಹಗರಣ: ಶೇಖ್ ಹಸೀನಾ, ಬ್ರಿಟನ್ ಸಂಸದೆ ತುಲಿಪ್‌ಗೆ ಜೈಲು

ಢಾಕಾ: ಬಾಂಗ್ಲಾದೇಶದ ಪದಚ್ಯುತ ಪ್ರಧಾನಿ ಶೇಖ್



ಹಸೀನಾ ಹಾಗೂ ಅವರ ಸೋದರ ಸಂಬಂಧಿ, ಬ್ರಿಟನ್‌ನ ಸಂಸದೆ ತುಲಿಪ್ ರಿಜ್ವಾನಾ ಸಿದ್ದಿಕ್ ಅವರನ್ನು ಭೂ ಹಗರಣ ಪ್ರಕರಣವೊಂದರಲ್ಲಿ ದೋಷಿಗಳು ಎಂದು ಬಾಂಗ್ಲಾ ದೇಶದ ನ್ಯಾಯಾಲಯವೊಂದು ಘೋಷಿಸಿದೆ. ಅಪರಾಧಿಗಳಿಗೆ ಕ್ರಮವಾಗಿ 5 ವರ್ಷ ಹಾಗೂ 2 ವರ್ಷ ಜೈಲು ಶಿಕ್ಷೆ ವಿಧಿಸಿದೆ. 17 ಮಂದಿ ವಿರುದ್ಧ ದಾಖಲಿಸಲಾಗಿದ್ದ ಈ ಭ್ರಷ್ಟಾಚಾರ ಪ್ರಕರಣದಲ್ಲಿ ಹಸೀನಾ ಅವರ ಸಹೋದರಿ ಶೇಖ್ ರಿಹಾನಾ ಅವರಿಗೂ 7 ವರ್ಷಗಳ ಜೈಲು ಶಿಕ್ಷೆಯನ್ನು ಢಾಕಾದ ವಿಶೇಷ ನ್ಯಾಯಾಲಯದ ನ್ಯಾಯಮೂರ್ತಿ ಮೊಹಮ್ಮದ್ ರಬೀವುಲ್ ಆಲಂ ಘೋಷಿಸಿದ್ದಾರೆ. ಹಸೀನಾ, ತುಲಿಪ್, ರಿಹಾನಾ ಅನುಪಸ್ಥಿತಿಯಲ್ಲೇ ತೀರ್ಪು ನೀಡಿದ್ದು, ಇನ್ನಿತರ 14 ಮಂದಿ ಅಪರಾಧಿಗಳಿಗೆ ತಲಾ 5 ವರ್ಷಗಳ ಜೈಲು ಶಿಕ್ಷೆ ವಿಧಿಸಲಾಗಿದೆ. ಜತೆಗೆ ಎಲ್ಲಾ 17 ಅಪರಾಧಿಗಳಿಗೂ ತಲಾ 1 ಲಕ್ಷ ದಂಡ ವಿಧಿಸಲಾಗಿದೆ. ದಂಡ ಪಾವತಿಸುವಲ್ಲಿ ವಿಫಲರಾದರೆ ಅಪರಾಧಿಗಳು ಹೆಚ್ಚುವರಿ 6 ತಿಂಗಳ ಜೈಲು ಶಿಕ್ಷೆ ಅನುಭವಿಸಬೇಕಾಗುತ್ತದೆ ಎಂದೂ ಕೋರ್ಟ್ ತಿಳಿಸಿದೆ. ಹಸೀನಾ ಅವರು ಅಧಿಕಾರದಲ್ಲಿದ್ದ ಸಂದರ್ಭದಲ್ಲಿ ತಮಗಾಗಿ ಹಾಗೂ ತಮ್ಮ ಸಹೋದರಿ ಮತ್ತು ಅವರ ಮಕ್ಕಳಿಗಾಗಿ ಅಕ್ರಮವಾಗಿ ಆಸ್ತಿ ಸಂಪಾದಿಸಿದ್ದ ಪ್ರಕರಣ ಇದಾಗಿದೆ.

ಪತ್ನಿ ಕೊಂದು ಸೆಲ್ಫಿ ತೆಗೆದು ವಾಟ್ಸಾಪ್ ಸ್ಟೇಟಸ್ ಹಾಕಿ ವಿಕೃತಿ ಮೆರೆದ ಪತಿ!

ಕೊಯಮತ್ತೂರು: ಪತಿಯೊಬ್ಬ ಮಹಿಳಾ ಹಾಸ್ಟೆಲ್‌ಗೆ ನುಗ್ಗಿ



ತನ್ನ ಪತ್ನಿಯನ್ನು ಭೀಕರವಾಗಿ ಹತ್ಯೆಗೈದಿರುವುದಲ್ಲದೆ, ಶವದೊಂದಿಗೆ ಸೆಲ್ಫಿ ಕ್ಲಿಕ್ಕಿಸಿ ವಾಟ್ಸಾಪ್ ಸ್ಟೇಟಸ್ ಹಾಕುವ ಮೂಲಕ ವಿಕೃತಿ ಮೆರೆದಿದ್ದಾನೆ. ಕೊಲೆಯಾದ ದುರ್ದೈವಿ ಶ್ರೀಪ್ರಿಯಾ, ತಿರುನೆಲ್ವೇಲಿ ಮೂಲದವರಾಗಿದ್ದು, ಕೌಟುಂಬಿಕ ಕಲಹದ ಹಿನ್ನೆಲೆಯಲ್ಲಿ ಪತಿ ಬಾಲಮುರುಗನ್‌ನಿಂದ ದೂರವಾಗಿದ್ದರು. ಕೊಯಮತ್ತೂರಿನ ಖಾಸಗಿ ಸಂಸ್ಥೆಯೊಂದರಲ್ಲಿ ಕೆಲಸ ಮಾಡುತ್ತಿದ್ದ ಅವರು ಅಲ್ಲಿನ ಮಹಿಳಾ ಹಾಸ್ಟೆಲ್‌ನಲ್ಲಿ ವಾಸವಾಗಿದ್ದರು. ಭಾನುವಾರ ಮಧ್ಯಾಹ್ನ ಪತ್ನಿ ಶ್ರೀಪ್ರಿಯಾಳನ್ನು ಮಾತನಾಡಿಸಬೇಕೆಂದು ನೆಪ ಹೇಳಿ ಹಾಸ್ಟೆಲ್‌ಗೆ ಬಂದಿದ್ದಾನೆ. ಆದರೆ ಆತ ಬಟ್ಟೆಯೊಳಗೆ ಕುಡುಗೋಲನ್ನು ಬಚ್ಚಿಟ್ಟುಕೊಂಡು ಬಂದಿದ್ದ. ಇಬ್ಬರ ನಡುವೆ ಮಾತಿನ ಚಕಮಕಿ ನಡೆದ ತಕ್ಷಣವೇ, ಬಾಲಮುರುಗನ್ ತನ್ನಲ್ಲಿದ್ದ ಮಚ್ಚಿನಿಂದ ಶ್ರೀಪ್ರಿಯಾಳನ್ನು ಕೊಚ್ಚಿ ಕೊಲೆ ಮಾಡಿದ್ದಾನೆ. ಪತ್ನಿ ರಕ್ತದ ಮಡುವಿನಲ್ಲಿ ಬಿದ್ದಿದ್ದರೂ ವಿಚಲಿತನಾಗದ ಹಂತಕ, ಆಕೆ ಶವದೊಂದಿಗೆ ಸೆಲ್ಫಿ ತೆಗೆದುಕೊಂಡಿದ್ದಾನೆ. ಅಷ್ಟೇ ಅಲ್ಲದೆ, ಈಕೆ ನನಗೆ ದ್ರೋಹ ಬಗೆದಿದ್ದಾಳೆ ಎಂದು ಬರೆದು ಆ ಫೋಟೋವನ್ನು ತನ್ನ ವಾಟ್ಸಾಪ್ ಸ್ಟೇಟಸ್‌ಗೆ ಅಪ್‌ಲೋಡ್ ಮಾಡಿದ್ದಾನೆ. ಪೊಲೀಸರು ಆರೋಪಿಯನ್ನು ಬಂಧಿಸಿದ್ದಾರೆ.

ಪಾಲಿಬೆಟ್ಟದಲ್ಲಿ ಸಿಎನ್‌ಸಿಯಿಂದ ಮಾನವ ಸರಪಳಿ ಪ್ರತಿಭಟನೆ



ಕೊಡವ ನ್ಯಾಷನಲ್ ಕೌನ್ಸಿಲ್ ಸಂಘಟನೆ ಪಾಲಿಬೆಟ್ಟದಲ್ಲಿ ನಡೆದ 21ನೇ ಮಾನವ ಸರಪಳಿ ರಚಿಸಿ ಪ್ರತಿಭಟನೆ ನಡೆಸಿತು.

ಮಡಿಕೇರಿ,ಡಿ.1–ಕೊಡವರು ಪ್ರತ್ಯೇಕವಾಗಿ 'ಕೊಡವ' ಎಂದು ದಾಖಲೀಕರಣಗೊಳ್ಳುವಂತೆ ಜನಜಾಗೃತಿ ಮೂಡಿಸುವ ಸಲುವಾಗಿ ಕೊಡವ ನ್ಯಾಷನಲ್ ಕೌನ್ಸಿಲ್ ಸಂಘಟನೆ ವತಿಯಿಂದ ಪಾಲಿಬೆಟ್ಟದಲ್ಲಿ ನಡೆದ 21ನೇ ಮಾನವ ಸರಪಳಿ ರಚಿಸಿ ಪ್ರತಿಭಟನೆ ನಡೆಸಿತು.


ದೇಶಕ್ಕೆ ಕೊಡವರ ಕಾಣಿಕೆ ಏನೇನೂ ಇಲ್ಲ ಎಂದು ಪ್ರತಿಬಿಂಬಿಸುವ ಮೂಲಕ ಕೊಡವರನ್ನು ಖಳನಾಯಕರಂತೆ ತೋರಿಸುವ ಕ್ರೂರ ಹುನ್ನಾರ ಮುಂದುವರೆದಿದೆ. ಕೊಡವ ಲ್ಯಾಂಡ್‌ಗಾಗಿ ಒತ್ತಾಯಿಸಿ ಮತ್ತು ಕೊಡವರ ಕುರಿತು ಸುಳ್ಳು ಚರಿತ್ರೆ ಸೃಷ್ಟಿಯ ವಿರುದ್ಧ ಜನಜಾಗೃತಿ ಮೂಡಿಸಲು ಜನವರಿ ತಿಂಗಳಿನಿಂದ ಜಿಲ್ಲೆಯಾದ್ಯಂತ ಅಭಿಯಾನ ನಡೆಸಲಾಗುವುದು ಎಂದು ಸಿಎನ್‌ಸಿ ಅಧ್ಯಕ್ಷ ಎನ್.ಯು.ನಾಚಪ್ಪ ತಿಳಿಸಿದರು.

ಕೊಡವರು ಯಾವುದೇ ಧರ್ಮ ಅಥವಾ ಜಾತಿಗೆ ಸೇರಿದವರಲ್ಲ. ಆದರೆ ಇಂದು ಜನಗಣತಿಯೂ ಸೇರಿದಂತೆ ರಾಜ್ಯದ ದಾಖಲೆಗಳ ಎಲ್ಲಾ ಕಾಲಂಗಳು ಈ ದೇಶದ ಬಹುಧರ್ಮ, ಪ್ರಬಲಧರ್ಮ ಮತ್ತು ಬಲಾಢ್ಯ ಜಾತಿಯನ್ನು ದೃಷ್ಟಿಯಲ್ಲಿಟ್ಟುಕೊಂಡು ರಚಿಸಲ್ಪಟ್ಟಿದೆ. ಧರ್ಮ ಮತ್ತು ಜಾತಿ ಬಗ್ಗೆ ಮಾತ್ರ ಉಲ್ಲೇಖ ಇರುವುದರಿಂದ ಕೊಡವರು ಅನಿವಾರ್ಯವಾಗಿ ಧರ್ಮ ಮತ್ತು ಜಾತಿ ಕಾಲಂಗಳನ್ನು ಒಪ್ಪಿಕೊಂಡು ಕೊಡವ ಎಂದು ದಾಖಲಿಸಬೇಕಾದ ಪರಿಸ್ಥಿತಿ ಬಂದಿದೆ. 22ನೇ ಕೊಡವ ಜನಜಾಗೃತಿ ಮಾನವ ಸರಪಳಿ ಕಾರ್ಯಕ್ರಮ ಡಿ.15ರಂದು ತಿತಿಮತಿಯಲ್ಲಿ ನಡೆಯಲಿದೆ ಎಂದು ಹೇಳಿದರು.

ಇಲ್ಲಿಯವರೆಗೆ ಬಿರುನಾಣಿ, ಟಿ.ಶೆಟ್ಟಿಗೇರಿ, ಕಡಂಗ, ಕಕ್ಕಬ್ಬೆ, ಬಾಳೆಲೆ, ಪೊನ್ನಂಪೇಟೆ, ಮಾದಾಪುರ, ಸುಂಟಿಕೊಪ್ಪ, ಸಿದ್ದಾಪುರ, ನಾಪೋಕ್ಲು, ಗೋಣಿಕೊಪ್ಪ, ವಿರಾಜಪೇಟೆ, ಮೂರ್ನಾಡು, ಚೇರಂಬಾಣೆ, ಚೆಟ್ಟಳ್ಳಿ, ಅಮ್ಮತ್ತಿ, ಶ್ರೀಮಂಗಲ, ಬಿಟ್ಟಂಗಾಲ, ಹುದಿಕೇರಿ, ಕುಟ್ಟದಲ್ಲಿ ಜನಜಾಗೃತಿ ಕಾರ್ಯಕ್ರಮ ಯಶಸ್ವಿಯಾಗಿ ನಡೆದಿದೆ ಎಂದರು.

ಪಟ್ಟಮಾಡ ಲಲಿತಾ ಗಣಪತಿ, ಪಟ್ಟಮಾಡ ಸೌಮ್ಯ ಪೃಥ್ವಿ, ಪಚ್ಚಾರಂಡ ಶಾಂತಿ ಪೊನ್ನಪ್ಪ, ನಂದಿನೆರವಂಡ ರೇಖಾ, ಕುಟ್ಟಂಡ ಲೀಸ್ಸ ಸೋಮಣ್ಣ, ನೆಲ್ಲಮಕ್ಕಡ ವಿವೇಕ್, ಮೂಕೊಂಡ ದಿಲೀಪ್, ಕುಟ್ಟಂಡ ಸೋಮಣ್ಣ, ಮಾಳೇಟಿರ ಸಾಬು, ಕುಟ್ಟಂಡ ರವಿ ಮತ್ತಿತರರು ಪಾಲ್ಗೊಂಡು ಗುರು–ಕಾರೋಣ–ಸೂರ್ಯ–ಚಂದ್ರ, ಜಲದೇವಿ ಕಾವೇರಿ, ಪರ್ವತ ದೇವಿ, ಪ್ರಕೃತಿ ದೇವಿ, ಭೂದೇವಿ ಮತ್ತು ಪವಿತ್ರ ಸಂವಿಧಾನದ ಹೆಸರಿನಲ್ಲಿ ಸಿಎನ್‌ಸಿ ಹೋರಾಟದ ಪರ ಪ್ರತಿಜ್ಞಾವಿಧಿ ಸ್ವೀಕರಿಸಿದರು.

ಶಿಕ್ಷಣ, ಉದ್ಯೋಗಕ್ಕಾಗಿ ಜಿಲ್ಲೆ ಬಿಟ್ಟು ಹೋಗಬೇಡಿ



ಮೂರ್ನಾಡಿನ ಮಾರುತಿ ವಿದ್ಯಾ ಸಂಸ್ಥೆಯ 42ನೇ ವಾರ್ಷಿಕೋತ್ಸವದಲ್ಲಿ ಪೊನ್ನಂಪೇಟೆ ನಿವೃತ್ತ ಡೀನ್ ಚೆಪ್ಪುಡಿರ ಜಿ. ಕುಶಾಲಪ್ಪ ಮಾತನಾಡಿದರು.

ನಾಪೋಕ್ಲು, ಡಿ.1–ಕೊಡಗಿನಲ್ಲಿ ವಿಪುಲ ಅವಕಾಶ ಇರುವುದರಿಂದ ಮಕ್ಕಳು ಉದ್ಯೋಗ ಮತ್ತು ಶಿಕ್ಷಣಕ್ಕಾಗಿ ಜಿಲ್ಲೆ ಬಿಟ್ಟು ಹೋಗುವ ಅವಶ್ಯಕತೆ ಇಲ್ಲ ಎಂದು ಪೊನ್ನಂಪೇಟೆ ಅರಣ್ಯ ವಿದ್ಯಾಲಯದ ನಿವೃತ್ತ ಡೀನ್ ಚೆಪ್ಪುಡಿರ ಜಿ. ಕುಶಾಲಪ್ಪ ಹೇಳಿದ್ದಾರೆ.

ಸಮೀಪದ ಮೂರ್ನಾಡಿನ ಮಾರುತಿ ವಿದ್ಯಾಸಂಸ್ಥೆಯ 42ನೇ ವಾರ್ಷಿಕೋತ್ಸವದಲ್ಲಿ ಮಾತನಾಡಿದ ಅವರು, ವಿದ್ಯಾರ್ಥಿಗಳು ನಿರ್ದಿಷ್ಟ ಗುರಿಯನ್ನು ಇಟ್ಟುಕೊಂಡು ಅದನ್ನು ಈಡೇರಿಸುವ ದಿಶೆಯಲ್ಲಿ ನಿರಂತರ ಕನಸು ಕಾಣುವಂತಾಗಬೇಕು. ಪಿಯುಸಿ ಹಂತದಲ್ಲಿ ತಮ್ಮ ಮುಂದಿನ ಗುರಿಗೆ ಅನುಗುಣವಾಗಿ ವಿಷಯಗಳನ್ನು ಆಯ್ಕೆ ಮಾಡಿಕೊಂಡು ಅದಕ್ಕೆ ತಕ್ಕಂತೆ ಪ್ರಾಮಾಣಿಕ ಪ್ರಯತ್ನವೂ ಇರಬೇಕು. ಎಲ್ಲಾ ಕ್ಷೇತ್ರದಲ್ಲೂ ವಿಪುಲ ಅವಕಾಶವಿರುವುದರಿಂದ ಯಾರು ಕೂಡ ಇಂದು ನಿರುದ್ಯೋಗಿ ಎನ್ನುವಂತಿಲ್ಲ ಎಂದು ಅಭಿಪ್ರಾಯಪಟ್ಟರು.

ಆಡಳಿತ ಮಂಡಳಿಯ ಅಧ್ಯಕ್ಷ ಮುಂಡಂಡ ಕೆ.ಅಪ್ಪಚ್ಚು ಮಾತನಾಡಿ, ವಿದ್ಯಾರ್ಥಿಗಳು ಶಿಸ್ತು, ಪ್ರಾಮಾಣಿಕತೆ, ಶ್ರದ್ಧೆ ಮತ್ತು ಮಾನವೀಯ ಮೌಲ್ಯಗಳನ್ನು ತಮ್ಮ ಬದುಕಿನುದ್ದಕ್ಕೂ ಅಳವಡಿಸಿಕೊಂಡು ದೇಶದ ಸತ್ಪ್ರಜೆಗಳಾಗಿ ಎಂದರು.

ಪ್ರಾಂಶುಪಾಲೆ ಸುಮಿತ ವಾರ್ಷಿಕ ವರದಿ ಮಂಡಿಸಿದರು. ಉಪ ಪ್ರಾಂಶುಪಾಲೆ ಹೇಮಾವತಿ, ಆಡಳಿತ ಮಂಡಳಿಯ ಉಪಾಧ್ಯಕ್ಷ ಚೇಂದ್ರಿಮಡ ಗಿಲ್ ಸೋಮಯ್ಯ, ಗೌರವ ಕಾರ್ಯದರ್ಶಿ ಬಡುವಂಡ ಅರುಣ್ ಅಪ್ಪಚ್ಚು, ನಿರ್ದೇಶಕರಾದ ಮುಂಡಂಡ ನೀಲವ್ವ ಮುತ್ತಣ್ಣ, ಬಡುವಂಡ ನೀಲಮ್ಮ ಮುತ್ತಪ್ಪ, ಚೇಂದ್ರಿಮಡ ರೂಪ ಸೋಮಯ್ಯ, ಸಿಬ್ಬಂದಿ ಉಪಸ್ಥಿತರಿದ್ದರು. ವಿದ್ಯಾರ್ಥಿಗಳಾದ ಲಿಂಚನ ತಂಡದವರು ಪ್ರಾರ್ಥಿಸಿ ರಿತೇಶ್ ಸ್ವಾಗತಿಸಿದರು. ವಾರ್ಷಿಕೋತ್ಸವದ ಪ್ರಯುಕ್ತ ನಡೆಸಲಾದ ಸ್ಪರ್ಧೆಗಳು, ಕ್ರೀಡೆ ಮತ್ತು ವಾರ್ಷಿಕ ಪರೀಕ್ಷೆಯಲ್ಲಿ ಅತಿ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳಿಗೆ ಬಹುಮಾನವನ್ನು ವಿತರಿಸಿ ಶುಭ ಹಾರೈಸಿದರು.

ಗಂಗಮ್ಮ ಗಂಗಿ ನಿಧನ



ನಾಪೋಕ್ಲು, ಡಿ.1– ಸ್ಥಳೀಯ ನಿವಾಸಿ ನಾಯಕಂಡ ದಿ.ಚಿಣ್ಣಪ್ಪ ಅವರ ಪತ್ನಿ ಗಂಗಮ್ಮ ಗಂಗಿ (86) ನಿನ್ನೆ ನಿಧನರಾದರು.

ಮೃತರ ಅಂತ್ಯಕ್ರಿಯೆ ಕೈಕಾಡ ಗ್ರಾಮ ನಾಯ ಕಂಡ ಕುಟುಂಬದ ರುದ್ರಭೂಮಿಯಲ್ಲಿ ನೆರವೇರಿಸಲಾಯಿತು. ಮೃತರು ಪುತ್ರ, ಮೂವರು ಪುತ್ರಿಯರು ಸೇರಿದಂತೆ ಬಂಧು ಬಳಗವನ್ನು ಆಗಲಿದ್ದಾರೆ.

ಚಂದ್ರಶೇಖರ ಪುಟ್ಟು



ನಾಪೋಕ್ಲು: ಇಲ್ಲಿಗೆ ಸಮೀಪದ ಚೆರಂಡೇಟಿ ಗ್ರಾಮದ ಪಾಣತಲೆ ಚಂದ್ರಶೇಖರ ಪುಟ್ಟು(59) ಸೋಮವಾರ ನಿಧನರಾದರು.

ಮೃತರ ಅಂತ್ಯಕ್ರಿಯೆ ಸೋಮವಾರ ಮೃತರ ಸ್ವಗ್ರಾಮದಲ್ಲಿ ನೆರವೇರಿಸಲಾಯಿತು. ಮೃತರು ಪತ್ನಿ ಹಾಗೂ ಪುತ್ರ, ಪುತ್ರಿ ಸೇರಿದಂತೆ ಬಂಧು ಬಳಗವನ್ನು ಆಗಲಿದ್ದಾರೆ.

ಬಿಳ್ಳಿಯಪ್ಪ



ನಾಪೋಕ್ಲು: ಇಲ್ಲಿಗೆ ಸಮೀಪದ ಕಕ್ಕಬ್ಬೆ ಗ್ರಾಮ ಪಂಚಾಯಿತಿ ನಾಲಡಿ ಗ್ರಾಮದ ಮೇಕೆಕೊಪ್ಪ ನಿವಾಸಿ ಕುಡಿಯರ ಬಿಳ್ಳಿಯಪ್ಪ (ವಾಸು 62) ಸೋಮವಾರ ನಿಧನರಾದರು.

ಮೃತರ ಅಂತ್ಯಕ್ರಿಯೆ ಸ್ವಗ್ರಾಮವಾದ ನಾಲಡಿಯಲ್ಲಿ ನೆರವೇರಿಸಲಾಯಿತು. ಮೃತರು ಪತ್ನಿ, ಪುತ್ರ ಸೇರಿದಂತೆ ಬಂಧು ಬಳಗವನ್ನು ಆಗಲಿದ್ದಾರೆ.

ಸಮಾಜಕ್ಕೆ ಒಳಿತನ್ನು ಮಾಡುವುದೇ ನಿಸ್ವಾರ್ಥ ಬದುಕು



ಯುವಕವಿ ಲವಿನ್ ಲೋಪೇಸ್‌ರ ಕವನ ಸಂಕಲನವನ್ನು ಸುಮ ಚಿತ್ರಭಾನು ಮತ್ತಿತರರು ಬಿಡುಗಡೆ ಮಾಡಿದರು

ವಿರಾಜಪೇಟೆ: ಅಂತರಾಳದಲ್ಲಿ ಹುದುಗಿರುವ ವಿಭಿನ್ನ ಭಾವನೆಗಳನ್ನು ಲೋಕ ಹಿತಕ್ಕೆ ಪ್ರಚುರಪಡಿಸಿ ಸಮಾಜಕ್ಕೆ ಒಳಿತನ್ನು ಮಾಡುವುದೇ ನಿಸ್ವಾರ್ಥ ಬದುಕು ಎಂದು ಕೂರ್ಗ್ ವ್ಯಾಲಿ ಶಾಲೆಯ ಪ್ರಾಂಶುಪಾಲ ಸುಮ ಚಿತ್ರಭಾನು ಅಭಿಪ್ರಾಯಿಸಿದ್ದಾರೆ.

ಪಟ್ಟಣದ ಮೊಗರಗಲ್ಲಿಯಲ್ಲಿನ ಕಲಾ ಉತ್ಸವ ವೇದಿಕೆಯಲ್ಲಿ ನಡೆದ ಕೆದಮುಳ್ಳೂರು ಗ್ರಾಮದ ಯುವಕವಿ ಲವಿನ್ ಲೋಪೇಸ್ ಬರೆದಿರುವ 'ಮೌನದ ಮನಸ್ಸಿನಲ್ಲಿ' ಚೊಚ್ಚಲ ಕೃತಿಯ ಬಿಡುಗಡೆ ಮಾಡಿ ಮಾತನಾಡಿದ ಸುಮ ಚಿತ್ರಭಾನು ಲವಿನ್ ಎಲ್ಲರಿಗೂ ಮನ ಮುಟ್ಟುವ ಹಾಗೆ ಕವನಗಳನ್ನು ರಚಿಸಿದ್ದು, ನೆಲ, ಜಲ, ಪ್ರೀತಿ, ವ್ಯಾತ್ಸಲ್ಯ ಹಾಗೂ ರೈತರ ಬಗ್ಗೆ ಕವನ ರಚಿಸಿದ್ದಾರೆ. ಎಂದು ಶ್ಲಾಘಿಸಿದರು.

ಸಾಹಿತಿ ವಿ.ಎನ್. ರಜಿತ ಕೃತಿ ಲೋಕಾರ್ಪಣೆಗೊಳಿಸಿ ಪ್ರತಿಭಾನ್ವಿತ ಬರಹಗಾರರು ಸಮಾಜವನ್ನು ತಮ್ಮ ಭಾವನೆಗಳಿಂದ ಜೀವನವನ್ನು ವಿಭಿನ್ನವಾಗಿ ನೋಡುವ ಮೂಲಕ ಸಾಹಿತ್ಯ ರಚಿಸುವ ಜವಾಬ್ದಾರಿಯನ್ನು ನಿರ್ವಹಿಸುತ್ತಾರೆ ಎಂದರು. ಕೃತಿಯ ಕುರಿತು ಸಾಹಿತಿ ಪುಷ್ಪಲತಾ ಶಿವಪ್ಪ, ಹಿರಿಯ ಸಾಹಿತಿ ಗಿರೀಶ್ ಕಿಗ್ಗಾಲು, ಶಿಕ್ಷಕ ಮಹಮ್ಮದ್ ಶಾಫಿ, ಕೃತಿಕಾರ ಲವಿನ್ ಲೋಪೇಸ್ ಮಾತನಾಡಿದರು.

ದಿಲಿಶ್ ನಾಯರ್ ಅವರು ಕವನ ಸಂಕಲನದ ಕವನವನ್ನು ರಾಗ ಸಂಯೋಜಿಸಿ ಹಾಡಿದರು. ಸಾದಿಕ್ ಆರ್ಟ್ಸ್ ಕಲಾ ವೇದಿಕೆಯ ಸಂಸ್ಥಾಪಕ ಸಾದಿಕ್ ಹಂಸ, ಸಂಗೀತ ಶಿಕ್ಷಕರಾದ ಅನಿಮೋಳ್, ಸಾಹಿತಿ ವೈಲೇಶ್ ಕಾರ್ಯಕ್ರಮಕ್ಕೆ ಶುಭ ಕೋರಿದರು. ಕೃತಕಾರರ ಮಾತೃಶ್ರೀ ಲೂಸಿ ಡಿಸೋಜಾ, ತೆರೆಸಾ ಮಿನೇಜಸ್, ಲಿಖಿನ್ ಲೋಪೇಸ್, ದೀಪಕ್, ಸರಿತಾ, ದಿವಾನ್, ಆಶಾ, ಸುಪ್ರಿತಾ, ವಿಶಾಲಾಕ್ಷಿ ಸಾಹಿತ್ಯಾಭಿಮಾನಿಗಳು ಇದ್ದರು.

ಆಚಾರ–ವಿಚಾರಗಳ ಬಗ್ಗೆ ಕೊಡವ ಜನಾಂಗದ ಯುವ ಪೀಳಿಗೆಗೆ ತರಬೇತಿ

ನಾಪೋಕ್ಲು, ಡಿ.1–ಕೊಡವ ಜನಾಂಗದ ಆಚಾರ, ವಿಚಾರ, ಪದ್ಧತಿ, ಪರಂಪರೆಯನ್ನು ಮುಂದಿನ ಪೀಳಿಗೆಗೆ ಉಳಿಸುವ ಉದ್ದೇಶದಿಂದ ಕಪ್ರತಿ ಗ್ರಾಮದಲ್ಲಿ ಯುವ ಪೀಳಿಗೆಗೆ ವಿವಾಹ, ಸಾವು, ಹಬ್ಬ, ಹರಿದಿನಗಳ ಪದ್ಧತಿ, ಪರಂಪರೆ ಕುರಿತು ತರಬೇತಿ ನೀಡಲಾಗುವುದು ಎಂದು ಕೊಡವ ಸಮಾಜದ ಅಧ್ಯಕ್ಷ ಮುಂಡಂಡ ಸಿ. ನಾಣಯ್ಯ ತಿಳಿಸಿದ್ದಾರೆ

ಇಲ್ಲಿನ ಕೊಡವ ಸಮಾಜದಲ್ಲಿ ಆಯೋಜಿಸಲಾಗಿದ್ದ ಕೊಡವ ಸಮಾಜದ 26ನೇ ವಾರ್ಷಿಕ ಮಹಾಸಭೆಯ ಅಧ್ಯಕ್ಷತೆ ವಹಿಸಿದ್ದ ಅವರು ಕೊಡವ ಸಮಾಜದಲ್ಲಿ ಮದುವೆ, ನಾಮಕರಣ, ಸಭೆ ಸಮಾರಂಭಗಳು ನಿರಂತರವಾಗಿ ನಡೆದಾಗ ಸಮಾಜದ ಅಭಿವೃದ್ಧಿ ಮಾಡಲು ಸಾಧ್ಯ. ಈ ದಿಸೆಯಲ್ಲಿ ಯುವಪೀಳಿಗೆಗೆ ಇದನ್ನು ಮನದಟ್ಟು ಮಾಡಲು ತರಬೇತಿ ನೀಡಲು ನಿರ್ಧರಿಸಿರುವುದಾಗಿ ಹೇಳಿದರು. ನಾಪೋಕ್ಲು ಕೊಡವ ಸಮಾಜದ ಬೆಳ್ಳಿ ಹಬ್ಬವನ್ನು ಅದ್ದೂರಿಯಿಂದ ಆಚರಿಸಲು ಹಾಗೂ ಕೊಡವ ಜನಾಂಗದ ಬಡ ವಿದ್ಯಾರ್ಥಿಗಳ ವಿದ್ಯಾಭ್ಯಾಸದ ಸಹಾಯಕ್ಕಾಗಿ ಕನಿಷ್ಠ 50ಲಕ್ಷ ರೂ.ಗಳ ಠೇವಣಿ ಸಂಗ್ರಹಿಸುವಂತೆ ಸಮಾಜದ ವಾಹನ ನಿಲುಗಡೆ ಜಾಗವನ್ನು ಆಧುನಿಕ ರೀತಿಯಲ್ಲಿ ಅಭಿವೃದ್ಧಿಪಡಿಸಲು ಸಭೆಯಲ್ಲಿ ತಿರ್ಮಾನಿಸಲಾಯಿತು.

ಕಾರ್ಯಕ್ರಮದಲ್ಲಿ ಆಡಳಿತ ಮಂಡಳಿಯ ಉಪಾಧ್ಯಕ್ಷ ಕರವಂಡ ಲವ ನಾಣಯ್ಯ, ಗೌರವ ಕಾರ್ಯದರ್ಶಿ ಕುಲ್ಲೇಟಿರ ಅಜಿತ್ ನಾಣಯ್ಯ, ಜಂಟಿ ಕಾರ್ಯದರ್ಶಿ ಮಾಚೆಟ್ಟಿರ ಕುಶಾಲಪ್ಪ , ಖಜಾಂಜಿ ಚೌರಿರ ಉದಯ ಮಂಡಳಿ ನಿರ್ದೇಶಕರಾದ ಚೇನಂಡ ಈ. ಗಿರೀಶ್ ಪೂನಚ್ಚ, ಬೋಳಿಯಾಡಿರ ಸಂತು ಸುಬ್ರಮಣಿ, ಬದಂಚೆಟ್ಟಿರ ದೇವಿ ದೇವಯ್ಯ, ಶಿವಚಾಳಿಯಂಡ ಕಿಶೋರ್ ಬೋಪಣ್ಣ, ನಾಯಕಂಡ ಮುತ್ತಪ್ಪ ಕುಂಞಣ್ಣ, ಕುಂಡ್ಯೋಳಂಡ ಬೋಪಣ್ಣ, ಕುಟ್ಟಂಚೆಟ್ಟಿರ ಬೋಪಣ್ಣ, ಚಿನ್ನಪ್ಪಚೌರಿರ ಅಯ್ಯಪ್ಪ, ಬೊಟ್ಟೋಳಂಡ ಗಿರೀಶ್ ಮಾದಪ್ಪ, ಬಿದ್ದಾಟಂಡ ಸಂಪತ್ ಸೋಮಯ್ಯ, ಮಹಿಳಾ ನಿರ್ದೇಶಕರಾದ ಅರೆಯಡ ಸರಸು ಚರ್ಮನ, ಕೋಟೆರ ಝಾನ್ಸಿ ಮಂದಪ್ಪ, ನಾಯಕಂಡ ಜೂಬಿ ತಿಮ್ಮಯ್ಯ, ಬಾಳಿಯಡ ನಿಶಾ ಮೇದಪ್ಪ, ಕಲಿಯಂಡ ಗೀತ ಗಣೇಶ್, ವ್ಯವಸ್ಥಾಪಕ ಶಿವಾಚಾರ್ಯಂಡ ಜಗದೀಶ್ ಸಿಬ್ಬಂದಿ ನಾಯಕಂಡ ಸಹನಾ, ಮತ್ತು ಚಿನ್ನಪ್ಪ ಹಾಗೂ ಆಡಳಿತ ಮಂಡಳಿ ಮಾಜಿ ಅಧ್ಯಕ್ಷರು, ಸದಸ್ಯರು ಉಪಸ್ಥಿತರಿದ್ದರು.

ನಿವೃತ್ತ ಎಸ್ಪಿ ಬಿ.ಡಿ.ಮಂದಪ್ಪ ಇನ್ನಿಲ್ಲ



ವಿರಾಜಪೇಟೆ, ಡಿ.1–ವಿರಾಜಪೇಟೆ ತಾಲೂಕು ಬಿಟ್ಟಂಗಾಲ ನಿವಾಸಿ, ನಿವೃತ್ತ ಎಸ್ಪಿ ಬುಟ್ಟಿಯಂಡ ಡಿ.ಮಂದಪ್ಪ(ಪ್ರಭು)ಅವರು ಭಾನುವಾರ ನಿಧನರಾದರು.

ಅವರಿಗೆ 78 ವರ್ಷ ವಯಸ್ಸಾಗಿತ್ತು. ಶ್ರೀಯುತರು ಪತ್ನಿ ವಿಮಲ, ಪುತ್ರಿ ಸ್ವಾಗಿ ನವೀನ್ ಹಾಗೂ ಅಪಾರ ಬಂಧು ವರ್ಗವನ್ನು ಅಗಲಿದ್ದು, ಬಿಟ್ಟಂಗಾಲ ಸಮೀಪದ ನಾಂಗಾಲದಲ್ಲಿ ಸೋಮವಾರ ಮದ್ಯಾಹ್ನ ಅಂತ್ಯಕ್ರಿಯೆ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಸಬ್ ಇನ್ಸ್‌ಪೆಕ್ಟರ್ ಆಗಿ ಪೊಲೀಸ್ ಇಲಾಖೆಗೆ ಸೇರ್ಪಡೆಗೊಂಡು ಎಸ್ಪಿಯಾಗಿ ನಿವೃತ್ತರಾದ ಅವರು ಕೊಳ್ಳೇಗಾಲ ಸರ್ಕಲ್ ಇನ್ಸ್‌ಪೆಕ್ಟರ್ ಆಗಿ ಸೇವೆ ಸಲ್ಲಿಸುತ್ತಿದ್ದ ವೇಳೆ ನರಹಂತಕ ವೀರಪ್ಪನ್ ಸೆರೆಗಾಗಿ ಸ್ಥಾಪಿಸಲ್ಪಟ್ಟ ವಿಶೇಷ ಕಾರ್ಯಾಚರಣೆ ಪಡೆಗೆ ನಿಯೋಜಿಸಲ್ಪಟ್ಟು ಹಲವಾರು ವೀರಪ್ಪನ್ ಸಹಚರರನ್ನು ಬಂಧಿಸುವಲ್ಲಿ ಪ್ರಮುಖ ಪಾತ್ರವಹಿಸಿದ್ದರು.

1992ರ ಆಗಸ್ಟ್ 14ರಂದು ರಾಮಾಪುರ ಠಾಣೆ ವ್ಯಾಪ್ತಿಯ ಮೀಣ್ಯಂ ಅರಣ್ಯ ಪ್ರದೇಶದಲ್ಲಿ ಅಂದಿನ ಎಸ್ಪಿ ಹರಿಕೃಷ್ಣ ಮತ್ತು ಸಬ್ ಇನ್ಸ್‌ಪೆಕ್ಟರ್ ಶಕೀಲ್ ಅಹಮದ್ ಅವರನ್ನು ವೀರಪ್ಪನ್ ತಂಡ ಹತ್ಯೆಗೈದ ವೇಳೆ ಮಂದಪ್ಪ ಅವರಿಗೂ ಗುಂಡು ತಗುಲಿತ್ತು. ತಮಗೆ ಗುಂಡೇಟು ಬಿದ್ದಿದ್ದರೂ ವೀರಪ್ಪನ್ ತಂಡದ ವಿರುದ್ಧ ಗುಂಡಿನ ಸುರಿಮಳೆಗೈದು ಹಿಮ್ಮೆಟ್ಟುವ ಮೂಲಕ ಮತ್ತಷ್ಟು ಜೀವಗಳು ಬಲಿಯಾಗುವುದನ್ನು ಮಂದಪ್ಪ ತಡೆದಿದ್ದರು.

ಮಂದಪ್ಪ ಅವರು ಸಲ್ಲಿಸಿದ ಸೇವೆಗಾಗಿ ಅವರಿಗೆ ಮುಖ್ಯಮಂತ್ರಿಗಳ ಚಿನ್ನದ ಪದಕ ನೀಡಲಾಗಿತ್ತು. ವೀರಪ್ಪನ್ ವಿರುದ್ಧದ ಕಾರ್ಯಾಚರಣೆಯಲ್ಲಿ ಭಾಗವಹಿಸಿದ್ದ ಪೊಲೀಸರಿಗೆ ನೀಡಿದ ನಗದು ಬಹುಮಾನದ ಪೈಕಿ ಬಿ.ಡಿ.ಮಂದಪ್ಪ ಮತ್ತು ಅವರೊಂದಿಗೆ ಜಂಟಿಯಾಗಿ ಕಾರ್ಯ ನಿರ್ವಹಿಸಿದ ವೆಂಕಟಸ್ವಾಮಿ ಅವರಿಗೆ ಗರಿಷ್ಠ ಮೊತ್ತದ ಬಹುಮಾನ ದೊರಕಿತ್ತು ಎಂಬುದು ವಿಶೇಷ.

ಚಳಿಗೆ ತತ್ತರಿಸಿದ ಜನತೆ ಬೆಂಕಿ ಮೊರೆ!

ಸಿದ್ದಲಿಂಗಸ್ವಾಮಿ



ನವೆಂಬರ್– ಡಿಸೆಂಬರ್ ಚಳಿಗೆ ಮೈವೊಡ್ಡುವುದು ಆರೋಗ್ಯದ ಮೇಲೆ ಅಡ್ಡ ಪರಿಣಾಮ ಬೀರಲಿದೆ. ಅದರಲ್ಲೂ ವೃದ್ಧರು, ಮಕ್ಕಳನ್ನು ಆದಷ್ಟು ಬೆಳಗ್ಗೆ ಹಾಗೂ ಸಂಜೆ ಸಮಯ ಮನೆಯಿಂದ ಹೊರಬಾರದೇ ಇರುವುದು ಉತ್ತಮ. ಅನಿವಾರ್ಯವಾಗಿ ಹೋಗಲೇಬೇಕೆಂದರೆ ಸಾಕಷ್ಟು ಮುನ್ನೆಚ್ಚರಿಕೆ ವಹಿಸಬೇಕು. ಇಲ್ಲವಾದರೆ ಶೀತ ಸಂಬಂಧಿಸಿದ ಕಾಯಿಲೆಗಳು ಕಾಡುತ್ತವೆ. –ಡಾ. ರೋಹಿತ್, ವೈದ್ಯರು.

ಚಾಮರಾಜನಗರ: ವರ್ಷಾಂತ್ಯದಲ್ಲಿ ಗಡಿ ಜಿಲ್ಲೆ ಚಾಮರಾಜನಗರದಲ್ಲಿ ಕಳೆದೊಂದು ವಾರದಿಂದ ಚಳಿ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದ್ದು, ಚಳಿಯಿಂದ ಜನರು ತತ್ತರಿಸಿ ಹೋಗಿದ್ದಾರೆ.

ಮಾಗಿಯ ಚಳಿ ಗಡಿ ಜಿಲ್ಲೆಯನ್ನು ವಾರದಿಂದೀಚೆಗೆ ನಡುಗಿಸುತ್ತಿದೆ. ಚಳಿಯ ಆರ್ಭಟ ಜನತೆಯ ಜನಜೀವನದ ಮೇಲೂ ಪರಿಣಾಮ ಬೀರಿದೆ. ಹೀಗಾಗಿ, ಪ್ರತಿನಿತ್ಯ ರಾತ್ರಿ 10ರ ಮೇಲೆ ಶುರುವಾಗುವ ಚಳಿ, ಬೆಳಗ್ಗೆ 8 ಗಂಟೆಯಾದರೂ ಜನತೆಯನ್ನು ನಡುಗಿಸುತ್ತಿದ್ದು, ಪತ್ರಿಕೆ ಹಂಚುವವರು, ಹಾಲು, ತರಕಾರಿ ವ್ಯಾಪಾರಿಗಳು, ವಾಯು ವಿಹಾರಿಗಳು ಚಳಿಯಿಂದ ತತ್ತರಿಸಿದ್ದಾರೆ.

ತಾಪಮಾನ ಇಳಿಕೆ: ಜಿಲ್ಲೆಯಲ್ಲಿ ಮಧ್ಯಾಹ್ನದ ವೇಳೆ 28 ರಿಂದ 27 ಡಿಗ್ರಿ ಸೆಲ್ಸಿಯಸ್ ಇರುವ ತಾಪಮಾನ ರಾತ್ರಿಯಾಗುತ್ತಿದ್ದಂತೆ ಏಕಾಏಕಿ 20 ರಿಂದ 15 ಡಿಗ್ರಿ ಸೆಲ್ಸಿಯಸ್‌ಗೆ ಇಳಿಕೆಯಾಗುತ್ತಿದ್ದು, ಸಹಜವಾಗಿಯೇ ಜನಜೀವನದ ಮೇಲೆ ಪರಿಣಾಮ ಬೀರಿದೆ. ಬೆಳಗ್ಗೆ 8 ಗಂಟೆಯಾದರೂ ತಗ್ಗದ ಮಂಜಿನಾಟದಿಂದ ವಾಹನ ಸವಾರರು ಪರದಾಡುವಂತಾಗಿದೆ. ಇನ್ನು ಬೆಳಗ್ಗೆ ಹಾಗೂ ಸಂಜೆ ವೇಳೆ ವಾಯು ವಿಹಾರದಲ್ಲಿ ತೊಡಗುವ ಮಂದಿಗೆ ಈ ಚಳಿ ಹಾಗೂ ಇಬ್ಬನಿಯ ಪರಿಣಾಮ ಹಿನ್ನಡೆಯಾಗಿದೆ. ವಯಸ್ಸಾದವರು ರಸ್ತೆಗೆ ಇಳಿಯುವುದು ದುಸ್ತರವಾಗಿದೆ. ಮಕ್ಕಳು ಹಾಗೂ ವೃದ್ಧರ ಮೇಲೆ ಮಂಜು ಹಾಗೂ ಚಳಿ ಪ್ರತಿಕೂಲ ಪರಿಣಾಮಗಳನ್ನು ಉಂಟು ಮಾಡುವ ಭೀತಿ ಶುರುವಾಗಿದೆ.

ಪ್ರವಾಸಿ ತಾಣದಲ್ಲಿ ಇಬ್ಬನಿಯ ಸೊಬಗು: ಜಿಲ್ಲೆಯಲ್ಲಿ ಪ್ರವಾಸಿ ತಾಣಗಳೂ ಹೆಚ್ಚು ಬೆಟ್ಟ– ಗುಡ್ಡಗಳ ನಡುವಿನಲ್ಲಿದ್ದು, ಬಿಳಿಗಿರಿರಂಗನಬೆಟ್ಟ, ಹಿಮವದ್ ಗೋಪಾಲಸ್ವಾಮಿ ಬೆಟ್ಟ ಸೇರಿದಂತೆ ಹಲವು ಪ್ರವಾಸಿ ತಾಣಗಳಲ್ಲಿನ ಮಂಜಿನಾಟವನ್ನು ಸವಿಯುವ ಸಲುವಾಗಿಯೇ ಹೆಚ್ಚಿನ ಪ್ರವಾಸಿಗರು ಭೇಟಿ ನೀಡುತ್ತಿದ್ದಾರೆ. ಹಿಮವದ್ ಗೋಪಾಲಸ್ವಾಮಿ ಬೆಟ್ಟದಲ್ಲಂತೂ ಈ ಶೂನ್ಯ ಮಾಸದಲ್ಲಿ ಇಬ್ಬನಿಯ ಸೊಬಗು ಎಲ್ಲರನ್ನೂ ಸೆಳೆಯುತ್ತಿದೆ. ಬೆಟ್ಟಕ್ಕೆ ಕಾಲಿಡುತ್ತಿದ್ದಂತೆ ಅವರನ್ನೂ ಮಂಜು ಆವರಿಸಿಕೊಳ್ಳುತ್ತಿದ್ದು, ಪ್ರವಾಸಿಗರಲ್ಲಿ ರೋಮಾಂಚನ ಉಂಟು ಮಾಡುತ್ತಿದೆ.

ವಿಶೇಷಚೇತನರು ಕೀಳರಿಮೆ ಬಿಟ್ಟು ಸಾಧನೆಗೆ ಕಠಿಣ ಪರಿಶ್ರಮ ಹಾಕಿ



ನಗರದ ಶ್ರೀ ಚಾಮರಾಜೇಶ್ವರ ದೇವಸ್ಥಾನದಿಂದ ಡಾ. ಅಂಬೇಡ್ಕರ್ ಜಿಲ್ಲಾ ಕ್ರೀಡಾಂಗಣದವರೆಗೆ ಜಾಗೃತಿ ಜಾಥಾ ಹಮ್ಮಿಕೊಳ್ಳಲಾಗಿತ್ತು.

ಚಾಮರಾಜನಗರ, ಡಿ.1–ವಿಶೇಷ ಚೇತನರು ತಮ್ಮಲ್ಲಿರುವ ನ್ಯೂನತೆಗಳ ಬಗ್ಗೆ ಕೀಳರಿಮೆ ಬಿಟ್ಟು ಸಕಾರಾತ್ಮಕ ಸಾಧನೆಗಾಗಿ ಕಠಿಣ ಪರಿಶ್ರಮ ಹಾಕುವಂತೆ ಹೆಚ್ಚುವರಿ ಜಿಲ್ಲಾಧಿಕಾರಿ ಟಿ.ಜವರೇಗೌಡ ತಿಳಿಸಿದ್ದಾರೆ.

ನಗರದ ಡಾ.ಬಿ.ಆರ್.ಅಂಬೇಡ್ಕರ್ ಜಿಲ್ಲಾ ಕ್ರೀಡಾಂಗಣದಲ್ಲಿಂದು ವಿಶ್ವ ವಿಕಲಚೇತನರ ದಿನಾಚರಣೆ ಅಂಗವಾಗಿ ಆಯೋಜಿಸಲಾಗಿದ್ದ ಜಿಲ್ಲಾಮಟ್ಟದ ವಿಕಲಚೇತನರ ಕ್ರೀಡಾಕೂಟ ಹಾಗೂ ಸಾಂಸ್ಕೃತಿಕ ಸ್ಪರ್ಧೆಯಲ್ಲಿ ಮಾತನಾಡಿದ ಅವರು, ಅಂಗವಿಕಲತೆ ದೈವದತ್ತವಾಗಿದ್ದು, ವಿಶೇಷಚೇತನರು ಏನೂ ಸಾಧನೆ ಮಾಡಲು ಸಾಧ್ಯವಿಲ್ಲವೆಂಬ ಕೀಳರಿಮೆ ಬಿಟ್ಟು, ಎಲ್ಲಾ ವಿಚಾರಗಳನ್ನು ಸಕಾರಾತ್ಮಕವಾಗಿ ತೆಗೆದುಕೊಳ್ಳಬೇಕು. ವಿಕಲಚೇತನರ ಕ್ಷೇತ್ರದಲ್ಲಿ ಈಗಾಗಲೇ ಸಾಕಷ್ಟು ಅಂಗವಿಕಲರು ಸಾಧನೆ ಮಾಡಿದ್ದಾರೆ. ಪ್ಯಾರಾ ಒಲಂಪಿಕ್ಸ್‌ನಲ್ಲಿ ಪದಕಗಳನ್ನು ಗೆದ್ದು ದೇಶಕ್ಕೆ ಕೀರ್ತಿ ತಂದವರನ್ನು ತಾವೆಲ್ಲರೂ ಮಾದರಿಯಾಗಿಸಿಕೊಳ್ಳಬೇಕು. ಸಾಧನೆಗಾಗಿ ಸತತ ಪ್ರಯತ್ನ, ಹಾಕಬೇಕು. ಕಲೆ, ಕ್ರೀಡೆ, ಸಾಹಿತ್ಯ, ಸಂಗೀತ ಸೇರಿದಂತೆ ಯಾವುದೇ ಕ್ಷೇತ್ರದ ಸಾಧಕರ ನಿರಂತರ ಪರಿಶ್ರಮವನ್ನು ಎಲ್ಲರೂ ಮನಗಾಣಬೇಕು. ನಮ್ಮ ಆಲೋಚನೆಗಳು ನಮ್ಮ ವ್ಯಕ್ತಿತ್ವವನ್ನು ರೂಪಿಸಲಿರುವುದರಿಂದ ವಿಕಲ ಚೇತನರು ನ್ಯೂನತೆಗಳ ಬಗ್ಗೆ ಚಿಂತೆಗೀಡಾಗದೆ ನಕಾರಾತ್ಮಕ ಚಿಂತನೆಗಳನ್ನು ಸಕಾರಾತ್ಮಕವಾಗಿ ಪರಿವರ್ತಿಸಿಕೊಳ್ಳಬೇಕು. ವಿಕಲತೆಯ ಕೀಳರಿಮೆ ಬಿಟ್ಟರೆ ಮಾತ್ರ ಸಾಧನೆ ಹೊರಹೊಮ್ಮಲು ಸಾಧ್ಯವಾಗಲಿದೆ ಉತ್ತಮ ಬದುಕು ಕಟ್ಟಿಕೊಳ್ಳಲು ನೆರವಾಗಲಿದೆ ಎಂದರು.

ಜಿಲ್ಲಾ ಪಂಚಾಯತ್ ಉಪಕಾರ್ಯದರ್ಶಿ ಶೃತಿ, ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕ ಸುರೇಶ್, ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿ ಡಾ. ಮಂಜುನಾಥ್, ಜಿಲ್ಲಾ ದೈಹಿಕ ಶಿಕ್ಷಣಾಧಿಕಾರಿ ಶಂಕರ್, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕ ಸುರೇಶ್, ಜಿಲ್ಲಾ ಅಂಗವಿಕಲರ ಕ್ಷೇಮಾಭ್ಯುದಯ ಸಂಘದ ಅಧ್ಯಕ್ಷ ರಮೇಶ್, ದೈಹಿಕ ಶಿಕ್ಷಕರ ಸಂಘದ ತಾಲೂಕು ಅಧ್ಯಕ್ಷ ಚಿಕ್ಕ ಬಸವಯ್ಯ, ಇತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಮೂರು ಬಾರಿ ರಾಷ್ಟ್ರಮಟ್ಟದ ಕ್ರೀಡಾಕೂಟದಲ್ಲಿ ಭಾಗವಹಿಸಿ, ಥೈಲ್ಯಾಂಡ್‌ನಲ್ಲಿ ನಡೆದ ಅಂತರಾಷ್ಟ್ರೀಯ ಕ್ರೀಡಾಕೂಟದಲ್ಲಿ ಪಾಲ್ಗೊಂಡ ತಾಲೂಕಿನ ಬಿಸಲವಾಡಿ ಗ್ರಾಮದ ಅಂತರಾಷ್ಟ್ರೀಯ ವಿಕಲಚೇತನ ಕ್ರೀಡಾಪಟು ಮನೋಜ್ ಕ್ರೀಡಾಜ್ಯೋತಿ ಸ್ವೀಕರಿಸಿದರು. ವೇದಿಕೆ ಕಾರ್ಯಕ್ರಮಕ್ಕೂ ಮೊದಲು ವಿಕಲಚೇತನರ ಜಿಲ್ಲಾಮಟ್ಟದ ವಿಕಲಚೇತನರ ಕ್ರೀಡಾಕೂಟದ ಅಂಗವಾಗಿ ನಗರದ ಶ್ರೀ ಚಾಮರಾಜೇಶ್ವರ ದೇವಸ್ಥಾನದಿಂದ ಡಾ. ಅಂಬೇಡ್ಕರ್ ಜಿಲ್ಲಾ ಕ್ರೀಡಾಂಗಣದವರೆಗೆ ಜಾಗೃತಿ ಜಾಥಾ ಹಮ್ಮಿಕೊಳ್ಳಲಾಗಿತ್ತು. ಜಾಥಾದಲ್ಲಿ ಜಿಲ್ಲೆಯ ವಿವಿಧ ಭಾಗಗಳಿಂದ ಆಗಮಿಸಿದ್ದ ವಿಕಲಚೇತನರು ಭಾಗವಹಿಸಿದ್ದರು.

ಕರಾಟೆ ಸ್ಪರ್ಧೆಯಲ್ಲಿ ವಿದ್ಯಾರ್ಥಿಗಳ ಸಾಧನೆ



ಮೈಸೂರಿನಲ್ಲಿ ನಡೆದ ಕರಾಟೆ ಚಾಂಪಿಯನ್‌ಶಿಪ್ ಸ್ಪರ್ಧೆಯಲ್ಲಿ ವಿಜೇತರಾದ ಶೋಟೋಕಾನ್ ಕರಾಟೆ ಶಾಲೆ ವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸಲಾಯಿತು.

ಕೊಳ್ಳೇಗಾಲ, ಡಿ.1(ಎನ್‌ಎನ್)–ಇಲ್ಲಿನ ಶೋಟೋಕಾನ್ ಕರಾಟೆ ಶಾಲೆಯ ವಿದ್ಯಾರ್ಥಿಗಳು ಕತಾ ಮತ್ತು ಕುಮಿತೆ ವಿಭಾಗದಲ್ಲಿ 25 ಬಹುಮಾನ ಗಳಿಸಿ ಪ್ರಶಂಸೆಗೆ ಭಾಜನರಾಗಿದ್ದಾರೆ

ವಿ.ಎಸ್ ಕರಾಟೆ ಅಕಾಡೆಮಿ ವತಿಯಿಂದ ಮೈಸೂರಿನ ಮಹಾರಾಜ ಒಳಾಂಗಣ ಕ್ರೀಡಾಂಗಣದಲ್ಲಿ ಭಾನುವಾರ ಜರುಗಿದ 4ನೇ ಓಪನ್ ಕರಾಟೆ ಚಾಂಪಿಯನ್ ಶಿಪ್ ಸ್ಪರ್ಧೆಯಲ್ಲಿ ಕತಾ ಪ್ರದರ್ಶನ ವಿಭಾಗದಲ್ಲಿ 4 ಪ್ರಥಮ, 8 ದ್ವಿತೀಯ, 13 ತೃತೀಯ ಸ್ಥಾನಗಳನ್ನು, ಕುಮಿತೆ ವಿಭಾಗದಲ್ಲಿ 1 ಪ್ರಥಮ, 2 ದ್ವಿತೀಯ, 2 ತೃತೀಯ ಸ್ಥಾನ ಗಳಿಸಿದ್ದು, ಸನ್ನಿಧಿ ಪಟೇಲ್. ಕೆಪಿ, ಧನ್ವಿರಾಜ್. ವಿ. ಅಥರ್ವ. ಜಿ, ಮಹಾಲಕ್ಷ್ಮಿ, ಜೆ. ಜೀವನ್ ನಾಯಕ. ಎಂ.ಎನ್. ಪ್ರೀತಮ್, ಸಾತ್ವಿಕ್, ಅರ್ಜುನ್, ಎಸ್.ಆದ್ಯ ಪ್ರವೀಣ್, ಮುರುಳಿ ಮೋಹನ, ತೇಜಸ್ವಿನಿ. ಕೆಎನ್, ರಿಷಬ್, ಶ್ರೇಯಸ್ ಎಸ್. ಕವನ, ಅಭಯ್ ಜಯ ರಾಜ ಕುಶಾಲ್, ಡಿ. ಬೈಲೆ, ಧ್ರುವ, ಎಸ್. ರೋಹಿತ್, ನಿತಿನ್ ಕುಮಾರ್, ಸೌರಭ್ ನಾಯಕ್. ಸುಪ್ರಿಯಾ, ಎನ್. ಯಶೋಧ ಮಾದಪ್ಪ ಪಟೇಲ್, ಕೆಪಿ ವೀಕ್ಷಾ, ಆರ್. ಅಚ್ಚಾಳ್, ಶ್ರೀದೇವಿ ಸಿದ್ದಪ್ಪ, ಅರಳಿಕಟ್ಟೆ ವಿದ್ಯಾರ್ಥಿಗಳು ಕರಾಟೆ ಸ್ಪರ್ಧೆಯಲ್ಲಿ ವಿಜೇತರಾಗಿದ್ದಾರೆ. ಸಾಧಕ ವಿದ್ಯಾರ್ಥಿಗಳನ್ನು ಕಾರ್ಯದರ್ಶಿ ಯೋಗೀಶ್, ತರಬೇತುದಾರರಾದ ಸೌಜನ್ಯ ಪ್ರಭಾಕರ್, ಚೆಲುವರಾಜು ಅಭಿನಂದಿಸಿದ್ದಾರೆ.

ನಗರದಲ್ಲಿ ನಾಳೆ ವಿಶ್ವ ವಿಕಲಚೇತನರ ದಿನಾಚರಣೆ

ಚಾಮರಾಜನಗರ: ವಿಶ್ವ ವಿಕಲಚೇತನರ ದಿನಾಚರಣೆಯನ್ನು ಡಿ.3ರ ಬೆಳಿಗ್ಗೆ 11 ಗಂಟೆಗೆ ನಗರದ ಜಿಲ್ಲಾಡಳಿತ ಭವನದಲ್ಲಿರುವ ಜೆ.ಹೆಚ್.ಪಟೇಲ್ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದೆ. ಜಿಲ್ಲಾ ಉಸ್ತುವಾರಿ ಸಚಿವ ಕೆ.ವೆಂಕಟೇಶ್ ಕಾರ್ಯಕ್ರಮ ಉದ್ಘಾಟಿಸುವರು. ಶಾಸಕ ಸಿ.ಪುಟ್ಟರಂಗಶೆಟ್ಟಿ ಅಧ್ಯಕ್ಷತೆ. ಸಂಸದ ಸುನೀಲ್ ಬೋಸ್ ಉಪಸ್ಥಿತಿ ವಹಿಸುವರು. ಶಾಸಕರಾದ ಎ.ಆರ್.ಕೃಷ್ಣಮೂರ್ತಿ, ಹೆಚ್.ಎಂ.ಗಣೇಶ್ ಪ್ರಸಾದ್, ಎಂ.ಆರ್. ಮಂಜುನಾಥ್, ಡಾ. ಡಿ.ತಿಮ್ಮಯ್ಯ, ಕೆ.ವಿವೇಕಾನಂದ ಮುಖ್ಯಅತಿಥಿಗಳಾಗಿರುವರು.

ಕಾರುಗಳ ನಡುವೆ ಮುಖಾಮುಖಿ ಡಿಕ್ಕಿ; ನಾಲ್ವರಿಗೆ ಗಂಭೀರ ಗಾಯ

ಕೊಳ್ಳೇಗಾಲ, ಡಿ.1–ತಾಲೂಕಿನ ತೇರಂಬಳ್ಳಿ ಗ್ರಾಮದ ಬಳಿ ಎರಡು ಕಾರುಗಳ ನಡುವೆ ಸಂಬಂಧಿಸಿದ ಮುಖಾಮುಖಿ ಡಿಕ್ಕಿಯಾದ ಪರಿಣಾಮ ನಾಲ್ವರು ಗಂಭೀರವಾಗಿ ಗಾಯಗೊಂಡಿರುವ ಘಟನೆ ಸೋಮವಾರ ನಡೆದಿದೆ.

ಕಲಬುರಗಿಯ ಸಂತೋಷ್ ಗಾಜರಿ, ಶಿಡ್ಲಘಟ್ಟದ ವೆಂಕಟರೆಡ್ಡಿ, ಹುಣಸೂರು ತಾಲೂಕು ಸೋಮನಹಳ್ಳಿ ನಿವಾಸಿ ಮಧು, ಹನೂರು ತಾಲೂಕು ಶಾಗ್ಯ ಗ್ರಾಮದ ಜಯಂತ್ ಗಾಯಗೊಂಡವರು. ಈ ಪೈಕಿ ಸಂತೋಷ್, ವೆಂಕಟರೆಡ್ಡಿ, ಮಧು ಮೈಸೂರಿನಿಂದ ಕೊಳ್ಳೇಗಾಲದ ಹಂಪಾಪುರ ಬಳಿ ನಿರ್ಮಾಣವಾಗುತ್ತಿರುವ ಬಡಾವಣೆ ಕಾಮಗಾರಿ ಸ್ಥಳಕ್ಕೆ ಕಾರಿನಲ್ಲಿ ಬರುತ್ತಿರುವಾಗ ಶಾಗ್ಯದಿಂದ ಮೈಸೂರಿಗೆ ತೆರಳುತ್ತಿದ್ದ ಜಯಂತ್ ಅವರ ಕಾರು ಮುಖಾಮುಖಿ ಡಿಕ್ಕಿಯಾಗಿ ಎರಡು ಕಾರಿನಲ್ಲಿದ್ದ ನಾಲ್ವರು ಗಾಯಗೊಂಡಿದ್ದಾರೆ.

ತಕ್ಷಣ ಸ್ಥಳೀಯರು ಅಂಬ್ಯುಲೆನ್ಸ್ ಸಹಾಯದಿಂದ ಗಾಯಾಳುಗಳನ್ನು ಕೊಳ್ಳೇಗಾಲದ ಸರ್ಕಾರಿ ಆಸ್ಪತ್ರೆಯಲ್ಲಿ ಪ್ರಾಥಮಿಕ ಚಿಕಿತ್ಸೆ ಕೊಡಿಸಿ, ಹೆಚ್ಚಿನ ಚಿಕಿತ್ಸೆಗಾಗಿ ಮೈಸೂರಿನ ಆಸ್ಪತ್ರೆಗೆ ಕಳುಹಿಸಲಾಗಿದೆ. ಈ ಸಂಬಂಧ ಅಗರ ಮಾಂಬಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿಕೊಂಡು ಮುಂದಿನ ಕ್ರಮ ಜರುಗಿಸಿದ್ದಾರೆ.



ತೇರಂಬಳ್ಳಿ ಬಳಿ ಕಾರು ಮುಖಾಮುಖಿ ಡಿಕ್ಕಿಯಾಗಿ ಜಖಂಗೊಂಡಿರುವುದು

ಜಿ.ಪರಮೇಶ್ವರ್‌ಗೆ ಸಿಎಂ ಸ್ಥಾನ ಸಿಗಲೆಂದು ಈಡುಗಾಯಿ ಒಡೆದ ಅಭಿಮಾನಿಗಳು



ಗುಂಡ್ಲುಪೇಟೆ, ಡಿ.1(ಸೋಮ್.ಜಿ)–ರಾಜ್ಯದ ಗೃಹ ಸಚಿವ ಜಿ.ಪರಮೇಶ್ವರ್ ರವರಿಗೆ ಮುಖ್ಯಮಂತ್ರಿ ಸ್ಥಾನ ಸಿಗಲೆಂದು ಹಾರೈಸಿ ತಾಲೂಕಿನ ಬೆಂಡರವಾಡಿ ಗ್ರಾಮದಲ್ಲಿ ಜಿ.ಪರಮೇಶ್ವರ್ ಅಭಿಮಾನಿಗಳು ತೆಂಗಿನಕಾಯಿ ಒಡೆಯುವ ಮೂಲಕ ಗ್ರಾಮದೇವತೆ ಶೂಲದ ಮಾರಮ್ಮನಿಗೆ ಪೂಜೆ ಸಲ್ಲಿಸಿದರು.

ಜಿ. ಪರಮೇಶ್ವರ್‌ರವರ ಆಪ್ತರಾಗಿರುವ ಪ್ರೊ. ಮಹದೇವ ಭರಣಿ ಮಾತನಾಡಿ ಡಾ.ಜಿ. ಪರಮೇಶ್ವರ್ ರಾಜಕೀಯ ರಂಗದಲ್ಲಿ ತನ್ನದೇ ಛಾಪನ್ನ ಮೂಡಿಸಿ ದಲಿತರ ನೇತಾರರಾಗಿ ಹಲವಾರು ಜವಾಬ್ದಾರಿಯುತ ಸ್ಥಾನಗಳನ್ನು ನಿಭಾಯಿಸಿದ ಕೀರ್ತಿ ಇವರಿಗೆ ಸಲ್ಲುತ್ತದೆ. ಆದ್ದರಿಂದ ಇವರಿಗೆ ಮುಖ್ಯಮಂತ್ರಿ ಸ್ಥಾನ ದೊರಕಲೆಂದು ಆಶಿಸಿ ಗ್ರಾಮದಲ್ಲಿ ಅಭಿಮಾನಿ ಬಳಗದ ಯುವಕರೊಂದಿಗೆ 101 ಈಡುಗಾಯಿಗಳನ್ನು ಒಡೆಯುವುದರ ಮೂಲಕ ಪೂಜೆ ಸಲ್ಲಿಸಲಾಗಿದೆ ಎಂದರು. ಬೆಂಡರವಾಡಿ ಗ್ರಾಮದ ಮುಖಂಡರಾದ ಅಬ್ದುಲ್ ಮಾಲಿಕ್, ರಾಮೇಗೌಡ, ಕುಮಾರ್, ರಮೇಶ್ ಹಾಜರಿದ್ದರು.

ಸಿದ್ದರಾಮಯ್ಯರನ್ನು ಸಿಎಂ ಆಗಿ ಮುಂದುವರಿಸಲು ಒತ್ತಾಯ

ಚಾಮರಾಜನಗರ: ಸಿದ್ದರಾಮಯ್ಯ ಅವರನ್ನೇ ಮುಖ್ಯಮಂತ್ರಿಯಾಗಿ ಮುಂದುವರೆಸಬೇಕು ಎಂದು ಜಿಲ್ಲಾ ಕುರುಬರ ಸಂಘದ ಅಧ್ಯಕ್ಷ ನಂಜೇಗೌಡ ಒತ್ತಾಯಿಸಿದರು. ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಜೋಡೆತ್ತುಗಳ ರೀತಿಯಲ್ಲಿ ಕೆಲಸ ಮಾಡಿದರೆ 2028ರ ಚುನಾವಣೆಯಲ್ಲಿ ಕಾಂಗ್ರೆಸ್ ಅಧಿಕಾರಕ್ಕೂ ಬರುವುದರಲ್ಲಿ ಯಾವುದೇ ಸಂಶಯಬೇಡ. ದಯಮಾಡಿ ಎಲ್ಲರೂ ಒಗ್ಗಟ್ಟಾಗಿ ಹೋದರೆ ಮುಂದಿನ ಸ್ಥಳೀಯ ಸಂಸ್ಥೆ, ತಾಪಂ, ಜಿಪಂ ಚುನಾವಣೆಯಲ್ಲಿ ಪಕ್ಷದ ಗೆಲುವು ಸಾಧ್ಯ ಎಂದು ಸುದ್ದಿಗೋಷ್ಠಿಯಲ್ಲಿ ಹೇಳಿದರು.

ಹೆಣ್ಣುಭ್ರೂಣ ಹತ್ಯೆ ತಡೆ, ಲಿಂಗಾನುಪಾತ ಸರಿದೂಗಿಸಲು ಜಾಗೃತಿ ಕಾರ್ಯಕ್ರಮ ಆಯೋಜಿಸಿ

• ಆರೋಗ್ಯ ಇಲಾಖಾಧಿಕಾರಿಗಳಿಗೆ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಸೂಚನೆ • ಮೈಸೂರು ವಿಭಾಗದ ಪ್ರಗತಿ ಪರಿಶೀಲನಾ ಸಭೆ

ಮೈಸೂರು,ಡಿ.1(ಪಿಎಂ)– ಹೆಣ್ಣುಭ್ರೂಣ ಹತ್ಯೆ ತಡೆಗಟ್ಟಲು ಮತ್ತು ಲಿಂಗಾನುಪಾತ ಸರಿದೂಗಿಸಲು ಕಟ್ಟುನಿಟ್ಟಿನ ಕಾನೂನು ಅನುಷ್ಠಾನಕ್ಕೆ ಆದ್ಯತೆ ನೀಡುವ ಜೊತೆಗೆ ವಿಶೇಷ ಜಾಗೃತಿ ಕಾರ್ಯಕ್ರಮಗಳನ್ನು ಆಯೋಜಿಸಲು ಒತ್ತು ನೀಡಬೇಕೆಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಸೂಚಿಸಿದರು.

ಮೈಸೂರಿನ ಪ್ರಾದೇಶಿಕ ಆಯುಕ್ತರ ಕಾರ್ಯಾಲಯದ ಚಾಮುಂಡೇಶ್ವರಿ ಸಭಾಂಗಣದಲ್ಲಿ ಸೋಮವಾರ ಹಮ್ಮಿಕೊಂಡಿದ್ದ ಆರೋಗ್ಯ ಇಲಾಖೆಯ ಮೈಸೂರು ವಿಭಾಗದ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಇಲಾಖಾಧಿಕಾರಿಗಳು ಒದಗಿಸಿದ ಅಂಕಿ–ಅಂಶಗಳನ್ನು ಅವಲೋಕಿಸಿ ಅವರು ಮಾತನಾಡಿದರು.

ಲಿಂಗಾನುಪಾತ ಸಂಬಂಧ ಮಂಡ್ಯ ಜಿಲ್ಲೆಯಲ್ಲಿ 1000 ಗಂಡು ಮಕ್ಕಳಿಗೆ ಕೇವಲ 908 ಹೆಣ್ಣು ಮಕ್ಕಳಿದ್ದಾರೆ. ಇದು ಅತ್ಯಂತ ಕಡಿಮೆ ಎಂದು ಅಸಮಾಧಾನ ವ್ಯಕ್ತಪಡಿಸಿದರು. ಇದೇ ವೇಳೆ ಮಾತನಾಡಿದ ಮಂಡ್ಯದ ಇಲಾಖಾಧಿಕಾರಿಗಳು, ಆರ್‌ಸಿಹೆಚ್ ಡಾಟಾದಲ್ಲಿ ಮಂಡ್ಯ ಜಿಲ್ಲೆಯದು 936ರಷ್ಟಿದೆ ಎಂದು ತಿಳಿಸಿದರು.

ಸದರಿ ಡಾಟಾ ಅವಲೋಕಿಸಿದ ಸಚಿವರು, 2020ರಲ್ಲಿ ಮಂಡ್ಯ 887, 2021 ರಲ್ಲಿ 872, 2022ರಲ್ಲಿ 882, 2023 ರಲ್ಲಿ 879 ಹಾಗೂ 2024ರಲ್ಲಿ 915 ಇದೆ. ಆದರೂ ಭ್ರೂಣಹತ್ಯೆ ತಡೆಯಲು ಸಾಧ್ಯವಾಗುತ್ತಿಲ್ಲ ಎಂದಾಯಿತಲ್ಲವೇ? ಮಂಡ್ಯ ಜಿಲ್ಲೆಯದು ಸುಧಾರಣೆಯೇನೂ ಆಗುತ್ತಿದೆ. ಆದರೂ ಸಮಗ್ರವಾದ ದತ್ತಾಂಶ ಗಮನಿಸಿದರೆ, ಭ್ರೂಣ ಹತ್ಯೆಯಂತೂ ಆಗುತ್ತಿರಬೇಕು ಎಂದು ಸಂದೇಹ ವ್ಯಕ್ತಪಡಿಸಿದರು.

ಭ್ರೂಣಹತ್ಯೆ ತಡೆ: ಮೊದಲ ತ್ರೈಮಾಸಿಕದಲ್ಲಿ ನೋಂದಣಿ ಮಾಡಿಕೊಳ್ಳುವ ಗರ್ಭಿಣಿಯರ ಅಂಕಿ–ಅಂಶ (2025ರ ಏಪ್ರಿಲ್‌ನಿಂದ ಅಕ್ಟೋಬರ್ ವರೆಗೆ) ಅವಲೋಕಿಸಿದ ಸಚಿವರು, ಮಂಡ್ಯ ಜಿಲ್ಲೆ ಸಂಬಂಧ ಶೇ.96.74 ಇದೆ. ಕೊಡಗು ಜಿಲ್ಲೆಯದು ಶೇ.85.74 ಇದೆ. ಆದರೆ ಕೊಡಗು ಜಿಲ್ಲೆಯ ಲಿಂಗಾನುಪಾತವು ಮಂಡ್ಯಕ್ಕಿಂತಲೂ ಉತ್ತಮವಾಗಿದೆ ಎಂದರಲ್ಲದೆ, ಹೆಣ್ಣು ಭ್ರೂಣ ಹತ್ಯೆ ತಡೆಗಟ್ಟಲು ಹಾಗೂ ಲಿಂಗಾನುಪಾತ ಸರಿದೂಗಿಸಲು ಈ ವರ್ಷದಲ್ಲಿ ಎಲ್ಲಾ ಜಿಲ್ಲೆಗಳಲ್ಲೂ ವಿಶೇಷ ಜಾಗೃತಿ ಕಾರ್ಯಕ್ರಮಗಳನ್ನು ನಡೆಸಲು ಒತ್ತು ನೀಡಬೇಕೆಂದು ಸೂಚನೆ ನೀಡಿದರು.

ಬಜೆಟ್‌ನಲ್ಲಿ 'ಜೀರೋ ಪ್ರೇವೆಂಟಬಲ್ ಮಾರ್ಟನಲ್ ಡೆತ್ಸ್' ಎಂದು ಘೋಷಣೆಯಾಗಿರುವ ಕಾರಣ ತಾಯಂದಿರ ಮರಣ ಸಂಭವಿಸಿದಂತೆ ಎಲ್ಲಾ ರೀತಿಯ ಪ್ರೋಟೋಕಾಲ್‌ಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನ ಮಾಡಬೇಕು. ಶಿಶು ಮರಣ ತಪ್ಪಿಸಲು ತಾಯಿಯ ಸೂಕ್ತ ಆರೈಕೆ ಹಾಗೂ ಚಿಕಿತ್ಸೆಗೆ ಗಮನ ನೀಡಬೇಕಾಗುತ್ತದೆ ಎಂದು ನಿರ್ದೇಶನ ನೀಡಿದರು.



ಮೈಸೂರಿನ ಪ್ರಾದೇಶಿಕ ಆಯುಕ್ತರ ಕಚೇರಿ ಸಭಾಂಗಣದಲ್ಲಿ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಅವರ ಅಧ್ಯಕ್ಷತೆಯಲ್ಲಿ ಸೋಮವಾರ ಮೈಸೂರು ವಿಭಾಗ ಮಟ್ಟದ ಪ್ರಗತಿ ಪರಿಶೀಲನಾ ಸಭೆ ನಡೆಯಿತು.

ಸಿಸೇರಿಯನ್ ಹೆರಿಗೆಗಳಿಗಿಂತಲೂ ಹೆಚ್ಚಾಗಿ ನಾರ್ಮಲ್ ಹೆರಿಗೆಗಳು ಆಗಲು ಹೆಚ್ಚು ಒತ್ತು ನೀಡಬೇಕು. ಇದು ಸರ್ಕಾರಿ ಹಾಗೂ ಖಾಸಗಿ ವೈದ್ಯಕೀಯ ಕ್ಷೇತ್ರಗಳು ಒಳಗೊಂಡಂತೆ ಅಭಿಯಾನದ ಮಾದರಿಯಲ್ಲಿ ಆಗಬೇಕು ಎಂದು ಸಚಿವರು ಸೂಚಿಸಿದರು. ತಾಯಂದಿರ ಮರಣ ಸಂಬಂಧ ಅಂಕಿ ಅಂಶ ಅವಲೋಕಿಸಿದ ಸಚಿವರು, ದಕ್ಷಿಣ ಕನ್ನಡದಲ್ಲಿ 2024–25ರಲ್ಲಿ 6 ತಾಯಂದಿರ ಮರಣವಾಗಿದ್ದರೆ, ಈ ವರ್ಷ ಈಗಾಗಲೇ 5 ಮಂದಿಯ ಸಾವು ಸಂಭವಿಸಿದೆ. ಮೈಸೂರು ಜಿಲ್ಲೆಯಲ್ಲಿ 2024–25ರಲ್ಲಿ 22 ಇತ್ತು. ಈಗ 7ಕ್ಕೆ ಇಳಿಕೆಯಾಗುವ ಮೂಲಕ ಉತ್ತಮ ಸುಧಾರಣೆ ಕಂಡು ಬಂದಿದೆ. ಚಿಕ್ಕಮಗಳೂರು ಜಿಲ್ಲೆಯಲ್ಲಿ ಕಳೆದ ವರ್ಷ 4 ತಾಯಂದಿರ ಮರಣವಾಗಿದ್ದರೆ, ಈಗ ಆಗಲೇ 3 ಸಾವು ಆಗಿದೆ. ಇದು ಜಾಸ್ತಿಯೇ ಆಗಿದ್ದು, ಇದು ಗಂಭೀರ ಸಮಸ್ಯೆಯಾಗಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಶಿಶು ಮರಣ ಅಧಿಕ: ಒಂದೊಂದು ಜೀವವೂ ಮುಖ್ಯ ಎಂಬುದನ್ನು ಇಲಾಖಾಧಿಕಾರಿಗಳು ಮನಗಾಣಬೇಕು ಎಂದು ಸಲಹೆ ಸೂಚನೆ ನಿಡಿದ ಸಚಿವರು, ಮೈಸೂರು ಜಿಲ್ಲೆ ಹೊರತಾಗಿ ಮೈಸೂರು ವಿಭಾಗದಲ್ಲಿ ಇತರೆ ವಿಭಾಗಗಳಿಗಿಂತ ಕಳಪೆಯಾಗಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು. ಅಲ್ಲದೆ, ಇದೇ ವರ್ಷಾಂತ್ಯದಲ್ಲಿ ಮತ್ತೆ ಪರಿಶೀಲನೆ ನಡೆಸಲಾಗುವುದು ಎಂದು ಎಚ್ಚರಿಸಿದರು. ನವಜಾತ ಶಿಶುಗಳ ಮರಣವು ಹಾಸನ ಮತ್ತು ಕೊಡಗು ಜಿಲ್ಲೆಗಳಲ್ಲಿ ಹೆಚ್ಚಿದ್ದು, ಇದನ್ನು ಸಹಿಸಲು ಸಾಧ್ಯವಿಲ್ಲ. ಹಾಸನದಲ್ಲಿ ಶೇ.15.8ರಷ್ಟಿದ್ದರೆ, ಕೊಡಗು ಜಿಲ್ಲೆಯಲ್ಲಿ ಶೇ.16.56 ಇದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು. ಶಿಶು ಮರಣ ತಗ್ಗಿಸುವ ನಿಟ್ಟಿನಲ್ಲಿ ಮೈಸೂರು ವಿಭಾಗದ ಎಲ್ಲಾ ಜಿಲ್ಲೆಗಳಲ್ಲಿಯೂ ನವಜಾತ ಶಿಶುಗಳ ವಿಶೇಷ ಆರೈಕೆ ಘಟಕ (ಎಸ್‌ಎನ್‌ಸಿಯು)ಗಳ ಸೇವೆಯನ್ನು ಬಲವರ್ಧನೆಗೊಳಿಸಬೇಕು ಎಂದರು.

ಇದಕ್ಕೂ ಮುನ್ನ ಆರೋಗ್ಯ ಇಲಾಖೆ ಮೈಸೂರು ವಿಭಾಗದ ವಿಭಾಗೀಯ ಸಹ ನಿರ್ದೇಶಕಿ ಡಾ.ಮಲ್ಲಿಕಾ ಮಾತನಾಡಿ, ಮೈಸೂರು ವಿಭಾಗದಲ್ಲಿ ಒಟ್ಟು ನಾಲ್ಕು ಜಿಲ್ಲಾಸ್ಪತ್ರೆಗಳಿವೆ. ವೈದ್ಯಕೀಯ ಕಾಲೇಜುಗಳು 6 ಇದ್ದು, ಆರೋಗ್ಯ ಮತ್ತು ಕ್ಷೇಮ ಕೇಂದ್ರಗಳು 2249 ಇವೆ. ಮೈಸೂರು ವಿಭಾಗಕ್ಕೆ 108 ನಮ್ಮ ಕ್ಲಿನಿಕ್‌ಗಳ ಅನುಮೋದಿತವಾಗಿದ್ದು, ಈ ಪೈಕಿ 96 ಕಾರ್ಯನಿರ್ವಹಿಸುತ್ತಿವೆ ಎಂದು ಅಂಕಿ–ಅಂಶ ಸಹಿತ ಮಾಹಿತಿ ನೀಡಿದರು.

ದಕ್ಷಿಣ ಕನ್ನಡ ಜಿಲ್ಲೆಯ ಇಲಾಖಾಧಿಕಾರಿಗಳು ಮಾತನಾಡಿ, ಕಳೆದ ಐದು ತಿಂಗಳಿಂದ ಗುತ್ತಿಗೆಯಡಿ ಕಾರ್ಯನಿರ್ವಹಿಸುವ ಎಂಬಿಬಿಎಸ್ ವೈದ್ಯರಿಗೆ ವೇತನ ಬಿಡುಗಡೆಯಾಗಿಲ್ಲ. ಇವರಿಗೆ ರಾಜ್ಯ ಬಜೆಟ್‌ನಡಿ ವೇತನ ನೀಡುವುದಾಗಿ ತಿಳಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ ಇಲಾಖೆ ಆಯುಕ್ತ ಶಿವಕುಮಾರ್, ಸಂವಹನದ ಕೊರತೆಯಿಂದ ಈ ಸಮಸ್ಯೆಯಾಗಿದ್ದು, ಶೀಘ್ರವೇ ಈ ಬಗ್ಗೆ ಕ್ರಮ ವಹಿಸಲಾಗುವುದು ಎಂದು ತಿಳಿಸಿದರು.

326 ಹುದ್ದೆಗಳಲ್ಲಿ ಒಂದೂ ಭರ್ತಿಯಾಗಿಲ್ಲ: ಹಾಸನ ಜಿಲ್ಲೆಯಲ್ಲಿ 7 ತಾಲೂಕುಗಳಿಗೆ ಕೇವಲ ಇಬ್ಬರು ರೇಡಿಯಾಜಿಸ್ಟ್‌ಗಳು ಮಾತ್ರವೇ ಇದ್ದಾರೆ. ಜೊತೆಗೆ ಜಿಲ್ಲೆಗೆ ಮಂಜೂರಿರುವ 326 ಸಿಹೆಚ್‌ಓ (ಸಮುದಾಯ ಆರೋಗ್ಯ ಅಧಿಕಾರಿ) ಹುದ್ದೆಗಳಲ್ಲಿ ಒಂದೂ ಭರ್ತಿಯಾಗಿಲ್ಲ ಎಂದು ಅಧಿಕಾರಿಗಳು ಸಚಿವರ ಗಮನಕ್ಕೆ ತಂದರು. ಇದಕ್ಕೆ ಪ್ರತಿಕ್ರಿಯಿಸಿದ ಸಚಿವರು, ಕನಿಷ್ಠ ಸಂಖ್ಯೆ ಸಿಹೆಚ್‌ಓಗಳು ಇರಲೇಬೇಕು. ಈ ಸಂಬಂಧ ಗಮನ ನೀಡುವಂತೆ ಇಲಾಖೆಯ ರಾಜ್ಯ ಮಟ್ಟದ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಮುಂದುವರೆದು ಮಾತನಾಡಿದ ಸಚಿವರು, 220 ವೈದ್ಯರ ನೇಮಕಾತಿಗೆ ಕ್ರಮ ವಹಿಸಲಾಗುತ್ತಿದೆ. ಪ್ರತಿವರ್ಷ ಎಷ್ಟು ವೈದ್ಯರು ಹೊರ ಹೋಗುತ್ತಾರೆ ಎಂಬುದನ್ನು ಪರಿಶೀಲಿಸಬೇಕು. ಮುಂದಿನ 2ರಿಂದ 3 ವರ್ಷಗಳಲ್ಲಿ ಎಷ್ಟು ವೈದ್ಯರು ಅಗತ್ಯವಿದೆ ಎಂಬ ಬಗ್ಗೆ ಲೆಕ್ಕಾಚಾರ ಮಾಡಿ ಹಣಕಾಸು ಇಲಾಖೆಗೆ ಸಲ್ಲಿಸಿ ಎಂದು ರಾಜ್ಯ ಮಟ್ಟದ ಅಧಿಕಾರಿಗಳಿಗೆ ಸೂಚಿಸಿದರು.


ರಾಜ್ಯದ ಆರೋಗ್ಯ ಇಲಾಖೆಯಲ್ಲಿ ವೈದ್ಯರು ಸೇರಿದಂತೆ ಪ್ರಾಥಮಿಕ ಆರೋಗ್ಯ ಸುರಕ್ಷಾ ಅಧಿಕಾರಿ ಹುದ್ದೆಗಳು 3 ಸಾವಿರಕ್ಕೂ ಅಧಿಕ ಸಂಖ್ಯೆಯಲ್ಲಿ ಖಾಲಿ ಇವೆ. ಹಾಗಾಗಿ ಜುಲೈನೊಳಗೆ ಶೇ.30ರಷ್ಟು ಹುದ್ದೆಗಳಿಗೆ ನೇಮಕಾತಿ ಮಾಡಿಕೊಳ್ಳಲಾಗುವುದು ಎಂದು ಸಚಿವರು ಇದೇ ವೇಳೆ ಹೇಳಿದರು.

ವಿಧಾನ ಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ, ಪ್ರಾದೇಶಿಕ ಆಯುಕ್ತ ನಿತೇಶ್ ಪಾಟೀಲ್, ಆರೋಗ್ಯ ಇಲಾಖೆಯ ರಾಷ್ಟ್ರೀಯ ಆರೋಗ್ಯ ಅಭಿಯಾನ ನಿರ್ದೇಶಕ ಡಾ.ಅವಿನಾಶ್ ಮೆನನ್ ರಾಜೇಂದ್ರನ್, ಮೈಸೂರು ಜಿಪಂ ಸಿಇಓ ಯುಕೇಶ್ ಕುಮಾರ್, ಮೈಸೂರು ಡಿಹೆಚ್‌ಓ ಡಾ.ಪಿ.ಸಿ.ಕುಮಾರಸ್ವಾಮಿ, ಚಾಮರಾಜನಗರ ಡಿಹೆಚ್‌ಓ ಡಾ.ಎಸ್.ಚಿದಂಬರ ಸೇರಿದಂತೆ ಮತ್ತಿತರರು ಅಧಿಕಾರಿಗಳ ಹಾಜರಿದ್ದರು.


ದಿ ಇಂಡಿಯನ್ ಹಾರ್ಟ್ ವಸ್ತುಪ್ರದರ್ಶನದಲ್ಲಿ ಕುಶಲಕರ್ಮಿಗಳ ಕಲಾ ನೈಪುಣ್ಯತೆ ಅನಾವರಣ

ಮೈಸೂರು, ಡಿ.1– ನಗರದ ಸ್ಕೌಟ್ಸ್ ಅಂಡ್ ಗೈಡ್ಸ್ ಮೈದಾನದಲ್ಲಿ ಆಯೋಜಿಸಿರುವ 'ದಿ ಇಂಡಿಯನ್ ಆರ್ಟಿಸನ್ಸ್ ಹಾಟ್(ಟಿಐಎಹೆಚ್) ಮೈಸೂರು ಆವೃತ್ತಿಗೆ ಸಾರ್ವಜನಿಕ ರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗುತ್ತಿದ್ದು, ಭಾರತೀಯ ಕುಶಲಕರ್ಮಿಗಳ ಕಲಾ ನೈಪುಣ್ಯತೆಗೆ ಬೆರಗಾಗುತ್ತಿದ್ದಾರೆ.

ಇದು ಕರಕುಶಲ ವಸ್ತುಗಳ ಪ್ರದರ್ಶನ ಮತ್ತು ಮಾರಾಟಕ್ಕೆ ಸೀಮಿತವಾಗದೆ, ಭವ್ಯ ಸಾಂಸ್ಕೃತಿಕ ಉತ್ಸವದಂತೆ ಗ್ರಾಹಕರನ್ನು ಸೆಳೆಯುತ್ತಿದೆ. ಪ್ರತಿಯೊಂದು ಮಳಿಗೆಯಲ್ಲೂ ಹಲವು ತಲೆಮಾರುಗಳಿಂದ ಉಳಿದು ಬಂದಿರುವ ಕರಕುಶಲತೆಯ ಜೀವಂತಿಕೆ ಅನಾವರಣಗೊಂಡಿದೆ. ಚನ್ನಪಟ್ಟಣದ ಆಟಿಕೆಗಳಿಂದ ಹಿಡಿದು ಪಶ್ಚಿಮ ಬಂಗಾಳದ ಆಕರ್ಷಕ ಕಾಲಿಘಾಟ್ ವರ್ಣಚಿತ್ರದವರೆಗೆ, ಒಡಿಶಾದ ಪಟ್ಟಚಿತ್ರದಿಂದ ಆಗ್ರಾದ ಕಾಲಾತೀತ ಅಮೃತಶಿಲೆ ಕೆತ್ತನೆವರೆಗಿನ ವೈಭವವನ್ನು ಕಣ್ತುಂಬಿಕೊಳ್ಳಬಹುದಾಗಿದೆ.







ರಾಜಸ್ಥಾನದ ಜೈಪುರ ಲೋಹದ ಕರಕುಶಲ ವಸ್ತುಗಳು, ಹರಿಯಾಣದ ಕಲ್ಲಿನ ಧೂಳಿನ ವರ್ಣಚಿತ್ರಗಳು, ಮಧ್ಯ ಪ್ರದೇಶದ ಸುಂದರವಾದ ಗೊಂಡ್ ಕಲೆ, ಮಹಾರಾಷ್ಟ್ರದ ಕರಕುಶಲ ಸಂಗೀತ ವಾದ್ಯಗಳು, ಪಶ್ಚಿಮ ಬಂಗಾಳದ ಸುಂದರ ಆಭರಣಗಳು, ಕರ್ನಾಟಕದ ಟೆರಾಕೋಟ ಆಭರಣ, ಸಾಂಪ್ರದಾಯಿಕ ಲಂಬಾಣಿ ಆಭರಣಗಳು, ಲಕ್ನೋ, ಪಶ್ಚಿಮಬಂಗಾಳ, ತೆಲಂಗಾಣ, ಒಡಿಶಾ, ಬಿಹಾರ, ರಾಜಸ್ಥಾನ, ಜಮ್ಮು–ಕಾಶ್ಮೀರ ಸೇರಿದಂತೆ ವಿವಿಧ ರಾಜ್ಯಗಳ ಕೈಮಗ್ಗ ಸೀರೆ ಇನ್ನಿತರ ವಸ್ತುಗಳು, ಪ್ರಾಚೀನ ಪೀಠೋಪಕರಣ, ಗೃಹ ಅಲಂಕಾರಿಕ ವಸ್ತುಗಳು, ಮೈಸೂರು ಸ್ಯಾಂಡಲ್ ಸೋಪ್ ಸೇರಿದಂತೆ ವೈವಿಧ್ಯಮಯ ವಸ್ತುಗಳು ಇಲ್ಲಿವೆ.


ಕುಶಲಕರ್ಮಿಗಳಿಂದಲೇ ನೇರವಾಗಿ ಸಂವಾದಿಸಿ, ತಮಗೆ ಬೇಕಾದ ವಸ್ತುಗಳನ್ನು ಕೊಳ್ಳುವ ಸದಾವಕಾಶವನ್ನು ಟಿಐಎಹೆಚ್ ಕಲ್ಪಿಸಿಕೊಟ್ಟಿದ್ದು, ಡಿ.7ರವರೆಗೆ ಬೆಳಗ್ಗೆ 10.30ರಿಂದ ರಾತ್ರಿ 8.30ರವರೆಗೆ ಭೇಟಿ ನೀಡಬಹುದು. ವಾರಾಂತ್ಯದಲ್ಲಿ ಶಾಸ್ತ್ರೀಯ ಸಂಗೀತ ಮತ್ತು ನೃತ್ಯ ಕಾರ್ಯಕ್ರಮವನ್ನು ಸವಿಯಬಹುದು. ಗ್ರಾಹಕರು ಇಲ್ಲಿಗೆ ಭೇಟಿ ನೀಡಿ, ಕುಶಲಕರ್ಮಿಗಳನ್ನು ಪ್ರೋತ್ಸಾಹಿಸುವ ಮೂಲಕ ಪರಂಪರೆ ಉಳಿವಿಗೆ ಕೈಜೋಡಿಸುವಂತೆ ಟಿಐಎಹೆಚ್ ಪ್ರಕಟಣೆಯಲ್ಲಿ ಮನವಿ ಮಾಡಲಾಗಿದೆ.

ರ್ಯಾಡಿಸನ್ ಬ್ಲೂ ಪ್ಲಾಜಾ ಹೋಟೆಲ್‌ನಲ್ಲಿ ಕೇಕ್ ಮಿಕ್ಸಿಂಗ್

ಮೈಸೂರು,ಡಿ.1(ಪಿಎಂ)– ವಾರ್ಷಿಕ ಕೇಕ್ ಮಿಕ್ಸಿಂಗ್ ಸಮಾರಂಭಕ್ಕಾಗಿ ಅತಿಥಿಗಳು, ಸಿಬ್ಬಂದಿ ಮತ್ತು ನಗರದ ಅಭಿಮಾನಿಗಳು ಸಮಾಗಮಗೊಂಡ ಹಿನ್ನೆಲೆಯಲ್ಲಿ ರ್ಯಾಡಿಸನ್ ಬ್ಲೂ ಪ್ಲಾಜಾ ಹೋಟೆಲ್‌ನಲ್ಲಿ ಹಬ್ಬದ ಸಂಭ್ರಮ ಕಳೆಗಟ್ಟಿತ್ತು.

ಆ ಮೂಲಕ ಈ ಕಾರ್ಯಕ್ರಮವು ಕ್ರಿಸ್‌ಮಸ್ ಮಾಸದ ಸಂತೋಷದಾಯಕ ಆರಂಭಕ್ಕೆ ಮುನ್ನುಡಿ ಬರೆಯಿತು. ಪಾಲ್ಗೊಂಡಿದ್ದ ಅತಿಥಿಗಳು, ಹಣ್ಣು, ಮಸಾಲೆಗಳು ಮತ್ತು ಸ್ಪಿರಿಟ್‌ಗಳ ಮಿಶ್ರಣದಲ್ಲಿ ತಲ್ಲೀನರಾದರು. ಆ ಮೂಲಕ ಶೀಘ್ರದಲ್ಲೇ ಹೋಟೆಲ್‌ನ ಸಿಗ್ನೇಚರ್ ಕ್ರಿಸ್‌ಮಸ್ ಕೇಕ್ ರೂಪುಗೊಳ್ಳಲಿದೆ.

ಈ ಮಿಕ್ಸಿಂಗ್ ಕಾರ್ಯಕ್ರಮದಲ್ಲಿ ಎಲ್ಲರಲ್ಲೂ ನಗು, ಸೌಹಾರ್ದತೆ ಮತ್ತು ಉಲ್ಲಾಸವು ಪ್ರತಿಬಿಂಬಿಸುತ್ತಿತ್ತು. ತನ್ನದೇ ಆದ ವಿಶಿಷ್ಟ ಪರಂಪರೆ ಹೊಂದಿರುವ ಕೇಕ್ ಮಿಕ್ಸಿಂಗ್ ಪದ್ಧತಿಯು ಮೈಸೂರಿನ ರ್ಯಾಡಿಸನ್ ಬ್ಲೂ ಪ್ಲಾಜಾ ಹೋಟೆಲ್‌ನಲ್ಲಿ ಮುಂದುವರಿಯುತ್ತಿರುವ ಸಂಪ್ರದಾಯವಾಗಿದೆ.



ಮೈಸೂರಿನ ರ್ಯಾಡಿಸನ್ ಬ್ಲೂ ಪ್ಲಾಜಾ ಹೋಟೆಲ್‌ನಲ್ಲಿ ಕೇಕ್ ಮಿಕ್ಸಿಂಗ್ ಕಾರ್ಯಕ್ರಮ ನಡೆಯಿತು.

ಕಾರ್ಯಕ್ರಮದಲ್ಲಿ ಮಾತನಾಡಿದ ಹೋಟೆಲ್‌ನ (ಕಾರ್ಯಾಚರಣೆ) ನಿರ್ದೇಶಕ ವಿಜಯ್ ಸೆಲ್ವರಾಜ್, ಕ್ರಿಸ್‌ಮಸ್ ಎಂದರೆ ಸಂತೋಷ ಹಾಗೂ ಸಾಮರಸ್ಯದ ಆಚರಣೆ. ನಮ್ಮ ಹೋಟೆಲ್‌ನ ಕೇಕ್ ಮಿಕ್ಸಿಂಗ್ ಕಾರ್ಯಕ್ರಮವು ಅತಿಥಿಗಳು, ಸಿಬ್ಬಂದಿ ಹಾಗೂ ಸಮುದಾಯದಲ್ಲಿ ಏಕತೆ ಮತ್ತು ಹಬ್ಬದ ವಾತಾವರಣ ಸೃಷ್ಟಿಸಿದೆ. ಈ ಮೂಲಕ ನಾವು ಕ್ರಿಸ್‌ಮಸ್ ಅನ್ನು ಸ್ವಾಗತಿಸುತ್ತಿದ್ದೇವೆ ಎಂದು ಸಂತಸ ವ್ಯಕ್ತಪಡಿಸಿದರು.

ಅಭಿನಂದನೆ...



ಲಾ ಗೈಡ್ ಕನ್ನಡ ಕಾನೂನು ಮಾಸ ಪತ್ರಿಕೆಯ ಬೆಳ್ಳಿ ಹಬ್ಬದ ಹಿನ್ನೆಲೆಯಲ್ಲಿ ಪತ್ರಿಕೆಯ ಗೌರವ ಸಂಪಾದಕರೂ ಆದ ಹಿರಿಯ ವಕೀಲ ಹೆಚ್.ಎನ್. ವೆಂಕಟೇಶ್ ಅವರನ್ನು ಬಿಜೆಪಿ ಮುಖಂಡ ಅಪ್ಪಣ್ಣ ಅಭಿನಂದಿಸಿದರು. ಈ ವೇಳೆ ಹಿರಿಯ ವಕೀಯ ಎಂ.ಡಿ. ಹರೀಶ್‌ಕುಮಾರ್, ಕಾವೇರಿ ಆಸ್ಪತ್ರೆ ಮುಖ್ಯಸ್ಥ ಡಾ. ಚಂದ್ರಶೇಖರ್, ಹಿರಿಯ ಪತ್ರಕರ್ತರಾದ ಎಂ.ಬಿ. ಮರಂಕಲ್, ರಾಮಕೃಷ್ಣ, ವಕೀಲ ಚಂದ್ರು ಉಪಸ್ಥಿತರಿದ್ದಾರೆ.

ಮೈಸೂರು ನಗರ, ಜಿಲ್ಲಾ ಬಿಜೆಪಿ ಪದಾಧಿಕಾರಿಗಳ ಪಟ್ಟಿ ಪ್ರಕಟ



ಅರುಣ್‌ಕುಮಾರ್ ಗೌಡ



ಎಂ.ಎ. ಮೋಹನ್



ಪ್ರಶಾಂತ್ ಗೌಡ



ರೇಣುಕಾ ರಾಜ್

ಮೈಸೂರು, ಡಿ.1– ಬಿಜೆಪಿ ಮೈಸೂರು ನಗರ ಹಾಗೂ ಗ್ರಾಮಾಂತರ ಘಟಕಗಳಿಗೆ ನೂತನ ಪದಾಧಿಕಾರಿಗಳ ಆಯ್ಕೆಯಾಗಿದ್ದು, ಬಿಜೆಪಿ ನಗರಾಧ್ಯಕ್ಷ ಎಲ್.ನಾಗೇಂದ್ರ ಹಾಗೂ ಗ್ರಾಮಾಂತರ ಅಧ್ಯಕ್ಷ ಕೆ.ಎನ್.ಸುಬ್ಬಣ್ಣ ಸೋಮವಾರ ಪಟ್ಟಿ ಪ್ರಕಟಿಸಿದ್ದಾರೆ.

ಮೈಸೂರು ನಗರ: ಉಪಾಧ್ಯಕ್ಷರು– ಎಂ.ಎ.ಮೋಹನ್, ಸೋಮಶೇಖರ್ ರಾಜು, ವಿಶ್ವೇಶ್ವರಯ್ಯ, ಸು.ಮುರುಳಿ, ಈ. ರಮೇಶ್, ಅರುಣ್‌ಕುಮಾರ್ ಗೌಡ, ಬಾಲಕೃಷ್ಣ, ಶ್ರೀಮತಿ ರೇಣುಕಾ ರಾಜ್. ಪ್ರಧಾನ ಕಾರ್ಯದರ್ಶಿಗಳು– ಮೈ.ಪು. ರಾಜೇಶ್, ಬಿ.ಎಂ.ರಘು, ಸಿ.ಕೆ.ರುದ್ರಮೂರ್ತಿ. ಕಾರ್ಯದರ್ಶಿಗಳು– ಪ್ರಶಾಂತ್ ಗೌಡ, ನಾಗೇಂದ್ರಕುಮಾರ್, ಪುನೀತ್, ಶ್ರೀಮತಿ ಮೋನಿಕಾ, ಭದ್ರಿಶ್, ಮರಿಸ್ವಾಮಿ ನಾಯಕ, ವೇಲು ಆರುಮುಗಂ, ಶ್ರೀಮತಿ ರಶ್ಮಿ, ಖಜಾಂಚಿ–ಮಹಾವೀರ್ ಜೈನ್, ಕಾರ್ಯಾಲಯ ಕಾರ್ಯದರ್ಶಿ–ನಂದಕುಮಾರ್.

ಮೈಸೂರು ಗ್ರಾಮಾಂತರ: ಉಪಾಧ್ಯಕ್ಷರು– ಸಿದ್ದಪ್ಪ ಹೆಳವರಹುಂಡಿ, ಕಿರಣ್ ಜೈರಾಮೇಗೌಡ, ಹೆಚ್.ಸಿ.ಲಕ್ಷ್ಮಣ, ಗಣೇಶ ಕುಮಾರಸ್ವಾಮಿ, ಶ್ರೀಮತಿ ಸ್ವಪ್ನಾ ನಾಗೇಶ್, ಸಿ.ಕೆ.ಗಿರೀಶ್, ಪರಶಿವಮೂರ್ತಿ, ಆರ್.ಅರ್ಜುನ್, ಪ್ರಧಾನ ಕಾರ್ಯದರ್ಶಿಗಳು– ಎನ್.ವಿ.ವಿನಯ್‌ಕುಮಾರ್, ಪರೀಕ್ಷಿತ್ ರಾಜ್ ಅರಸ್, ಎನ್.ಎಂ. ರಾಮಚಂದ್ರ, ಕಾರ್ಯದರ್ಶಿ– ನಾಗಣ್ಣಗೌಡ, ಎಂ.ಎಸ್.ಸಾಮ್ರಾಟ್, ಸಿ.ಎಂ. ಮಹದೇವಯ್ಯ, ಶರತ್ ಪುಟ್ಟಬುದ್ಧಿ, ಶ್ರೀಮತಿ ಕೆ.ಆರ್.ದಾಕ್ಷಾಯಿಣಿ, ಪಿ.ಜಿ.ರವಿ, ದಯಾನಂದ ಪಟೇಲ್, ಚಂದ್ರು, ಕೋಶಾಧ್ಯಕ್ಷ(ಖಜಾಂಚಿ)– ಚಂದ್ರಶೇಖರ್, ಕಾರ್ಯಾಲಯ ಕಾರ್ಯದರ್ಶಿ– ಪಾಪಣ್ಣ, ಮಾಧ್ಯಮ ವಕ್ತಾರ– ಡಾ.ವಸಂತ್‌ಕುಮಾರ್, ಸಹ ವಕ್ತಾರ– ಸಂಜಯ್ ಶರ್ಮಾ, ಮಾಧ್ಯಮ ಸಂಚಾಲಕ–ಮಹಾದೇವಸ್ವಾಮಿ, ಸಹ ಸಂಚಾಲಕ–ಜೆ.ಬಿ.ಶಿವಸ್ವಾಮಿ.



ತಂಬಾಕು ಮೇಲಿನ ಅಬಕಾರಿ ಸುಂಕ, ಪಾನ್ ಮಸಾಲ ಮೇಲೆ ದುಪ್ಪಟ್ಟು ಸೆಸ್

ಲೋಕಸಭೆಯಲ್ಲಿ 2 ಮಸೂದೆ ಮಂಡಿಸಿದ ನಿರ್ಮಲ ಸೀತಾರಾಮನ್





ನವದೆಹಲಿ: ಜಿಎಸ್‌ಟಿ ಪರಿಹಾರ ಸೆಸ್ ಅನ್ನು ರದ್ದುಗೊಳಿಸಿದ ನಂತರವೂ ತಂಬಾಕು, ಪಾನ್ ಮಸಾಲ ಮತ್ತು ಇತರ ತಂಬಾಕು ಉತ್ಪನ್ನಗಳ ಮೇಲಿನ ಒಟ್ಟಾರೆ ತೆರಿಗೆ ಹೊರೆಯನ್ನು ಕಾಯ್ದುಕೊಳ್ಳಲು ಸೋಮವಾರ ಲೋಕಸಭೆಯಲ್ಲಿ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಎರಡು ಮಸೂದೆಗಳನ್ನು ಮಂಡಿಸಿದರು.

ತೃಣಮೂಲ ಕಾಂಗ್ರೆಸ್ ನಾಯಕ ಸೌಗತ ರಾಯ್ ಮತ್ತು ಡಿಎಂಕೆ ಸಂಸದ ಕಥಿರ್ ಆನಂದ್ ಈ ಮಸೂದೆಗಳನ್ನು ಮಂಡಿಸುವುದನ್ನು ವಿರೋಧಿಸಿದರು. ತಂಬಾಕಿನ ಮೇಲೆ ಅಬಕಾರಿ ಸುಂಕ ವಿಧಿಸಲು ಅವು ಅವಕಾಶ ನೀಡಿದ್ದರೂ, ತಂಬಾಕು ಉತ್ಪನ್ನಗಳ ಆರೋಗ್ಯದ ಅಪಾಯಗಳನ್ನು ನಿರ್ಲಕ್ಷಿಸಲಾಗಿದೆ ಎಂದು ರಾಯ್ ಆರೋಪಿಸಿದರು. ಸಾರ್ವಜನಿಕರ ಮೇಲೆ ಮತ್ತಷ್ಟು ತೆರಿಗೆ ಹೊರೆ ಹೇರುವ ಪ್ರಯತ್ನ ನಡೆಯುತ್ತಿದೆ ಎಂದು ಕಥಿರ್ ಆನಂದ್ ಹೇಳಿದರು.

ಕೇಂದ್ರ ಅಬಕಾರಿ ತೆರಿಗೆ ತಿದ್ದುಪಡಿ ಮಸೂದೆ 2025, ಸಿಗರೇಟ್ ಸೇರಿದಂತೆ ವಿವಿಧ ತಂಬಾಕು ಉತ್ಪನ್ನಗಳ ಮೇಲೆ ಅಬಕಾರಿ ಸುಂಕವನ್ನು ವಿಧಿಸುತ್ತದೆ. ಇದು ಪ್ರಸ್ತುತ ತಂಬಾಕಿನ ಮೇಲೆ ವಿಧಿಸಲಾಗುವ ಜಿಎಸ್‌ಟಿ ಪರಿಹಾರ ಸೆಸ್ ಅನ್ನು ಬದಲಾಯಿಸುತ್ತದೆ.

ಆರೋಗ್ಯ ರಕ್ಷಣಾ ಮಸೂದೆ 2025ರ ರಾಷ್ಟ್ರೀಯ ಭದ್ರತಾ ಸೆಸ್, ಪಾನ್ ಮಸಾಲಾ ಮೇಲೆ ವಿಧಿಸಲಾಗುವ ಪರಿಹಾರ ಸೆಸ್ ಅನ್ನು ಬದಲಾಯಿಸುತ್ತದೆ. ರಾಷ್ಟ್ರೀಯ ಭದ್ರತೆ ಮತ್ತು ಸಾರ್ವಜನಿಕ ಆರೋಗ್ಯ ವೆಚ್ಚಗಳಿಗಾಗಿ ಹೆಚ್ಚುವರಿ ತೆರಿಗೆ ಸಂಗ್ರಹಿಸುವುದು ಇದರ ಉದ್ದೇಶವಾಗಿದೆ. ಈ ಸರಕುಗಳನ್ನು ತಯಾರಿಸಲು ಅಥವಾ ಉತ್ಪಾದಿಸಲು ಬಳಸುವ ಯಂತ್ರೋಪಕರಣಗಳು ಅಥವಾ ಪ್ರಕ್ರಿಯೆಗಳ ಮೇಲೆ ಸೆಸ್ ವಿಧಿಸಲಾಗುತ್ತದೆ. ಪ್ರಸ್ತುತ, ತಂಬಾಕು ಮತ್ತು ಪಾನ್ ಮಸಾಲಾಗಳು ಶೇಕಡಾ 28ರಷ್ಟು ಜಿಎಸ್‌ಟಿಗೆ ಒಳಪಟ್ಟಿರುತ್ತವೆ. ಪರಿಹಾರ ಸೆಸ್ ಅನ್ನು ವಿವಿಧ ದರಗಳಲ್ಲಿ ವಿಧಿಸಲಾಗುತ್ತದೆ.

ಒಲಿಂಪಿಕ್ಸ್‌ನಲ್ಲಿ ಚಿನ್ನ ಗೆದ್ದರೆ 6 ಕೋಟಿ, ಸರ್ಕಾರಿ ನೌಕರಿ

ಕ್ರೀಡಾಪಟುಗಳಿಗೆ ಸಿಎಂ ಸಿದ್ದರಾಮಯ್ಯ ಬಂಪರ್ ಆಫರ್



ಬೆಂಗಳೂರು, ಡಿ.1– ಒಲಂಪಿಕ್ಸ್‌ನಲ್ಲಿ ಚಿನ್ನದ ಪದಕ ಗೆಲ್ಲುವ ಕ್ರೀಡಾಪಟುಗಳಿಗೆ ಸರ್ಕಾರದಿಂದ 6 ಕೋಟಿ ರೂ ನಗದು ಜೊತೆಗೆ ಕ್ಲಾಸ್ 1 ಸರ್ಕಾರಿ ಹುದ್ದೆ, ಬೆಳ್ಳಿ ಪದಕ ಗೆದ್ದರೆ 4 ಕೋಟಿ ರೂಪಾಯಿ, ಕಂಚಿನ ಪದಕ ಗೆದ್ದರೆ 3 ಕೋಟಿ ರೂ. ಕೊಡುತ್ತೇವೆ ಎಂದು ಸಿಎಂ ಸಿದ್ದರಾಮಯ್ಯ ಅವರು ಬಂಪರ್ ಆಫರ್ ಘೋಷಿಸಿದ್ದಾರೆ.

ಬೆಂಗಳೂರಿನ ಯವನಿಕ ಸಭಾಂಗಣದಲ್ಲಿ ಏಕಲವ್ಯ, ಜೀವಮಾನ ಸಾಧನೆ, ಕ್ರೀಡಾ ರತ್ನ, ಕ್ರೀಡಾ ಪೋಷಕ ಪ್ರಶಸ್ತಿ ಪ್ರದಾನ ಸಮಾರಂಭ ನಡೆದಿದೆ. ಈ ಪ್ರಶಸ್ತಿ ಸಮಾರಂಭ ಕಾರ್ಯಕ್ರಮದಲ್ಲಿ ಮಾತನಾಡಿದ ಸಿಎಂ ಸಿದ್ದರಾಮಯ್ಯ, ಒಲಂಪಿಕ್ಸ್‌ನಲ್ಲಿ ಚಿನ್ನ ಗೆಲ್ಲುವ ಕ್ರೀಡಾಪಟುಗಳಿಗೆ ಸರ್ಕಾರದಿಂದ 6 ಕೋಟಿ ರೂ ನಗದು ಜೊತೆಗೆ ಕ್ಲಾಸ್ 1 ಸರ್ಕಾರಿ ಹುದ್ದೆ, ಬೆಳ್ಳಿ ಗೆದ್ದರೆ 4 ಕೋಟಿ ರೂಪಾಯಿ, ಕಂಚಿನ ಪದಕ ಗೆದ್ದರೆ 3 ಕೋಟಿ ರೂ ಕೊಡ್ತೇನೆ ಎಂದು ಹೇಳಿದರು. 2028ರ ಒಲಂಪಿಕ್ಸ್‌ಗೆ 60 ಮಂದಿ ಆಯ್ಕೆ ಮಾಡಿದ್ದಾರೆ, ಪ್ರತಿ ವರ್ಷ ತರಬೇತಿಗಾಗಿ 10 ಲಕ್ಷ ಹಣ ಕೊಡುತ್ತೇವೆ, ಉತ್ತಮ ತರಬೇತುದಾರರಿದ್ದರೆ ಚಿನ್ನ ಗೆಲ್ಲುವುದು ಕಷ್ಟವಲ್ಲ ಎಂದು ಹೇಳಿದರು.

ನನ್ನ ತರ ಆಗಬೇಡಿ, ನಾನು ಜಗಳಗಂಟ: ಇನ್ನು ಇದೇ ವೇಳೆ ಸಿಎಂ ಸಿದ್ದರಾಮಯ್ಯ ಅವರು ನನ್ನ ತರ ಆಗಬೇಡಿ, ನಾನು ಜಗಳಗಂಟ, ಪಿಯುಸಿ ಆದ್ಮೇಲೆ ಕ್ರೀಡೆಗೆ ಹೋಗಲಿಲ್ಲ, ಚಿಕ್ಕವನಿದ್ದಾಗ ಎಲ್ಲಾ ಕ್ರೀಡೆಗಳಲ್ಲೂ ಭಾಗವಹಿಸುತ್ತಿದ್ದೆ, ಆದರೆ ಯಾವುದರಲ್ಲೂ ಮುಂದುವರೆಯಲಿಲ್ಲ ಎಂದು ಹಳೆ ದಿನಗಳನ್ನು ನೆನಪಿಸಿಕೊಂಡರು.

ಕುಕ್ಕರಹಳ್ಳಿ ಕೆರೆ ಸ್ವಚ್ಛತೆಗೆ ಮೈಸೂರು ವಿವಿ ನಿರ್ಧಾರ

ಗೋವಾದಿಂದ ಬೋಟ್ ಖರೀದಿ

ವರುಣ ಕೆರೆಯ ಔಟ್ ಬ್ಯಾಕ್ ವರುಣ ತಂಡದ ಸಹಕಾರದಲ್ಲಿ ಸ್ವಚ್ಛತೆಗೆ ಯೋಜನೆ


ಮೈಸೂರು, ಡಿ.1(ಜಿಎ)–ಮೈಸೂರಿನ ಕುಕ್ಕರಹಳ್ಳಿ ಕೆರೆಯನ್ನು ಬೋಟ್ ಬಳಸಿ, ಸ್ವಚ್ಛಗೊಳಿಸಲು ಮೈಸೂರು ವಿಶ್ವವಿದ್ಯಾನಿಲಯ ಮುಂದಾಗಿದ್ದು, ಇದಕ್ಕಾಗಿ ಈಗಾಗಲೇ ಗೋವಾದಲ್ಲಿ ಬೋಟ್ ಖರೀದಿ ಮಾಡಲಾಗಿದೆ.

ಕುಕ್ಕರಹಳ್ಳಿ ಕೆರೆ ಸ್ವಚ್ಛಗೊಳಿಸುವಂತೆ ಮೈಸೂರಿನ ವಿವಿಧ ಸಂಘ–ಸಂಸ್ಥೆಗಳು, ಮೈಸೂರು ವಿಶ್ವವಿದ್ಯಾನಿಲಯಕ್ಕೆ ಸಾಕಷ್ಟು ಮನವಿಗಳನ್ನು ಸಲ್ಲಿಸಿದ್ದವು. ಈಗ ವಿವಿಯೂ ಕೆರೆ ರಕ್ಷಣೆಗಾಗಿ ವಿವಿಧ ಯೋಜನೆಗಳನ್ನು ರೂಪಿಸಿದೆ. ಅದರಂತೆ ಈಗ ಅಂದಾಜು 3 ಲಕ್ಷ ರೂ. ವೆಚ್ಚದ ಬೋಟ್ ಖರೀದಿಸಿ ಅವುಗಳ ಮೂಲಕ ನುರಿತ ತಜ್ಞರ ತಂಡದಿಂದ ಸ್ವಚ್ಛತೆ ಆರಂಭಿಸಲು ಸಿದ್ಧತೆಗಳನ್ನು ಮಾಡಿಕೊಂಡಿದೆ.

ಮೈಸೂರಿಗೆ ಬರುವ ಪ್ರವಾಸಿಗರು ಮತ್ತು ವಾಯುವಿಹಾರಿಗಳಿಗೆ ನೆಚ್ಚಿನ ತಾಣವಾದ ಕುಕ್ಕರಹಳ್ಳಿ ಕೆರೆಯೂ ಮೈಸೂರಿಗರ ಒಂದು ಅಚ್ಚುಮೆಚ್ಚಿನ ವಿಹಾರ ಸ್ಥಳವಾಗಿದೆ. ಇಂತಹ ಐತಿಹಾಸಿಕ ಕೆರೆ ಸಾಕಷ್ಟು ಕಲುಷಿತಗೊಂಡಿದೆ. ಕೆಲವೊಮ್ಮೆ ದುರ್ನಾತ ಬೀರುತ್ತದೆ. ಅಲ್ಲದೆ ಆಗಾಗ ಕಲುಷಿತ ನೀರಿನಿಂದ ಸಾವಿರಾರು ಜಲಚರಗಳು ಸಾವನ್ನಪ್ಪಿದ್ದು, ಈ ರೀತಿ ಘಟನೆಗಳು ಪರಿಸರ ಪ್ರೇಮಿಗಳು ಹಾಗೂ ಕುಕ್ಕರಹಳ್ಳಿ ಕೆರೆ ಒಡನಾಡಿಗಳಿಗೆ ಬೇಸರವುಂಟು ಮಾಡಿದೆ.

ನಗರದ ಅಪರೂಪಗಳಲ್ಲಿ ಒಂದಾದ ಕುಕ್ಕರಹಳ್ಳಿ ಕೆರೆಯನ್ನು ಉಳಿಸುವಂತೆ ಹಿಂದಿನಿಂದಲೂ ಸಾಕಷ್ಟು ಹೋರಾಟಗಳು ನಡೆದಿವೆ. ಮೈಸೂರು ವಿಶ್ವವಿದ್ಯಾನಿಲಯಕ್ಕೆ ಸಾಕಷ್ಟು ದೂರು, ಸಲಹೆ, ವರದಿಗಳನ್ನು ನೀಡಿದ್ದಾರೆ. ಆಗಾಗ ತಾತ್ಕಾಲಿಕವಾಗಿ ಪರಿಹಾರವನ್ನು ಕಂಡುಕೊಳ್ಳಲಾಗಿತ್ತು. ವಿಶ್ವವಿದ್ಯಾನಿಲಯದ ಕುಲಸಚಿವೆ ಎಂ.ಕೆ.ಸವಿತ ಮುತುವರ್ಜಿ ವಹಿಸಿ, ಈ ಬಾರಿ ಕೆರೆಯನ್ನು ಶಾಶ್ವತವಾಗಿ ಶುದ್ಧಗೊಳಿಸಲು ನಿರ್ಧರಿಸಿದ್ದಾರೆ.

ವರಣಾ ಕೆರೆಯಲ್ಲಿ ಜಲ ಕ್ರೀಡೆ ನಡೆಸುತ್ತಿರುವ ಔಟ್ ಬ್ಯಾಕ್ ವರುಣ ತಂಡದೊಂದಿಗೆ ಮೈಸೂರು ವಿಶ್ವವಿದ್ಯಾನಿಲಯದ ಕುಲಸಚಿವೆ ಎಂ.ಕೆ.ಸವಿತ ಅವರು ಚರ್ಚಿಸಿ, ವರುಣಾ ಕೆರೆಯ ಸ್ವಚ್ಛತೆಗೆ ಬಳಸಿರುವ ವಿಧಾನದ ಮಾಹಿತಿ ಪಡೆದುಕೊಂಡಿದ್ದಾರೆ. ಔಟ್ ಬ್ಯಾಕ್ ವರುಣ ಮುಖ್ಯಸ್ಥ ಅಬ್ದುಲ್ ಅಲೀಮ್ ನೀಡಿರುವ ಮಾಹಿತಿಯಂತೆ ವರುಣ ಕೆರೆಯನ್ನು ಬೋಟ್ ಬಳಸಿ ಸ್ವಚ್ಛಗೊಳಿಸಿದಂತೆ ಕುಕ್ಕರಹಳ್ಳಿ ಕೆರೆಯನ್ನು ಸ್ವಚ್ಛಗೊಳಿಸುವ ನಿರ್ಧಾರಕ್ಕೆ ಬಂದಿದ್ದಾರೆ.



ನುರಿತ ತಂಡದಿಂದ ಸ್ವಚ್ಛತೆ

ಕುಕ್ಕರಹಳ್ಳಿ ಕೆರೆಯನ್ನು ಸ್ವಚ್ಛ ಮಾಡುತ್ತೇವೆ ಎಂದು ಹಲವಾರು ಸಂಘ–ಸಂಸ್ಥೆ, ಸ್ವಯಂ ಸೇವಕರು ಬರುತ್ತಾರೆ. ಅವರ ಕೈಯಿಂದ ಸ್ವಚ್ಛತೆ ಮಾಡಿಸುವುದು ಸುಲಭದ ಕೆಲಸವಲ್ಲ. ಈ ಹಿನ್ನೆಲೆಯಲ್ಲಿ ಔಟ್ ಬ್ಯಾಕ್ ವರುಣ ಸಂಸ್ಥೆಯೊಂದಿಗೆ ಚರ್ಚಿಸಿ, ಬೋಟ್ ತರಿಸಲಾಗುತ್ತಿದೆ. ಯಾವುದೇ ಅವಘಡವಾಗದಂತೆ ಬೋಟ್ ಮೂಲಕ ಸ್ವಚ್ಛತೆ ಆರಂಭಿಸುವ ಮುನ್ನ ನುರಿತ ಈಜು ಪಟುಗಳು, ಸ್ವಚ್ಛತಾ ತಂಡಕ್ಕೆ ತರಬೇತಿ ನೀಡಲಾಗುತ್ತದೆ. ತದನಂತರವೇ ಸ್ವಚ್ಛತೆ ಮಾಡಲಾಗುತ್ತದೆ. ಮುಂದಿನ ದಿನಗಳಲ್ಲಿ ಹಂತ ಹಂತವಾಗಿ ಕುಕ್ಕರಹಳ್ಳಿ ಕೆರೆಗೆ ಧಕ್ಕೆ ಆಗದಂತೆ ಮತ್ತಷ್ಟು ಅಭಿವೃದ್ಧಿ ಕಾರ್ಯ ಮಾಡಲಾಗುತ್ತದೆ.

– ಎಂ.ಕೆ.ಸವಿತಾ, ಕುಲಸಚಿವೆ, ಮೈಸೂರು ವಿಶ್ವವಿದ್ಯಾನಿಲಯ

ಈಗಾಗಲೇ ಗೋವಾದಲ್ಲಿ ಬೋಟ್ ಬುಕ್ ಮಾಡಲಾಗಿದೆ. ಕೆಲವೇ ದಿನಗಳಲ್ಲಿ ಲಾರಿ ಮೂಲಕ ಮೈಸೂರು ನಗರ ತಲುಪಲಿವೆ. ಈ ಬೋಟ್‌ಗಳ ಮೂಲಕ ಇಡೀ ಕೆರೆಯನ್ನು ಸ್ವಚ್ಛಗೊಳಿಸಬಹುದು. ಕೆರೆಯಲ್ಲಿರುವ ಕಸವನ್ನು ಸಂಗ್ರಹಿಸಿ ಮತ್ತೊಂದೆಡೆ ಸಾಗಿಸಬಹುದು. ಕೆಲಸಕ್ಕೆ ತಕ್ಕಂತೆ ಬೋಟ್‌ನ ವೇಗದ ಸಾಮರ್ಥ್ಯವನ್ನು ಬದಲಿಸಿಕೊಳ್ಳಲು ಅವಕಾಶವಿದೆ ಎಂದು ಔಟ್ ಬ್ಯಾಕ್ ವರುಣ ಮುಖ್ಯಸ್ಥ ಅಬ್ದುಲ್ ಅಲೀಮ್ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಮೈಸೂರಿನ ಭಾಗದಲ್ಲಿ ನಮ್ಮ ಸಂಸ್ಥೆ ಜಲಕ್ರೀಡೆ ನಡೆಸುತ್ತಿದ್ದು, ಜಲ ಸಂರಕ್ಷಣೆಗೂ ಕೆಲಸ ಮಾಡುತ್ತಿದೆ. ವರುಣ ಕೆರೆಯನ್ನು ನಿತ್ಯವೂ ಬೋಟ್ ಮೂಲಕ ಸ್ವಚ್ಛಗೊಳಿಸಲಾಗುತ್ತದೆ. ಅದರಂತೆ ಕುಕ್ಕರಹಳ್ಳಿ ಕೆರೆ ಸ್ವಚ್ಛತೆಗೂ ನಮ್ಮ ತಂಡ ಸಹಕಾರ ನೀಡಲಿದೆ ಎಂದರು.

ಮೈಸೂರು ಮಿತ್ರ

ಸರ್ಕಾರಿ ನೌಕರರು ಕಾನೂನು ಚೌಕಟ್ಟಿನಲ್ಲಿ ಕಾರ್ಯ ನಿರ್ವಹಿಸಿ

ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ ತಹಸೀಲ್ದಾರ್ ಟಿ.ಜೆ.ಸುರೇಶಾಚಾರ್



ಎಸ್‌ಎಸ್‌ಎಲ್‌ಸಿ, ಪಿಯುಸಿಯಲ್ಲಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಲಾಯಿತು.

ತಿ.ನರಸೀಪುರ, ಡಿ.1– ದೀಪ ತಾನು ಉರಿದು ಇತರರಿಗೆ ಹೇಗೆ ಬೆಳಕು ನೀಡುತ್ತದೆಯೋ ಅದೇ ರೀತಿ ಸರ್ಕಾರಿ ನೌಕರರು ಸರ್ಕಾರದ ನೀತಿ ನಿಯಮಗಳಿಗನುಸಾರವಾಗಿ ಕೆಲಸ ಮಾಡಿ ಸಾರ್ವಜನಿಕರಿಗೆ ದಾರಿ ತೋರುವ, ಕಾನೂನು ಚೌಕಟ್ಟಿನಲ್ಲಿ ಅವರ ಅವಶ್ಯಕತೆಗಳನ್ನು ಪೂರೈಸುವ ಕೆಲಸ ಮಾಡಬೇಕು ಎಂದು ತಹಸೀಲ್ದಾರ್ ಟಿ.ಜೆ.ಸುರೇಶಾಚಾರ್ ತಿಳಿಸಿದರು.

ಪಟ್ಟಣದ ತಾಪಂ ಸಭಾಂಗಣದಲ್ಲಿ ತಾಲೂಕು ಸರ್ಕಾರಿ ನೌಕರರ ಸಂಘದಿಂದ ಆಯೋಜಿಸಿದ್ದ ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಪ್ರಸ್ತುತ ಸರ್ಕಾರಿ ಕೆಲಸ ಸವಾಲಿನ ಕೆಲಸವಾಗಿದೆ. ಆರಂಭದ ದಿನಗಳಲ್ಲಿ ಸರ್ಕಾರಿ ನೌಕರಿ ಯಾವುದೇ ಇಲಾಖೆ ಇರಲಿ, ಯಾವುದೇ ಹಂತದ ಹುದ್ದೆ ಇರಲಿ ಬದಲಾದ ಕಾಲಘಟ್ಟದಲ್ಲಿ ಬದಲಾವಣೆಯಾಗಿದ್ದು, ಸರ್ಕಾರಿ ನೌಕರರು ಜನರ ಸೇವಕರಾಗಿ ಕೆಲಸ ಮಾಡುತ್ತಿದ್ದೇವೆ. ಆ ನಿಟ್ಟಿನಲ್ಲಿ ನಾವೆಲ್ಲರೂ ಸಮಾಜಮುಖಿಯಾಗಿ ಕೆಲಸ ಮಾಡಬೇಕಾಗುತ್ತದೆ ಎಂದರು.

ಸಾರ್ವಜನಿಕರಿಗೆ ಅನುಕೂಲ ಕಲ್ಪಿಸುವ ನಿಟ್ಟಿನಲ್ಲಿ ನಮ್ಮ ಶ್ರಮ ಹಾಗೂ ಪ್ರಯತ್ನ ಸಾಗಬೇಕಿದೆ. ಹಳ್ಳಿಗಾಡಿನ ಜನರು ವಿವಿಧ ಕೆಲಸಗಳಿಗಾಗಿ ಪಟ್ಟಣಕ್ಕೆ ಬರುತ್ತಾರೆ. ಅವರಿಗೆ ಆಗಬೇಕಾದ ಕೆಲಸದ ಬಗ್ಗೆ ಕನಿಷ್ಟ ಅರಿವು ಇರುವುದಿಲ್ಲ. ಅಂತಹವರಿಗೆ ಕೆಲಸದ ಒತ್ತಡದ ನಡುವೆ ನಾನು ಗದರಿದ್ದು ಇದೆ. ಆದರೆ ಅವರಿಗೆ ಮಾರ್ಗದರ್ಶನ ಮಾಡುವ ಕೆಲಸ ಮಾಡಿದ್ದಲ್ಲಿ ಅವರು ತಮ್ಮ ನಿರ್ದಿಷ್ಟ ಗುರಿ ತಲುಪುತ್ತಾರೆ. ಹೀಗಾಗಿ ಸರ್ಕಾರಿ ನೌಕರರು ಸಾರ್ವಜನಿಕರಿಗೆ ಗೊತ್ತಿರದ ವಿಷಯಗಳ ಬಗ್ಗೆ ತಿಳಿಸಿ ಅವರ ಕೆಲಸ ಕಾರ್ಯಗಳು ಸುಲಲಿತವಾಗಿ ಆಗಲು ಸಹಕಾರ ನೀಡಬೇಕಿದೆ ಎಂದು ಮನವಿ ಮಾಡಿದರು.

ಸ್ವಸಹಾಯ ಸಂಘ ರಚನೆಗೆ ಸಲಹೆ: ಸರ್ಕಾರಿ ನೌಕರರು ತಮ್ಮದೇ ಆದ ಸಹಕಾರ ಸಂಘ ರಚಿಸಿಕೊಂಡು ಸಮಾಜ ಹಾಗೂ ನೌಕರರ ಒಳಿತಿಗೆ ಶ್ರಮಿಸುವಂತಹ ಕೆಲಸ ಮಾಡುವುದನ್ನು ಇತ್ತೀಚಿನ ದಿನಗಳಲ್ಲಿ ಕಾಣುತ್ತಿದ್ದೇವೆ. ನಮ್ಮ ವೇತನದಿಂದ ಹಿಡಿದು ಇತರೆ ಎಲ್ಲಾ ಸವಲತ್ತುಗಳನ್ನು ಜರೂರಾಗಿ ಪಡೆದುಕೊಳ್ಳಲು ಸಹಕಾರ ಸಂಘ ಸಹಕರಿಸುವುದರಿಂದ ಎಲ್ಲಾ ತಾಲೂಕಿನಲ್ಲಿ ಇರುವಂತೆ ಇಲ್ಲಿಯೂ ಸಹಕಾರ ಸಂಘ ಸ್ಥಾಪನೆ ಮಾಡುವುದು ಉತ್ತಮ ಎಂದರು.

ಈ ವೇಳೆ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿಯಲ್ಲಿ ಹೆಚ್ಚು ಅಂಕ ಪಡೆದ ಸರ್ಕಾರಿ ನೌಕರರ ಸಂಘದ ಸದಸ್ಯರು ಮತ್ತು ಪದಾಧಿಕಾರಿಗಳ ಮಕ್ಕಳಿಗೆ ಪ್ರಶಂಸನಾ ಫಲಕ ನೀಡಿ ಗೌರವಿಸಲಾಯಿತು.

ಸಾರ್ವಜನಿಕ ಆಸ್ಪತ್ರೆ ವೈದ್ಯಾಧಿಕಾರಿ ಡಾ.ಅಭಿಲಾಷ್, ನೌಕರರ ಸಂಘದ ಗೌರವಾಧ್ಯಕ್ಷ ಸುಬ್ರಹ್ಮಣ್ಯ, ರಾಜ್ಯ ಪರಿಷತ್ ಸದಸ್ಯ ನಾರಾಯಣಮೂರ್ತಿ, ಕಾರ್ಯದರ್ಶಿ ನಾಗೇಶ್, ಹಿರಿಯ ಉಪಾಧ್ಯಕ್ಷ ಕೆ.ನಂದೀಶ್ ಕುಮಾರ್, ಕಾರ್ಯಾಧ್ಯಕ್ಷ ಎ.ಗಜೇಂದ್ರ, ಉಪಾಧ್ಯಕ್ಷರಾದ ಟಿ.ಪಿ. ಸುರೇಶ್, ಜಿ.ಸಿದ್ದಮಲ್ಲಪ್ಪ, ಎಂ.ನಾಗು, ಜಂಟಿ ಕಾರ್ಯದರ್ಶಿಗಳಾದ ಗೋವಿಂದ, ಎಂ.ಬಸವನಾಯಕ, ಎನ್.ರೇವಣ್ಣ, ಎಂ.ಶಿವಸ್ವಾಮಿ, ಪುಟ್ಟಸ್ವಾಮಿ, ಆಂತರಿಕ ಲೆಕ್ಕಾಧಿಕಾರಿ ಎಸ್.ಎಂ.ಮಂಜುನಾಥ್, ಸಾಂಸ್ಕೃತಿಕ ಕಾರ್ಯದರ್ಶಿ ಎನ್.ಸರಸ್ವತಿ, ಕ್ರೀಡಾ ಕಾರ್ಯದರ್ಶಿಗಳಾದ ಸಿ. ಮಂಜುನಾಥ್, ಆರ್.ಶ್ರೀಧರ್, ನಿರ್ದೇಶಕರಾದ ನಾಗರಾಜು, ಎಂ.ಎಸ್.ಆನಂದ್, ಪಿ.ವೆಂಕಟೇಶ್, ಮಹೇಶ್, ಬಿ.ಪುಟ್ಟರಾಜು, ರುದ್ರೇಶ್, ಪರಶಿವಮೂರ್ತಿ, ಆರ್.ಮಹೇಶ್, ಎಂ.ವಿದ್ಯಾಪತಿ, ಟಿ.ಎಂ.ಮಹೇಶ್, ನಾಮನಿರ್ದೇಶನ ನಿರ್ದೇಶಕರಾದ ಸಿ.ಮಹಾದೇವಸ್ವಾಮಿ, ಬಿ.ಆರ್.ತಿಬ್ಬೇಗೌಡ, ಪಾಪಣ್ಣ, ಉಮೇಶ್ ಕುಮಾರ್, ಎನ್.ಪ್ರಭಾಕರ ಮೂರ್ತಿ ಇತರರಿದ್ದರು.

ದೇಶದಲ್ಲೇ ಮಾದರಿ ಸಂಘ

ಸರ್ಕಾರಿ ನೌಕರರ ಸಂಘ ಇಡೀ ದೇಶದಲ್ಲೇ ಮಾದರಿ ಸಂಘವಾಗಿ ಕರ್ತವ್ಯ ನಿರ್ವಹಿಸುತ್ತಿದೆ. ಸರ್ಕಾರದ ಒಡನಾಟದಿಂದ ಇಲ್ಲಿವರೆಗೆ ಸರ್ಕಾರಿ ನೌಕರರ ಹಿತ ಕಾಯುವ ನಿಟ್ಟಿನಲ್ಲಿ 40ಕ್ಕೂ ಹೆಚ್ಚು ಆದೇಶಗಳನ್ನು ಮಾಡಲಾಗಿದೆ. ಅಲ್ಲದೇ ಸರ್ಕಾರದ ಅನುದಾನ ಪಡೆಯದೇ 35 ಲಕ್ಷ ರೂ. ವೆಚ್ಚದಲ್ಲಿ ಸಂಘದ ಕಟ್ಟಡ ನಿರ್ಮಿಸಲಾಗಿದೆ.

–ಎಂ.ವಿ.ಶಿವಶಂಕರಮೂರ್ತಿ, ಸರ್ಕಾರಿ ನೌಕರರ ಸಂಘದ ಅಧ್ಯಕ್ಷ.

ಪಪಂ ಅಧ್ಯಕ್ಷೆ ಚೈತ್ರಾ ಅಧಿಕಾರ ಸ್ವೀಕಾರ



ಪಪಂ ನೂತನ ಅಧ್ಯಕ್ಷೆ ಚೈತ್ರಾ ಅಧಿಕಾರ ಸ್ವೀಕರಿಸಿದರು.

ಸರಗೂರು, ಡಿ.1– ಇಲ್ಲಿನ ಪಟ್ಟಣ ಪಂಚಾಯಿತಿ ಅಧ್ಯಕ್ಷೆಯಾಗಿ ಚೈತ್ರಸ್ವಾಮಿ ಅಧಿಕಾರ ಸ್ವೀಕರಿಸಿದರು.

ಪಟ್ಟಣದ ಪಟ್ಟಣ ಪಂಚಾಯಿತಿಯಲ್ಲಿ ನಡೆದ ನೂತನ ಅಧ್ಯಕ್ಷ ಪದಗ್ರಹಣ ಕಾರ್ಯಕ್ರಮದಲ್ಲಿ ಪಟ್ಟಣ ಪಂಚಾಯಿತಿ ಸದಸ್ಯರು ಹಾಗೂ ಕಾಂಗ್ರೆಸ್ ಕಾರ್ಯಕರ್ತರ ಸಮ್ಮುಖದಲ್ಲಿ ಅಧಿಕಾರ ಸ್ವೀಕರಿಸಿ ಮಾತನಾಡಿದ ನೂತನ ಅಧ್ಯಕ್ಷೆ ಚೈತ್ರ ಅವರು, ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಸಂಸದ ಸುನೀಲ್ ಬೋಸ್, ಶಾಸಕ ಅನಿಲ್ ಅವರ ಸಮ್ಮತಿಯ ಮೇರೆಗೆ ಪಪಂ ಸದಸ್ಯರು ನನ್ನನ್ನು ಅಧ್ಯಕ್ಷೆಯನ್ನಾಗಿ ಆಯ್ಕೆ ಮಾಡಿದ್ದಾರೆ. ಅವರಿಗೆ ಕೃತಜ್ಞತೆ ಸಲ್ಲಿಸುತ್ತೇನೆ. ಎಲ್ಲಾ ಸದಸ್ಯರ ಸಲಹೆ, ಸೂಚನೆ ಪಡೆದು ಪಟ್ಟಣದ ಅಭಿವೃದ್ಧಿಗೆ ಶ್ರಮಿಸುತ್ತೇನೆ ಎಂದರು.

ಈ ವೇಳೆ ಪಪಂ ಸದಸ್ಯರಾದ ಶ್ರೀನಿವಾಸ್, ಚಲುವಕೃಷ್ಣ, ಸಣ್ಣತಾಯಮ್ಮ, ಮಾಜಿ ಸದಸ್ಯ ರಂಗನಾಥ್, ಅಕ್ರಮ ಸಕ್ರಮ ಸಮಿತಿ ಸದಸ್ಯ ಶಿವಶಂಕರನ್, ರಸ್ತೆ ಬದಿ ವ್ಯಾಪಾರಿಗಳ ಸಂಘದ ಅಧ್ಯಕ್ಷ ಮಹದೇವ್, ಕಾಂಗ್ರೆಸ್ ಕಾರ್ಯಕರ್ತರಾದ ಮಹೇಶ್ ಆರ್ಯ, ಸ್ವಾಮಿ, ಮಫಿರುಲ್ಲಾ, ಜನಾರ್ಧನ್, ಗೋಪಾಲ್, ಪಪಂ ಅಧಿಕಾರಿ ವರ್ಗ, ಪೌರಕಾರ್ಮಿಕರು ಹಾಗೂ ಇನ್ನಿತರರಿದ್ದರು.

ಜಿಲ್ಲಾ ಗ್ರಾಮಾಂತರ ಉಪಾಧ್ಯಕ್ಷರಾಗಿ ನೇಮಕ



ತಿ.ನರಸೀಪುರ, ಡಿ.1– ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಅವರ ಆದೇಶದ ಮೇರೆಗೆ ಮೈಸೂರು ಜಿಲ್ಲಾ ಗ್ರಾಮಾಂತರ ಬಿಜೆಪಿ ಉಪಾಧ್ಯಕ್ಷರನ್ನಾಗಿ ವರುಣ ವಿಧಾನಸಭಾ ಕ್ಷೇತ್ರದ ಹೆಳವರಹುಂಡಿ ಸಿದ್ದಪ್ಪ ಅವರನ್ನು ಜಿಲ್ಲಾಧ್ಯಕ್ಷ ಕುಂಬ್ರಳ್ಳಿ ಸುಬ್ಬಣ್ಣ ನೇಮಕ ಮಾಡಿ ಆದೇಶ ಹೊರಡಿಸಿದ್ದಾರೆ.

ಬಿಇಓ ಮಹೇಶ್‌ರನ್ನು ನಿಂದಿಸಿದ ಪ್ರಕರಣ

ಶಾಸಕ ದರ್ಶನ್‌ರಿಂದ ಬಿಇಓಗೆ ನೈತಿಕ ಬೆಂಬಲ

ನಂ.ಗೂಡು ತಾಲೂಕು ಕಾಂಗ್ರೆಸ್ ಅಧ್ಯಕ್ಷ ಕುರಹಟ್ಟಿ ಮಹೇಶ್



ಸುದ್ದಿಗೋಷ್ಠಿಯಲ್ಲಿ ತಾಲೂಕು ಕಾಂಗ್ರೆಸ್ ಅಧ್ಯಕ್ಷ ಕುರಹಟ್ಟಿ ಮಹೇಶ್ ಮಾತನಾಡಿದರು.

ನಂಜನಗೂಡು, ಡಿ.1– ನಗರದ ತಾಪಂ ಕಚೇರಿ ಆವರಣದಲ್ಲಿ ಬಿಇಓ ಮಹೇಶ್ ಅವರನ್ನು ಕಾಂಗ್ರೆಸ್ ಮುಖಂಡ ಕುಮಾರ್ ಸಾರ್ವಜನಿಕವಾಗಿ ಅವಾಚ್ಯ ಶಬ್ದಗಳಿಂದ ನಿಂದಿಸಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಶಾಸಕ ದರ್ಶನ್ ಬಿಇಓ ಅವರಿಗೆ ನೈತಿಕ ಬೆಂಬಲ ನೀಡಿದ್ದಾರೆ ಎಂದು ತಾಲೂಕು ಕಾಂಗ್ರೆಸ್ ಅಧ್ಯಕ್ಷ ಕುರಹಟ್ಟಿ ಮಹೇಶ್ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ತಮ್ಮ ಮನೆಗೆ ಕುಮಾರ್ ಅವರನ್ನು ಕರೆಸಿ ಬಿಇಓ ಅವರಿಗೆ ಕ್ಷಮೆ ಕೋರುವಂತೆ ಮಾಡಿ ಪ್ರಕರಣ ಇತ್ಯರ್ಥ ಗೊಳಿಸಿದ್ದಾರೆ. ಶಾಸಕನಾಗಿ ನಾನೇ ಅಧಿಕಾರಿಗಳಿಗೆ ಸಾರ್ವಜನಿಕವಾಗಿ ಅಗೌರವವಾಗಿ ಮಾತನಾಡುವುದಿಲ್ಲ. ಪಕ್ಷದ ಮುಖಂಡರು, ಕಾರ್ಯಕರ್ತರು ಅಧಿಕಾರಿಗಳ ವಿರುದ್ಧ ಕೆಟ್ಟದಾಗಿ ಮಾತನಾಡಬಾರದು. ನನ್ನ ಗಮನಕ್ಕೆ ತಂದರೆ ಸಮಸ್ಯೆಗೆ ಪರಿಹಾರ ಸೂಚಿಸಬಹುದು. ಅಲ್ಲದೆ ಅಧಿಕಾರಿಗಳ ಮೇಲೆ ದುರ್ವತನೆ ತೋರಬಾರದು ಎಂದು ಎಚ್ಚರಿಕೆ ನೀಡಿದ್ದಾರೆ ಎಂದರು.

ವಾಸ್ತವ ಹೀಗಿದ್ದರೂ ತಾಲೂಕು ವೀರಶೈವ ಲಿಂಗಾಯತ ಮಹಾಸಭಾ ಅಧ್ಯಕ್ಷ ಕೆಂಪಣ್ಣ ತಮ್ಮ ರಾಜಕೀಯ ಬೇಳೆ ಬೇಯಿಸಿಕೊಳ್ಳಲು ಶಾಸಕರ ವಿರುದ್ಧ ಸುಳ್ಳು ಆರೋಪ ಮಾಡುವ ಮೂಲಕ ಸಮಾಜವನ್ನು ದಾರಿ ತಪ್ಪಿಸುತ್ತಿದ್ದಾರೆ. ಪ್ರಕರಣ ಸುಖಾಂತ್ಯ ಕಂಡಿದ್ದರೂ ಮಹಾಸಭಾದಿಂದ ಪ್ರತಿಭಟನೆ ಮಾಡಿಸಿ ಸಮಾಜದ ಬಾಂಧವರನ್ನು ದಿಕ್ಕು ತಪ್ಪಿಸುತ್ತಿದ್ದಾರೆ. ಬಿಜೆಪಿ ಮುಖಂಡರಾಗಿ ಪ್ರಕರಣವನ್ನು ರಾಜಕೀಯಗೊಳಿಸಿ ಲಾಭ ಪಡೆಯಲು ಹವಣಿಸುತ್ತಿದ್ದಾರೆ ಎಂದರು.

ಈ ವೇಳೆ ತಾಲೂಕು ವೀರಶೈವ ಲಿಂಗಾಯತ ಮಹಾಸಭಾ ಕಾರ್ಯದರ್ಶಿ ಶಿವಪ್ಪ ದೇವರು, ನಿರ್ದೇಶಕರಾದ ಮಂಜುಳ, ನಂಜಮ್ಮಣ್ಣಿ, ಮಹೇಶ್, ಶಿವರಾಜಪ್ಪ, ಗೀತಾ ಉಪಸ್ಥಿತರಿದ್ದರು.

ನಾಳೆ ನವೀಕೃತ ಸಭಾ ಭವನ ಉದ್ಘಾಟನೆ

ಸುತ್ತೂರು ಶ್ರೀ, ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಭಾಗಿ



ಸುದ್ದಿಗೋಷ್ಠಿಯಲ್ಲಿ ವಾಟಾಳು ಶ್ರೀಸಿದ್ದಲಿಂಗಶಿವಾಚಾರ್ಯ ಸ್ವಾಮೀಜಿ ಮಾತನಾಡಿದರು.

ತಿ.ನರಸೀಪುರ, ಡಿ.1– ತಾಲೂಕಿನ ವೀರಶೈವ ಲಿಂಗಾಯತ ಸಮುದಾಯದ ಸಾಮಾಜಿಕ ಮತ್ತು ಶೈಕ್ಷಣಿಕ ಚಟುವಟಿಕೆಗಳಿಗೆ ಸಮುದಾಯ ಆಸ್ತಿಯಾಗಿದ್ದ ವಿದ್ಯಾರ್ಥಿ ನಿಲಯವನ್ನು 36 ಲಕ್ಷ ರೂ. ವೆಚ್ಚದಲ್ಲಿ ಸಭಾ ಭವನವಾಗಿ ನವೀಕರಿಸಲಾಗಿದ್ದು, ಡಿ.3ರಂದು ಉದ್ಘಾಟನಾ ಸಮಾರಂಭ ಹಮ್ಮಿಕೊಳ್ಳಲಾಗಿದೆ ಎಂದು ವಾಟಾಳು ಮಠದ ಶ್ರೀ ಸಿದ್ದಲಿಂಗ ಶಿವಾಚಾರ್ಯ ಸ್ವಾಮೀಜಿ ತಿಳಿಸಿದರು.

ನವೀಕರಣಗೊಂಡಿರುವ ವೀರಶೈವ ಮಹಾಸಭಾದ ಸಭಾ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪಟ್ಟಣದ ವಿವೇಕಾನಂದ ನಗರದಲ್ಲಿ ಶಿಥಿಲಗೊಂಡಿದ್ದ ವೀರಶೈವ ವಿದ್ಯಾರ್ಥಿ ನಿಲಯವನ್ನು ಮಹಾಸಭಾದಿಂದ ದೇಣಿಗೆ ಸಂಗ್ರಹಿಸಿ ಸಭಾ ಭವನವನ್ನಾಗಿ ನವೀಕರಿಸಿ ಅಭಿವೃದ್ಧಿಪಡಿಸಲಾಗಿದ್ದು, ನವೀಕೃತ ಸಭಾ ಭವನದ ಉದ್ಘಾಟನೆ ಬಳಿಕ ಎಪಿಎಂಸಿ ಆವರಣದಲ್ಲಿ ದೊಡ್ಡ ಮಟ್ಟದಲ್ಲಿ ಧಾರ್ಮಿಕ ಸಭೆ ಹಮ್ಮಿಕೊಳ್ಳಲಾಗಿದೆ ಎಂದರು.

ಮಹಾಸಭಾ ಅಧ್ಯಕ್ಷ ಸಿ.ಎಂ.ಪ್ರಕಾಶ್ ಮಾತನಾಡಿ, ನವೀಕೃತ ಸಭಾ ಭವನದ ಉದ್ಘಾಟನೆ ಸಮಾರಂಭ ಹಾಗೂ ಧಾರ್ಮಿಕ ಸಭೆ ಸಾನಿಧ್ಯವನ್ನು ಸುತ್ತೂರು ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಸಿದ್ಧಗಂಗಾ ಸಿದ್ದಲಿಂಗ ಸ್ವಾಮೀಜಿ, ಸಿದ್ಧಲಿಂಗ ಶಿವಾಚಾರ್ಯ ಸ್ವಾಮೀಜಿ, ಮುಮ್ಮಡಿ ನಿರ್ವಾಣ ಸ್ವಾಮೀಜಿ, ಮಹಾಂತ ಸ್ವಾಮೀಜಿ, ಚನ್ನಬಸವ ಸ್ವಾಮೀಜಿ, ಶಾಂತ ಮಲ್ಲಿಕಾರ್ಜುನ ಸ್ವಾಮೀಜಿ ವಹಿಸಲಿದ್ದು, ಜಿಲ್ಲಾ ಉಸ್ತುವಾರಿ ಸಚಿವ ಡಾ. ಎಚ್.ಸಿ.ಮಹದೇವಪ್ಪ ಅಧ್ಯಕ್ಷತೆ ವಹಿಸಲಿದ್ದಾರೆ. ಅರಣ್ಯ ಸಚಿವ ಈಶ್ವರ ಬಿ.ಖಂಡ್ರೆ ಉದ್ಘಾಟಿಸಲಿದ್ದು, ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ನವೀಕೃತ ಸಭಾ ಭವನವನ್ನು ಉದ್ಘಾಟಿಸಲಿದ್ದಾರೆ. ವಿಶೇಷ ಆಹ್ವಾನಿತರಾಗಿ ಮಹಾಸಭಾ ರಾಜ್ಯಾಧ್ಯಕ್ಷ ಶಂಕರ್ ಮಹದೇವ ಬಿದರಿ, ವಿಧಾನಪರಿಷತ್ ಸದಸ್ಯ ಡಾ.ಯತೀಂದ್ರ, ಸಂಸದ ಸುನಿಲ್ ಬೋಸ್, ಶಾಸಕ ಗಣೇಶ್ ಪ್ರಸಾದ್, ಮಾಜಿ ಶಾಸಕ ಎಂ.ಅಶ್ವಿನ್ ಕುಮಾರ್ ಸೇರಿದಂತೆ ಇನ್ನೂ ಇನ್ನಿತರರು ಭಾಗವಹಿಸುವರು ಎಂದು ಮಾಹಿತಿ ನೀಡಿದರು.

ಮಹಾಸಭಾ ಉಪಾಧ್ಯಕ್ಷ ಎಸ್.ಕೆ.ಕಿರಣ್ ಮಾತನಾಡಿ, ಕಾರ್ಯಕ್ರಮಕ್ಕೆ ವೀರಶೈವ ಸಮಾಜದ ಮುಖಂಡರು ಹಾಗೂ ಬಾಂಧವರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕೆಂದು ಮನವಿ ಮಾಡಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಪಿ.ಎಸ್.ಅಂಬಿಕಾ ಲೋಕೇಶ್, ಪ್ರಧಾನ ಕಾರ್ಯದರ್ಶಿ ಕೆ.ವಿ.ಶಿವಶಂಕರ್, ಕಾರ್ಯದರ್ಶಿ ಪರಮೇಶ್ ಪಟೇಲ್, ನಿರ್ದೇಶಕರಾದ ತೋಂಟೇಶ್, ಓಂಕಾರ ಸ್ವಾಮಿ, ಗುರುಸ್ವಾಮಿ, ಕೆ.ಎಂ.ಮಲ್ಲು, ಕಿರಗಸೂರು ಎಂ.ಸುರೇಶ, ಜ್ಞಾನೇಶ್ವರಿ, ಕರ್ನಾಟಕ ರಾಜ್ಯ ಕಾರ್ಯನಿರ್ವಾಹಕ ಸಮಿತಿ ಸದಸ್ಯ ಎನ್.ಲೋಕೇಶ್, ಪೂಜಿತ್ ಮೆಡಿಕಲ್ ಕುಮಾರ್, ಕೆಬ್ಬೆಹುಂಡಿ ಮಾಯಪ್ಪ, ಟಿ.ಸಿ.ಮಲ್ಲೇಶ್, ಎಸ್.ಎಂ. ರಮೇಶ್, ಎಂ.ಎಸ್.ಮಂಜುನಾಥ್, ಜಿಲ್ಲಾ ಯುವ ಘಟಕ ಉಪಾಧ್ಯಕ್ಷ ಮಹದೇವ ಪ್ರಸಾದ್, ತಾಲೂಕು ಘಟಕದ ಮಾದಾಪುರ ರವಿ, ಮಹಾಲಿಂಗಸ್ವಾಮಿ, ಶ್ರೀಕಾಂತ್, ದೊಡ್ಡನಹುಂಡಿ ನಿರಂಜನ್, ಅಭಿಲಾಶ್ ಸೇರಿದಂತೆ ಇನ್ನಿತರರಿದ್ದರು.

ಶ್ರೀ ಬೀರೇಶ್ವರ ದೇವಾಲಯದಲ್ಲಿ ಶಿವ ದೀಪೋತ್ಸವ

ನಂಜನಗೂಡು, ಡಿ.1– ತಾಲೂಕಿನ ಹೆಮ್ಮರಗಾಲ ಗ್ರಾಮದ ಶ್ರೀಬೀರೇಶ್ವರ ದೇವಾಲಯದಲ್ಲಿ ಡಿ.4ರಂದು 19ನೇ ವರ್ಷದ ಶಿವ ದೀಪೋತ್ಸವ ನಡೆಯಲಿದೆ. ಸುತ್ತಮುತ್ತಲ ಗ್ರಾಮಸ್ಥರು ದೇವರ ಕೃಪೆಗೆ ಪಾತ್ರರಾಗಬೇಕು ಎಂದು ಬೀರೇಶ್ವರ ಟ್ರಸ್ಟ್ ಅಧ್ಯಕ್ಷ ಕಾಳೇಗೌಡ ತಿಳಿಸಿದರು.

ಶ್ರೀಕ್ಷೇತ್ರ ಹಿರಿ ಹೆಮ್ಮರಗಾಲ ಶ್ರೀಬೀರೇಶ್ವರಸ್ವಾಮಿ ದೇವಾಲಯದಲ್ಲಿ ಶಿವ ದೀಪೋತ್ಸವ ಅಂಗವಾಗಿ ಬೆಳಗ್ಗೆ ಗಣಪತಿ ಪೂಜೆ, ಬೀರೇಶ್ವರಸ್ವಾಮಿ ಮತ್ತು ಕಾಳಿಕಾಂಬ ಅಮ್ಮನವರ ಉತ್ಸವ ಮೂರ್ತಿಗಳಿಗೆ ಮತ್ತು ನವಗ್ರಹಗಳಿಗೆ ಪೂರ್ಣಾಹುತಿ ಹಾಗೂ ಧಾರ್ಮಿಕ ಪೂಜಾ ಕಾರ್ಯಗಳನ್ನು ನೆರವೇರಿಸಲಾಗುವುದು. ಮಧ್ಯಾಹ್ನ 1 ಗಂಟೆಗೆ ಪ್ರಸಾದ ವಿನಿಯೋಗ ನಡೆಸಲಾಗುವುದು. ಅದೇ ದಿನ ಸಂಜೆ ಶಿವ ದೀಪೋತ್ಸವ ಜರುಗಲಿದೆ. ಡಿ.5ರಂದು ಸಂಜೆ ವಿಷ್ಣು ದೀಪೋತ್ಸವ ಜರುಗಲಿದೆ. ಕಾರ್ಯಕ್ರಮಕ್ಕೆ ಸಮುದಾಯದ ಮುಖಂಡರು ಮತ್ತು 88 ಗಡಿ ವ್ಯಾಪ್ತಿಯ ಸಮಾಜದ ಜನಪ್ರತಿನಿಧಿಗಳು, ಯಜಮಾನರು, ಮುಖಂಡರು, ಭಕ್ತ ಮಹಾಶಯರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಕಾರ್ಯಕ್ರಮ ಯಶಸ್ವಿಗೊಳಿಸಬೇಕು.

ಓಟದ ಸ್ಪರ್ಧೆ: ರಾಜ್ಯ ಮಟ್ಟಕ್ಕೆ ಆಯ್ಕೆ



ಹೆಚ್.ಡಿ.ಕೋಟೆ, ಡಿ.1– ತಾಲೂಕಿನ ಶಿರಮಳ್ಳಿ ಮೊರಾರ್ಜಿ ದೇಸಾಯಿ ವಸತಿ ಶಾಲೆಯ 10ನೇ ತರಗತಿ ವಿದ್ಯಾರ್ಥಿ ಯೋಗೇಶ್ ಇತ್ತೀಚೆಗೆ ಮೈಸೂರಿನ ಚಾಮುಂಡಿ ವಿಹಾರ ಕ್ರೀಡಾಂಗಣದಲ್ಲಿ ನಡೆದ ಮೈಸೂರು ಜಿಲ್ಲಾ ಮಟ್ಟದ 1500 ಮೀಟರ್ ಓಟದ ಸ್ಪರ್ಧೆಯಲ್ಲಿ ದ್ವಿತೀಯ ಸ್ಥಾನ ಪಡೆದು ರಾಜ್ಯ ಮಟ್ಟಕ್ಕೆ ಆಯ್ಕೆಯಾಗಿದ್ದಾರೆ. ವಿದ್ಯಾರ್ಥಿಯನ್ನು ಪ್ರಾಂಶುಪಾಲ ಮಹದೇವು, ನಿಲಯ ಪಾಲಕ ಸಂಜಯ್ ಕುಮಾರ್, ಕೆ.ಸಿ.ಚಿನ್ನಸ್ವಾಮಿ, ಸಿಬ್ಬಂದಿ ವರ್ಗ ಅಭಿನಂದಿಸಿದ್ದಾರೆ.

ನಿವೃತ್ತ ಮುಖ್ಯ ಶಿಕ್ಷಕರಿಗೆ ಬೀಳ್ಕೊಡುಗೆ



ನಿವೃತ್ತ ಮುಖ್ಯ ಶಿಕ್ಷಕ ಶಿವಾನಂದ್ ಅವರನ್ನು ಸನ್ಮಾನಿಸಲಾಯಿತು.

ಬೆಟ್ಟದಪುರ, ಡಿ.1– ಶಿಕ್ಷಣ ವೃತ್ತಿ ಪವಿತ್ರವಾದದ್ದು. ನನ್ನ ಸೇವಾ ಅವಧಿ ಆತ್ಮತೃಪ್ತಿ ತಂದಿದೆ ಎಂದು ಚಪ್ಪರದಹಳ್ಳಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲಾ ಮುಖ್ಯ ಶಿಕ್ಷಕ ಶಿವಾನಂದ್ ತಿಳಿಸಿದರು.

ಬೆಟ್ಟದಪುರದ ಶ್ರೀಕುಟ್ಟದಮ್ಮ ಸಭಾಂಗಣದಲ್ಲಿ ಬೆಟ್ಟದಪುರ ಗೆಳೆಯರ ಬಳಗ ಹಾಗೂ ಕುಟುಂಬ ವತಿಯಿಂದ ಆಯೋಜಿಸಿದ್ದ ಬೀಳ್ಕೊಡುಗೆ ಸಮಾರಂಭದಲ್ಲಿ ಸನ್ಮಾನ ಸ್ವೀಕರಿಸಿ ಮಾತನಾಡಿದ ಅವರು, 1994ರಲ್ಲಿ ಶಿಕ್ಷಕನಾಗಿ ಕೆ.ಆರ್.ನಗರದಲ್ಲಿ ಸೇವೆಗೆ ಸೇರಿದೆ. ಪಿರಿಯಾಪಟ್ಟಣದ ವಿವಿಧ ಶಾಲೆಗಳಲ್ಲಿ ಸೇವೆ ಸಲ್ಲಿಸಿ ಪ್ರಸ್ತುತ ಚಪ್ಪರದಹಳ್ಳಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಮುಖ್ಯ ಶಿಕ್ಷಕನಾಗಿ ಸೇವೆ ಸಲ್ಲಿಸಿ ಇಂದು ನಿವೃತ್ತಿ ಹೊಂದಿದ್ದೇನೆ. ನನಗೆ ಈ ವರ್ಷ ಶಿಕ್ಷಣ ಇಲಾಖೆಯಿಂದ ಜಿಲ್ಲಾ ಮಟ್ಟದ ಅತ್ಯುತ್ತಮ ಶಿಕ್ಷಕ ಪ್ರಶಸ್ತಿ ನೀಡಿದ್ದಕ್ಕೆ ಶಿಕ್ಷಣ ಇಲಾಖೆ ಅಧಿಕಾರಿಗಳಿಗೆ, ಶಿಕ್ಷಕ ವೃತ್ತಿ ಬಾಂಧವರಿಗೆ ಅಭಿನಂದನೆ ಸಲ್ಲಿಸುತ್ತೇನೆ. ವಿದ್ಯಾರ್ಥಿಗಳಿಗೆ ಮೋಸ ಮಾಡದೆ ಪ್ರಾಮಾಣಿಕವಾಗಿ ಪಾಠ ಮಾಡಿದ್ದೆ ಆದರೆ ವಿದ್ಯಾರ್ಥಿಗಳು ತಮ್ಮ ಭವಿಷ್ಯ ರೂಪಿಸಿಕೊಳ್ಳಲು ಸಾಧ್ಯವಾಗುತ್ತದೆ. ಆಗ ನಾವು ಚೆನ್ನಾಗಿರುತ್ತೇವೆ. ನಮ್ಮ ಮಕ್ಕಳು ಚೆನ್ನಾಗಿರುತ್ತಾರೆ ಎಂದರು.

ನಿವೃತ್ತ ಶಿಕ್ಷಕ ಸಣ್ಣಸ್ವಾಮಿಗೌಡ, ಶಿಕ್ಷಕರಾದ ಈ.ಬಿ.ವೆಂಕಟೇಶ್, ಕೃಷ್ಣ ನಾಯಕ್, ಗಣೇಶ್, ಸಂಗಮೇಶ್ ಮಾತನಾಡಿದರು. ಪ್ರಾಥಮಿಕ ಶಾಲಾ ಶಿಕ್ಷಕರ ಪತ್ತಿನ ಸಂಘದ ರವಿಕುಮಾರ್, ಮಾಜಿ ಅಧ್ಯಕ್ಷ ಶಿವಮೂರ್ತಿ, ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಕಾರ್ಯದರ್ಶಿ ಸೋಮಶೇಖರ್, ಮುಖ್ಯ ಶಿಕ್ಷಕರ ಸಂಘದ ಅಧ್ಯಕ್ಷ ಈ.ಬಿ.ವೆಂಕಟೇಶ್, ಕೆಎಸ್ಆರ್‌ಟಿಸಿ ನಿವೃತ್ತ ಅಧಿಕಾರಿ ಪಾಪಣ್ಣ ನಾಯಕ, ಶಿಕ್ಷಕರಾದ ಮಹದೇವಪ್ಪ ಎಂ.ಎ. ಮಂಜುನಾಥ್, ಮಧುರೇಶ್, ಮಂಜಪ್ಪ ಕೆ.ಪಿ.ಸುರೇಶ್, ಮಲ್ಲಿಕಾರ್ಜುನ್, ಬಸವರಾಜು, ಶಿವು, ಮುಖಂಡರಾದ ಯೋಗಾನಂದ ಹಾಜರಿದ್ದರು.

ಡಿ.21ಕ್ಕೆ, ಅದ್ದೂರಿ ಕನಕ ಜಯಂತಿ ಮಹೋತ್ಸವ




ಪೂರ್ವಭಾವಿ ಸಭೆಯಲ್ಲಿ ಶಾಸಕ ದರ್ಶನ್ ಮಾತನಾಡಿದರು.

ನಂಜನಗೂಡು, ಡಿ.1– ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದಲ್ಲಿ ನಗರದಲ್ಲಿ ಡಿ.21ರಂದು ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿಯಿಂದ ಕನಕ ಜಯಂತಿಯನ್ನು ಅದ್ದೂರಿಯಾಗಿ ಆಚರಿಸಲಾಗುವುದು ಎಂದು ಶಾಸಕ ದರ್ಶನ್ ತಿಳಿಸಿದರು.

ನಗರದ ಪ್ರವಾಸಿ ಮಂದಿರದಲ್ಲಿ ಸೋಮವಾರ ನಡೆದ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಅವರು, ನಗರದ ಜೂನಿಯರ್ ಕಾಲೇಜು ಮೈದಾನದಿಂದ ಶ್ರೀಭಕ್ತ ಕನಕದಾಸರ ಭಾವಚಿತ್ರವನ್ನು ಬೆಳ್ಳಿರಥದಲ್ಲಿ ಮೆರವಣಿಗೆ ಮಾಡಲಾಗುವುದು. ಮುಖ್ಯಮಂತ್ರಿಗಳು ಜಯಂತಿಯಲ್ಲಿ ಭಾಗವಹಿಸುವ ಕಾರಣ ಅಧಿಕಾರಿಗಳು ಯಾವುದೇ ಲೋಪದೋಷ ಉಂಟಾಗದಂತೆ ಎಚ್ಚರಿಕೆ ವಹಿಸಬೇಕು. ಜಯಂತಿ ಅಂಗವಾಗಿ ವಿದ್ಯಾರ್ಥಿಗಳಿಗೆ ಚರ್ಚಾ ಸ್ಪರ್ಧೆ ಮತ್ತು ಪ್ರತಿಭಾ ಪುರಸ್ಕಾರ ನೀಡಲು ಸಿದ್ಧತೆ ಕೈಗೊಳ್ಳಬೇಕು. ನಗರಸಭೆಯವರು ಮೆರವಣಿಗೆ ಸಾಗುವ ಮಾರ್ಗದಲ್ಲಿ ಸ್ವಚ್ಛತೆ ಕಾಪಾಡಿಕೊಳ್ಳುವ ಜೊತೆಗೆ ತಳಿರು ತೋರಣಗಳಿಂದ ಸಿಂಗರಿಸಬೇಕು. ಜೊತೆಗೆ ಮೆರವಣಿಗೆಯಲ್ಲಿ ಸಾಗುವ ಜನರಿಗೆ ಕುಡಿಯುವ ನೀರು ಮತ್ತು ಮಜ್ಜಿಗೆ ವ್ಯವಸ್ಥೆ ಕೈಗೊಳ್ಳಬೇಕು. ಅಲ್ಲದೇ ಸಮಾಜದ ಮುಖಂಡರು ಪ್ರತಿ ಹಳ್ಳಿಗಳಿಗೆ ತೆರಳಿ ಹೆಚ್ಚಿನ ಸಂಖ್ಯೆಯಲ್ಲಿ ಜನರನ್ನು ಸಭೆಯಲ್ಲಿ ಭಾಗವಹಿಸುವಂತೆ ಮನವಿ ಮಾಡಬೇಕು. ನಿಗದಿತ ಸಮಯಕ್ಕೆ ಮೆರವಣಿಗೆ ಚಾಲನೆ ಆಗುವಂತೆ ಕ್ರಮವಹಿಸಬೇಕು. ಭಕ್ತ ಕನಕದಾಸರು ಒಂದು ಜಾತಿಗೆ ಸೀಮಿತರಾದವರಲ್ಲ. ಆದ್ದರಿಂದ ಎಲ್ಲಾ ಸಮುದಾಯದ ಮುಖಂಡರು, ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಯಶಸ್ವಿಗೊಳಿಸಬೇಕು ಎಂದರು.

ರೈತ ಮುಖಂಡ ವಿದ್ಯಾಸಾಗರ್ ಮಾತನಾಡಿದರು. ಮಾಜಿ ಶಾಸಕ ಕೇಶವಮೂರ್ತಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಕುರಹಟ್ಟಿ ಕೆ.ಜಿ.ಮಹೇಶ್, ನಗರ ಬ್ಲಾಕ್ ಅಧ್ಯಕ್ಷರಾದ ಸಿ.ಎಂ.ಶಂಕರ್, ಹುಲ್ಲಹಳ್ಳಿ ಬ್ಲಾಕ್ ಅಧ್ಯಕ್ಷ ಶ್ರೀಕಂಠನಾಯಕ, ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ಕೆ.ಮಾರುತಿ, ಕಾಂಗ್ರೆಸ್ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಪ್ರದೀಪ್ ಕುಮಾರ್, ಜಯಂತಿ ಮಹೋತ್ಸವ ಅಧ್ಯಕ್ಷ ಟಿ.ಎಲ್. ಮೋಹನ್ ಕುಮಾರ್, ತಾಪಂ ಮಾಜಿ ಅಧ್ಯಕ್ಷ ತಮ್ಮಣ್ಣೇಗೌಡ, ಕೆಪಿಸಿಸಿ ಸದಸ್ಯ ಅಕ್ಬರ್ ಅಲಿ, ಮುಖಂಡರಾದ ಕುಳ್ಳಯ್ಯ, ಕೆಂಪಣ್ಣ, ಸಿದ್ದರಾಜು, ಬೀರೇಗೌಡ, ಮಹೇಶ್ ಉಪಸ್ಥಿತರಿದ್ದರು.

ವಿಕಲಚೇತನರನ್ನು ಪ್ರತಿಯೊಬ್ಬರೂ ಸಮಾನವಾಗಿ ಕಾಣಬೇಕು



ವಿಕಲಚೇತನರಿಗೆ ಸಂಸದ ಯದುವೀರ್ ಸಲಕರಣೆಗಳನ್ನು ವಿತರಿಸಿದರು.

ಹುಣಸೂರು, ಡಿ.1– ವಿಕಲಚೇತನರ ಬಲವರ್ಧನೆಗಾಗಿ ಕೇಂದ್ರ ಸರ್ಕಾರ ಅಡಿಪ್ ಯೋಜನೆ ಜಾರಿಗೊಳಿಸಿದ್ದು, ಸುಮಾರು 83.20 ಲಕ್ಷ ರೂ. ವೆಚ್ಚದಲ್ಲಿ ಜಿಲ್ಲೆಯ 776 ಮಂದಿ ಹಾಗೂ ತಾಲೂಕಿನ 97 ವಿಕಲಚೇತನರಿಗೆ ಸಾಧನ ಸಲಕರಣೆಗಳನ್ನು ವಿತರಿಸಲಾಗಿದೆ ಎಂದು ಸಂಸದ ಯದುವೀರ್ ತಿಳಿಸಿದರು.

ನಗರದ ಗುರು ಭವನದಲ್ಲಿ ನಡೆದ ಕಾರ್ಯಕ್ರಮದಲ್ಲಿ ಶಾಸಕ ಜಿ.ಡಿ.ಹರೀಶ್‌ಗೌಡ ಅವರೊಂದಿಗೆ ವಿಕಲಚೇತನರಿಗೆ ಸಲಕರಣೆಗಳನ್ನು ವಿತರಿಸಿ ಮಾತನಾಡಿದ ಅವರು, ಕೇಂದ್ರ ಸರ್ಕಾರದ ಅಡಿಪ್ ಯೋಜನೆಯಡಿ ಅಲಿಂಕೋ ಸಂಸ್ಥೆ ಸಹಯೋಗದಲ್ಲಿ ಜಿಲ್ಲೆಯ 776 ವಿಕಲಚೇತನರಿಗೆ 1446ಕ್ಕೂ ಹೆಚ್ಚು ಮೋಟಾರ್ ಹೊಂದಿರುವ ಟ್ರೈ ಸೈಕಲ್, ವೀಲ್‌ಚೇರ್‌ಗಳು ಸೇರಿದಂತೆ ಇನ್ನಿತರ ವಿವಿಧ ಸಾಧನ ಸಲಕರಣೆಗಳನ್ನು ವಿತರಿಸಲಾಗಿದೆ ಎಂದರು.

ಹುಣಸೂರಿನ 97 ವಿಕಲಚೇತನರಿಗೆ 9.56 ಲಕ್ಷ ರೂ. ವೆಚ್ಚದಡಿ 195 ಪರಿಕರಗಳನ್ನು ವಿತರಿಸಲಾಗಿದೆ. ಕೇಂದ್ರ ಸರ್ಕಾರದ ವಿಕಸಿತ ಭಾರತದ ಪರಿಕಲ್ಪನೆಯಲ್ಲಿ ವಿಕಲಚೇತನರು ಕೂಡ ಸಶಕ್ತರಾಗಿ ಸಮಾಜದ ಮುಖ್ಯವಾಹಿನಿಗೆ ಬರಬೇಕು ಹಾಗೂ ಪ್ರತಿಯೊಬ್ಬರೂ ಸಮಾಜದ ಅಭಿವೃದ್ಧಿಯಲ್ಲಿ ಪಾಲ್ಗೊಳ್ಳಬೇಕೆಂಬ ಸದುದ್ದೇಶದಿಂದ ಯೋಜನೆ ರೂಪಿಸಲಾಗಿದೆ. ವಿಕಲಚೇತನರಿಗೆ ಅವಕಾಶ ನೀಡುವ ಮತ್ತು ಅವರನ್ನು ಪ್ರತಿಯೊಬ್ಬರೂ ಸಮಾನವಾಗಿ ಕಾಣಬೇಕು ಎಂದರು.

ಶಾಸಕ ಜಿ.ಡಿ.ಹರೀಶ್‌ಗೌಡ ಮಾತನಾಡಿ, ಕಳೆದ ಸಾಲಿನಲ್ಲಿ ವಿವಿಧ ಯೋಜನೆಗಳಡಿ ತಾಲೂಕಿನ 40 ಹಾಗೂ ಪ್ರಸಕ್ತ ಸಾಲಿನಲ್ಲಿ 14 ವಿಕಲಚೇತನರಿಗೆ ಟ್ರೈ ಸೈಕಲ್ ವಿತರಿಸಲಾಗಿದೆ. ಕೇಂದ್ರ ಸರ್ಕಾರದ ಅಡಿಪ್ ಯೋಜನೆಯಡಿ ಟ್ರೈ ಸೈಕಲ್‌ಗಾಗಿ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿ ಸಿಗದಿದ್ದವರೂ ಆತಂಕ ಪಡುವ ಅವಶ್ಯಕತೆ ಇಲ್ಲ. ನಮ್ಮ ಗಮನಕ್ಕೆ ತಂದರೆ ಅವರಿಗೆ ಶಾಸಕರ ಅನುದಾನದಲ್ಲಿ ಟ್ರೈ ಸೈಕಲ್ ನೀಡಲು ಸಿದ್ದನಿದ್ದೇನೆ ಎಂದರು.

ಈ ವೇಳೆ ತಾಪಂ ಇಓ ಹೊಂಗಯ್ಯ, ಜಿಲ್ಲಾ ವಿಕಲಚೇತನರ ಕಲ್ಯಾಣಾಧಿಕಾರಿ ರಾಘವೇಂದ್ರ, ನಗರಸಭೆ ಮಾಜಿ ಅಧ್ಯಕ್ಷ ಗಣೇಶ್ ಕುಮಾರಸ್ವಾಮಿ, ತಾಲೂಕು ಬಿಜೆಪಿ ಅಧ್ಯಕ್ಷ ಕಾಂತರಾಜು, ಮಾಜಿ ಅಧ್ಯಕ್ಷ ಮಂಜುನಾಥ್, ನಗರಾಧ್ಯಕ್ಷ ನಾರಾಯಣ, ಜಿಪಂ ಮಾಜಿ ಸದಸ್ಯ ನಾಗರಾಜ ಮಲ್ಲಾಡಿ, ಮುಖಂಡರಾದ ರಂಜಿತ, ಶ್ರೀಧರ್, ಸತೀಶ್ ಪಾಪಣ್ಣ, ದೇವರಾಜ್, ಅಲಿಂಕೋ ಸಂಸ್ಥೆ ಅಧಿಕಾರಿಗಳು ಹಾಗೂ ಇತರರಿದ್ದರು.

ರಾಜ್ಯದ ಆಡಳಿತ, ಅಭಿವೃದ್ಧಿ ಕವಲುದಾರಿಯಲ್ಲಿ

ಹುಣಸೂರು, ಡಿ.1– ರಾಜ್ಯ ಕಾಂಗ್ರೆಸ್‌ನಲ್ಲಿ ಸಿಎಂ ಕುರ್ಚಿಗಾಗಿ ಹಗ್ಗ–ಜಗ್ಗಾಟ ನಡೆದಿದ್ದು, ಬ್ರೇಕ್‌ಫಾಸ್ಟ್ ಎಲ್ಲದಕ್ಕೂ ಅಂತ್ಯ ಹಾಡಿದೆ ಎಂದು ಆಡಳಿತ ಪಕ್ಷ ಹೇಳಿಕೊಳ್ಳುತ್ತಿದೆ. ಆದರೆ ಕುರ್ಚಿ ಕದನದಿಂದ ರಾಜ್ಯದ ಆಡಳಿತ ಮತ್ತು ಅಭಿವೃದ್ಧಿ ಕವಲುದಾರಿಯಲ್ಲಿದೆ ಎಂದು ಸಂಸದ ಯದುವೀರ್ ತಿಳಿಸಿದರು.

ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಾಜ್ಯದಲ್ಲಿ ಸಿಎಂ ಕುರ್ಚಿಗಾಗಿ ನಿರಂತರವಾಗಿ ಕದನ ನಡೆಯುತ್ತಿದ್ದು, ಆಡಳಿತ ವ್ಯವಸ್ಥೆ ಹದಗೆಟ್ಟು, ಅಭಿವೃದ್ಧಿ ಕುಂಠಿತವಾಗಿದೆ. ಎಲ್ಲವನ್ನೂ ರಾಜ್ಯದ ಜನತೆ ಗಂಭೀರವಾಗಿ ಮೌನವಾಗಿ ನೋಡುತ್ತಿದ್ದಾರೆ. ಈ ಸಂಬಂಧ ಬಿಜೆಪಿ ತನ್ನ ಹೋರಾಟ ಮುಂದುವರೆಸಲಿದೆ. 2028ರಲ್ಲಿ ನಡೆಯುವ ವಿಧಾನಸಭೆ ಚುನಾವಣೆಯಲ್ಲಿ ಬಿಜೆಪಿ ಕಾಂಗ್ರೆಸ್‌ನ ಎಲ್ಲಾ ಲೋಪದೋಷಗಳನ್ನು ಮತದಾರರ ಮುಂದೆ ಬಿಚ್ಚಿಡಲಿದೆ. ಅಲ್ಲದೇ ಅಧಿಕಾರ ಹಿಡಿಯುವ ದಿಕ್ಕಿನಲ್ಲಿ ನಾವು ಸಜ್ಜಾಗುತ್ತಿದ್ದೇವೆ ಎಂದರು.

ಶಾಸಕ ಜಿ.ಡಿ.ಹರೀಶ್‌ಗೌಡ ಮಾತನಾಡಿ, ರಾಜ್ಯ ಕಾಂಗ್ರೆಸ್ ನಾಯಕರು ಮೇಲ್ನೋಟಕ್ಕೆ ಒಂದಾಗಿದ್ದೇವೆ ಎಂದು ಮಾಧ್ಯಮದವರ ಮುಂದೆ ಹೇಳಿಕೊಳ್ಳುತ್ತಿದ್ದಾರೆ. ಆದರೆ ಈಗಾಗಲೇ ಸಿಎಂ ಸಿದ್ದರಾಮಯ್ಯ ಮತ್ತು ಡಿಸಿಎಂ ಡಿ.ಕೆ.ಶಿವಕುಮಾರ್ ಬಣಗಳು ಸೃಷ್ಟಿಯಾಗಿವೆ. ಮುಂದಿನ ಬೆಳಗಾವಿ ಅಧಿವೇಶನದಲ್ಲಿ ವಿಪಕ್ಷಗಳು ಅಭಿವೃದ್ಧಿ ಸಂಬಂಧ ಸರ್ಕಾರವನ್ನು ಪೇಚಿಗೆ ಸಿಲುಕಿಸಲು ವ್ಯೂಹ ಸಿದ್ದಪಡಿಸಿಕೊಂಡಿವೆ ಎಂದರು.

ರಾಜ್ಯದ ಜನತೆ ಕಾಂಗ್ರೆಸ್ ಮೇಲೆ ಬಹಳ ನಿರೀಕ್ಷೆ ಇಟ್ಟು 140 ಸ್ಥಾನ ನೀಡಿದರು. ಅವರ ಆಂತರಿಕ ಕಚ್ಚಾಟದಿಂದ ಮತದಾರರಿಗೆ ಭ್ರಮನಿರಸನವಾಗಿದೆ. ಇದರಿಂದ ಬೇಸತ್ತ ಮತದಾರರು ಮುಂದಿನ ದಿನಗಳಲ್ಲಿ ತಕ್ಕ ಪಾಠ ಕಲಿಸಲಿದ್ದಾರೆ ಎಂದರು.

ಮಂಜುನಾಥ್



ಬೆಟ್ಟದಪುರ, ಡಿ.1– ಗ್ರಾಮದ ನಿವಾಸಿ, ಪತ್ರಿಕೆ ವಿತರಕ ಮಂಜುನಾಥ್ (70) ಸೋಮವಾರ ಮುಂಜಾನೆ ನಿಧನರಾದರು. ಮೃತರು ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಗ್ರಾಮದ ರುದ್ರಭೂಮಿಯಲ್ಲಿ ನಡೆಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮಾಧವರಾವ್ ನಿಧನ



ಹೆಚ್.ಡಿ.ಕೋಟೆ, ಡಿ.1– ತಾಲೂಕಿನ ಬೀಚನಹಳ್ಳಿ ಗ್ರಾಮದ ನಿವಾಸಿ ಮಾಧವರಾವ್(58) ಸೋಮವಾರ ನಿಧನರಾದರು.

ಮೃತರು ಪತ್ನಿ, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಮಂಗಳವಾರ ಸ್ವಗ್ರಾಮದ ರುದ್ರಭೂಮಿಯಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಗೌರಮ್ಮ



ಪಿರಿಯಾಪಟ್ಟಣ, ಡಿ.1– ಪಟ್ಟಣದ ಆರ್ಯ ಈಡಿಗರ ಬೀದಿ ನಿವಾಸಿ, ಬೆಟ್ಟದಪುರದ ಜೀವನ್ ಬಾರ್ ಮಾಲೀಕ ಎಂ.ಎಸ್.ನಂಜುಂಡ ಅವರ ಪತ್ನಿ ಗೌರಮ್ಮ (55) ಸೋಮವಾರ ಮುಂಜಾನೆ ನಿಧನರಾದರು. ಮೃತರು ಪತಿ, ಓರ್ವ ಪುತ್ರ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸಂಜೆ 4 ಗಂಟೆಗೆ ಪಟ್ಟಣದಲ್ಲಿ ನಡೆಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಫಿಲಂ ಸಿಟಿಗೆ ಪುಟ್ಟಣ್ಣ ಕಣಗಾಲ್ ಹೆಸರಿಡಿ

ಬಿಜೆಪಿ ಮುಖಂಡ ರಘು ಕೌಟಿಲ್ಯ ಸಲಹೆ



ಕರುಣಾಮಯಿ ವಿಷ್ಣು ಅಭಿಮಾನಿ ಬಳಗವು ಮೈಸೂರಿನ ಚಾಮುಂಡಿಪುರಂ ವೃತ್ತದಲ್ಲಿರುವ ತಗಡೂರು ರಾಮಚಂದ್ರರಾವ್ ಉದ್ಯಾನವನದಲ್ಲಿ ಆಯೋಜಿಸಿದ್ದ ಎಸ್.ಆರ್.ಪುಟ್ಟಣ್ಣ ಕಣಗಾಲ್ ಜನ್ಮದಿನದ ಕಾರ್ಯಕ್ರಮದಲ್ಲಿ ಬಿಜೆಪಿ ಹಿಂದುಳಿದ ವರ್ಗಗಳ ಮೋರ್ಚಾ ರಾಜ್ಯಾಧ್ಯಕ್ಷ ಆರ್.ರಘು ಕೌಟಿಲ್ಯ 'ಪುಟ್ಟಣ್ಣ ಕಣಗಾಲ್' ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿದರು.

ಮೈಸೂರು,ಡಿ.1(ಎಂಟಿವೈ)– ಕನ್ನಡ ಚಲನಚಿತ್ರ ರಂಗಕ್ಕೆ ಅಪಾರ ಕೊಡುಗೆ ನೀಡಿರುವ ಚಿತ್ರ ನಿರ್ದೇಶಕ ಎಸ್.ಆರ್. ಪುಟ್ಟಣ್ಣ ಕಣಗಾಲ್ ಅವರ ಹೆಸರನ್ನು ಮೈಸೂರಲ್ಲಿ ನಿರ್ಮಾಣ ಮಾಡುವ ಚಿತ್ರನಗರಿ(ಫಿಲಂ ಸಿಟಿ)ಗೆ ನಾಮಕರಣ ಮಾಡುವಂತೆ ಬಿಜೆಪಿ ಹಿಂದುಳಿದ ವರ್ಗಗಳ ಮೋರ್ಚಾ ರಾಜ್ಯಾಧ್ಯಕ್ಷ ಆರ್.ರಘು ಕೌಟಿಲ್ಯ ಸಲಹೆ ನೀಡಿದ್ದಾರೆ.

ಕರುಣಾಮಯಿ ವಿಷ್ಣು ಅಭಿಮಾನಿ ಬಳಗವು ಮೈಸೂರಿನ ಚಾಮುಂಡಿಪುರಂ ವೃತ್ತದಲ್ಲಿರುವ ತಗಡೂರು ರಾಮಚಂದ್ರ ರಾವ್ ಉದ್ಯಾನವನದಲ್ಲಿ ಆಯೋಜಿಸಿದ್ದ ಕನ್ನಡ ಚಿತ್ರರಂಗದ ನಿರ್ದೇಶಕ ಎಸ್.ಆರ್. ಪುಟ್ಟಣ್ಣ ಕಣಗಾಲ್ ಜನ್ಮದಿನೋತ್ಸವ ಕಾರ್ಯಕ್ರಮದಲ್ಲಿ 'ಪುಟ್ಟಣ್ಣ ಕಣಗಾಲ್' ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ ಮಾತನಾಡಿದ ಅವರು, ಪೌರಾಣಿಕ ನಾಟಕ ಹಾಗೂ ಸಂಗೀತಕ್ಕೆ ಹೆಚ್ಚು ಪ್ರಾಧಾನ್ಯತೆ ನೀಡುತ್ತಿದ್ದ ಕಾಲಘಟ್ಟದಲ್ಲಿ ಕೌಟುಂಬಿಕ ಮತ್ತು ಸಮಾಜಕ್ಕೆ ಉತ್ತಮ ಸಂದೇಶವುಳ್ಳ ಕನ್ನಡ ಚಲನಚಿತ್ರವನ್ನು ನಿರ್ದೇಶಿಸಿ ಸಮಾಜಕ್ಕೆ ಕೊಡುಗೆ ನೀಡಿದ್ದ ಚಿತ್ರ ನಿರ್ದೇಶಕ ಎಸ್.ಆರ್.ಪುಟ್ಟಣ್ಣ ಕಣಗಾಲ್ ಇಂದಿಗೂ ಸ್ಮರಣೀಯರು ಎಂದರು.

ಪುಟ್ಟಣ್ಣ ಅವರ ಚಲನಚಿತ್ರಗಳು ಕಲಾ ಪ್ರೇಕ್ಷಕರನ್ನು ಆಕರ್ಷಿಸಿದ್ದವು. ನಾಗರ ಹಾವು ಚಿತ್ರದಲ್ಲಿ ಬರುವ ಪಾತ್ರಗಳು ಒನಕೆ ಓಬವ್ವ ಇವತ್ತಿಗೂ ಯುವ ಪೀಳಿಗೆಯಲ್ಲಿ ದೇಶ ಪ್ರೇಮವನ್ನು ಹೆಚ್ಚಿಸುತ್ತದೆ. ಚಾಮಯ್ಯ ಮೇಷ್ಟ್ರು ರಾಮಾಚಾರಿ ಪಾತ್ರಗಳು ಗುರುಶಿಷ್ಯನ ಭಾಂದವ್ಯ ಗೌರವ ಹೆಚ್ಚಿಸುತ್ತದೆ. ಸಮಾಜದಲ್ಲಿ ವಸ್ತುಸ್ಥಿತಿಯನ್ನು ತೋರಿಸಿ ಜನರನ್ನು ಎಚ್ಚರಿಸುತ್ತಿದ್ದ ಪುಟ್ಟಣ್ಣ ಕಣಗಾಲ್ ಅವರ ಚಿತ್ರಗಳು ಪ್ರೇಕ್ಷಕರ ಮನಗೆದ್ದಿವೆ. ಚಿತ್ರದುರ್ಗದ ಕಲ್ಲಿನ ಕೋಟೆ, ಕನ್ಯಾಕುಮಾರಿ ವಿವೇಕ ಸ್ಮಾರಕ, ಕೊಡಗಿನ ಕಾವೇರಿ, ಶ್ರೀ ಚಾಮುಂಡೇಶ್ವರಿ, ಮೈಸೂರು ದಸರಾ ಸೇರಿದಂತೆ ಪ್ರತಿಯೊಂದು ಚಿತ್ರದ ಹಾಡುಗಳು ಸಹ ಪ್ರವಾಸಿ ತಾಣದ ಜನಪ್ರಿಯತೆ ತಂದು ಕೊಟ್ಟಿವೆ. ಮೈಸೂರಿನಲ್ಲಿ ಚಿತ್ರನಗರಿ ನಿರ್ಮಾಣವಾಗುವ ಸಂದರ್ಭದಲ್ಲಿ ಚಿತ್ರಬ್ರಹ್ಮ ಪುಟ್ಟಣ್ಣ ಕಣಗಾಲ್ ಅವರ ಹೆಸರನ್ನು ನಾಮಕರಣ ಮಾಡಿ ಸ್ಮರಿಸಬೇಕು. ಪಿರಿಯಾಪಟ್ಟಣದ ಕಣಗಾಲ್‌ನಲ್ಲಿರುವ ಅವರ ಮನೆಯನ್ನು ಸ್ಮಾರಕವಾಗಿ ಉಳಿಸಿ ಕೊಳ್ಳಬೇಕು ಎಂದು ಸಲಹೆ ನೀಡಿದರು.

ಸಮಾಜಸೇವಕ ಡಾ.ಕೆ.ರಘುರಾಂ ವಾಜಪೇಯಿ ಮಾತನಾಡಿ, ಕಲಾವಿದರ ತವರೂರು ಮೈಸೂರು ಚಿತ್ರರಂಗ ಕ್ಷೇತ್ರದಲ್ಲಿ ಉತ್ತುಂಗಕ್ಕೆ ಏರಲು ಪುಟ್ಟಣ್ಣ ಕಣಗಾಲ್ ಪಾತ್ರ ಪ್ರಮುಖವಾದುದ್ದಾಗಿದೆ. ಪುಟ್ಟಣ್ಣನವರ ಚಿತ್ರದಲ್ಲಿ ಪಾತ್ರಗಳ ನಟನೆಯಲ್ಲಿ ಪರಿಪೂರ್ಣತೆ ಸಿಗುವ ವರೆಗೂ ಕಲಾವಿದರು ಭಯದ ವಾತಾವರಣದಲ್ಲೇ ಅಭಿನಯಿಸುತ್ತಿದ್ದರು. ಆ ಕಾರಣದಿಂದ ಇಂದು ಡಾ.ವಿಷ್ಣುವರ್ಧನ್, ಅಂಬರೀಶ್, ಶ್ರೀನಾಥ್ ಸೇರಿದಂತೆ ಅತ್ಯುತ್ತಮ ನಟರು ಹೊರ ಹೊಮ್ಮಲು ಸಾಧ್ಯವಾಯಿತು ಎಂದರು.

ಇದೇ ಸಂದರ್ಭದಲ್ಲಿ ನಗರ ಪಾಲಿಕೆ ಮಾಜಿ ಸದಸ್ಯ ಎಂ.ಡಿ.ಪಾರ್ಥಸಾರಥಿ, ಮೈಸೂರು ಸಿಟಿ ಕೋ ಆಪರೇಟಿವ್ ಬ್ಯಾಂಕ್ ನಿರ್ದೇಶಕ ಪಡುವಾರಹಳ್ಳಿ ರಾಮಕೃಷ್ಣ, ಕೆಪಿಸಿಸಿ ಸದಸ್ಯ ನಜರ್ ಬಾದ್ ನಟರಾಜ್, ಮೈಸೂರು ಕೋ ಆಪರೇಟಿವ್ ಬ್ಯಾಂಕ್ ನಿರ್ದೇಶಕ ಪಡುವಾರಹಳ್ಳಿ ಎಂ.ರಾಮಕೃಷ್ಣ, ಗಿರೀಶ್, ಪ್ರಜ್ಞಾವಂತ ನಾಗರಿಕ ವೇದಿಕೆ ಅಧ್ಯಕ್ಷ ಕಡಕೊಳ ಜಗದೀಶ್, ಕರುಣಾಮಯಿ ವಿಷ್ಣು ಅಭಿಮಾನಿ ಬಳಗದ ಅಧ್ಯಕ್ಷ ಎಸ್.ಎನ್. ರಾಜೇಶ್, ಕೆಎಂಪಿಕೆ ಟ್ರಸ್ಟ್ ಅಧ್ಯಕ್ಷ ವಿಕ್ರಮ ಅಯ್ಯಂಗಾರ್, ವಿನಯ್ ಕಣಗಾಲ್, ಅಪೂರ್ವ ಸ್ನೇಹ ಬಳಗದ ಅಧ್ಯಕ್ಷ ಅಪೂರ್ವ ಸುರೇಶ್, ರಂಗನಾಥ್, ಧರ್ಮೇಂದ್ರ, ಸುಚೀಂದ್ರ, ಕಲಾವಿದರಾದ ನಾಗೇಂದ್ರ ಪ್ರಸಾದ್ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಆಂಧ್ರ ಕಿಂಗ್ (ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ಐ ಆ್ಯಮ್ ಗಾಡ್ (ಕ)	4 ಪ್ರದರ್ಶನಗಳು
ಬಾಲಾಜಿ	(ದೂ: 2497199)
ತೇರೇ ಇಷ್ಕ್ ಮೇ (ಹಿ)	3 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ನಾಯಿ ಇದೆ ಎಚ್ಚರಿಕೆ (ಕ)	4 ಪ್ರದರ್ಶನಗಳು
ಗಾಯಿತ್ರಿ	
ರಾಧೇಯ (ಕ)	4 ಪ್ರದರ್ಶನಗಳು
ರಾಜಕಮಲ್	
ತೇರೇ ಇಷ್ಕ್ ಮೇ (ತ)	4 ಪ್ರದರ್ಶನಗಳು
ಸಂಗಂ	
ಓಎಲ್‌ಸಿ (ಕ)	4 ಪ್ರದರ್ಶನಗಳು
ಲಿಡೋ	
ಫ್ಲರ್ಟ್ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ನಾಯಿ ಇದೆ ಎಚ್ಚರಿಕೆ (ಕ)	4 ಪ್ರದರ್ಶನಗಳು

ಅಲ್ಲಮಪ್ರಭುವಿನ ಅರಿವಿನೆತ್ತರ ಸಾಮಾನ್ಯರಿಗೆ ಎಟುಕದ್ದು

ಪ್ರೊ.ಮೊರಬದ ಮಲ್ಲಿಕಾರ್ಜುನ ಅಭಿಮತ



ಮರಿಮಲ್ಲಪ್ಪ ಕಾಲೇಜಿನಲ್ಲಿ ನಡೆದ ದತ್ತಿ ಕಾರ್ಯಕ್ರಮವನ್ನು ಸಾಹಿತಿ ಪ್ರೊ.ಮೊರಬದ ಮಲ್ಲಿಕಾರ್ಜುನ ಉದ್ಘಾಟಿಸಿದರು.

ಮೈಸೂರು, ಡಿ.1– ಗಟ್ಟಿವಾಳಯ್ಯನ ಮುಗ್ಧತೆ ಉಪಮಾತೀತವಾದದ್ದು, ಅಕ್ಕ ಮಹಾದೇವಿಯ ಅನುಭಾವದೆತ್ತರ ಅನುಭಾವಿಗಳಲ್ಲದವರಿಗೆ ನಿಲುಕದ್ದು, ಅಲ್ಲಮ ಪ್ರಭುವಿನ ಅರಿವಿನ ಎತ್ತರ ಸಾಮಾನ್ಯರಿಗೆ ಎಟಕದ್ದು, ಒಟ್ಟಾರೆಯಾಗಿ ಬಸವಾದಿ ಪ್ರಮಥರು ಕಟ್ಟಬಯಸಿದ್ದು ಸರ್ವರಿಗೂ ಒಳಿತುಂಟು ಮಾಡಬಹುದಾದ ಕಲ್ಯಾಣ ನಾಡನ್ನು, ಅವರ ವಚನಗಳು ಬರಿ ಮಾತಲ್ಲ, ದೇವರ ಸಾಕ್ಷಿಯಾಗಿ, ದೇವರನ್ನೇ ಅಂಕಿತವಾಗಿಟ್ಟುಕೊಂಡ, ಲಿಂಗವೇ ಮೆಚ್ಚಿ ಅಹುದಹುದೆನ್ನಬಹುದಾದಂಥ ಆತ್ಮಸಾಕ್ಷಿಯೊಪ್ಪಿತ ಮಾತುಗಳು ಎಂದು ಸಾಹಿತಿ ಪ್ರೊ.ಮೊರಬದ ಮಲ್ಲಿಕಾರ್ಜುನ ಹೇಳಿದರು.

ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು ಮೈಸೂರು ನಗರ ಘಟಕ ಮರಿಮಲ್ಲಪ್ಪ ಕಾಲೇಜಿನಲ್ಲಿ ಏರ್ಪಡಿಸಿದ್ದ, ದತ್ತಿ ಕಾರ್ಯಕ್ರಮದಲ್ಲಿ 'ಸಂಭಾಷಣೆಗೆ ಶೃಂಗಾರ ಸದ್ಭಕ್ತರ ನುಡಿಗಡಣ' ವಿಷಯ ಕುರಿತು ಮಾತನಾಡುತ್ತಿದ್ದ ಅವರು, ನಡೆದಂತೆ ನುಡಿದ ಬಸವಾದಿ ಶರಣರ ಮೌಲಿಕ ಮಾತುಗಳೇ ವಚನಗಳಾದವು ಎಂದರು.

ಅಧ್ಯಕ್ಷತೆ ವಹಿಸಿದ್ದ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ಮೈಸೂರು ನಗರ ಘಟಕದ ಅಧ್ಯಕ್ಷ, ಕವಿ ಡಾ.ಜಯಪ್ಪ ಹೊನ್ನಾಳಿ ಮಾತನಾಡಿ, ಶರಣರ ವಚನ ಸಾರವೇ ನುಡಿಗಡಣ, ಅದು ದಯೆ, ಕಾಯಕ, ಸಮಾನತೆ, ಅರಿವು, ಆಚಾರ, ಅನುಭಾವ ಹಾಗೂ ಸಕಲ ಜೀವಿಗಳಿಗೆ ಲೇಸು ಬಯಸುವ ತತ್ವವನ್ನೊಳಗೊಂಡಿದೆ, ಈ ಶರಣರ ನುಡಿಗಡಣದಲ್ಲಿ ಕಾಯಕವೇ ಕೈಲಾಸ, ದಾಸೋಹವೇ ಸಾಮರಸ್ಯ, ಸಾಮಾಜಿಕ ನ್ಯಾಯವೇ ಸಮಾನತೆ, ದಯೆಯೆ ಧರ್ಮ, ಕ್ರಿಯೆಯೆ ಕರ್ಮ, ಅಸಹಾಯಕರಲ್ಲಿ ಅನುಕಂಪ, ಕಷ್ಟದಲ್ಲಿರುವವರಿಗೆ ಕಾರುಣ್ಯ ಮುಂತಾದ ಮಾನವೀಯವಾದ ತತ್ವಗಳೆ ತುಂಬಿಕೊಂಡಿವೆ ಎಂದರು.

ಪ್ರತಿಭಾವಂತ ವಿದ್ಯಾರ್ಥಿಗಳಿಬ್ಬರಿಗೆ ತಲಾ ಒಂದು ಸಾವಿರ ರೂ. ನೀಡಿ, ಗೌರವಿಸಲಾಯಿತು. ಪ್ರಾಂಶುಪಾಲ ಡಾ.ಅನಿಲ್ ಎಸ್.ಕೆ. , ಕಾಲೇಜು ಶೈಕ್ಷಣಿಕ ಅಧಿಕಾರಿ ಮಂಗಳ ಮುದ್ದುಮಾದಪ್ಪ, ಕನ್ನಡ ಉಪನ್ಯಾಸಕ ಕಿರಣ್ ಕುಮಾರ್ ಬಿ.ಪಿ., ದತ್ತಿ ದಾನಿಗಳಾದ ಆರ್ ಎಸ್. ಪೂರ್ಣಾನಂದ, ಸುಮನ ಎಸ್.ಎಸ್., ಕದಳಿ ಮಹಿಳಾ ವೇದಿಕೆ ಅಧ್ಯಕ್ಷೆ ಶೋಭಾರಾಣಿ ಜೈಪ್ರಕಾಶ್, ಕಾರ್ಯದರ್ಶಿ ನಂದೀಶ್ವರ ಬಿ.ಎನ್., ಖಜಾಂಚಿ ಡಾ. ಮುದ್ದು ಮಲ್ಲೇಶ್, ಸಂಚಾಲಕರಾದ ಡಾ.ಹೆಚ್.ಎನ್. ಲೋಕೇಶಪ್ಪ, ಸದಸ್ಯರಾದ ಜಗದೀಶ್ ಬಿ.ಚಿಕ್ಕಮಠ, ಬಿ.ಡಿ.ಎಂ.ಕುಮಾರ್, ವೀಣಾ ನಂದೀಶ್, ಗೀತಾ, ಮಲ್ಲಿಕಾ ಮಹದೇವಸ್ವಾಮಿ, ಪ್ರಭುಸ್ವಾಮಿ ಮುಂತಾದವರು ಉಪಸ್ಥಿತರಿದ್ದರು.

ವಿವಿಧೆಡೆ ವಿದ್ಯುತ್ ವ್ಯತ್ಯಯ

ಮೈಸೂರು, ಡಿ.1– ಒಂಟಿಕೊಪ್ಪಲು ಶಾಖಾ ವ್ಯಾಪ್ತಿಯಲ್ಲಿ ಭೂಗತ ಕೇಬಲ್ ಅಳವಡಿಸುವ ಕೆಲಸದ ನಿಮಿತ್ತ ಡಿ.2, ಡಿ.4 ಮತ್ತು ಡಿ.6 ರಂದು ಬೆಳಗ್ಗೆ 10 ಗಂಟೆಯಿಂದ ಸಂಜೆ 5.30 ಗಂಟೆಯವರೆಗೆ ಈ ಕೆಳಕಂಡ ಪ್ರದೇಶಗಳಲ್ಲಿ ಆಗಿಂದ್ದಾಗೆ, ಸಾಂದರ್ಭಿಕವಾಗಿ ಜಯಲಕ್ಷ್ಮಿ ಪುರಂ, ಬಿ.ಎಸ್.ಎನ್.ಎಲ್ ಕಛೇರಿ, ಬಿ.ಎಂ. ಹ್ಯಾಬಿಟೇಟ್ ಮಾಲ್, ಮಹಾಜನ ಕಾಲೇಜು, ರಾಘವೇಂದ್ರ ಸ್ವಾಮಿ ಮಠ ಹಾಗೂ ಸುತ್ತಮುತ್ತಲಿನ ಪ್ರದೇಶಗಳು. ಡಿ.3 ಮತ್ತು ಡಿ.5 ರಂದು ವಿಜಯ ನಗರ 1ನೇ ಹಂತ, ಎಲ್.ಐ.ಸಿ ಕಛೇರಿ, Learners ಪಿ.ಯು.ಸಿ ಕಾಲೇಜು, ನರಸಿಂಹಸ್ವಾಮಿ ದೇವಸ್ಥಾನ, ಕೊಡವ ಸಮಾಜ, ಹುಣಸೂರು ಮುಖ್ಯರಸ್ತೆ, ಭಾರತೀಯ ವಿದ್ಯಾಭವನ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ ಎಂದು ಸೆಸ್ಕ್ ಪ್ರಕಟಣೆ ತಿಳಿಸಿದೆ.

ರಮಣ ಜ್ಞಾನ ಕೇಂದ್ರದಲ್ಲಿ ಸಾಮೂಹಿಕ ಸರಸ್ವತಿ ಪೂಜಾ ಕಲಿಕೆ



ಸಾಮೂಹಿಕ ಸರಸ್ವತಿ ಪೂಜಾ ಮಂತ್ರ ಕಲಿಕೆ ಶಿಬಿರ ನಡೆಸಲಾಯಿತು.

ಮೈಸೂರು, ಡಿ.1– ಮೈಸೂರಿನ ಕುವೆಂಪುನಗರದಲ್ಲಿರುವ ಶ್ರೀ ರಮಣ ಜ್ಞಾನ ಕೇಂದ್ರದಲ್ಲಿ ನಗರದ ಸಾಧನ ಮಂದಿರದ ಸ್ವಾಮಿ ಹಂಸಾನಂದರ ಮಾರ್ಗದರ್ಶನದಲ್ಲಿ ಮಕ್ಕಳು ಮತ್ತು ಯುವಕರಿಗಾಗಿ ಸಾಮೂಹಿಕ ಸರಸ್ವತಿ ಪೂಜಾ ಮಂತ್ರ ಕಲಿಕೆ ಶಿಬಿರ ಆಯೋಜಿಸಲಾಗಿತ್ತು.

ಸುಮಾರು 15 ದಿನಗಳ ಕಾಲ ನಿರಂತರವಾಗಿ, ಮಕ್ಕಳಿಗೆ ಸರಸ್ವತಿ ಪೂಜೆಯ ಮಂತ್ರ ಉಚ್ಚಾರಣೆ, ಕ್ರಮವಿಧಿಗಳು ಮತ್ತು ಪೂಜೆಯ ತತ್ತ್ವಾರ್ಥಗಳನ್ನು ವಿವರವಾಗಿ ಬೋಧಿಸಲಾಯಿತು.


ಈ ಮೂಲಕ ಮಕ್ಕಳಲ್ಲಿ ಸಂಸ್ಕಾರ, ಶ್ರದ್ಧೆ ಮತ್ತು ನೈತಿಕ ಮೌಲ್ಯಗಳನ್ನೂ ಬೆಳೆಸುವ ಉದ್ದೇಶವಾಗಿ ಶಿಬಿರವು ಯಶಸ್ವಿಯಾಗಿ ಸಂಪನ್ನಗೊಂಡಿತು.

ಕಾರ್ಯಕ್ರಮದ ಉಸ್ತುವಾರಿಯನ್ನು ಪೂಜ್ಯ ಸ್ವಾಮಿ ಹಂಸಾನಂದರು ವಹಿಸಿದ್ದರು. ಕೇಂದ್ರದ ಕಾರ್ಯದರ್ಶಿ ಗೀತಾ ಚರಣ್, ವ್ಯವಸ್ಥಾಪಕ ಶಶಿಕುಮಾರ್, ಕೇಂದ್ರದ ಅಧ್ಯಾಪಕರು ಹಾಗೂ ಹಲವಾರು ಭಕ್ತರು ಮತ್ತು ಪೋಷಕರು ಭಾಗವಹಿಸಿದ್ದರು.

ಸ್ವಾಮಿ ಹಂಸಾನಂದರು ಮಾತನಾಡಿ, ಬಾಲ್ಯದಲ್ಲೇ ಧಾರ್ಮಿಕ ಜ್ಞಾನ ಮತ್ತು ಸಂಸ್ಕಾರಗಳನ್ನು ನೀಡುವುದು ಜೀವನ ರೂಪಿಸುವ ಮಹತ್ವದ ಹೆಜ್ಜೆ. ಮಕ್ಕಳು ಪೂಜಾ ವಿಧಾನ ಕಲಿಯುವುದು ನಮ್ಮ ಸಂಸ್ಕೃತಿ ಉಳಿಯುವ ದಾರಿ ಎಂದು ಹೇಳಿದರು.

ರೇಷ್ಮೆ ಮ್ಯೂಸಿಯಂ ಸ್ಥಾಪನೆಗೆ ವಾಣಿಜ್ಯ, ಕೈಗಾರಿಕಾ ಸಂಸ್ಥೆ ಸ್ವಾಗತ

ಮೈಸೂರು, ಡಿ.1– ಮೈಸೂರಿನಲ್ಲಿ ದೇಶದ ಮೊದಲ ರೇಷ್ಮೆ ಮ್ಯೂಸಿಯಂ ಪ್ರಸ್ತಾಪವನ್ನು ಮೈಸೂರು ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆ ಸ್ವಾಗತಿಸಿದ್ದು, ಇದು ಇಲ್ಲಿನ ಪ್ರವಾಸೋದ್ಯಮ ಕ್ಷೇತ್ರಕ್ಕೆ ಹೊಸ ತಿರುವು ನೀಡಲಿದೆ ಎಂದು ಅಭಿಪ್ರಾಯಿಸಿದೆ.



ಕೆ.ಬಿ.ಲಿಂಗರಾಜು

ಈ ಬಗ್ಗೆ ಪತ್ರಿಕಾ ಹೇಳಿಕೆ ನೀಡಿರುವ ಸಂಸ್ಥೆಯ ಅಧ್ಯಕ್ಷ ಕೆ.ಬಿ.ಲಿಂಗರಾಜು, ದೇಶದ ಮೊದಲ ರೇಷ್ಮೆ ವಸ್ತು ಸಂಗ್ರಹಾಲಯವನ್ನು ಮೈಸೂರಿನಲ್ಲಿ ಸ್ಥಾಪಿಸಲು ಕೇಂದ್ರ ಸರ್ಕಾರ ಅನುಮತಿ ನೀಡಿರುವುದು ಅತ್ಯಂತ ಸಂತೋಷದ ವಿಚಾರ. ರೇಷ್ಮೆ ಮ್ಯೂಸಿಯಂ ಸ್ಥಾಪನೆಯಾದರೆ ಮೈಸೂರು ಪ್ರವಾಸೋದ್ಯಮಕ್ಕೆ ಮಹತ್ವದ ಕೊಡುಗೆ ನೀಡಿದಂತಾಗುತ್ತದೆ. ರೇಷ್ಮೆ ಜೊತೆಗೆ ಇಲ್ಲಿನ ಕರಕುಶಲತೆ, ಶಿಲ್ಪಕಲೆ, ಸಂಸ್ಕೃತಿ, ಪರಂಪರೆಯನ್ನು ಮತ್ತಷ್ಟು ಪ್ರಚುರಪಡಿಸಲು ಉತ್ತಮ ವೇದಿಕೆ ಕಲ್ಪಿತವಾಗಲಿದೆ ಎಂದಿದ್ದಾರೆ.

ರೇಷ್ಮೆ ಮ್ಯೂಸಿಯಂನಿಂದ ರೇಷ್ಮೆ ಉತ್ಪಾದನೆಯ ವೈಶಿಷ್ಟ್ಯತೆ ಬಗ್ಗೆ ಪ್ರವಾಸಿಗರಿಗೆ ಮಾಹಿತಿ ಒದಗಿಸುವುದರೊಂದಿಗೆ ಯುವ ರೈತರಿಗೂ ಸೂಕ್ತ ಮಾರ್ಗದರ್ಶನ ದೊರಕುತ್ತದೆ. ಈ ಮಹತ್ವದ ಯೋಜನೆಯಿಂದ ಮೈಸೂರಿನ ಹಿರಿಮೆ ಮತ್ತಷ್ಟು ಹೆಚ್ಚಲಿದೆ. ಪ್ರವಾಸಿಗರು, ವಿದ್ಯಾರ್ಥಿಗಳು, ಸಂಶೋಧಕರು ಸೇರಿದಂತೆ ವಿವಿಧ ಕ್ಷೇತ್ರದವರು ಹೆಚ್ಚಿನ ಸಂಖ್ಯೆಯಲ್ಲಿ ಭೇಟಿ ನೀಡುವುದರಿಂದ ಪ್ರವಾಸೋದ್ಯಮ ಅಭಿವೃದ್ಧಿಗೆ ನೆರವಾಗುತ್ತದೆ. ಪ್ರವಾಸಿ ತಾಣಗಳ ಪಟ್ಟಿಗೆ ಹೊಸ ಸೇರ್ಪಡೆಯಾದರೆ ಆರ್ಥಿಕತೆ ಬೆಳವಣಿಗೆಗೂ ಸಹಕಾರಿಯಾಗಲಿದೆ ಎಂದು ಅವರು ತಿಳಿಸಿದ್ದಾರೆ.

ಶ್ರೀ ಪಂಚಮುಖಿ ಆಂಜನೇಯಸ್ವಾಮಿ ದೇವಸ್ಥಾನದಲ್ಲಿ ಹನುಮಜಯಂತಿ ಮಹೋತ್ಸವಕ್ಕೆ ಚಾಲನೆ



ಶ್ರೀ ಪಂಚಮುಖಿ ಆಂಜನೇಯ ಸ್ವಾಮಿ ದೇವಸ್ಥಾನದಲ್ಲಿ 25ನೇ ವರ್ಷದ ಹನುಮ ಜಯಂತಿ ಮಹೋತ್ಸವದ ಧಾರ್ಮಿಕ ಕಾರ್ಯಕ್ರಮಗಳಿಗೆ ಚಾಲನೆ ನೀಡಲಾಯಿತು.

ಮೈಸೂರು, ಡಿ. 1– ಮೈಸೂರಿನ ಇರ್ವಿನ್ ರಸ್ತೆಯಲ್ಲಿರುವ ಕರ್ನಾಟಕ ಸರ್ಕಾರ ಧಾರ್ಮಿಕ ದತ್ತಿ ಇಲಾಖೆಯ ಶ್ರೀ ಪಂಚಮುಖಿ ಆಂಜನೇಯ ಸ್ವಾಮಿ ದೇವಸ್ಥಾನದಲ್ಲಿ 25ನೇ ವರ್ಷದ ಹನುಮ ಜಯಂತಿ ಮಹೋತ್ಸವದ ಅಂಗವಾಗಿ ಡಿ. 1ರಿಂದ 10ರ ವರೆಗೆ ದೇವಸ್ಥಾನದಲ್ಲಿ ವಿವಿಧ ಧಾರ್ಮಿಕ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ ಸೋಮವಾರದಂದು ಲೋಕ ಕಲ್ಯಾಣಾರ್ಥವಾಗಿ ಶ್ರೀ ಪಂಚಮುಖಿ ಆಂಜನೇಯ ಸ್ವಾಮಿ ಮತ್ತು ಗರುಡ ದೇವರಿಗೆ ಸ್ನಪನ, ಅಭಿಷೇಕ, ವಿಶೇಷ ಅಲಂಕಾರ, ಧ್ವಜಾರೋಹಣ, ಕಲಶ ಪ್ರತಿಷ್ಠೆ ಮುಂತಾದ ಧಾರ್ಮಿಕ ಕಾರ್ಯ ಕ್ರಮಗಳನ್ನು ಪ್ರಧಾನ ಅರ್ಚಕರಾದ ವಿದ್ವಾನ್ ಎಸ್ ಕೃಷ್ಣಮೂರ್ತಿ ಮತ್ತು ವೃಂದದವರಿಂದ ನೆರವೇರಿತು.

ಡಿ.2ರಂದು ಶ್ರೀ ಹನುಮ ಜಯಂತಿ ಮಹೋತ್ಸವದ ಅಂಗವಾಗಿ ಶ್ರೀ ಸ್ವಾಮಿಯವರಿಗೆ ವಿಶೇಷ ದ್ರವ್ಯಗಳಿಂದ ಮತ್ತು ಪಂಚಾಮೃತ ಅಭಿಷೇಕ, ಅಲಂಕಾರ, ಮಹಾಮಂಗಳಾರತಿ ಭಕ್ತಾದಿಗಳಿಗೆ ತೀರ್ಥ ಪ್ರಸಾದ ವಿನಿಯೋಗ ಸೇರಿದಂತೆ ವಿವಿಧ ಧಾರ್ಮಿಕ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ.

ಎಂಡಿಪಿಎ ವತಿಯಿಂದ ರಾಜ್ಯೋತ್ಸವ, ಸಾಧಕರಿಗೆ ಸನ್ಮಾನ



ಎಂಡಿಪಿಎ ವತಿಯಿಂದ ಭಾನುವಾರ ಕನ್ನಡ ರಾಜ್ಯೋತ್ಸವ ಆಚರಿಸಲಾಯಿತು.

ಮೈಸೂರು, ಡಿ.1– ಮೈಸೂರು ಡಿಸೈನರ್ಸ್ ಮತ್ತು ಪ್ರಿಂಟರ್ಸ್ ಅಸೋಸಿಯೇಷನ್ [ಎಂಡಿಪಿಎ] ವತಿಯಿಂದ ಭಾನುವಾರ ಕೃಷ್ಣಮೂರ್ತಿಪುರಂ ಬಿಎಸ್‌ಎಸ್ ವಿದ್ಯೋದಯ ಸಂಸ್ಥೆಯಲ್ಲಿ ಕನ್ನಡ ರಾಜ್ಯೋತ್ಸವ ಆಚರಿಸಲಾಯಿತು.

ಇದೇ ಸಂದರ್ಭದಲ್ಲಿ ಈ ಬಾರಿಯ ರಾಜ್ಯ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾದ ಹಿರಿಯ ಪತ್ರಕರ್ತ ಅಂಶಿ ಪ್ರಸನ್ನ ಕುಮಾರ್, ನೃತ್ಯಗುರು ಪ್ರೊ.ಕೆ. ರಾಮಮೂರ್ತಿ ರಾವ್, ಕಳೆದ ಬಾರಿಯ ಸುವರ್ಣ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್ ಅವರನ್ನು ಸನ್ಮಾನಿಸಲಾಯಿತು. ಎಂಡಿಪಿಎ ಮಾಜಿ ಅಧ್ಯಕ್ಷರಾದ ಆರ್. ವಾಸುದೇವ ಭಟ್, ಎಂ.ಎಸ್. ರುದ್ರಸ್ವಾಮಿ, ಕೌಶಲ್ಯ ಕರ್ನಾಟಕ ಪ್ರಶಸ್ತಿ ಪುರಸ್ಕೃತ ಪ್ರಮಥ ಮಂಜುನಾಥ್ ಅವರನ್ನು ಗೌರವಿಸಲಾಯಿತು.

ಎಂ.ಎಸ್. ರಾಮಚಂದ್ರ, ಎಂ.ಎಸ್. ಹರ್ಷ, ಡಿ.ಎಸ್. ಮಹದೇವ, ರಾಮನಾಥ ಗುಪ್ತ, ಪ್ರಕಾಶ್,ಮಂಜುನಾಥ್, ಡಾ.ಎಂ. ಮಹೇಶ್ ಚಿಕ್ಕಲ್ಲೂರು ಮೊದಲಾದವರು ಇದ್ದರು. ಮಂಜುಳಾ ಸ್ವಾಗತಿಸಿದರು. ತೇಜಸ್ವಿನಿ ಕಾರ್ಯಕ್ರಮ ನಿರೂಪಿಸಿದರು.

ಸಕಾರಾತ್ಮಕ ಚಿಂತನೆಗೆ ವಚನ ಸಾಹಿತ್ಯ ಸ್ಫೂರ್ತಿ



ಮೈಸೂರು, ಡಿ.1– ಸಕಾರಾತ್ಮಕ ಚಿಂತನೆಗೆ ವಚನ ಸಾಹಿತ್ಯ ಸ್ಫೂರ್ತಿ ಎಂದು ಓಂ ಬ್ರಿಕ್ಸ್ ಇಂಡಸ್ಟ್ರೀಸ್ ಸಂಸ್ಥಾಪಕಿ ಧನ್ಯ ಸತ್ಯೇಂದ್ರಮೂರ್ತಿ ಹೇಳಿದರು.

ಶರಣು ವಿಶ್ವವಚನ ಫೌಂಡೇಷನ್ ವತಿಯಿಂದ ಧನ್ಯ ಸತ್ಯೇಂದ್ರಮೂರ್ತಿ ಮತ್ತು ಗಿರಿಜಾಂಬ ಮಹದೇವಸ್ವಾಮಿ ಅವರ ದತ್ತಿ ಅಂಗವಾಗಿ ಮಂಡ್ಯ ಜಿಲ್ಲೆ ಶ್ರೀರಂಗಪಟ್ಟಣ ತಾಲೂಕು ನಗುವನಹಳ್ಳಿ ಸ.ಹಿ.ಪ್ರಾ ಶಾಲೆಯಲ್ಲಿ ಆಯೋಜಿಸಿದ್ದ 121ನೇ ಶಾಲೆಗಳೆಡೆಗೆ ವಚನಗಳ ನಡಿಗೆ ಮತ್ತು ಸರ್ಕಾರಿ ಶಾಲೆಗಳ ಬಲವರ್ಧನೆಗೆ ಅಗತ್ಯ ಸೌಲಭ್ಯಗಳ ವಿತರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ವಿದ್ಯಾರ್ಥಿ ದೆಸೆಯಿಂದಲೇ ಸಕಾರಾತ್ಮಕ ಆಲೋಚನೆಗಳನ್ನು ಅಳವಡಿಸಿಕೊಂಡರೆ ಭವಿಷ್ಯದಲ್ಲಿ ಸತ್ಪ್ರಜೆಯಾಗಿ ರೂಪುಗೊಂಡು ದೇಶದ ಆಸ್ತಿಯಾಗಲು ಸಹಕಾರಿಯಾಗುತ್ತದೆ. ಸಾಹಿತ್ಯಕ್ಕೆ ಸಂಬಂಧಿಸಿದಂತೆ ಚಟುವಟಿಕೆಗಳನ್ನು ಶಾಲೆಗಳಲ್ಲಿ ಹೆಚ್ಚು ನಡೆಸಿದರೆ ವಿದ್ಯಾರ್ಥಿಗಳಿಗೆ ಬಾಲ್ಯದಲ್ಲಿಯೇ ಸಾಹಿತ್ಯದ ಅಭಿರುಚಿ ಬೆಳೆಸಲು ಸಹಾಯಕವಾಗುತ್ತದೆ ಎಂದರು.

ಶರಣು ವಿಶ್ವವಚನ ಫೌಂಡೇಷನ್ ಸಂಸ್ಥಾಪಕ ವಚನ ಕುಮಾರಸ್ವಾಮಿ ಮಾತನಾಡಿ, ವಚನ ಸಾಹಿತ್ಯವು ಜಾತಿ, ಮತ ಮತ್ತು ಪಂಥವೆಂಬ ಭೇದ ಭಾವವನ್ನು ತೊಲಗಿಸಿ, ಸರ್ವಜನಾಂಗದ ಶಾಂತಿಯ ತೋಟವನ್ನು ನಿರ್ಮಾಣ ಮಾಡುವುದರ ಜೊತೆಗೆ ಎಲ್ಲಾ ಕಾಯಕವನ್ನು ಗೌರವ ಭಾವನೆಯಿಂದ ನೋಡುವ ಹೊಸ ಕ್ರಾಂತಿಯನ್ನು ಸೃಷ್ಟಿಸುತ್ತದೆ ಎಂದರು.

ಶರಣು ವಿಶ್ವವಚನ ಫೌಂಡೇಷನ್ ಸಂಸ್ಥಾಪಕಿ ರೂಪ ಕುಮಾರಸ್ವಾಮಿ ಮಾತನಾಡಿ, ವಚನ ಸಾಹಿತ್ಯ ಅಧ್ಯಯನ ಮಾಡಿದರೆ ಸಾಮಾಜಿಕ ಬಾಂಧವ್ಯ ಗಟ್ಟಿಗೊಂಡು ಮನೆಯಲ್ಲಿ, ಶಾಲೆಯಲ್ಲಿ ಮತ್ತು ಸಮಾಜದಲ್ಲಿ ಉತ್ತಮ ಪರಿಸರ ನಿರ್ಮಾಣವಾಗುತ್ತದೆ ಎಂದರು.

ನಂತರ ವಚನ ವಾಚನ ಮಾಡಿದ 45 ವಿದ್ಯಾರ್ಥಿಗಳಿಗೆ ವಚನ ದೀವಿಗೆ ಪ್ರಮಾಣಪತ್ರ ಮತ್ತು ವಚನ ಭಾರತ ಪುಸ್ತಕ, ನೋಟ್ ಪ್ಯಾಡ್, ಲೇಖನ ಸಾಮಗ್ರಿ ವಿತರಿಸಲಾಯಿತು.

ಕಾರ್ಯಕ್ರಮದಲ್ಲಿ, ಶರಣು ವಿಶ್ವವಚನ ಫೌಂಡೇಷನ್ ಕೇಂದ್ರೀಯ ಸಂಚಾಲಕ ವಿ. ಲಿಂಗಣ್ಣ, ಉಪಾಧ್ಯಕ್ಷ ಶಿವಪುರ ಉಮಾಪತಿ, ಎಸ್‌ಡಿಎಂಸಿ ಅಧ್ಯಕ್ಷೆ ಶ್ರುತಿ, ಮುಖ್ಯಶಿಕ್ಷಕ ಎಸ್. ಲೋಕೇಶ್, ಶಿಕ್ಷಕರಾದ ಎನ್.ಕೆ ನಾಗಮಣಿ, ಅಂಜುಮ್ ಅಪ್ಸ, ಸಿ.ಎನ್. ಸೌಭಾಗ್ಯ, ಎಚ್.ಜೆ ಜಾಹ್ನವಿ ಉಪಸ್ಥಿತರಿದ್ದರು.

ಇಂದು ದೊಡ್ಡಮ್ಮ ತಾಯಿ ಜಾತ್ರೆ

ಮೈಸೂರು, ಡಿ.1– ನಗರದ ಎನ್.ಆರ್.ಮೊಹಲ್ಲಾ ಮಂಗಳವಾರ(ಡಿ.2) ದೊಡ್ಡಮ್ಮ ತಾಯಿ ಜಾತ್ರಾ ಮಹೋತ್ಸವ ನಡೆಯಲಿದೆ.

ಶಿವಾಜಿ ರಸ್ತೆಯಲ್ಲಿರುವ ದೊಡ್ಡಮ್ಮ ತಾಯಿ ದೇವಸ್ಥಾನದಲ್ಲಿ ವಿಶೇಷ ಪೂಜಾ ಕೈಂಕರ್ಯಗಳು ನೆರವೇರಲಿದ್ದು, ದೇವಿಯ ಮೂರ್ತಿ ಮೆರವಣಿಗೆಯೂ ಜರುಗಲಿದೆ ಎಂದು ನರಸಿಂಹರಾಜ ಮೊಹಲ್ಲಾ ರೈತ ಗಂಗಡಕಾರ ಒಕ್ಕಲಿಗರ ಶ್ರೀರಾಮ ಮಂದಿರ ಸಂಘದ ಪ್ರಕಟಣೆ ತಿಳಿಸಿದೆ.

ಅಂತರ ಶಾಲಾ ಜಾನಪದ ನೃತ್ಯ ಸ್ಪರ್ಧೆ



ಮೈಸೂರಿನ ಸಿದ್ದಾರ್ಥ ನಗರದಲ್ಲಿರುವ ಜೆಎಸ್‌ಎಸ್ ಪಬ್ಲಿಕ್ ಶಾಲೆಯಲ್ಲಿ ಅಂತರ ಶಾಲಾ ಜಾನಪದ ನೃತ್ಯ ಸ್ಪರ್ಧೆಯಲ್ಲಿ ವಿವಿಧ ಶಾಲೆಯ ಮಕ್ಕಳು ಭಾಗವಹಿಸಿದ್ದರು.

ಮೈಸೂರು, ಡಿ.1– ಮೈಸೂರಿನ ಸಿದ್ದಾರ್ಥನಗರದಲ್ಲಿರುವ ಜೆಎಸ್‌ಎಸ್ ಪಬ್ಲಿಕ್ ಶಾಲೆಯಲ್ಲಿ ಅಂತರ ಶಾಲಾ ಜಾನಪದ ನೃತ್ಯ ಸ್ಪರ್ಧೆಯನ್ನು ಏರ್ಪಡಿಸಲಾಗಿತ್ತು. ಸ್ಪರ್ಧೆಯಲ್ಲಿ ವಿವಿಧ ಶಾಲೆಯ ಮಕ್ಕಳು ಭಾಗವಹಿಸಿದ್ದರು.

ಮುಖ್ಯ ಅತಿಥಿಗಳಾಗಿ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಹಾಗೂ ನೂಪುರ ಟ್ರಸ್ಟ್ ನಿರ್ದೇಶಕ ಪ್ರೊ. ಕೆ ರಾಮಮೂರ್ತಿ ರಾವ್ ಆಗಮಿಸಿದ್ದರು. ಶಾಲೆಯ ಪ್ರಾಂಶುಪಾಲರಾದ ಶ್ರೀಮತಿ ಬಿ ಲತಾ ಹಾಗೂ ಉಪ ಪ್ರಾಂಶುಪಾಲ ಎಸ್ ಎಲ್ ನಾಗೇಂದ್ರ ಉಪಸ್ಥಿತರಿದ್ದರು. ಈ ವೇಳೆ ಪ್ರೊ. ಕೆ. ರಾಮಮೂರ್ತಿ ರಾವ್ ಮಾತನಾಡಿ, ತಮ್ಮ ಶಾಲಾ ದಿನಗಳಲ್ಲಿ ಅವರು ಸ್ಪರ್ಧೆಗಳಲ್ಲಿ ಭಾಗವಹಿಸಿದ್ದನ್ನು ನೆನಪಿಸಿಕೊಳ್ಳುತ್ತಾ ಜೆಎಸ್‌ಎಸ್ ಸಂಸ್ಥೆಯು ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ನೀಡುವ ಪ್ರಾಧಾನ್ಯತೆಯನ್ನು ಸ್ಮರಿಸಿದರು. ಅದಲ್ಲದೆ ನೈಜ ಜಾನಪದ ಸೊಗಡಿನ ವಿಶೇಷತೆಯನ್ನು ಮಕ್ಕಳಿಗೆ ತಿಳಿಸಿಕೊಟ್ಟರು.

ಸ್ಪರ್ಧೆಯಲ್ಲಿ ಒಟ್ಟು 16 ಶಾಲೆಯ ಮಕ್ಕಳು ಭಾಗವಹಿಸಿದ್ದರು. ನೃತ್ಯ ಕ್ಷೇತ್ರದ ಸಾಧಕರಾದ ವಿದುಷಿ ಶ್ರೀಮತಿ ಶ್ರೀ ಲಕ್ಷ್ಮಿ ಕುಮಾರ್, ವಿದುಷಿ ಲಕ್ಷ್ಮಿ ಎನ್ ಎಸ್ ಹಾಗೂ ವಿದ್ವಾನ್ ಆರ್ ಕಣ್ಣನ್ ತೀರ್ಪುಗಾರರಾಗಿ ಆಗಮಿಸಿದ್ದರು. ಪೊಲೀಸ್ ಪಬ್ಲಿಕ್ ಶಾಲೆ ಮೈಸೂರು ಪ್ರಥಮ ಬಹುಮಾನ, ಎರಡನೆಯ ಬಹುಮಾನವನ್ನು ಜೆಎಸ್‌ಎಸ್ ಪಬ್ಲಿಕ್ ಶಾಲೆ ಶಿಕ್ಷಕರ ಬಡಾವಣೆ, ಮೂರನೆಯ ಬಹುಮಾನವನ್ನು ಎಸ್‌ಟಿಜಿ ಪಬ್ಲಿಕ್ ಶಾಲೆ ಚಿನಕುರಳಿ ಪಡೆದುಕೊಂಡಿತು.

ಕೇಂದ್ರ ಹಲವು ವಿಷಯದಲ್ಲಿ ಕರ್ನಾಟಕಕ್ಕೆ ಮಲತಾಯಿ ಧೋರಣೆ ಅನುಸರಿಸುತ್ತಿದೆ

• ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಆರೋಪ • ಮನ್ರೇಗಾ ಯೋಜನೆ ಅನುದಾನ ಕಡಿತ ಮಾಡುವ ಯತ್ನ

ಬೆಂಗಳೂರು, ಡಿ. 1(ಕೆಎಂಶಿ)–ಕೇಂದ್ರ ಸರ್ಕಾರ ನರೇಗಾ, ಜಲಜೀವನ್ ಮಿಷನ್ ಸೇರಿದಂತೆ ಇತರೆ ಯೋಜನೆಗಳ ವಿಚಾರದಲ್ಲಿ ಕರ್ನಾಟಕದ ಬಗ್ಗೆ ಮಲತಾಯಿ ಧೋರಣೆ ಅನುಸರಿಸುತ್ತಿದೆ ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಇಂದಿಲ್ಲಿ ಆರೋಪಿಸಿದ್ದಾರೆ.

ಗಾಂಧಿ ಗ್ರಾಮ ಪುರಸ್ಕಾರ ಹಾಗೂ ಇ–ಸ್ವತ್ತು 2.0 ತಂತ್ರಾಂಶಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಮನ್ರೇಗಾ ಯೋಜನೆ ಕಾಂಗ್ರೆಸ್ ಸರ್ಕಾರದ ಕಾರ್ಯಕ್ರಮವಾಗಿದ್ದು, ನಮಗೆ ಹೆಚ್ಚು ಪ್ರಚಾರ ಸಿಗುತ್ತದೆ, ನಾವು ಜನರ ಹೃದಯಕ್ಕೆ ಹತ್ತಿರವಾಗುತ್ತೇವೆ ಎಂಬ ಕಾರಣಕ್ಕೆ ಯೋಜನೆಯ ಅನುದಾನ ಕಡಿಮೆ ಮಾಡುವ ಪ್ರಯತ್ನ ನಡೆಯುತ್ತಿದೆ ಎಂದರು.

ನರೇಗಾ ಯೋಜನೆಯಡಿ 2021ರಲ್ಲಿ 14.65 ಕೋಟಿ ಮಾನವ ಕೂಲಿ ದಿನಗಳ ಅವಕಾಶವಿತ್ತು. ಇದನ್ನು ಈ ವರ್ಷ 9 ಕೋಟಿಗೆ ಇಳಿಸಲಾಗಿದೆ ಅಂದರೆ ಸುಮಾರು ಶೇ.40ರಷ್ಟು ಕಡಿಮೆ ಮಾಡಲಾಗಿದೆ, ಯೋಜನೆಯಡಿ 2021ರಲ್ಲಿ 5,910 ಕೋಟಿ ರೂ. ಅನುದಾನ ಬಂದಿತ್ತು. ಈ ವರ್ಷ 2,691 ಕೋಟಿ ರೂ. ಬಂದಿದೆ, ಇದರಿಂದ ಎಷ್ಟು ವ್ಯತ್ಯಾಸವಾಗಿದೆ ಎಂಬುದನ್ನು ಎಲ್ಲರೂ ಗಮನಿಸಬೇಕು ಎಂದರು.

ಜಲಜೀವನ್ ಮಿಷನ್ ಯೋಜನೆಯಡಿ ಕೇಂದ್ರ ಹಾಗೂ ರಾಜ್ಯ ಸರ್ಕಾರ ತಲಾ ಶೇ.45ರಷ್ಟು ಅನುದಾನ ನೀಡಬೇಕು. ಶೇ.10 ರಷ್ಟು ಹಣವನ್ನು ಜನರಿಂದ ಪಡೆಯುವುದಾಗಿದ್ದು, ಕಳೆದ ವರ್ಷ ಯೋಜನೆಗೆ ರಾಜ್ಯ ಸರ್ಕಾರ 3,700 ಕೋಟಿ ರೂ. ನೀಡಿದರೆ, ಕೇಂದ್ರ ಸರ್ಕಾರದ ಅನುದಾನ ಈವರೆಗೂ ಬಂದಿಲ್ಲ.

ಗ್ರಾಮೀಣಾಭಿವೃದ್ಧಿ ಇಲಾಖೆಯ 25 ಸಾವಿರ ಕೋಟಿ ರೂ. ಅನುದಾನದಲ್ಲಿ ಜಲಜೀವನ್ ಮಿಷನ್‌ಗೆ 12 ಸಾವಿರ ಕೋಟಿ ರೂ., ನರೇಗಾ ಯೋಜನೆಗೆ 2,400 ಕೋಟಿ ರೂ., ಗ್ರಾಮಗಳ ರಸ್ತೆಗೆ 1,000 ಕೋಟಿ ರೂ., ಮುಖ್ಯಮಂತ್ರಿಗಳ ಮೂಲಭೂತ ಸೌಕರ್ಯ ಯೋಜನೆಗೆ 900 ಕೋಟಿ ರೂ. ನೀಡಲಾಗುತ್ತಿದೆ. ಕಲ್ಯಾಣ ಕರ್ನಾಟಕ ಭಾಗದಲ್ಲಿ ಕಲ್ಯಾಣ ಪಥ ಯೋಜನೆ ಜಾರಿ ಮಾಡಲಾಗಿದೆ.

ಇದೊಂದು ಐತಿಹಾಸಿಕ ಕಾರ್ಯಕ್ರಮ, ಶುಭಗಳಿಗೆಯಲ್ಲಿ ನಾವು ಸೇರಿದ್ದೇವೆ. ನಮ್ಮ ಸರ್ಕಾರಕ್ಕೆ ಎರಡೂವರೆ ವರ್ಷ ಪೂರ್ಣಗೊಂಡಿದ್ದು, ನಾವು ಭೂಮಿ ಮೇಲೆ



ಡಿ.ಕೆ.ಶಿವಕುಮಾರ್

ಹುಟ್ಟಿ, ಸತ್ತ ನಂತರ ಭೂಮಿಯ ಒಳಗೆ ಸೇರುತ್ತೇವೆ. ಆದರೆ, ಬದುಕಿದ್ದಾಗ ನಾವು ಮಾಡಿದ ಸಾಧನೆ ಮಾತ್ರ ಭೂಮಿಯ ಮೇಲೆ ಉಳಿದುಕೊಳ್ಳುತ್ತದೆ.

ಈ ಹಸ್ತ ನಿಮ್ಮ ಹಿತಕ್ಕಾಗಿ ಕೆಲಸ ಮಾಡುತ್ತಿದೆ. ಗಾಂಧಿ ದೇಶದ ಸ್ವಾತಂತ್ರ್ಯ ಹೋರಾಟದ ನಾಯಕತ್ವ ವಹಿಸಿ ನೂರು ವರ್ಷಗಳು ತುಂಬಿವೆ. ಅವರು ವಹಿಸಿಕೊಂಡ ಜವಾಬ್ದಾರಿ ಸ್ಥಾನದಲ್ಲಿ ಇಂದು ನಮ್ಮದೇ ರಾಜ್ಯದವರಾದ ಮಲ್ಲಿಕಾರ್ಜುನ ಖರ್ಗೆ ಇದ್ದಾರೆ.

ಭಾರತದ ಭವಿಷ್ಯ ಅಡಗಿರುವುದು ಹಳ್ಳಿಯಲ್ಲಿ ಎಂಬುದಾಗಿ ಗಾಂಧಿ ಹೇಳಿದ್ದರು. ಪ್ರತಿ ಹಳ್ಳಿಯಲ್ಲಿ ಪಂಚಾಯತ್, ಸೊಸೈಟಿ, ಶಾಲೆ ಇರಬೇಕು ಎಂಬ ಮಾರ್ಗದರ್ಶನ ನೀಡಿದ್ದರು. ಅದರಂತೆ ನಾವು ಕೆಲಸ ಮಾಡುತ್ತಿದ್ದೇವೆ.

ಜನರ ಮನೆ ಬಾಗಿಲಿಗೆ ಇ–ಸ್ವತ್ತು: ಜನರ ಮನೆ ಬಾಗಿಲಿಗೆ ಇ–ಸ್ವತ್ತು ತಂದುಕೊಡುವ ಕೆಲಸ ಮಾಡುತ್ತಿದ್ದೇವೆ. ಇದು ನಿಮ್ಮೆಲ್ಲರ ಬದುಕಿಗೆ ಹೊಸರೂಪ ನೀಡಿ, ಎಲ್ಲ ಪಂಚಾಯತ್ ಆಸ್ತಿ ದಾಖಲೆಗಳಿಗೆ 11 ಬಿ ಖಾತೆಗಳನ್ನು ನೀಡಲಾಗುತ್ತಿದೆ. ಅರ್ಜಿ ಹಾಕಿದ 15 ದಿನದಲ್ಲಿ ಖಾತೆ ನೀಡಲು ಸರ್ಕಾರ ತೀರ್ಮಾನಿಸಿದೆ, ಯಾರೂ ಕಚೇರಿಗಳಿಗೆ ಅಲೆಯಬಾರದು ಎಂಬ ಕಾರಣಕ್ಕೆ ಆನ್‌ಲೈನ್ ಹಾಗೂ ಬಾಪುಜೀ ಕೇಂದ್ರಗಳಲ್ಲಿ ವಿತರಣೆಗೆ ಅವಕಾಶ ನೀಡಲಾಗಿದೆ. 11 ಬಿ ಮೂಲಕ ತೆರಿಗೆ ಪಾವತಿಸಿ, ಆಸ್ತಿ ದಾಖಲೆ ಸರಿಪಡಿಸಿಕೊಳ್ಳಿ ಎಂದರು.

ಕಾಂಗ್ರೆಸ್ ಸರ್ಕಾರ ಅಧಿಕಾರದಲ್ಲಿದ್ದಾಗ ಉಳುವವನಿಗೆ ಭೂಮಿ, ಬಗರ್ ಹುಕುಂ ಸಾಗುವಳಿ ಜಮೀನು ಸಕ್ರಮ, ಅರಣ್ಯ ಪ್ರದೇಶದಲ್ಲಿ ವಾಸಿಸುವವರಿಗೂ ಕಾನೂನಿನಡಿ ಸಹಾಯ ಮಾಡಿದೆ, ನಿಮ್ಮ ಭೂಮಿ ಹಾಗೂ ಆಸ್ತಿ ದಾಖಲೆ ಸರಿಪಡಿಸುವುದು ನಮ್ಮ ಆರನೇ ಗ್ಯಾರಂಟಿ ಯೋಜನೆಯಾಗಿದೆ.

ಬೆಂಗಳೂರಿನಲ್ಲಿ 25 ಲಕ್ಷ ಆಸ್ತಿಗಳನ್ನು ಇ–ಖಾತಾ ಅಭಿಯಾನದಡಿ ಮಾಡಿದ್ದು, 6 ಲಕ್ಷ ಜನರಿಗೆ ಇ–ಖಾತಾ ವಿತರಿಸಲಾಗಿದೆ. ವಿಜಯನಗರ ಜಿಲ್ಲೆಯಲ್ಲಿ ಸಚಿವರಾದ ಕೃಷ್ಣ ಬೈರೇಗೌಡ ಹಾಗೂ ಪ್ರಿಯಾಂಕ್ ಖರ್ಗೆ 1,11,111 ಜನರಿಗೆ ಗ್ರಾಮ ಪಂಚಾಯತ್ ವ್ಯಾಪ್ತಿ ಹೊರಗಿರುವ ತಾಂಡಾಗಳನ್ನು ಸಕ್ರಮಗೊಳಿಸಿ ಹಕ್ಕುಪತ್ರ, ಭೂದಾಖಲೆಗಳನ್ನು ವಿತರಿಸಿದ್ದಾರೆ.

ಹಸಿದವರಿಗೆ ಅನ್ನ, ಉದ್ಯೋಗ ನೀಡುವ ಕೆಲಸ ಸರ್ಕಾರ ಮಾಡುತ್ತಿದೆ. ಜನರ ಶಕ್ತಿಯೇ ನಮ್ಮ ಶಕ್ತಿ, ಜನರೇ ನಮ್ಮ ಆಸ್ತಿ, ನಾನು ತಾಲೂಕು ಪಂಚಾಯತ್ ಅಧ್ಯಕ್ಷನಾಗಿದ್ದು, ಜಿಲ್ಲಾ ಪಂಚಾಯತ್ ಸದಸ್ಯನಾಗಿದ್ದೆ. ಪಂಚಾಯತ್‌ನಿಂದ ಪಾರ್ಲಿಮೆಂಟ್‌ವರೆಗೂ ನಾಯಕರನ್ನು ಬೆಳೆಸಬೇಕು ಎಂಬ ರಾಜೀವ್ ಗಾಂಧಿ ಕಲ್ಪನೆ, ಹೊಸ ನಾಯಕರನ್ನು ತಯಾರಾಗುವಂತೆ ಮಾಡಿದೆ, ಇದಕ್ಕಾಗಿ ಸಂವಿಧಾನಕ್ಕೆ 73, 74ನೇ ತಿದ್ದುಪಡಿ ತರಲಾಯಿತು ಎಂದರು.

ಇಂದಿರಾ ಆಹಾರ ಕಿಟ್ ವಿತರಣೆಗೆ ಸಂಪುಟ ನಿರ್ಧಾರ: ಸಿಎಂ ಸಿದ್ದರಾಮಯ್ಯ

ಪ್ರತಿ ತಿಂಗಳ 10ರೊಳಗೆ ನ್ಯಾಯಬೆಲೆ ಅಂಗಡಿಗೆ ಪೂರೈಕೆ

ಬೆಂಗಳೂರು, ಡಿ. 1(ಕೆಎಂಶಿ)–ಬಿಪಿಎಲ್ ಪಡಿತರದಾರರಿಗೆ ಪೌಷ್ಠಿಕಾಂಶ ಹೆಚ್ಚಿಸುವ ಇಂದಿರಾ ಆಹಾರ ಕಿಟ್ ವಿತರಿಸಲು ಸಂಪುಟ ಸಭೆಯಲ್ಲಿ ನಿರ್ಣಯ ಕೈಗೊಳ್ಳಲಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಇಂದಿಲ್ಲಿ ತಿಳಿಸಿದ್ದಾರೆ.

ಇಂದಿರಾ ಆಹಾರ ಕಿಟ್ ಯೋಜನೆ ಅನುಷ್ಠಾನ ಕುರಿತ ಸಭೆಯಲ್ಲಿ ಮಾತನಾಡಿದ ಅವರು, ಯೋಜನೆಯಡಿ ಕುಟುಂಬದ ಸದಸ್ಯರ ಸಂಖ್ಯೆಗೆ ಅನುಗುಣವಾಗಿ ಐದು ಕೆ.ಜಿ. ಅಕ್ಕಿ ಬದಲಿಗೆ ತೊಗರಿ ಬೇಳೆ, ಸೂರ್ಯಕಾಂತಿ ಎಣ್ಣೆ, ಸಕ್ಕರೆ, ಉಪ್ಪು ನೀಡಲಾಗುವುದು ಎಂದರು.

ಪ್ರಸ್ತುತ 1,25,08,262 ಇಂದಿರಾ ಆಹಾರ ಕಿಟ್ ಅಗತ್ಯವಿದ್ದು, ಇದಕ್ಕಾಗಿ ಪ್ರತಿ ತಿಂಗಳು 466 ಕೋಟಿ ರೂ. ವೆಚ್ಚ ಅಂದಾಜಿಸಲಾಗಿದೆ.

ಯೋಜನೆಯಡಿ ಪ್ರತಿ ತಿಂಗಳು ಒಟ್ಟು 18,628 ಮೆಟ್ರಿಕ್ ಟನ್ ತೊಗರಿ ಬೇಳೆ ಮತ್ತು ತಲಾ 12,419 ಮೆಟ್ರಿಕ್ ಟನ್ ಸೂರ್ಯಕಾಂತಿ ಎಣ್ಣೆ, ಸಕ್ಕರೆ ಮತ್ತು ಉಪ್ಪು ಅಗತ್ಯವಿದೆ.

ಆಹಾರ ಕಿಟ್‌ನಲ್ಲಿ ಪೌಷ್ಟಿಕಾಂಶಗಳಿಂದ ಕೂಡಿರುವ ತೊಗರಿ ಬೇಳೆಯನ್ನು ಗರಿಷ್ಟ ಪ್ರಮಾಣದಲ್ಲಿ ನೀಡಲು ಕ್ರಮ ಕೈಗೊಳ್ಳಬೇಕು. ನಾಫೆಡ್, ಎನ್ಸಿಸಿಎಫ್‌ನಂತಹ ಕೇಂದ್ರ ಸರಬರಾಜು ಸಂಸ್ಥೆಗಳ ಮೂಲಕ ಅಥವಾ ಖರೀದಿ ಪ್ರಕ್ರಿಯೆ ಪಾರದರ್ಶಕವಾಗಿ ಕೆಟಿಪಿಪಿ ಅನ್ವಯ ಕೈಗೊಳ್ಳಲು ಕ್ರಮ



ಕೈಗೊಳ್ಳಬೇಕು ಎಂದು ಸೂಚಿಸಿದರು.

ಉತ್ತಮ ಗುಣಮಟ್ಟದ ಆಹಾರ ಸಾಮಾಗ್ರಿಗಳ ಪೂರೈಕೆಗೆ ಕ್ರಮ ಕೈಗೊಳ್ಳಬೇಕು. ಯಾವುದೇ ಕಾರಣಕ್ಕೂ ಗುಣಮಟ್ಟದಲ್ಲಿ ರಾಜೀ ಆಗಬಾರದು. ಅಳತೆಯಲ್ಲೂ ಹೆಚ್ಚು ಕಡಿಮೆ ಆಗದಂತೆ ಎಚ್ಚರಿಕೆ ವಹಿಸಬೇಕು. ಯಾವುದೇ ದೂರಿಗೆ ಅವಕಾಶವಾಗದಂತೆ ಪಾರದರ್ಶಕವಾಗಿ ಯೋಜನೆ ಅನುಷ್ಠಾನಗೊಳಿಸಲು ಕ್ರಮ ಕೈಗೊಳ್ಳಬೇಕು ಎಂದರು.

ಪ್ರತಿ ನ್ಯಾಯಬೆಲೆ ಅಂಗಡಿಯಲ್ಲಿ ಕ್ಯೂಆರ್ ಸ್ಕ್ಯಾನ್ ತಂತ್ರಾಂಶ ಅಳವಡಿಸಿ ಪಡಿತರ ಚೀಟಿದಾರರಿಗೆ ಇಂದಿರಾ ಫುಡ್ ಕಿಟ್ ವಿತರಣೆಗೆ ಕ್ರಮ ಕೈಗೊಳ್ಳಬೇಕು.

ಸರಬರಾಜಾದ ಫುಡ್ ಕಿಟ್‌ಗಳನ್ನು ನಿಗಮದ ಗೋದಾಮು ಅಥವಾ ಸಗಟು ಮಳಿಗೆಗಳ ಮೂಲಕ ನ್ಯಾಯಬೆಲೆ ಅಂಗಡಿಗಳಿಗೆ ಪ್ರತಿ ತಿಂಗಳ 10ನೇ ತಾರೀಕಿನೊಳಗೆ ವಿತರಣೆ ಮಾಡಬೇಕು ಎಂದು ಸೂಚಿಸಿದರು.

ತಾಯಿ ಮಡಿಲು ಸೇರಿದ ನಾಲ್ಕು ಹುಲಿ ಮರಿಗಳು

ವಾತ್ಸಲ್ಯದಿಂದ ಮರಿಗಳ ಸಲಹುತ್ತಿರುವುದನ್ನು ಖಚಿತಪಡಿಸಿಕೊಂಡ ಅರಣ್ಯ ಸಿಬ್ಬಂದಿ

ಮೈಸೂರು,ಡಿ.1(ಎಂಟಿವೈ)– ಹುಣಸೂರು ತಾಲೂಕಿನ ಗೌಡನಕಟ್ಟೆ ಗ್ರಾಮದ ಬಳಿ ಮೆಕ್ಕೆ ಜೋಳದ ಹೊಲದಲ್ಲಿ ರಕ್ಷಿಸಲ್ಪಟ್ಟ ನಾಲ್ಕು ಹುಲಿ ಮರಿಗಳನ್ನು ತಾಯಿ ಮಡಿಲಿಗೆ ಸೇರಿಸುವಲ್ಲಿ ಅರಣ್ಯ ಇಲಾಖೆ ಯಶಸ್ವಿಯಾಗಿದೆ.

ಹುಣಸೂರು ತಾಲೂಕಿನ ಗೌಡನಕಟ್ಟೆ ಗ್ರಾಮದ ಬಳಿ ನ.27ರಂದು ತಾಯಿ ಹುಲಿಯನ್ನು ರಕ್ಷಣೆ ಮಾಡಲಾಗಿತ್ತು. ಆದರೆ ಮರಿಗಳು ಕಣ್ಮರೆಯಾಗಿದ್ದವು. ತಾಯಿ ಹುಲಿ ಸೆರೆ ಹಿಡಿದ ಎರಡು ದಿನದ ಬಳಿಕ ಮರಿಗಳನ್ನು ರಕ್ಷಣೆ ಮಾಡಲಾಗಿತ್ತು. ಪುನರ್ವಸತಿ ಕೇಂದ್ರದ ಕೊಠಡಿಯಲ್ಲಿ ಬಂಧಿಯಾಗಿರುವ ತಾಯಿ ಹುಲಿ ಬಳಿ ಮರಿಗಳನ್ನು ಬಿಟ್ಟರೆ ಅದು ಘಾಸಿಗೊಂಡು ಮರಿಗಳ ಮೇಲೆ ದಾಳಿ ಮಾಡುವ ಸಾಧ್ಯತೆ ಹೆಚ್ಚಾಗಿದೆ. ಆ ಕಾರಣಕ್ಕೆ ತಾಯಿ ಹುಲಿ ಇರುವ ಕೊಠಡಿಯ ಪಕ್ಕದ ಕೊಠಡಿಯಲ್ಲಿ ನಾಲ್ಕು ಮರಿಗಳನ್ನು ಇರಿಸಿ, ಅವುಗಳಿಗೆ ಆಹಾರ ಪೂರೈಸಲಾಗುತ್ತಿತ್ತು.

ಮರಿಗಳಿಂದ ದೂರ ಇದ್ದ ತಾಯಿ ಹುಲಿ ಇದೀಗ ತನ್ನ ಮರಿಗಳನ್ನು ಗುರುತಿಸುತ್ತಿದ್ದು, ವಾಸನೆ ಗ್ರಹಿಸುತ್ತಿದೆ. ಮರಿಗಳ ರಕ್ಷಣಾ ಕಾರ್ಯಾಚರಣೆ ವೇಳೆ ಅರಣ್ಯ ಸಿಬ್ಬಂದಿ ಮರಿಗಳನ್ನು ಮುಟ್ಟಿರುವುದರಿಂದ ತಾಯಿ




ಹುಲಿ ತಕ್ಷಣಕ್ಕೆ ತನ್ನ ಬಳಿ ಸುಳಿಯಗೊಡುವುದಿಲ್ಲ. ಅಲ್ಲದೆ, ಮರಿಗಳ ಮೇಲೆ ದಾಳಿ ಮಾಡುವ ಸಾಧ್ಯತೆಯೂ ಹೆಚ್ಚಾಗಿರುವುದರಿಂದ ತಜ್ಞರ ಅಭಿಪ್ರಾಯ ಪಡೆದು ತಾಯಿ ಹುಲಿಯ ಬಳಿ ಹಂತ ಹಂತವಾಗಿ ಮರಿಗಳನ್ನು ಸೇರಿಸಲು ಕ್ರಮ ಕೈಗೊಳ್ಳಲಾಗಿತ್ತು. ಅಲ್ಲದೆ, ಕಳೆದ 11 ವರ್ಷ ಕಾಡಿನಲ್ಲೇ ಬೆಳೆದಿರುವ ಹುಲಿಯು ಮುಂದೆ ಈಗ ಜನ(ಸಿಬ್ಬಂದಿ) ಸಂಚಾರದಿಂದ ವ್ಯಾಘ್ರಗೊಳ್ಳುವುದು ಸಾಮಾನ್ಯ ಗುಣ. ಆ ಕಾರಣದಿಂದಲೂ ಸಿಬ್ಬಂದಿ ಸೂಕ್ಷ್ಮವಾಗಿ ಪರಿಸ್ಥಿತಿ ಅವಲೋಕಿಸುತ್ತಿದ್ದರು.. ತಾಯಿ ಹುಲಿ ಹಾಗೂ ಮರಿಗಳ ಕಣ್ಣಿಗೆ ಬೀಳದಂತೆ ಅವುಗಳ ಕೊಠಡಿಯ ಹಿಂದೆ ಚಿಕ್ಕ ರಂಧ್ರದ ಮೂಲಕ ಆಹಾರ ಪೂರೈಸಲಾಗುತ್ತಿದೆ. ಮರಿಗಳನ್ನು ತಾಯಿ ಮಡಿಲಿಗೆ ಸೇರಿಸುವುದು ಅರಣ್ಯ ಇಲಾಖೆಗೆ ದೊಡ್ಡ ಸವಾಲಿನ ಕೆಲಸವಾಗಿದ್ದು, ಅದನ್ನು ಸಮರ್ಥವಾಗಿ ನಿರ್ವಹಣೆ ಮಾಡಲು ಪಶುವೈದ್ಯರು ಶ್ರಮಿಸುತ್ತಿದ್ದರು.

ಇಂದು ಬೆಳಗ್ಗೆ ತಾಯಿ ಮಡಿಲಿಗೆ: ಭಾನುವಾರ ದಿನವಿಡೀ ತಾಯಿ ಹುಲಿಯ ಪಕ್ಕದ ಕೊಠಡಿಯಲ್ಲಿದ್ದ ಮರಿಗಳನ್ನು ಇಂದು ಬೆಳಗ್ಗೆ ತಾಯಿ ಇರುವ ಕೊಠಡಿಗೆ ಬಿಡಲಾಗಿದೆ. ರಾತ್ರಿಯಿಂದಲೇ ಮರಿಗಳ ವಾಸನೆ ಗ್ರಹಿಸಿ, ಅವುಗಳೊಂದಿಗೆ ತಾಯಿ ಹುಲಿ ವರ್ತನೆಯನ್ನು ಸಿಸಿ ಕ್ಯಾಮರಾದಲ್ಲಿ ಅರಣ್ಯಾಧಿಕಾರಿಗಳು ಗಮನಿಸಿದರು. ನಾಲ್ಕು ದಿನಗಳಿಂದ ಕರುಳ ಕುಡಿಯಿಂದ ದೂರ ಉಳಿದಿದ್ದ ತಾಯಿ ಹುಲಿ, ಮರಿಗಳು ಸಮೀಪಕ್ಕೆ ಬಂದೊಡನೆ ಅವುಗಳೊಂದಿಗೆ ವಾತ್ಸಲ್ಯದಿಂದ ವರ್ತಿಸುತ್ತಿದೆ. ಅಲ್ಲದೆ ಮರಿಗಳಿಗೆ ಹಾಲುಣಿಸುವ ದೃಶ್ಯಾವಳಿ ಅಲ್ಲಿ ಅಳವಡಿಸಿರುವ ಸಿಸಿ ಕ್ಯಾಮರಾದಲ್ಲಿ ಸೆರೆಯಾಗಿದ್ದು, ಅದನ್ನು ಮೃಗಾಲಯದ ಅಧಿಕಾರಿಗಳು ವೀಕ್ಷಿಸಿದ್ದಾರೆ. ತಾಯಿ ಮತ್ತು ಮರಿ ಒಂದೇ ಕೊಠಡಿಯಲ್ಲಿ ಲವಲವಿಕೆಯಿಂದ ಓಡಾಡುತ್ತಿದ್ದು, ಅರಣ್ಯ ಇಲಾಖೆ ಮುಂದೆ ಇದ್ದ ದೊಡ್ಡ ಸವಾಲು ನಿಟ್ಟುಸಿರು ಬಿಡುವಂತಾಗಿದೆ.

ಬೆಮೆಲ್ ಆವರಣ ಹೊಕ್ಕಿದ್ದ ಹುಲಿಯ ಸುಳಿವಿಲ್ಲ!

ಮೈಸೂರು,ಡಿ.1(ಎಂಟಿವೈ)– ಮೈಸೂರಿನ ಬೆಮೆಲ್ (ಬಿಇಎಂಎಲ್) ಆವರಣದಲ್ಲಿ ಪ್ರತ್ಯಕ್ಷವಾಗಿದ್ದ ಹುಲಿ ಅರಣ್ಯ ಇಲಾಖೆ ನಡೆಸಿದ ಕೂಂಬಿಂಗ್ ಕಾರ್ಯಾಚರಣೆ ವೇಳೆ ಹಾಗೂ ಕ್ಯಾಮರಾ ಟ್ರ್ಯಾಪ್‌ನಲ್ಲೂ ಸುಳಿವಿಲ್ಲ. ಹಾಗಾಗಿ ಹುಲಿ ಬೆಮೆಲ್ ಕ್ಯಾಂಪಸ್‌ನಿಂದ ಬೇರೆಡೆ ಸ್ಥಳಾಂತರಗೊಂಡಿರುವ ಶಂಕೆ ವ್ಯಕ್ತವಾಗಿದೆ.

ಬೆಮೆಲ್ ಆವರಣದಲ್ಲಿ ಹುಲಿ ಕಂಡು ಬಂದ ಸ್ಥಳ ಸೇರಿದಂತೆ ವಿವಿಧೆಡೆ ಅರಣ್ಯ ಇಲಾಖೆ ಅಳವಡಿಸಿದ್ದ 10 ಕ್ಯಾಮರಾ ಟ್ರ್ಯಾಪ್‌ನಲ್ಲಿ ಹುಲಿ ಪತ್ತೆಯಾಗಿಲ್ಲ. ಅಲ್ಲದೆ, ಕ್ಯಾಂಪಸ್‌ನಲ್ಲಿ ಇಟ್ಟಿದ್ದ ಎರಡು ಬೋನ್ ಬಳಿಯೂ ಹುಲಿ ಸುಳಿವಿಲ್ಲ. ಹಾಗಾಗಿ ಕ್ಯಾಂಪಸ್‌ನಿಂದ ಹುಲಿ ಬೇರೆಡೆ ಹೋಗಿರಬಹುದೆಂದು ಅಂದಾಜಿಸಲಾಗಿದ್ದು, ಆದರೂ ಕಟ್ಟೆಚ್ಚರ ವಹಿಸಲಾಗಿದೆ. ಅಲ್ಲಿನ ಸಿಬ್ಬಂದಿಗಳೇ ಭದ್ರತಾ ಕಾರ್ಯದಲ್ಲಿ ತೊಡಗಿರುವುದರಿಂದ ಅರಣ್ಯ ಇಲಾಖೆಗೆ ಹುಲಿ ಕಂಡು ಬಂದರೆ ಮಾತ್ರ ಮಾಹಿತಿ ನೀಡಲಿದ್ದಾರೆ.



ಮೈಸೂರಿನ ಬೆಮೆಲ್ ಆವರಣದಲ್ಲಿ ಹುಲಿ ಸೆರೆಗಾಗಿ ಬೋನ್ ಇಟ್ಟಿರುವುದು.

ಸಂಸ್ಥೆ ಆವರಣದಲ್ಲಿ ಅಳವಡಿಸಿರುವ ಸಿಸಿ ಕ್ಯಾಮರಾದಲ್ಲೂ ಹುಲಿಯ ಚಲನವಲನದ ಸುಳಿವಿಲ್ಲ. ಆದರೂ ಕ್ಯಾಮರಾ ಟ್ರ್ಯಾಪ್‌ನಲ್ಲಿ ಸೆರೆಯಾಗಿರುವ ದೃಶ್ಯವನ್ನು ನಿರಂತರವಾಗಿ ಪರಿಶೀಲಿಸಲಾಗುತ್ತಿದೆ. ಎರಡು ದಿನಗಳಿಂದಲೂ ಹುಲಿಯ ಯಾವುದೇ ಚಲನವಲದ ಮಾಹಿತಿ ಲಭ್ಯವಾಗಿಲ್ಲದ ಕಾರಣ ಹುಲಿ ಸ್ಥಳ ಬದಲಿಸಿರುವ ತೀರ್ಮಾನಕ್ಕೆ ಬಂದಿದ್ದಾರೆ.

ಕೂಂಬಿಂಗ್ ಆಪರೇಷನ್ ಮುಂದುವರೆದಿದೆ

ಮೈಸೂರಿನ ಬೆಮೆಲ್ ಆವರಣದಲ್ಲಿ ಇದುವರೆಗೂ ನಡೆಸಿದ ಕೂಂಬಿಂಗ್ ಕಾರ್ಯಾಚರಣೆಯಲ್ಲಿ ಹುಲಿ ಸುಳಿವು ಪತ್ತೆಯಾಗಿಲ್ಲ. ಆದರೂ ಕೂಂಬಿಂಗ್ ಕಾರ್ಯಾಚರಣೆ ಮುಂದುವರೆಸಿದ್ದೇವೆ. ಕ್ಯಾಮರಾ ಟ್ರ್ಯಾಪ್‌ನಲ್ಲಿ ದಾಖಲಾಗುವ ದೃಶ್ಯವನ್ನು ಪರಿಶೀಲಿಸಲಾಗುತ್ತಿದೆ.

– ಕೆ.ಪರಮೇಶ್, ಡಿಸಿಎಫ್, ಮೈಸೂರು

ಇಂದಿನಿಂದ ದತ್ತ ಮಾಲಾಧಾರಿಗಳಿಂದ ಶೋಭಾಯಾತ್ರೆ

ಚಿಕ್ಕಮಗಳೂರು, ಡಿ.1– ನವೆಂಬರ್ 26ರಿಂದ ಆರಂಭಗೊಂಡಿರುವ ಚಿಕ್ಕಮಗಳೂರು ತಾಲೂಕಿನ ದತ್ತಪೀಠದ ದತ್ತಜಯಂತಿ ಕಾರ್ಯಕ್ರಮ ಅಂತಿಮ ಘಟ್ಟಕ್ಕೆ ಬಂದಿದೆ. ನಾಳೆ (ಡಿ.2) ರಂದು 2–3 ಸಾವಿರ ಮಹಿಳೆಯರು ನಗರದಲ್ಲಿ ಬೃಹತ್ ಶೋಭಾಯಾತ್ರೆ ನಡೆಸಲಿದ್ದಾರೆ. ಬಳಿಕ ದತ್ತಪೀಠಕ್ಕೆ ತೆರಳಿ ಅನುಸೂಯ ದೇವಿಯನ್ನು ಪೂಜಿಸಿ, ಅನುಸೂಯ ಜಯಂತಿ ಆಚರಿಸಲಿದ್ದಾರೆ.

ಡಿ.3ರಂದು ಚಿಕ್ಕಮಗಳೂರು ನಗರದಲ್ಲಿ ದತ್ತ ಭಕ್ತರು ಹಾಗೂ ಸಾರ್ವಜನಿಕರಿಂದ ಬೃಹತ್ ಶೋಭಾಯಾತ್ರೆ ನಡೆಯಲಿದೆ. ಸುಮಾರು 20–25 ಸಾವಿರ ಭಕ್ತರು ಪಾಲ್ಗೊಳ್ಳಲಿದ್ದಾರೆ. ಡಿ.4ರಂದು ರಾಜ್ಯದ ಮೂಲೆ–ಮೂಲೆಗಳಿಂದ ಬರುವ 15 ಸಾವಿರಕ್ಕೂ ಅಧಿಕ ಭಕ್ತರು ದತ್ತಪೀಠಕ್ಕೆ ತೆರಳಿ ದತ್ತಪಾದುಕೆ ದರ್ಶನ ಪಡೆಯಲಿದ್ದಾರೆ.

ಜಿಲ್ಲಾದ್ಯಂತ 6000ಕ್ಕೂ ಅಧಿಕ ಪೊಲೀಸರನ್ನು ಬಂದೋಬಸ್ತ್‌ಗೆ ನಿಯೋಜಿಸಲಾಗಿದೆ. ಪೊಲೀಸರ ಸರ್ಪಗಾವಲಿನಲ್ಲೇ ದತ್ತಜಯಂತಿ ನಡೆಯಲಿದೆ. ಮೂರು ದಿನಗಳ ಕಾಲ 500ಕ್ಕೂ ಅಧಿಕ ಸಿಸಿ ಕ್ಯಾಮರಾಗಳು, 25ಕ್ಕೂ ಹೆಚ್ಚು ಡ್ರೋನ್‌ಗಳು



ಹದ್ದಿನ ಕಣ್ಣಿಡಲಿವೆ. ಬಂದೋಬಸ್ತ್ ಸಲುವಾಗಿ ಸೋಮವಾರ ನಗರದ ಪ್ರಮುಖ ರಸ್ತೆಯಲ್ಲಿ ಎಸ್‌ಪಿ ವಿಕ್ರಂ ಅಮಟೆ ನೇತೃತ್ವದಲ್ಲಿ ರೂಟ್ ಮಾರ್ಚ್ ನಡೆಸಲಾಗಿದೆ.

IN THE COURT OF THE V ADDL SENIOR CIVIL JUDGE AND CJM COURT AT MYSURU
O.S. No. 1379/2024

Plaintiff : CANARA BANK
Having number branches and one Such branch at Nanjumalige, Mysuru. Represented by its duly Constituted Attorney and Senior Manager Sri. Rajeesh S/o Chandukutty N. V/s Defendants : M/s Murthy Saree Center, Prop. D.M. Srinivas Murthy, #338, 1st Floor, I Stage, Industrial Suburb, Vidvaranyapurum, Mysuru

NOTICE TO DEFENDANT

Whereas the plaintiff has institute suit against the Defendant for recovery of money with other reliefs. The notice is hereby given to you to appear in this court in person or by a pleader duly instructed, and able to answer all material questions relation to the suit, or who shall be accompanied by some person able to answer all such questions, on the 05/12/25 on 11.00 O clock to answer the claim, and you are direct to produce on that day all the documents upon which you intend to rely in support of your defense.

Take Notice that, in default of your appearance on the day before mentioned the suit will be heard and determined in your absence.

Given under my hand and the seal of the Court, this 29-11-2025

By Order of the Court
Sd/- Chief Ministerial Officer
Court of Senior Civil Judge and CJM., Mysuru

Advocate for plaintiff
Sd/- Ramya B.
Advocate KAR/2104/2005
No. 1400-1401 1st Floor,
N.T. Street, K.R. Mohalla, Mysuru
Ph. 9591654434